
ಆಧುನಿಕ ಕನ್ನಡ
ಬರಹಗಾರರು
(ಸ್ವ.೨.೨)



ಆಧುನಿಕ ಕನ್ನಡ ಬರಹಗಾರರು

ಕನ್ನಡ ಗ್ರಂಥಮಾಲೆ-91

ಆಧುನಿಕ ಕನ್ನಡ ಬರಹಗಾರರು

ಮೈಸೂರು
1983

Ādhunika Kannaḍa Barahagāraru (Who is Who of Kannada Writers) prepared by the Editorial Board of the Kannada Granthasūchi, published in 1983 by the Director, Prasārānga, University of Mysore, Mysore-6, Demy Octavo Pp xii + 432 Price: Rs. 45-00

ಮೊದಲನೆಯ ಮುದ್ರಣ : ೧೯೮೩

ಬೆಲೆ : ರೂ. 45-00

ಪ್ರಕಾಶಕರು : ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು- 570 006
ಮುದ್ರಕರು : ನಂದಿ ಮುದ್ರಣಾಲಯ, ನಂ. 703/ಎ, 4ನೇ ಕ್ರಾಸ್ ರಾಮಾನುಜ ರಸ್ತೆ, ಮೈಸೂರು-
570 004

ಕನ್ನಡ ಗ್ರಂಥಸೂಚಿ ಸಂಪಾದಕ ಮಂಡಳಿ

ಡಾ. ಹಾ ಮಾ ನಾಯಕ, ನಿರ್ದೇಶಕರು, ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ

ಕೆ ಎಸ್ ದೇಶಪಾಂಡೆ, ಗ್ರಂಥಪಾಲರು, ಕರ್ನಾಟಕ ವಿಶ್ವವಿದ್ಯಾಲಯ

ಡಾ. ಪ್ರಭುಶಂಕರ, ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ

ಪಿ ಕೆ ಪಾಟೀಲ, ಗ್ರಂಥಪಾಲರು, ಮೈಸೂರು ವಿಶ್ವವಿದ್ಯಾನಿಲಯ

ಆರ್ ಎಲ್ ಅನಂತರಾಮಯ್ಯ, ಉಪನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಸಂಶೋಧನ ಸಹಾಯಕರು

ವೈ ಪಿ ವಿಜಯಕುಮಾರ್

ಕೆ ಸದಾಶಿವ

ಬೆರಳಚ್ಚು : ರಾಜಣ್ಣ

ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಸೂಚಿ ಯೋಜನೆ ಎಲ್ಲರಿಗೂ ಈಗ ತಿಳಿದದ್ದೇ ಆಗಿದೆ. ಅದು 1817ರಿಂದ ಇದುವರೆಗೆ ಕನ್ನಡದಲ್ಲಿ ಮುದ್ರಣ ಗೊಂಡು ಪ್ರಕಟವಾಗಿರುವ ಪುಸ್ತಕಗಳ ವರ್ಣನಾತ್ಮಕ ವರ್ಗೀಕೃತ ಗ್ರಂಥಸೂಚಿಯನ್ನು ಒದಗಿಸುವ ಯೋಜನೆ. ಈಗ ಕನ್ನಡ ಗ್ರಂಥಸೂಚಿಯು ಒಂಬತ್ತು ಸಂಪುಟಗಳು ಪ್ರಕಟ ವಾಗಿವೆ. ಇನ್ನೂ ಕೆಲಸ ಮುಂದುವರಿದಿದೆ.

1971ರ ಜೂನ್ 10ರಂದು ನಡೆದ ಗ್ರಂಥಸೂಚಿ ಸಂಪಾದಕ ಸಮಿತಿ ಸಭೆಯಲ್ಲಿ ಸದಸ್ಯರಾದ ಶ್ರೀ ಕೆ.ಎಸ್. ದೇಶಪಾಂಡೆಯವರು ಒಂದು ಸೂಚನೆ ಮಂಡಿಸಿದರು. ಗ್ರಂಥಸೂಚಿಯ ಕೆಲಸ ಸಾಗುತ್ತಿರುವಾಗ ಅವೇ ಆಧಾರಾಂಶಗಳನ್ನು ಉಪಯೋಗಿಸಿ ಕೊಂಡು 'ಕನ್ನಡ ಬರಹಗಾರರು ಯಾರು ಯಾರು' ಎಂಬ ಒಂದು ಸಂಪುಟವನ್ನು ಪ್ರಕಟಿಸಬಹುದು ಎಂಬುದೇ ಆ ಸೂಚನೆ. ಕನ್ನಡ ಪ್ರಕಟನೋದ್ಯಮದ ಆರಂಭದಿಂದ ಇಂದಿನವರೆಗೂ ಬರುವ ಎಲ್ಲ ಬರಹಗಾರರನ್ನೂ ಒಳಗೊಳ್ಳಬೇಕೆಂಬ ಉದ್ದೇಶವಿದ್ದರೂ ಪ್ರಾಚೀನ ಮಧ್ಯಕಾಲೀನ ಕವಿಗಳ ಬಗೆಗೆ ಇತರ ಸಾಹಿತ್ಯ ಚರಿತ್ರೆಗಳು, ಕವಿಚರಿತ್ರೆ ಹಾಗೂ ಕೋಶಗಳು ದೊರಕುತ್ತವಾದ್ದರಿಂದ ಆಧುನಿಕ ಬರಹಗಾರರಿಗೆ ಪ್ರಸ್ತುತ ಯೋಜನೆಯನ್ನು ಸೀಮಿತಗೊಳಿಸಿಕೊಳ್ಳಬಹುದು ಎಂದು ಆಗ ತೀರ್ಮಾನಿಸಲಾಯಿತು.

ಬರಹಗಾರರಿಂದ ಯಾವ ಬಗೆಯ ಮಾಹಿತಿಗಳನ್ನು ಪಡೆಯಬೇಕೆಂಬುದನ್ನು ತೀರ್ಮಾನಿಸಿ, ತಕ್ಕ ನಮೂನೆಗಳನ್ನು ಸಿದ್ಧಪಡಿಸಿ, ಕನ್ನಡದ ಲೇಖಕ ಲೇಖಕಿಯರ ವಿಳಾಸಗಳನ್ನು ಸಂಗ್ರಹಿಸಿ ಅವರಿಗೆ ಕಳಿಸಿಕೊಡಲಾಯಿತು. ಪತ್ರಿಕೆಗಳಲ್ಲಿ ಪ್ರಚಾರ ಮಾಡಿ ವಿಳಾಸಗಳನ್ನು ಪತ್ತೆ ಹಚ್ಚಿ ಸುಮಾರು ಎರಡು ಸಾವಿರ ಲೇಖಕ ಲೇಖಕಿಯರಿಗೆ ಮನವಿ ಕಳುಹಿಸಲಾಯಿತು. ಅವರು ತಮ್ಮ ಬದುಕಿಗೆ ಹಾಗೂ ಕೃತಿಗಳಿಗೆ ಸಂಬಂಧಿಸಿ ದಂತೆ ವಿವರಗಳನ್ನು ತುಂಬಿ ಹಿಂದಕ್ಕೆ ಕಳಿಸಲು ಸಾಕಷ್ಟು ಅಂಚೆ ಚೀಟಿಗಳನ್ನೂ ಇರಿಸಿ ಕಳಿಸಿದೆವು. ಆದರೆ ವಿಶ್ವವಿದ್ಯಾನಿಲಯದ ಈ ಪ್ರಯತ್ನಕ್ಕೆ ದೊರೆತ ಪ್ರತಿಕ್ರಿಯೆ ಬಹಳ ನಿರಾಶಾದಾಯಕವಾಗಿತ್ತು ಎಂದು ಇಲ್ಲಿ ದಾಖಲಿಸಲು ವಿಷಾದವೆನಿಸುತ್ತದೆ. ದಿನಾಂಕ 28–7–1975ರ ವೇಳೆಗೆ ಕೇವಲ 750 ಜನರಿಂದ ಮಾಹಿತಿ ಸಂಗ್ರಹಿಸ ಲಾಗಿತ್ತು. ಮತ್ತೆ ಪತ್ರಿಕೆಗಳಲ್ಲಿ ಪ್ರಕಟಣೆ ಕೊಟ್ಟು ಸಂಗ್ರಹವನ್ನು ಹೆಚ್ಚಿಸಿಕೊಳ್ಳ ಬೇಕೆಂಬುದು ಸಂಪಾದಕ ಸಮಿತಿಯ ಅಭಿಪ್ರಾಯವಾಗಿತ್ತು.

ಮೊದಲಿಗೆ 'ಕನ್ನಡ ಲೇಖಕರು ಯಾರು ಯಾರು' ಎಂದಿಟ್ಟುಕೊಂಡಿದ್ದ ಹೆಸರನ್ನು 'ಆಧುನಿಕ ಕನ್ನಡ ಬರಹಗಾರರು' ಎಂದು ಮಾರ್ಪಡಿಸಿ ದಿನಾಂಕ 26-5-1977ರಂದು ನಡೆದ ಸಭೆಯಲ್ಲಿ ಪುಸ್ತಕದ ರೂಪರೇಷೆಗಳನ್ನು ಅಂಗೀಕರಿಸಲಾಯಿತು. ಪ್ರತಿ ಬರಹ ಗಾರರಿಗೆ ಸಂಬಂಧಿಸಿದಂತೆ- 1. ಹೆಸರು, 2. ಕಾವ್ಯನಾಮ, 3. ಹುಟ್ಟಿದ ತಾರೀಕು, 4. ಈಚೆಗೆ ಮೃತರಾಗಿದ್ದರೆ ಆ ವರ್ಷ, 5. ಜನನ ಸ್ಥಳ, 6. ತಂದೆತಾಯಿಯರ ಹೆಸರುಗಳು, 7. ಮಕ್ಕಳು, 8. ಪ್ರಾಥಮಿಕ ಮಾಧ್ಯಮಿಕ ಪ್ರೌಢಶಾಲಾ ಶಿಕ್ಷಣ ಪಡೆದ ಸ್ಥಳ, 9. ಪದವಿ ಹಾಗೂ ಸ್ನಾತಕೋತ್ತರ ಶಿಕ್ಷಣ, 10. ಹೆಚ್ಚಿನ ಪರೀಕ್ಷೆಗಳು, ಪದವಿ ಗಳು, 11. ಬಹುಮಾನಗಳು, ಪ್ರಶಸ್ತಿಗಳು, 12. ವೃತ್ತಿ, 13. ಸಾಹಿತ್ಯ ಸಂಬಂಧ ವಾದ ಸಂಘ ಸಮಿತಿಗಳ ಸದಸ್ಯತ್ವ ಅಥವಾ ಪದಾಧಿಕಾರಿತ್ವ, 14. ವಿದೇಶ ಪ್ರವಾಸ, 15. ಕೃತಿಗಳ ಒಟ್ಟು ಸಂಖ್ಯೆ, 16. ಹತ್ತಕ್ಕೆ ಮೀರದಂತೆ ಕೃತಿಗಳ ಪಟ್ಟಿ, 17. ಹವ್ಯಾಸ, 18. ಈಗಿನ ವಿಳಾಸ – ಹೀಗೆ ಹದಿನೆಂಟು ಮಾಹಿತಿಗಳನ್ನು ಇದೇ ಕ್ರಮದಲ್ಲಿ ಒದಗಿಸಬೇಕೆಂದು ತೀರ್ಮಾನಿಸಲಾಯಿತು. ಹಸ್ತಾಕ್ಷರದ ಮಾದರಿಯನ್ನು ಸೇರಿಸ ಬೇಕೆಂದು ಮೊದಲು ಯೋಜಿಸಿದ್ದರೂ, ವಿಸ್ತಾರ ಭಯದಿಂದ ಕೈಬಿಟ್ಟೆವು. ಅದುವರೆಗೆ ಬಂದಿದ್ದ ಮಾಹಿತಿಗಳನ್ನು ಸಂಪಾದಿಸಿ, ಕ್ರಮವಾಗಿ ಬರೆದು ಅಚ್ಚಿಗೆ ಅಣಿಗೊಳಿಸಿ ದ್ದಾಯಿತು. ಮೊದಲು ಎಂಟು ಪುಟಗಳನ್ನು ಮಾದರಿಯಾಗಿ ಮುದ್ರಿಸಿ ಸದಸ್ಯರಿಗೂ ಹಲವರು ವಿದ್ವಾಂಸರಿಗೂ ಕಳಿಸಿ ಅವರ ಅಭಿಪ್ರಾಯಗಳನ್ನು ಪಡೆದು ಪರಿಷ್ಕಾರ ಗೊಳಿಸಲಾಯಿತು. 29-1-1982ರಂದು ನಡೆದ ಸಭೆಯಲ್ಲಿ ಸಂಪಾದಕ ಸಮಿತಿಯು 'ಆಧುನಿಕ ಕನ್ನಡ ಬರಹಗಾರರು' ಸಂಪುಟದ ಅಂತಿಮ ಸ್ವರೂಪವನ್ನು ಅಂಗೀಕರಿಸಿತು. ಅದರ ಆಧಾರದ ಮೇಲೆ ಪ್ರಸ್ತುತ ಕೃತಿ ಸಿದ್ಧಗೊಂಡಿದೆ. ಈಗ ಈ ಸಂಪುಟವನ್ನು ವಾಚಕರ ಕೈಗೆ ಒಪ್ಪಿಸಲು ತುಂಬ ಸಂತೋಷವಾಗುತ್ತದೆ.

ಈ ಸಂಪುಟದ ರಚನೆಯ ವಿಷಯವನ್ನು ಪ್ರಚುರಪಡಿಸಿದಾಗಿನಿಂದ ಅನೇಕ ಜನ ಆಸಕ್ತ ಲೇಖಕರು ಪದೇ ಪದೇ ಅದರ ಪ್ರಗತಿಯ ಬಗೆಗೆ ವಿಚಾರಿಸುತ್ತ ಬಂದಿದ್ದಾರೆ. 'ಮುಗಿಯಿತೆ ?' ಎಂದು ಕಾತರರಾಗಿ ಕೇಳಿದ್ದಾರೆ. 'ಸಿದ್ಧವಾದ ಕೂಡಲೆ ನಮಗೆ ವಿಪಿ ಮೂಲಕ ಕಳಿಸಿ' ಎಂದು ಮುಂಗಡ ಬೇಡಿಕೆ ಕೊಟ್ಟಿದ್ದಾರೆ. ಇವರಿಗೆಲ್ಲ ವಂದನೆಗಳನ್ನು ಹೇಳುತ್ತಾ, ಕನ್ನಡ ಗ್ರಂಥಸೂಚಿ ಸಂಪಾದಕ ಮಂಡಲಿಯು ಯೋಜಿಸಿದ ಈ ಸಂಪುಟವು ಅವರಿಗೆ ಪ್ರಿಯವಾಗುತ್ತದೆ ಎಂದು ಆಶಿಸುತ್ತೇವೆ.

ಬರಹಗಾರರ ಸಹಕಾರವಿಲ್ಲದೆ ಇಂತಹ ಯೋಜನೆಗಳು ಕಾರ್ಯಗತವಾಗುವುದು ಕಷ್ಟ. ಒಮ್ಮೆಯಲ್ಲ ಇಮ್ಮೆಯಲ್ಲ ನಾಲ್ಕಾರುಸಾರಿ ಪತ್ರ ಬರೆದು ಕೇಳಿಕೊಂಡರೂ, ವಿಳಾಸ ಬರೆದು ಸ್ಟಾಂಪು ಹಚ್ಚಿದ ಕವರುಗಳನ್ನಿಟ್ಟು ಕಳಿಸಿದರೂ ನಮಗೆ ಮಾಹಿತಿ ಒದಗಿಸದೆ ನಿರ್ಲಕ್ಷ್ಯ ತೋರಿದ ಅನೇಕ ಹಿರಿಯ ಸಾಹಿತಿಗಳು ಇದ್ದಾರೆ.

ಕೆಲವರು ನಾವೇ ಅವರ ಬಳಿಗೆ ಹೋಗಿ ಮಾಹಿತಿ ಸಂಗ್ರಹಿಸಿಕೊಂಡು ಬರಬೇಕೆಂದು ಇಚ್ಛಿಸಿದ್ದೂ ಉಂಟು. ಎಲ್ಲರ ಬಳಿಗೂ ಹಾಗೆ ಹೋಗಿಬರುವುದು ವಾಸ್ತವಿಕವಾಗಿ ಸಾಧ್ಯವಾಗದ ಮಾತು. ಹಾಗೂ ಕೆಲವರು ಹಿರಿಯ ಸಾಹಿತಿಗಳ ಬಗೆಗೆ ದ್ವಿತೀಯ ಮೂಲಗಳಿಂದ ಅಂದರೆ ಅಭಿನಂದನ ಸಂಪುಟಗಳಿಂದ ದೊರೆತಷ್ಟೇ ಮಾಹಿತಿಯನ್ನು ಪಡೆಯಬೇಕಾಯಿತು. ಸರಿಯಾದ ವಿಳಾಸ ದೊರಕದೆ ಹಲವರೊಂದಿಗೆ ಸಂಪರ್ಕ ಬೆಳೆಸುವುದು ಕೂಡ ಸಾಧ್ಯವಾಗಲಿಲ್ಲ. ಪ್ರಸ್ತುತ ಸೂಚಿಯನ್ನು ಇಂತಹ ಕೆಲವು ಮಿತಿಗಳ ಹಿನ್ನೆಲೆಯಲ್ಲಿ ನೋಡಬೇಕು. ಆದ್ದರಿಂದಲೇ ಸಂಪುಟದಲ್ಲಿ ಎಷ್ಟೋ ಸುಪರಿಚಿತ ಪ್ರಸಿದ್ಧ ಹೆಸರುಗಳೇ ಇಲ್ಲದಿದ್ದರೆ ಅದು ಆಶ್ಚರ್ಯವಲ್ಲ. ಹಾಗಾಗಿರುವುದು ಉದ್ದೇಶ ಪೂರ್ವಕ ಲೋಪವಂತೂ ಖಂಡಿತ ಅಲ್ಲ. ಸಂಪುಟವನ್ನು ಸಾಧ್ಯವಾದಷ್ಟೂ ಸಮಗ್ರಗೊಳಿಸಲು ನಾವು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇವೆ ಎಂದಷ್ಟೆ ಇಲ್ಲಿ ಹೇಳಬಹುದು.

ಸಾಹಿತ್ಯ ಅಕಾದೆಮಿಯು ಪ್ರಕಟಿಸಿದ Who is Who of Indian Writers (1961) ಕೃತಿಯಲ್ಲಿ ಕನ್ನಡ ಬರಹಗಾರರ ಮಾಹಿತಿಯೂ ಇದೆ. ಹಾಗೆಯೇ ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ, ಸಾಹಿತ್ಯ ಶಾಲ್ಮಲ, ದಕ್ಷಿಣ ಕನ್ನಡ ಜಿಲ್ಲಾ ಬರಹಗಾರರು, ಮಂಡ್ಯ ಜಿಲ್ಲೆಯ ಬರಹಗಾರರು ಇತ್ಯಾದಿ ಕೆಲವು ಸಣ್ಣಪುಟ್ಟ ಪ್ರಯತ್ನಗಳನ್ನು ಬಿಟ್ಟರೆ ಇಷ್ಟು ವ್ಯಾಪಕವಾಗಿ ಕನ್ನಡ ಬರಹಗಾರರ ಬಗೆಗೆ ವಿವರ ನೀಡುವ ಸೂಚಿ ಬೇರೆ ಇರಲಾರದು. ಈಚೆಗೆ ಕನ್ನಡ ಸಾಹಿತ್ಯ ಪರಿಷತ್ತು ಲೇಖಿಕೆಯರ ಮಾಹಿತಿಗಳನ್ನು ಸಂಗ್ರಹಿಸಿ ಪ್ರಕಟಿಸಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಈ ಸಂಪುಟದಲ್ಲಿ ಒಟ್ಟು 1073 ಜನ ಕನ್ನಡ ಲೇಖಕ ಲೇಖಿಕೆಯರ ಮಾಹಿತಿಗಳು ಸೇರಿವೆ. ಇವರಲ್ಲಿ ಮಹಿಳೆಯರು 71 ಮಂದಿ. ಜಗತ್ತಿನ ನಲವತ್ತು ಸಾವಿರಕ್ಕೂ ಹೆಚ್ಚು ಬರಹಗಾರರ ಇತಿವೃತ್ತವನ್ನು ಕೊಡುವ ವೆಬ್‌ಸ್ಟರ್ಸ್ ಬಯೋಗ್ರಾಫಿಕಲ್ ಡಿಕ್ಷನರಿ (Websters Biographical Dictionary) ನಮ್ಮ ಆದರ್ಶ. ಕನ್ನಡದ ಎಲ್ಲ ಲೇಖಕ ಲೇಖಿಕೆಯರೂ ಮನಸ್ಸುಮಾಡಿ ಸಹಕರಿಸಿದರೆ ಪ್ರಸ್ತುತ ಸಂಪುಟದ ಎರಡು ಮೂರು ಪಟ್ಟು ದೊಡ್ಡದಾದ ಹಾಗೂ ಇನ್ನೂ ವ್ಯಾಪಕವಾದ ಸೂಚಿಯನ್ನು ರಚಿಸಬಹುದು. ಆ ದಿಸೆಯಲ್ಲಿ ಇದು ಮೊದಲನೆಯ ಹೆಜ್ಜೆ ಎಂದು ನಾವು ಭಾವಿಸುತ್ತೇವೆ. ಈ ಸೂಚಿಯನ್ನು ನೋಡಿದವರು ತಮಗೆ ತಿಳಿದ ಯಾರಾದರೊಬ್ಬರು ಲೇಖಕ/ಲೇಖಿಕೆಯರ ಉಲ್ಲೇಖ ಇಲ್ಲಿಲ್ಲವಾದರೆ ಅಂಥವರ ವಿಳಾಸವನ್ನು ದಯವಿಟ್ಟು ನಮಗೆ ಬರೆಯಬೇಕು. ಇದರಿಂದ ಅವರೊಡನೆ ವ್ಯವಹರಿಸಿ ಮಾಹಿತಿ ತರಿಸಿಕೊಂಡು ಮುಂದಿನ ಆವೃತ್ತಿಯಲ್ಲಿ ಸೇರಿಸಲು ಅವಕಾಶವಾಗುತ್ತದೆ. ಇಂಥ ಪ್ರಯತ್ನಗಳು ಹೀಗೆ ಸಾರ್ವಜನಿಕ ನೆರವು ಸಹಕಾರಗಳಿಂದಲೇ ಹೆಚ್ಚು ಹೆಚ್ಚು ಪರಿಷ್ಕಾರಗೊಳ್ಳಲು ಸಾಧ್ಯ.

ಕನ್ನಡ ವಾಚಕರಿಗೆ, ಸಾಹಿತ್ಯ ಪ್ರೇಮಿಗಳಿಗೆ ಈ ಸೂಚಿಯು ಉಪಯುಕ್ತವೂ ಪ್ರಿಯವೂ ಆದೀತೆಂದು ಆಶಿಸುತ್ತೇವೆ. ಈ ಕೋಶವನ್ನು ಸಿದ್ಧಪಡಿಸಲು ನೆರವಾದವರೆಲ್ಲರಿಗೂ, ಸುಂದರವಾಗಿ ಅಚ್ಚುಮಾಡಿದ ನಂದಿ ಮುದ್ರಣಾಲಯದ ಶ್ರೀ ಷಡಕ್ಷರಿ ಮತ್ತು ಅವರ ಸಹೋದ್ಯೋಗಿಗಳಿಗೂ, ಹೊದಿಕೆಯನ್ನು ರಚಿಸಿಕೊಟ್ಟ ಕಲಾವಿದ ಶ್ರೀ ಕೆ.ಎಲ್. ವೆಂಕಟೇಶ ಅವರಿಗೂ, ಪುಸ್ತಕದೊಳಗಿನ ಪಡಿಯಚ್ಚುಗಳನ್ನೂ ಆಕರ್ಷಕ ರಕ್ಷಾಪುಟವನ್ನೂ ಮುದ್ರಿಸಿದ ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯದವರಿಗೂ ನಾವು ಆಭಾರಿಗಳು.

30–1–83

ಕೆ. ಟಿ. ವೀರಪ್ಪ
ಸಂಪಾದಕ ಸಮಿತಿಯ ಪರವಾಗಿ

ಸಂಕೇತಗಳ ವಿವರ

ಅ ... ಅನುವಾದ
ಅರ್ಥ ... ಅರ್ಥಶಾಸ್ತ್ರ
ಇ ... ಇತಿಹಾಸ
ಕ ... ಕವಿತೆ–ಕಾವ್ಯ
ಕಲೆ ... ಕಲೆ
ಕಾ ... ಕಾದಂಬರಿ
ಕೃ ... ಕೃಷಿವಿಜ್ಞಾನ
ಕೋ ... ಕೋಶ
ಖ ... ಖಗೋಳ ವಿಜ್ಞಾನ
ಗ ... ಗಣಿತ
ಗೃ ... ಗೃಹ ವಿಜ್ಞಾನ
ಛ ... ಛಂದಸ್ಸು
ಜಾ ... ಜಾನಪದ
ಜೀ ... ಜೀವನ ಚರಿತ್ರೆ
ಧ ... ಧರ್ಮ–ತತ್ವಶಾಸ್ತ್ರ
ನಾ ... ನಾಟಕ
ನ್ಯಾ ... ನ್ಯಾಯಶಾಸ್ತ್ರ
ನಿ ... ನಿಘಂಟು
ಪ ... ಪಠ್ಯ ಪುಸ್ತಕ
ಪತ್ರ ... ಪತ್ರ ಸಾಹಿತ್ಯ
ಪತ್ರಿ ... ಪತ್ರಿಕೋದ್ಯಮ
ಪ್ರ ... ಪ್ರಬಂಧ
ಪ್ರವಾ ... ಪ್ರವಾಸಕಥನ
ಪ್ರಾ ... ಪ್ರಾಣಿಶಾಸ್ತ್ರ
ಪು ... ಪುರಾಣ
ಬಾ ... ಬಾಲಸಾಹಿತ್ಯ
ಭಾ ... ಭಾಷಣ
ಭಾ ವಿ ... ಭಾಷಾವಿಜ್ಞಾನ
ಭೂ ... ಭೂಗೋಳ ಶಾಸ್ತ್ರ
ಮ ... ಮನಶ್ಶಾಸ್ತ್ರ
ಮಾ ... ಮಾನವಶಾಸ್ತ್ರ
ಯ ... ಯಕ್ಷಗಾನ
ರ ... ರಸಾಯನಶಾಸ್ತ್ರ
ರಾ ... ರಾಜ್ಯಶಾಸ್ತ್ರ
ಲ ... ಲಲಿತ ಕಲೆ
ವ ... ವಯಸ್ಕರ ವಾಙ್ಮಯ
ವಾ ... ವಾಣಿಜ್ಯ ಶಾಸ್ತ್ರ
ವಿ ... ವಿಜ್ಞಾನ
ವಿಮ ... ವಿಮರ್ಶೆ
ವೈ ... ವೈದ್ಯ
ಶಿ ... ಶಿಕ್ಷಣ
ಸ ... ಸಮಾಜಶಾಸ್ತ್ರ
ಸಂ ... ಸಂಪಾದನೆ
ಸಂಕ ... ಸಂಕಲನ
ಸಂಗ್ರಾ ... ಸಂಗ್ರಾಹಕ
ಸಂಶೋ ... ಸಂಶೋಧನೆ
ಸ ಕ ... ಸಣ್ಣ ಕತೆ
ಸಾ ... ಸಾಹಿತ್ಯ ಚರಿತ್ರೆ
ಸೂ ... ಸೂಚಿ

[**ಸೂಚನೆ :** 43ನೇ ಪುಟದ ಮೊದಲನೇ ಸಾಲಿನಲ್ಲಿರುವ ಸಿದ್ದಮ್ಮ ಎಂಬುದನ್ನು ಮಾದಮ್ಮ ಎಂದು 95ನೇ ಪುಟದಲ್ಲಿ ಮನೋಹರ ಘಾಣೇಕರ ಅವರ ಜನನ ವರ್ಷವನ್ನು 1935 ಎಂದು ತಿದ್ದಿಕೊಳ್ಳಬೇಕಾಗಿ ವಿನಂತಿ.]

ಆಧುನಿಕ ಕನ್ನಡ ಬರಹಗಾರರು

ಅಂಕಪ್ಪ, ಚನ್ನಬಸಪ್ಪ [ಕಲಿರಾಯ]
ಜ 8-4-1921

ನಂಜನಗೂಡು ತಾಲೂಕಿನ ಹೊಸಕೋಟೆ ; ಸಿದ್ದಪ್ಪ–ಹೊನ್ನಮ್ಮ ; 1 ಗಂ 4 ಹೆ ಮಕ್ಕಳು ; ಬಿ.ಎ. ; ಮೈಸೂರಿನ ರೈಲ್ವೆ ಅಕೌಂಟ್ಸ್ ಕಚೇರಿಯಲ್ಲಿ ಗುಮಾಸ್ತರು ; 19 ಕೃತಿಗಳು : ಕಂಬಳಿಯ ನಾಗಿದೇವ (ನಾ), ಕರುಳಿನ ಸೆಳೆತ (ನಾ), ಕಾಯಕ (ನಾ), ಸತ್ಯಾಗ (ನಾ), ಶಿವನಿರುವುದೆಲ್ಲಿ (ಕ) ; ಹವ್ಯಾಸ : ಕುಸ್ತಿ

242 ಉತ್ತರಾದಿಮಠ ರಸ್ತೆ ಕೋಟೆ ಮೊಹಲ್ಲಾ ಮೈಸೂರು 570 004

ಅಂಗಡಿ, ಕರವೀರಪ್ಪ ಬಸಪ್ಪ
ಜ 7-7-1897

ಧಾರವಾಡ ಜಿಲ್ಲೆಯ ಮೆಣಸಿಗಿ ; ಬಸಪ್ಪ–ಬಸವ್ವ ; 4 ಗಂ 2 ಹೆ ಮಕ್ಕಳು ; ಮಾ ಶಿಕ್ಷಣ ಧಾರವಾಡ, ಶಿಕ್ಷಕ ತರಬೇತಿ ; ಗದಗ ನಗರ ಸಭೆಯ ಕೇಂದ್ರ ಶಾಲೆಯಲ್ಲಿ ಮುಖ್ಯ ಅಧ್ಯಾಪಕ (1920–24), ಉಪ ಶಿಕ್ಷಣಾಧಿಕಾರಿ (1944–52) ; ಸದಸ್ಯತ್ವ : ಶರಣ ಸಾಹಿತ್ಯ ಪ್ರಕಾಶನ ಸಂಸ್ಥೆ, ವೀರಶೈವ ಸಂಸ್ಕೃತಿ ಸಾಹಿತ್ಯ ಸಂಘ ; 40 ಕೃತಿಗಳು : ಆರತಿಯ ಪದಗಳು (ಕ), ಕಿತ್ತೂರ ಚೆನ್ನಮ್ಮ (ಇ), ಗದ್ಯ ಪದ್ಯಾವಲಿ (ಪ), ನಿಬಂಧಮಾಲೆ (ಪ), ಬೆಳವಡಿ ಮಲ್ಲಮ್ಮ (ಇ), ಭಜನಾಮಾಲೆ(ಕ)

ಜಯಬಸವ ಪುಸ್ತಕಾಲಯ ಗದಗ ಧಾರವಾಡ ಜಿಲ್ಲೆ



ಅಂಗಡಿ, ಬಸವರಾಜ ಮರಿತಮ್ಮಪ್ಪ
[ವೃಷಭೇಂದ್ರ, ಆಪಣ್ಣ, ನಂದೀಶ, ಮತಿವಂತ]
ಜ 15-3-1921

ಧಾರವಾಡ ಜಿಲ್ಲೆಯ ಬಂಕಾಪುರ ; ಮರಿತಮ್ಮಪ್ಪ –ಪುಟ್ಟಮ್ಮ ; 5 ಗಂ 4 ಹೆ ಮಕ್ಕಳು ; ಕನ್ನಡ ಜಾಣ, ಹಿಂದಿ ರಾಷ್ಟ್ರಭಾಷಾ, ಭಾಷಾರತ್ನ ; ಪ್ರಾಥಮಿಕ ಶಾಲಾ ಉಪಾಧ್ಯಾಯರು ; ಶ್ರೀ ಮುಕ್ತಿ ಮಂದಿರ ಗ್ರಂಥಮಾಲೆಯ ಸಂಪಾದಕ ; 52 ಕೃತಿಗಳು : ಧರ್ಮಗೀತಾವಳಿ, ಭವರೋಗ ವೈದ್ಯ (ಧ)

ವೃಷಭೇಂದ್ರ ಸಾಹಿತ್ಯ ಮಂದಿರ ಬಂಕಾಪುರ ಧಾರವಾಡ ಜಿಲ್ಲೆ



ಅಂಗಡಿ, ಶಿವಲಿಂಗಪ್ಪಾ ಮಲ್ಲಿಕಾರ್ಜುನಪ್ಪಾ
ಜ 27-2-1915

ಬೆಳಗಾವಿ ಜಿಲ್ಲೆಯ ಹಂದಿಗುಂದ : ಮಲ್ಲಿಕಾರ್ಜುನಪ್ಪಾ ಶಿವಲಿಂಗಪ್ಪಾ ಅಂಗಡಿ–ಗುರುಸಿದ್ಧಮ್ಮ ; 3 ಗಂ 3 ಹೆ ಮಕ್ಕಳು : ಪ್ರಾ ಹಂದಿಗುಂದ, ಪ್ರೌ ಬೆಳಗಾಂವಿ, ಬಿ.ಎ. ಲಿಂಗರಾಜ ಕಾಲೇಜು ಬೆಳಗಾವಿ, ಬಿ.ಟಿ. ಸರಕಾರೀ ಶಿಕ್ಷಕ ತರಬೇತಿ ಕಾಲೇಜು ; ಕರ್ನಾಟಕ ವಿಶ್ವವಿದ್ಯಾಲಯದ ತತ್ತ್ವಜ್ಞಾನ ವಿಭಾಗದಲ್ಲಿ ಶರಣರ ವಚನಗಳ ಇಂಗ್ಲಿಷ್ ಅನುವಾದಕರು ; ಕನ್ನಡದ ಕೃತಿಗಳು : ರಾಜ್ಯಶಾಸ್ತ್ರದ ಮೂಲತತ್ವಗಳು (ಸ), ಪ್ರಭುದೇವರ ವಚನಗಳು (ಕ)

ಕಲ್ಯಾಣ ನಗರ ಧಾರವಾಡ 580 007



ಅಕಬರ ಅಲಿ, ಮುಲ್ಲಾ
ಜ 3-3-1925

ಹುಕ್ಕೇರಿ ತಾಲೂಕು ಉಳ್ಳೇಗಡ್ಡಿ ಖಾನಾಪುರ : ಅಪ್ಪಾಸಾಹೇಬ–ಅಮೀರಬಿ: 3 ಗಂ 3 ಹೆ ಮಕ್ಕಳು: ಪ್ರಾ ಪ್ರೌ ಶಿಕ್ಷಣ ಹುಟ್ಟೂರು ಮತ್ತು ಬೆಳಗಾವಿ. ಪೂನಾ ವಿಶ್ವವಿದ್ಯಾನಿಲಯದಿಂದ ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಎಂ.ಎ., ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಎಚ್‌ಡಿ. ; ಮೈ ವಿ ಅಂಚೆ ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪಕರು : ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (ಸುಮನ ಸೌರಭ), ಕೇಂದ್ರ ಶಿಕ್ಷಣ ಇಲಾಖೆಯ ಬಹುಮಾನ (ಗಂಧಕೇಶರ) ; 9 ಕೃತಿಗಳು: ಅಸ್ತ, ತಮಸಾನದಿ ಎಡಬಲದಿ, ನವಚೇತನ (ಕ), ನಿರೀಕ್ಷೆಯಲ್ಲಿ (ಕಾ), ವಿಷಸಿಂಧು (ಕ), ಸಾಹಿತ್ಯ ವಿವೇಚನೆ (ವಿಮ)

14 ಕಾಮಾಕ್ಷಿ ಆಸ್ಪತ್ರೆ ಹಿಂಭಾಗ ಸರಸ್ವತೀಪುರಂ ಮೈಸೂರು 570 009

ಅಗ್ರಹಾರ ಕೃಷ್ಣಮೂರ್ತಿ [ಅನಾರ್ಯ]
ಜ 18-1-1953

ಕೊರಟಗೆರೆ ತಾಲೂಕು ಅಗ್ರಹಾರ: ಎ ಪಿ ಕುಂಭಿ ಶೆಟ್ಟಿ–ಜಯಮ್ಮ ; ಪ್ರೌ ಶಿಕ್ಷಣ ಕುಣಿಗಲ್, ಬೆಂಗಳೂರಿನ ಸರಕಾರೀ ಆರ್ಟ್ಸ್ ಕಾಲೇಜಿನಿಂದ ಬಿ.ಎ. (ಆನರ್ಸ್) ಕನ್ನಡ, ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ; ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನ ವಿದ್ಯಾರ್ಥಿ ; 1 ಕೃತಿ : ಬೆಳ್ದಿಂಗಪ್ಪನ ಪೂಜೆ (ಜಾ)

ಭಾರತೀಯ ಭಾಷಾವಿಭಾಗ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ವಾರಣಾಸಿ 221 005

ಅಚ್ಯುತರಾವ್, ತಿಪ್ಪೂರು ನಾರಾಯಣರಾವ [ತಿ ನಾ ಅಚ್ಯುತರಾವ]
ಜ 2-2-1939

ಮಂಡ್ಯ ಜಿಲ್ಲೆಯ ಮದ್ದೂರು ; 1 ಗಂ 1 ಹೆ ಮಕ್ಕಳು ; ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಮತ್ತು ಎಂ.ಎ. ; 1962ರಿಂದ ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕ ; 8 ಕೃತಿಗಳು : ಭಾರತ, ಭೂಮಂಡಲ ಪರಿಚಯ, ಸರಳ ಪ್ರಾಕೃತಿಕ ಭೂಗೋಲ (ಭೂ) ; ಹವ್ಯಾಸ : ನಗರೀಕರಣದ ಬಗ್ಗೆ ಸಂಶೋಧನೆ

2 ಪ್ರಾಧ್ಯಾಪಕ ನಿವಾಸ ಲಿಂಗರಾಜ ಕಾಲೇಜು ಬೆಳಗಾವಿ 590 001

ಅಡಿಗ, ಕುರಾಡಿ ಸೀತಾರಾಮ
ಜ 9-5-1930



ದಕ್ಷಿಣ ಕನ್ನಡ ಜಿಲ್ಲೆಯ ಕುರಾಡಿ ; ಹಾರ್ದಳ್ಳಿ ನರಸಿಂಹ ಅಡಿಗ–ಸಾವಿತ್ರಿ ; 2 ಗಂ 4 ಹೆ ಮಕ್ಕಳು : ಪ್ರಾ ಪ್ರೌ ಶಿಕ್ಷಣ ಕುರಾಡಿ ಮತ್ತು ಇನ್ನಂಜೆಗಳಲ್ಲಿ, ಉಡುಪಿಯಲ್ಲಿ ಅಧ್ಯಾಪಕ ತರಬೇತಿ (1946–48) ; ಚಿತ್ರಕಲೆಯ ಹೈಯರ್ ಗ್ರೇಡ್ ಪರೀಕ್ಷೆ ; ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಾಪಕ, ಮುಖ್ಯಾಧ್ಯಾಪಕ ; 2 ಕೃತಿಗಳು

ಕನ್ನಡ ಕುಟೀರ ಫಲಿಮಾರು ದ. ಕ. 574 112



ಅಡಿಗ, ಬಳ್ಕೂರು ಸುಬ್ರಾಯ [ಸವ್ಯಸಾಚಿ]
ಜ 17-3-1926

ಕುಂದಾಪುರ ತಾಲೂಕಿನ ಬಳ್ಕೂರು ; ಲಕ್ಷ್ಮೀನಾರಾಯಣ ಅಡಿಗ–ಕಮಲಾಬಾಯಿ : ಪ್ರಾ ಮಾ ಶಿಕ್ಷಣ ಬಳ್ಕೂರು ಮತ್ತು ಕಾವ್ರಾಡಿಗಳಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ಜಾಣ', ಹಿಂದೀ ಪ್ರಚಾರ ಸಭೆಯ 'ಪ್ರವೀಣ' ಹಾಗೂ 'ಪ್ರಚಾರಕ' ತರಬೇತಿ ; ಸೊಂಡೂರಿನ ವಿದ್ಯಾಮಂದಿರದಲ್ಲಿ ಹಿಂದೀ ಅಧ್ಯಾಪಕ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 3 ಕೃತಿಗಳು : ಕಣ್ಣರಿತ ಭಾವ (ಸಕ), ಜೀವನ ಕಲೆ, ಜೀವನ ದರ್ಶನ (ಅ)

ಅಧ್ಯಾಪಕ ಶ್ರೀ ಛತ್ರಪತಿ ಶಿವಾಜಿ ವಿದ್ಯಾಮಂದಿರ ಜೂನಿಯರ್ ಕಾಲೇಜು ಸೊಂಡೂರು

ಅಡಿಗ, ಮೊಗೇರಿ ಗೋಪಾಲಕೃಷ್ಣ
ಜ 1918



ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷಿನಲ್ಲಿ ಎಂ.ಎ; ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಸಾಗರದ ಲಾಲ್ ಬಹದ್ದೂರ್ ಕಾಲೇಜು ಹಾಗೂ ಉಡುಪಿಯ ಪೂರ್ಣಪ್ರಜ್ಞ ಕಾಲೇಜುಗಳ ಪ್ರಿನ್ಸಿಪಾಲರಾಗಿದ್ದರು, ಸಿಮ್ಲಾದ ಇನ್ಸ್‌ಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್‌ನ ರಿಸರ್ಚ್ ಫೆಲೋ ಆಗಿದ್ದರು, ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟಿನ ಡೈರೆಕ್ಟರ್ ಆಗಿದ್ದರು; ಅಖಿಲ ಭಾರತ ಐವತ್ತೈದನೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (1979); ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ (ವರ್ಧಮಾನ 1974), ಮೈಸೂರು ರಾಜ್ಯ ಸರಕಾರದ ಗೌರವ, ವರ್ಧಮಾನ ಸಾಹಿತ್ಯ ಪ್ರಶಸ್ತಿ (ಸಮಗ್ರ ಗದ್ಯ); 26 ಕೃತಿಗಳು: ಆಕಾಶದೀಪ (ಕಾ), ಆರೋಹಣ, ಕಟ್ಟುವೆವು ನಾವು, ಚಂಡೆ ಮದ್ದಲೆ, ಭೂಮಿಗೀತ (ಕ), ರೈತರ ಹುಡುಗಿ (ಅನು), ಸಮಗ್ರ ಕಾವ್ಯ, ಸಮಗ್ರ ಗದ್ಯ

358 37ನೇ ಕ್ರಾಸ್ 5ನೇ ಬ್ಲಾಕ್ ಜಯನಗರ 560 029

ಅಡಿಗ, ಸುಬ್ರಹ್ಮಣ್ಯ ಟಿ ಎಲ್
ಜ 4-3-1938

ಉಡುಪಿ ತಾಲೂಕು ಮಂಡಾರು; ಲಕ್ಷ್ಮೀನಾರಾಯಣ ಅಡಿಗ–ರತ್ನಾವತಿ; 1 ಗು 2 ಹೆ ಮಕ್ಕಳು; ಪ್ರಾ ಮಾ ಶಿಕ್ಷಣ ಅರಳಸುರಳಿಯಲ್ಲಿ, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಿಂದ ಬಿ.ಎ. (1962); ಭದ್ರಾವತಿ ಕವಿ ಸಮ್ಮೇಳನದಲ್ಲಿ ಪ್ರಶಸ್ತಿ (1968), ಬೆಂಗಳೂರು ಯುವಜನ ಮೇಳದ ಪ್ರಶಸ್ತಿ (1967): ಸಾಗರ–ಶಿವಮೊಗ್ಗ ಜಿಲ್ಲಾ ಬರಹಗಾರರ ಮಂಡಳಿ ಸದಸ್ಯ; 8 ಕೃತಿಗಳು: ಕಪ್ಪು ನೀರು (ಸಕ), ನೋವು ನಲಿವು (ಕಾ), ಪರಾಗ, ಪ್ರೇಮ ಪೂರ್ಣಿಮೆ, ಮಧುರ ಜೇನು, ಹೃದಯಾಕ್ಷಿ (ಕ); ಹವ್ಯಾಸ: ತೋಟಗಾರಿಕೆ

ಅರವಿಂದಾಲಯ ಅರಳಸುರಳಿ ಅಂಚೆ ತೀರ್ಥಹಳ್ಳಿ ತಾಲೂಕು



ಅಣ್ಣಪ್ಪ ರುದ್ರಪ್ಪ ಮಟ್ಟೀಕಲ್ಲಿ
ಜ 2-10-1930

ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ: ಬೆಳಗಾವಿ ಲಿಂಗರಾಜ ಕಾಲೇಜಿನಿಂದ ಬಿ.ಎ. ಆನರ್ಸ್, ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಇಡಿ., ಮತ್ತು ಡಿ.ಪಿ.ಇಡಿ; ವಿದ್ಯಾ ಇಲಾಖೆಯಲ್ಲಿ ಅಧಿಕಾರಿ; ಕರ್ನಾಟಕ ಸಂಘ ಹಾಗೂ ಬರಹಗಾರರ ಬಳಗಗಳ ಸದಸ್ಯ; 3 ಕೃತಿಗಳು: ಚಿತ್ರಾ (ನಾ),

ಬೆಳಗಾವಿಯ ಬಳುವಳಿ (ಸಂ)
4012 ಬಿ ಗಣಾಚಾರಿ ಬೀದಿ ಬೆಳಗಾವಿ 590 001



ಅಣ್ಣಯ್ಯಗೌಡ, ಹಣ್ಣೂರು ಹನುಮಂತೇಗೌಡ
ಜ 29-3-1927

ಬೆಂಗಳೂರು ಉತ್ತರ ತಾಲೂಕಿನ ಹಣ್ಣೂರು; ಹನುಮಂತೇಗೌಡ–ಚೌಡಮ್ಮ; ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಆನರ್ಸ್, ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ., ಡರ್‌ಹ್ಯಾಂ ವಿಶ್ವ ವಿದ್ಯಾನಿಲಯದ ಎಂ.ಲಿಟ್.; ಮೈ ವಿ ಇಂಗ್ಲಿಷ್ ಪ್ರಾಧ್ಯಾಪಕ; ಸದಸ್ಯತ್ವ: ಪಿ.ಇ.ಎನ್., ಅಸೋಸಿಯೇಷನ್ ಫಾರ್ ಕಾಮನ್ ವೆಲ್ತ್, ಲಿಟರೇಚರ್ ಅಂಡ್ ಲ್ಯಾಂಗ್ವೇಜ್ ಸ್ಟಡೀಸ್; 8 ಕೃತಿಗಳು: ಮೃಗಪ್ರಭುತ್ವ (ಅ), ರಾಬರ್ಟ್ ಫ್ರಾಸ್ಟ್ (ಜೀ), ವಿಶ್ವನಾಟಕ ವೀಕ್ಷಣೆ (ವಿಮ), ಜಾನ್ ಮಿಲಿಂಗ್‌ಟನ್ ಸಿಂಗ್‌ನ ನಾಟಕಗಳು (ಅ), ನೂತನ ವಿದ್ಯಾಭ್ಯಾಸ (ಸಂ), ಹೊಸ ಮೈಸೂರು (ಗದ್ಯ), ದಿ ಲಿಟರರಿ ಹಾಫ್-ಇಯರ್ಲಿ (ಸಂ); ಹವ್ಯಾಸ: ಟೆನಿಸ್ ಆಟ
ಪ್ರಾಧ್ಯಾಪಕರ ನಿವಾಸ ಸರಸ್ವತೀಪುರಂ ಮೈಸೂರು 570 009

ಅಣ್ಣೀಗೇರಿ, ಅಮೃತ ಮಹಾದೇವ
ಜ 6-6-1914

ನವಲಗುಂದ ತಾಲೂಕಿನ ಅಣ್ಣಿಗೇರಿ; ಮಹಾದೇವ ಅಮೃತ ಅಣ್ಣೀಗೇರಿ–ಅಂಬಾಬಾಯಿ; 1 ಗಂ 2 ಹೆ ಮಕ್ಕಳು; ಮುಂಬಯಿ ವಿಶ್ವವಿದ್ಯಾನಿಲಯದಿಂದ ಎಂ.ಎ. (1939); ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕ (1943–53), ಮ್ಯೂಸಿಯಂ ಕ್ಯೂರೇಟರ್ (1953–61), ಮೈಸೂರು ರಾಜ್ಯ ಪುರಾತತ್ವ ಇಲಾಖೆಯಲ್ಲಿ ಸಂಶೋಧಕ (1969ರ ವರೆಗೆ), ಈಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವಸ್ತುಸಂಗ್ರಹಾಲಯದ ವ್ಯವಸ್ಥಾಪಕ; ಸದಸ್ಯತ್ವ: ಕನ್ನಡ ಸಾಹಿತ್ಯಪರಿಷತ್ತು, ಮಿಥಿಕ್ ಸೊಸೈಟಿ; 18 ಕೃತಿಗಳು: ಎರಡನೆ ವಿಕ್ರಮಾದಿತ್ಯ, ಐಹೊಳೆ, ಲಕ್ಕುಂಡಿ (ಇ); ಹವ್ಯಾಸ: ನಾಣ್ಯಗಳ ಅಭ್ಯಾಸ
ಸಂಚಾಲಕ ಸಾಂಸ್ಕೃತಿಕ ವಸ್ತುಸಂಗ್ರಹಾಲಯ ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು 560 018



ಅಣ್ಣೀಗೇರಿ, ಕೆ ಎಲ್ [ಶ್ರೀ ಅಂಕ, ಎ ಕರಿಯಪ್ಪ]

ಜ **1935**

ಗದಗ; ಲಕ್ಷ್ಮಣಪ್ಪ–ಗೌರಮ್ಮ; 2 ಗಂ 5 ಹೆ ಮಕ್ಕಳು: ಗದಗ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ; ಪಾದರಕ್ಷೆಗಳ ಅಂಗಡಿಯಲ್ಲಿ ವ್ಯವಹಾರ, ದಿನ ಪತ್ರಿಕೆಗಳ ಸುದ್ದಿಗಾರ, ಸ್ಫೂರ್ತಿ ಮಾಸಪತ್ರಿಕೆಯ ಸಂಪಾದಕ (1968 ರಿಂದ); 2 ಕೃತಿಗಳು: ಅವಳೇ ನನ್ನ ಪ್ರೇಯಸಿ, ಮೃತ್ಯು ಮಂಥನ (ಸಕ): ಹವ್ಯಾಸ: ಪ್ರವಾಸ

ಸಂಪಾದಕ ಸ್ಫೂರ್ತಿ ಮಾಸಪತ್ರಿಕೆ ಗದಗ

ಅನಂತನಾರಾಯಣ, ಸದಾಶಿವಯ್ಯ [ಉಷಾಪ್ರಿಯ, ವಸಂತ]

ಜ **30–1–1926**

ಮೈಸೂರು; ಅಂಬಳೆ ಸದಾಶಿವಯ್ಯ–ಗಂಗಮ್ಮ: ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ. ಆನರ್ಸ್ (1945), ಇಂಗ್ಲಿಷ್ ಎಂ.ಎ. (1949): ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ: ಬಿಎಂಶ್ರೀ ರಜತ ಮಹೋತ್ಸವ ಚಿನ್ನದ ಪದಕ (1944), ಕನ್ನಡ ಸಂಸ್ಕೃತಿ ಪ್ರಸಾರ ಇಲಾಖೆಯ ಬಹುಮಾನ (ಬಾಲಗಂಗಾಧರ ತಿಲಕ್ 1961), ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ 1962); 60 ಕೃತಿಗಳು: ಅತ್ತಿಗೆ (ಕಾ), ಉರಾಷೀಮ (ಬಾ), ಉಷಾಸ್ವಪ್ನ (ಕಾ), ಎಲ್ಲೆಯರಿಯದ ಕಡಲು (ವಿ), ದೊಡ್ಡಕಾಡಿನಲ್ಲಿ ಪುಟ್ಟಮನೆ (ಅ), ಪಯಣದ ಹಾದಿಯಲ್ಲಿ (ಕಾ), ಬಯಕೆಯ ಬೇಲಿ (ಸಕ), ಮುರುಕು ಮಂಟಪ (ಕಾ), ರೈತರ ಹುಡುಗ (ಅ), ಮ್ಯಾಕ್ಸಿಂಗಾರ್ಕಿ (ಅ), ಹವ್ಯಾಸ: ಸಂಗೀತ ಶ್ರವಣ

ಗಂಗಾತರಂಗ 5 ನೇ ಮೇನ್ ಸರಸ್ವತೀಪುರಂ ಮೈಸೂರು 570 009

ಅನಂತಪದ್ಮನಾಭರಾವ್, ಮೈಸೂರು ಶೇಷಗಿರಿರಾವ್ [ಕಲ್ಕಿ. ಮೈ ಶೇ ಅ]


ಜ **9–9–1903**



ಮೈಸೂರು: ಎಂ. ಶೇಷಗಿರಿರಾವ್–ನರಸಮ್ಮ: 3 ಗಂ 1 ಹೆ ಮಕ್ಕಳು: ಮಡಕೇರಿಯ ಸೆಂಟ್ರಲ್ ಸ್ಕೂಲಿನಲ್ಲಿ ಶಿಕ್ಷಣ; ಕೊಡಗು ಸರ್ಕಲ್ ಅರಣ್ಯ ಇಲಾಖೆಯ ಕನ್ಸರ್ವೇಟರ್ ಕಛೇರಿಯಲ್ಲಿ ಸೂಪರಿಂಟೆಂಡೆಂಟ್ ಆಗಿ 1958ರಲ್ಲಿ ನಿವೃತ್ತಿ; ದೇವರಾಜ

ಬಹದ್ದೂರ್ ಟ್ರಸ್ಟ್ ಬಹುಮಾನ (ತುಲಸೀ ರಾಮಾಯಣ 1950) : ಸದಸ್ಯತ್ವ : ಕೊಡಗು ಕರ್ನಾಟಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು ; 7 ಕೃತಿಗಳು : ಕರ್ಣ (ಕ), ತುಲಸೀ ರಾಮಾಯಣ (ಅ), ಶ್ರೀ ಕಾವೇರಿ ಕಥಾಮೃತಂ (ಕ) : ಹವ್ಯಾಸ : ಗಮಕ

ಎಫ್ ಕ್ಯು 29 ಅರಣ್ಯ ಇಲಾಖೆಯ ಮನೆ 8 ನೇ ಕ್ರಾಸ್ ಮಲ್ಲೇಶ್ವರಂ ಪಶ್ಚಿಮ ಬೆಂಗಳೂರು 560 055



ಅನಂತಮೂರ್ತಿ, ಉಡುಪಿ ರಾಜಗೋಪಾಲಾಚಾರ್ಯ
ಜ 21-12-1932

ತೀರ್ಥಹಳ್ಳಿ ತಾಲೂಕಿನ ಮೇಳಿಗೆ; ಯು ಪಿ ರಾಜಗೋಪಾಲಾಚಾರ್ಯ-ಸತ್ಯಭಾಮ : 1 ಗಂ 1 ಹೆ ಮಕ್ಕಳು: ಪ್ರಾ ಪ್ರೌ ಶಿಕ್ಷಣ ಮೇಳಿಗೆ ಮತ್ತು ತೀರ್ಥಹಳ್ಳಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್‌ನಲ್ಲಿ ಎಂ.ಎ.. ಬರ್ಮಿಂಗಂ ವಿಶ್ವವಿದ್ಯಾನಿಲಯದಲ್ಲಿ ಕಾಮನ್‌ವೆಲ್ತ್ ವಿದ್ಯಾರ್ಥಿವೇತನದಿಂದ ಡಾಕ್ಟರೇಟ್ : ಆಯೋವಾ ಟಫ್ಟ್ಸ್‌ಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದು ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ; ಇಂಗ್ಲೆಂಡ್, ಅಮೆರಿಕಾ, ಯೂರೋಪ್, ಜಪಾನ್, ಕೊರಿಯ ಥಾಯ್‌ಲೆಂಡ್, ರಷ್ಯಗಳಲ್ಲಿ ಪ್ರವಾಸ : ಹೋಮಿ ಭಾಭಾ ಫೆಲೋಶಿಪ್, ಅಯೋವಾ ವಿಶ್ವವಿದ್ಯಾನಿಲಯದ ಗೌರವ ಲೇಖಕ ಫೆಲೋಶಿಪ್ ; ಸದಸ್ಯತ್ವ : ಕೇಂದ್ರ ಸಾಹಿತ್ಯ ಅಕಾದೆಮಿ ಮತ್ತು ಕರ್ನಾಟಕ ಸಾಹಿತ್ಯ ಅಕಾದೆಮಿ ; ರುಜುವಾತು ತ್ರೈಮಾಸಿಕ ಪತ್ರಿಕೆಯ ಸಂಪಾದಕ ; 14 ಕೃತಿಗಳು : ಆಕಾಶ ಮತ್ತು ಬೆಕ್ಕು (ಸಕ), ಅವಸ್ಥೆ (ಕಾದಂ) ಎಂದೆಂದೂ ಮುಗಿಯದ ಕಥೆ, ಪ್ರಶ್ನೆ (ಸಕ), ಭಾರತೀಪುರ, ಸಂಸ್ಕಾರ (ಕಾದಂ) ಸನ್ನಿವೇಶ, ಸಮಕ್ಷಮ (ವಿಮ)

849 ಅಭಯ ತೊಣಚಿಕೊಪ್ಪಲು ಬಡಾವಣೆ ಸರಸ್ವತೀಪುರಂ ಮೈಸೂರು 570 009

ಅನಂತಮೂರ್ತಿ, ಸಿಂಧುವಳ್ಳಿ [ಸಿಂಧುವಳ್ಳಿ]
ಜ 10–5–1931



ಪಿರಿಯಾಪಟ್ಟಣದ ಬಳಿಯ ಕಂಪಲಾಪುರ ; ಸಿಂಧುವಳ್ಳಿ ಶಾನುಭೋಗ ಸುಬ್ಬಣ್ಣ–ಶಂಕರಮ್ಮ : ಪ್ರೌ ಶಿಕ್ಷಣ ಮೈಸೂರಿನ ಬನುಮಯ್ಯ ಶಾಲೆ, ಮಹಾರಾಜಾ ಕಾಲೇಜಿನಿಂದ ಬಿ.ಎ., ಕರ್ನಾಟಕ ವಿಶ್ವವಿದ್ಯಾನಿಲಯದ ಎಂ.ಎ. ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿ.ಎಚ್‌ಡಿ. ; ಲಲಿತಕಲಾ

ಕಾಲೇಜಿನ ಪ್ರಿನ್ಸಿಪಾಲ್, ನಾಟಕ ಶಾಸ್ತ್ರದ ಪ್ರಾಧ್ಯಾಪಕ : 5 ಕೃತಿಗಳು : ಕಾಡುಪ್ರಾಣಿ (ಅ), ಗುಬ್ಬಿಕಂಪನಿ (ಸಂಶೋ), ರಂಗ (ವಿಮ), ವಿನಾಯಕವಾಙ್ಮಯ, ಹೊಸ ಸಂವೇದನೆಯ ನಾಟಕಗಳು (ಸಂ) ; ಹವ್ಯಾಸ : ನಾಟಕ

ಸುರುಚಿ ಈಜುಕೊಳ ರಸ್ತೆ ಸರಸ್ವತೀಪುರಂ ಮೈಸೂರು 570 009



ಅನಂತರಂಗಾಚಾರ್, ನರಸಿಂಹಾಚಾರ್

[ಸ್ವಚ್ಛಂದಂ]

ಜ 23-5-1906

ತಿರುಮಕೂಡಲು ನರಸೀಪುರ ; ಉಪಾಧ್ಯ ನರಸಿಂಹಾಚಾರ್-ವೆಂಕಟಲಕ್ಷ್ಮಮ್ಮ ; 3 ಗಂ 9 ಹೆ ಮಕ್ಕಳು : ಮಾ ಪ್ರೌ ಶಿಕ್ಷಣ,ಟಿ ನರಸೀಪುರ ಮತ್ತು ಮೈಸೂರು ; ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ., ಎಂ.ಎ., ಬಿ.ಟಿ., ಡಿಲಿಟ್ : ಕನ್ನಡ ಅಧ್ಯಾಪಕರಾಗಿ. ಯು ಜಿ ಸಿ ಪ್ರಾಧ್ಯಾಪಕರಾಗಿ ನಿವೃತ್ತಿ ; ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ (ಕಾವ್ಯಸಾರಂ), ಅಕಾದೆಮಿ ಬಹುಮಾನ (ದುರ್ಗಸಿಂಹನ ಪಂಚತಂತ್ರ), ಡಿ. ಲಿಟ್ ಪ್ರಶಸ್ತಿ (ಸಾಹಿತ್ಯ ಭಾರತೀ) ; 30 ಕೃತಿಗಳು : ಕನ್ನಡ ರತ್ನತ್ರಯ, ಕವಿಕುಲಾಗ್ರಣಿ ಪಂಪ, ಕವಿ ರನ್ನ (ವಿಮ), ಕುಮಾರ ವ್ಯಾಸ ಭಾರತದ ಯುದ್ಧಪಂಚಕಪರ್ವಗಳು (ಸಂ), ಚಂಪೂಕಾವ್ಯಗಳ ಪದ್ಯಾನುಕ್ರಮಣಿ (ಸಂ), ನೇಮಿಚಂದ್ರ (ವಿಮ), ಪಂಪಭಾರತಂ (ಸಂ), ಪೊನ್ನ (ವಿಮ), ಸಾಹಿತ್ಯ ಭಾರತೀ (ಸಾ)

ನೃಸಿಂಹಪ್ರಾಸಾದಂ 2909 1 ನೇ ಮೇನ್ ಸರಸ್ವತೀಪುರಂ ಮೈಸೂರು 570 009

ಅನಂತರಾಮಯ್ಯ, ರುದ್ರಪಟ್ಟಣ ಲಕ್ಷ್ಮೀಕಾಂತಯ್ಯ

ಜ 10-5-1937



ಹಾಸನ ಜಿಲ್ಲೆಯ ರುದ್ರಪಟ್ಟಣ ; ಆರ್. ಟಿ. ಲಕ್ಷ್ಮೀಕಾಂತಯ್ಯ-ಸುಬ್ಬಲಕ್ಷ್ಮಮ್ಮ : 2 ಗಂ 1 ಹೆ ಮಕ್ಕಳು ; ಪ್ರಾ ಮಾ ಪ್ರೌ ಶಿಕ್ಷಣ ಚಿಕ್ಕಮಗಳೂರು, ಮೈಸೂರುಗಳಲ್ಲಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಆನರ್ಸ್ (1959), ಎಂ.ಎ., (1960) ; ಏಳು ವರ್ಷ ವಿವಿಧ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ, ಮೈ ವಿ ಕನ್ನಡ ಗ್ರಂಥಸೂಚಿಯ ಸಹಾಯಕ ಸಂಶೋಧಕ (1967) ಅದರ ಸಂಪಾದರಕಲ್ಲಿ ಒಬ್ಬ (1968ರಿಂದ), ಪ್ರಸಾರಂಗದ ಉಪನಿರ್ದೇಶಕ (1973ರಿಂದ), ಗ್ರಂಥಲೋಕ ಮಾಸ

ಪತ್ರಿಕೆಯ ಸಂಪಾದಕ-ಪ್ರಕಾಶಕ (1977ರಿಂದ) ; ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (ಟಾಲ್‌ಸ್ಟಾಯ್ ಸಂಕ್ಷಿಪ್ತ ಜೀವನ–1978) ; 32 ಕೃತಿಗಳು : ಪಂಪಭಾರತ ಕಥಾಲೋಕ,ಭಾರತೀಯ ರಂಗಭೂಮಿ (ಅ), ರಂಗ ಸೌರಭ (ಸಂ), ಮಗ್ಗೆಯ ಮಾಯಿದೇವ (ಜಾ), ವಡ್ಡಾರಾಧನ ಕಥಾಲೋಕ, ಶಿಕ್ಷಣದ ಸಾಹಸಕಥೆ. ಸ್ವಾತಂತ್ರ್ಯದ ಹೋರಾಟ (ಅ)

49 ಅಕ್ಷಯ ತೋಣಚಿಕೊಪ್ಪಲು ಬಡಾವಣೆ ಸರಸ್ವತೀಪುರಂ ಮೈಸೂರು 570 009

ಅನಂತರಾಮು, ಕೃಷ್ಣಪ್ಪ
ಜ 25–10–1943



ಕೃಷ್ಣರಾಜನಗರದ ಗಾವಡಗೆರೆ; ಎನ್. ಎಸ್. ಕೃಷ್ಣಪ್ಪ–ಸುಬ್ಬಲಕ್ಷಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಮಾ ಶಿಕ್ಷಣ ಗಾವಡಗೆರೆ ಮತ್ತು ಕೆ.ಆರ್. ನಗರಗಳಲ್ಲಿ. ಎಲ್. ಎಂ. ಇ. ಆಟೊಮೊಬೈಲ್ಸ್, ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಭಾಷಾ ವಿಜ್ಞಾನ ಮತ್ತು ಹಿಂದೀ ಎಂ.ಎ. ; ಮೈ ವಿ ಸಂಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ; ಜಪಾನ್ ಪ್ರವಾಸ (1970), ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (ಉದಯ ರವಿಯ ನಾಡಿನಲ್ಲಿ 1974) ; 3 ಕೃತಿಗಳು : ಉದಯರವಿಯ ನಾಡಿನಲ್ಲಿ (ಪ್ರವಾ), ದೇವಬಿನ್ನಪ (ಕ), ದೇವರದಾಸಿಮಯ್ಯ (ವಿಮ)

414 ವೀಣೆ ಶೇಷಣ್ಣ ರಸ್ತೆ ದೇವಾಂಬ ಅಗ್ರಹಾರ ಮೈಸೂರು 570 001

ಅನಂತರಾವ್, ಮಾದಪ್ಪೂರ್ ಸುಬ್ಬರಾವ್
ಜ 31–3–1925

ಮೈಸೂರು ; ಸುಬ್ಬರಾವ್–ಮಹಾಲಕ್ಷ್ಮಮ್ಮ ; 2 ಗಂ ಮಕ್ಕಳು ; ಪ್ರಾ ಮಾ ಶಿಕ್ಷಣ ಮೈಸೂರಿನಲ್ಲಿ, ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್; ಅಂಚೆ ಇಲಾಖೆಯಲ್ಲಿ ಕೆಲಸ ; ರಾಜ್ಯ ಸರ್ಕಾರದ ಪ್ರಶಸ್ತಿ (ಹಾಲಾಹಲ-1959) ; 7 ಕೃತಿಗಳು : ಜೋಸಿ ಮತ್ತು ಇತರ ಕಥೆಗಳು (ಅ), ವಸಂತಗೀತ, ಸಮಾಪ್ತಿ, ಹಾಲಾಹಲ (ಕಾ)

ಕ್ಲರ್ಕ್ ಅಣ್ಣಾರೋಡ್ ಪೋಸ್ಟ್‌ಆಫೀಸ್ ಮದರಾಸು 600 002

ಅನಂತರಾವ್, ಮಧುವನ ಕಡಬ (ಅನಂತ)
ಜ 15-5-1930

ಕಡಬ ; ಕೆ. ಈಶ್ವರಯ್ಯ–ಮಹಾಲಕ್ಷ್ಮಿ ಅಮ್ಮ ; 3 ಗಂ 2 ಹೆ ಮಕ್ಕಳು ; ಎಸ್.ಎಸ್. ಎಲ್.ಸಿ. ಶಿಕ್ಷಣ, ಯಕ್ಷಗಾನ ಕಲೆಯಲ್ಲಿ ತರಬೇತಿ ; ಕಡಬ ಉನ್ನತ ಪ್ರಾಥಮಿಕ ಶಾಲೆ

ಯಲ್ಲಿ ಉಪಾಧ್ಯಾಯರು, ಎಲ್‌ಎಲ್‌ಎ ಗ್ರಂಥಾಲಯದಲ್ಲಿ ಗ್ರಂಥಪಾಲ ; 2 ಕೃತಿಗಳು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಳದ ಇತಿಹಾಸ (ಧ) ಸಂತತಿ ನಿರೋಧ ಸಂಗ್ರಾಮ (ಯ)

ಅಧ್ಯಾಪಕ ಸರಕಾರಿ ಮಾದರಿ ಉನ್ನತ ಪ್ರಾಥಮಿಕ ಶಾಲೆ ಕಡಬ ಪುತ್ತೂರು ತಾಲೂಕು ದ.ಕ.



ಅನಸೂಯ ಮೂಲಂಗಿ ರಾಮರೆಡ್ಡಿ
(ಅನಸೂಯ ರಾಮರೆಡ್ಡಿ)
ಜ 8-12-1929

ಚಿತ್ರದುರ್ಗ : ರಾಮರೆಡ್ಡಿ–ಮಂಗಮ್ಮ : 1ಗಂ 3ಹೆ ಮಕ್ಕಳು : ಹಿಂದೀ ರಾಷ್ಟ್ರಭಾಷಾ ಪ್ರವೀಣ ಮತ್ತು ಹಿಂದೀ ಶಿಕ್ಷಕ ; ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಬಿ.ಎ. (1971), ಬಿ.ಎಡ್. (1974) : 8 ಕೃತಿಗಳು : ಕುಲದೀಪಕ (ಕಾ), ಗುರುಗೋವಿಂದ ಸಿಂಹ (ಜೀ), ಮೂರುದಾರಿ (ಕಾ)

ಕೇರಾಫ್ ಕೆ ರಾಮರೆಡ್ಡಿ ಚರ್ಚ್ ಬಡಾವಣೆ ಚಿತ್ರದುರ್ಗ



ಅನ್ನದಾನಿ, ಗಂಜೀಹಾಳ ಸಂಗಪ್ಪ
(ಶ್ರೀ ಹುಲ್ಲದೇವ)
ಜ 7-1-1936

ಗುಡೂರು ; ಸಂಗಪ್ಪ-ನಾಗವ್ವ ; 3 ಗಂ 2 ಹೆ ಮಕ್ಕಳು ; ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಬಿ.ಎ., ಎಚ್.ಟಿ.ಸಿ.-ಅಗ್ರಿ ; ಸದಸ್ಯತ್ವ : ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿ ; 8 ಕೃತಿಗಳು ಅಂತಃಶಕ್ತಿ (ಸಕ), ಚಿತ್ರಾನ್ನ, ದೀವಿಗೆ (ಕ), ಬೆಳಕು ಬೆಳಕನೆ ಕೂಡಿತು, ರಥದ ಕುದುರೆಗಳು (ಸಕ), ರುದ್ರವೀಣೆ (ಕ)

ಮರೋಳ ಅಂಚೆ ಹುನಗುಂದ ತಾಲೂಕು ಬಿಜಾಪುರ ಜಿಲ್ಲೆ

ಅನುಪಮಾ ನಿರಂಜನ
ಜ 17-5-1934

ತೀರ್ಥಹಳ್ಳಿ : ಡಿ ಶಿವರಾಮಯ್ಯ-ಲಕ್ಷ್ಮೀದೇವಮ್ಮ ; 2 ಹೆ ಮಕ್ಕಳು ; ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಬಿ.ಬಿ.ಎಸ್. ; ವೈದ್ಯರು : ಪೂರ್ವಜರ್ಮನಿ, ರಷ್ಯಾ, ಪೋಲೆಂಡ್‌ಗಳಲ್ಲಿ ಪ್ರವಾಸ ; 33 ಕೃತಿಗಳು : ಅನಂತ ಗೀತ, ಸಂಕೋಲೆಯೊಳಗಿಂದ, ಶ್ವೇತಾಂಬರಿ, ಹಿಮದ ಹೂ, ಹೃದಯ ವಲ್ಲಭ, ನಟಿ, (ಕಾ), ಆರೋಗ್ಯದರ್ಶನ (ವೈ), ಒಡಲು (ಸಕ), ಕೇಳುಕಿಶೋರಿ, ತಾಯಿಮಗು, ದಾಂಪತ್ಯ ದೀಪಿಕೆ (ವೈ), ದಿನಕ್ಕೊಂದು ಕತೆ (ಬಾ)

515 7ನೇ ಮುಖ್ಯ ರಸ್ತೆ 5ನೇ ಬ್ಲಾಕ್ ಜಯನಗರ ಬೆಂಗಳೂರು 560 041



ಅಪ್ಪಾಜಿಗೌಡ, ಸಾದೊಳಲು ಬೋರೇಗೌಡ
(ಅರ್ಜುನಪುರಿ ಅಪ್ಪಾಜಿಗೌಡ)
ಜ 25–9–1948

ಮಂಡ್ಯ ಜಿಲ್ಲೆಯ ಸಾದೊಳಲು ; ಬೋರೇಗೌಡ-ತಾಯಮ್ಮ ; ಒಬ್ಬಳು ಮಗಳು ; ಪ್ರೌ ಶಿಕ್ಷಣ ಮದ್ದೂರು, ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ; ಕನ್ನಡ ಅಧ್ಯಾಪಕ ; 3 ಕೃತಿಗಳು : ದೌರ್ಬಲ್ಯ (ಕಾ), ವಿಮರ್ಶಾ ಸುಧೆ (ವಿಮ)

ಕನ್ನಡ ಅಧ್ಯಾಪಕ, ಎಚ್. ಕೆ. ವೀರಣ್ಣಗೌಡ ಕಾಲೇಜು ಮದ್ದೂರು 571428

ಅಮರನಾಥ, ಕೆರೋಡಿ
ಜ 14–8–1937

ಹಿರಿಯೂರು ; ಕೆರೋಡಿ ರಾಮಸ್ವಾಮಿ ; ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಭೌತಶಾಸ್ತ್ರದ ಎಂ.ಎಸ್.ಸಿ. (1965) ; ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಭೌತ ಶಾಸ್ತ್ರ ಅಧ್ಯಾಪಕ ; 1 ಕೃತಿ: ಶಾಖಪ್ರಕರಣ ;

1108 ಜಯನಗರ 9ನೇ ಬ್ಲಾಕ್ 26 ಬಿ ಮೇನ್ ಬೆಂಗಳೂರು 560 011



ಅಮೀನ, ರಮಾನಂದ ಮೊರುಗುರಿಕಾರರ
(ರಮಾನಂದ ಅಮೀನ್)
ಜ 10–5–1917

ಮಂಗಳೂರು ಬಳಿಯ ಬೋಳೂರು ; ಮೂರುಗುರಿ ಕಾರರ–ಗೌರಿ ; ಶಿಕ್ಷಣ 9ನೇ ತರಗತಿ ; 2ಗಂ 2ಹೆ ಮಕ್ಕಳು ; ಸ್ವಾತಂತ್ರ್ಯ ಚಳುವಳಿಯಲ್ಲಿ ಪಾತ್ರ ; 19 ಕೃತಿಗಳು: ನಾವು ಕಂಡ ಬದುಕು, ನೀರು ಉಂಡನೆಲ, ಪರಿತಾಪ, ರಾಮಚಂದ್ರ, ಶ್ರಾದ್ಧದ ದಿನ, ಬದುಕಿನ ಪ್ರಶ್ನೆ, ಮಾನಸ ಬದಸಿಕೆ, ಕಡಲ ಬೆಲೆ, ಬಚ್ಚಿಟ್ಟ ಬಯಕೆ, ನಾವು ಕಂಡ ಬದುಕು (ಕಾ); ಹವ್ಯಾಸ : ಬ್ರಿಜ್ ಆಟ

ಚಂದ್ರಸಾಗರ ಪ್ರಕಾಶನ ಸಿ–8 ಮಹಾಲಕ್ಷ್ಮಿ ಕಾಲನಿ ಅಂಬೋಲಿ–ಅಂಧೇರಿ ಪಶ್ಚಿಮ ಮುಂಬಯಿ 400 058



ಅಮೃತ ಸೋಮೇಶ್ವರ
ಜ 27-9-1935

ಮಂಗಳೂರು ಬಳಿಯ ಕೋಟೆಕಾರು ; ಚಿರಿಯುಂಡ -ಅಮಲಣಿ ; 2 ಗಂ ಮಕ್ಕಳು ; ಪ್ರಾ ಮಾ ಶಿಕ್ಷಣ ಕೋಟೆಕಾರಿನ ಆನಂದಾಶ್ರಮ ಪ್ರೌಢಶಾಲೆ, ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಬಿ.ಎ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ.; ಬಿ.ಎ. ಪರೀಕ್ಷೆಯಲ್ಲಿ ಮದರಾಸು ಸರ್ಕಾರದಿಂದ ಸುವರ್ಣ ಪದಕ ಗಳಿಕೆ, ನವಸಾಕ್ಷರರಿಗಾಗಿ ಸಾಹಿತ್ಯ ರಚನೆಗಾಗಿ ಕೇಂದ್ರ ವಿದ್ಯಾಖಾತೆಯ ಬಹುಮಾನ (ತುಳು ಪಾಡ್ದನಗಳು-1962) ; 6 ಕೃತಿಗಳು :.ಎಲೆಗಿರಿ (ಸಕ), ತೀರದ ತೆರೆ, (ಕಾ), ಭ್ರಮಣ (ಕ), ಯಕ್ಷಗಾನದ ಹೆಜ್ಜೆ ಗುರುತುಗಳು (ಸಂ), ರುದ್ರಶಿಲೆ ಸಾಕ್ಷಿ (ಸಕ), ವನಮಾಲಿ (ಕ) : ಹವ್ಯಾಸ : ಜಾನಪದ ವಸ್ತುಗಳ ಸಂಗ್ರಹ

ಕನ್ನಡ ಅಧ್ಯಾಪಕ ವಿವೇಕಾನಂದ ಕಾಲೇಜು ಪುತ್ತೂರು 574 201

ಅರ್ತಿಕಜೆ, ವೆಂಕಟರಮಣಭಟ್ (ವಿ ಬಿ ಅರ್ತಿಕಜೆ)
ಜ 29-6-1943

ಪುತ್ತೂರು ತಾಲೂಕು ಪಡುನನ್ನೂರು ಗ್ರಾಮದ ಅರ್ತಿಕಜೆ; ಎಸ್. ಶಾಮಭಟ್-ಸಾವಿತ್ರಿ ; ಒಬ್ಬ ಮಗ; ಪ್ರಾ ಮಾ ಶಿಕ್ಷಣ ಪಾಳ್ಯತ್ತಡ್ಕ ಮತ್ತು ಪುತ್ತೂರು, ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ; ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕ ; ಅಖಿಲಕರ್ನಾಟಕ ತೀನಂಶ್ರೀ ಸಾಹಿತ್ಯ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ; ಸದಸ್ಯತ್ವ : ಪುತ್ತೂರು ಕರ್ನಾಟಕ ಸಂಘ ; 2 ಕೃತಿಗಳು : ನಾದಪೂಜೆ (ಕ) ಕರ್ನಾಟಕದ ಕಣ್ಮಣಿಗಳು (ಸಂ)

ವಿಭಾಗ ಮುಖ್ಯರು ಇತಿಹಾಸ ವಿಭಾಗ ವಿವೇಕಾನಂದ ಕಾಲೇಜು ಪುತ್ತೂರು 574 201



ಅರಳಗುಪ್ಪಿ, ಮೃತ್ಯುಂಜಯ ಈಶ್ವರಪ್ಪ
ಜ 3-4-1947

ರಾಣೆಬೆನ್ನೂರು ತಾಲೂಕಿನ ತುಮ್ಮಿನ ಕಟ್ಟಿ ; ಈಶ್ವರಪ್ಪ ಶಿವರುದ್ರಪ್ಪ ಅರಳಗುಪ್ಪಿ-ಮಹಾದೇವಕ್ಕ : ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎಸ್‌ಸಿ. ; ದ ಭಾ ಹಿಂದೀ ಪ್ರಚಾರ ಸಭೆಯ ಪ್ರವೇಶಿಕಾ ; ಪಠ್ಯಪುಸ್ತಕ ಸಂಶೋಧನಾಲಯದಲ್ಲಿ ಸಂಶೋಧನ ಸಹಾಯಕ ; 2 ಕೃತಿಗಳು : ಔದ್ಯಮಿಕ

ರಸಾಯನಶಾಸ್ತ್ರ, ರಸಾಯನಶಾಸ್ತ್ರ ಪಾರಿಭಾಷಿಕ ಪದಕೋಶ (ವಿ) ; ಹವ್ಯಾಸ : ಸಂಗೀತ ಶ್ರವಣ
4-2 ನಂದಿಕೋಲ ಬಸವಣ್ಣನ ಗುಡಿ ಓಣಿ ಮಂಗಳವಾರ ಪೇಟೆ ಧಾರವಾಡ

ಅಲ್ಲಮಪ್ರಭು ಬೆಟ್ಟದೂರು
ಜ
ಬೆಟ್ಟದೂರು ; ಚನ್ನಬಸವಪ್ಪ-ಅಮರಮ್ಮ ; ಮಾ ಪ್ರೌ ಶಿಕ್ಷಣ ಮಾಡಗಿ ಮತ್ತು ಬಿಜಾಪುರಗಳಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ; ಕನ್ನಡ ಅಧ್ಯಾಪಕ : ಸದಸ್ಯತ್ವ : ಬರಹಗಾರರ ಮತ್ತು ಕಲಾವಿದರ ಒಕ್ಕೂಟ ; 6 ಕೃತಿಗಳು : ಇದು ನನ್ನ ಭಾರತ (ಕ), ಕಪ್ಪು ಜನರ ಕೆಂಪು ಕಾವ್ಯ, ಗಾಂಧಿ ಗಾಂಧಿ (ಸಂ), ವಿಕ್ಷಿಪ್ತ (ಕ) ; ಹವ್ಯಾಸ ; ರಾತ್ರಿಯ ಖಾಲಿ ರೋಡುಗಳ ಮೇಲೆ ತಿರುಗಾಡುವುದು, ಕತ್ತಲೆ ಕೋಣೆಯಲ್ಲಿ ಕುಳಿತು ಕೊಳ್ಳುವುದು, ಈಜು ಮತ್ತು ಶಾಸ್ತ್ರೀಯ ಸಂಗೀತ ಶ್ರವಣ
ಕನ್ನಡ ಅಧ್ಯಾಪಕ ಗವಿಸಿದ್ಧೇಶ್ವರ ಕಾಲೇಜು ಕೊಪ್ಪಲ ರಾಯಚೂರು ಜಿಲ್ಲೆ

ಅಲಿ, ಮುಹಮ್ಮದ್ ಷೌಕತ್ (ಶಾಂತಿ ಪ್ರಿಯ)
ಜ 26-1-1933



ಜಗಳೂರು ತಾಲೂಕು ಕೆಣಕುಪ್ಪೆ ; ಷೇಖ್ ಮುಹಮ್ಮದ್ ಹನೀಫ್ ಸಾಹೇಬ್ ಮಹಬೂಬ್ಬಿ ; ಬಳ್ಳಾರಿಯ ವೀರಶೈವ ಕಾಲೇಜಿನಲ್ಲಿ ಬಿ.ಎ. ಬೆಂಗಳೂರು ಸರಕಾರಿ ಲಾ ಕಾಲೇಜಿನಲ್ಲಿ ಬಿ.ಎಲ್.; (1959) ; 2 ಗಂ 3 ಹೆ ಮಕ್ಕಳು ; ಸ್ಟೇಟ್ ಅಕೌಂಟ್ಸ್ ವಿಭಾಗದಲ್ಲಿ ಸರಕಾರೀ ಆಡಿಟರ್ ; ಸದಸ್ಯತ್ವ : ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮಿಥಿಕ್ ಸೊಸೈಟಿ ; 16 ಕೃತಿಗಳು : ಇದು ಇಸ್ಲಾಮ್, ಇಸ್ಲಾಮಿನ ಮೂಲತತ್ವಗಳು, ಪವಿತ್ರ ಕುರಾನಿನ ಸಂದೇಶ (ಧ)
2 ಅಪ್ಪೂರಾಯಪ್ಪ-ಎ ಲೇನ್ ನಗರ್ತರ ಪೇಟೆ ಬೆಂಗಳೂರು 560 002

ಅವಧಾನಿ, ಗಣಪತಿ ಶಿವರಾಮ
ಜ 11-8-1944
ಹೊನ್ನಾವರ ತಾಲೂಕಿನ ಮೂಡಗೇರಿ : ಶಿವರಾಮ ಅವಧಾನಿ-ಸಾವಿತ್ರಿ ; ಪ್ರೌ ಶಿಕ್ಷಣ ಹೊನ್ನಾವರ, ಶಿವಾಜಿ ವಿಶ್ವವಿದ್ಯಾಲಯದಿಂದ ಎಂ.ಎ. ; ಒಬ್ಬಳು ಮಗಳು ; ಕೆನರಾ ವೆಲ್‌ಫೇರ್ ಟ್ರಸ್ಟ್ ಪ್ರೌಢಶಾಲೆ ಹಾಗೂ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಪ್ರೌಢಶಾಲೆಗಳಲ್ಲಿ ಅಧ್ಯಾಪಕರಾಗಿ ಸೇವೆ, 'ವರ್ತಮಾನ' ದ್ವೈಮಾಸಿಕದ ಸಂಪಾದಕರಲ್ಲಿ

ಒಬ್ಬ ; 3 ಕೃತಿಗಳು : ಬೆಂಕಿಬಳ್ಳಿ (ಕ) ವಿಶೀ–೭೧ (ಸಂ) ಹೊಕ್ಕಳು (ಕ) ; ಹವ್ಯಾಸ : ಚಿತ್ರಕಲೆ, ನಾಟಕ, ಪ್ರವಾಸ
ಹೆಜ್ಜಾರಸಕೇರಿ ಅಂಚೆ ಹೊನ್ನಾವರ ಉ.ಕ.

ಅಶ್ವತ್ಥನಾರಾಯಣರಾವ್ ಕೂದುವಳ್ಳಿ (ಅಶ್ವತ್ಥ)
ಜ 18-6-1912

ಚಾಮರಾಜನಗರ ; ಒಬ್ಬ ಮಗ ; ಮೈಸೂರು ವಿಶ್ವವಿದ್ಯಾನಿಲಯದ ಬಿ.ಇ. (ಸಿವಿಲ್) : ಸದಸ್ಯತ್ವ : ಕನ್ನಡ ಸಾಹಿತ್ಯ ಪರಿಷತ್ತು, ಪಿ ಇ ಎನ್ ; 23 ಕೃತಿಗಳು : ಕಣ್ಕೆರೆ, ಕ್ರಾಂತಿಕಾರ (ನಾ), ದೂರದ ಕಾಶಿಯಲ್ಲಿ, ಬಾಳ ಹೊಳೆ (ಸಕ), ಮಗು (ನಾ), ಮರ್ಯಾದೆ ಮಹಲು (ಕಾ), ಮಹಾಯುದ್ಧ (ಕ), ಮುನಿಯನ ಮಾದರಿ (ಕಾ), ಮೂಗಿನಮೇಲೆ (ಪ್ರ), ರಂಗನಾಯಕಿ (ಕಾ)
8 ಒಂಬತ್ತನೆ ಮೇನ್ ಸರಸ್ವತಿಪುರಂ ಮೈಸೂರು 570 009

ಅಶ್ವತ್ಥನಾರಾಯಣರೆಡ್ಡಿ, ಗೂಡಾ (ಭರತೇಶ)
ಜ 4-1-1933

ಚಿತ್ರದುರ್ಗ ; ಜಿ ತಿಮ್ಮಾರೆಡ್ಡಿ-ಅಜ್ಜಮ್ಮ ; ಒಬ್ಬ ಮಗ; ಪ್ರಾ ಪ್ರೌ ಶಿಕ್ಷಣ ಚಿತ್ರದುರ್ಗ, ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. (1956) ; ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ(ಒಡಿಸ್ಸಿ-1961, ಮಹಾಸನ್ನಿಧಾನ-1979) ; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕ ; 14 ಕೃತಿಗಳು : ಇಲಿಯಡ್ (ಅನು), ಎಲ್ಲರೂ ಮಾಡುವುದು (ನಾ), ಒಡಿಸ್ಸಿ (ಅನು), ತ್ರಿಶಂಕು, ಶ್ರೀರಂಗರಾಯ (ನಾ), ಮಾತಿನ ಬುಟ್ಟಿ (ಪ್ರ), ಶ್ರೀ ಪುರಂದರದಾಸರು (ಜೀ)
ಟಿ-32 ಮಾನಸಗಂಗೋತ್ರಿ ಮೈಸೂರು 570 006



ಅಶ್ವತ್ಥನಾರಾಯಣ, ಲಕ್ಷ್ಮೀನರಸಿಂಹಯ್ಯ
ಜ 15-12-1917

ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ; ಸಂ ಲಕ್ಷ್ಮೀನರಸಿಂಹಯ್ಯ ಭಟ್ಟಾಚಾರ್ಯ-ಸುಂದರಮ್ಮ ; 4 ಗಂ ಮಕ್ಕಳು ; ಎಸ್, ಎಸ್. ಎಲ್. ಸಿ. (1936) ಆಯುರ್ವೇದ ವಿದ್ವಾನ್, ಎಲ್ ಎ ಎಂ ಎಸ್ (1940) ರಾಂನಗರದ ಆಯುರ್ವೇದ ಸ್ನಾತಕೋತ್ತರ ಶಿಕ್ಷಣ ಸಂಸ್ಥೆಯಲ್ಲಿ ದ್ರವ್ಯಗುಣ ಮತ್ತು ಕುಂಚ ಕರ್ಮಗಳಲ್ಲಿ ತರಬೇತಿ ; ಮೈಸೂರಿನ ಆಯುರ್ವೇದ ಸಹಪ್ರಾಧ್ಯಾಪಕರಾಗಿ ನಿವೃತ್ತಿ ;

6 ಕೃತಿಗಳು : ಅಗದ ತಂತ್ರ, ಅಷ್ಟಾಂಗ ಹೃದಯ ಸಂಹಿತಾ, ಪ್ರಸೂತಿ ತಂತ್ರ, ಸುಶ್ರುತ ಸಂಹಿತಾ, (ಅನು) ; ಹವ್ಯಾಸ : ಸಾಮುದ್ರಿಕ ಹಾಗೂ ಸಂಖ್ಯಾಶಾಸ್ತ್ರಗಳ ಅಭ್ಯಾಸ ಮತ್ತು ಪರಿಶೀಲನೆ
ಭಾರದ್ವಾಜ ವೈದ್ಯಶಾಲೆ 6ನೇ ಮೇನ್ ವಾಣಿವಿಲಾಸಪುರಂ ಮೈಸೂರು 570 002

ಅಹೋಬಲ ಶಂಕರ
ಜ 15-5-1913

ಬೆಂಗಳೂರು ; ಅಹೋಬಲ ಶಾಸ್ತ್ರಿ-ಲಕ್ಷ್ಮೀನರಸಮ್ಮ ; 2 ಗಂ 4 ಹೆ ಮಕ್ಕಳು ; ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್.ಸಿ. (1933) ; 24 ಕೃತಿಗಳು : ಬೊಂಬೆ ಕುಣಿತದ ಕಥಾಪ್ರಸಂಗ, ಯೋಗಾ ಯೋಗ, ರಕ್ತಕರ ವೀರ, ಶುಭದಾ, ಸಾಹೇಬ್ ಬೀಬಿ ಗುಲಾಂ (ಅ-ಕಾ) ; ಹವ್ಯಾಸ : ಚದುರಂಗದಾಟ, ಪತ್ರಿಕೋದ್ಯೋಗ
287-ಡಿ-32 ಎಂ ಪಿ ಜಿ ಕಾಲನಿ ಬಾಂದ್ರಾ ಈಸ್ಟ್ ಮುಂಬಯಿ 400 051

ಆಚಾರ್ಯ, ಕಾಸರಗೋಡು ವಾಸುದೇವ
(ಕ್ವ, ಕಾಲಜ್ಞ, ಸುಬ್ಬು)
ಜ 12-6-1937



ಕಾಸರಗೋಡಿನ ಕರಂದೆಕಾಡು; ಕಂಬಾರು ಅಪ್ಪಣ್ಣಾಚಾರ್ಯ-ಕೂಡಲು ಲಕ್ಷ್ಮಿ ; ಪ್ರಾ ಪ್ರೌ ಶಿಕ್ಷಣ ಅಡ್ಕತ್ತ ಬೈಲು ಹಾಗೂ ನಗರ, ಚಿತ್ರಕಲೆಯಲ್ಲಿ ಪರಿಶ್ರಮ ; ಚಿತ್ರಕಲಾಧ್ಯಾಪಕ ; 1 ಕೃತಿ : ರೂಪಾ (ಸಕ)
ಅಧ್ಯಾಪಕ ಹಿಂದೂ ಜೂನಿಯರ್ ಕಾಲೇಜು ಶಿರ್ವ 574 116

ಆಚಾರ್ಯ ಪಾಡಿಗಾರು ವೆಂಕಟರಮಣ
(ಲಾಂಗೂಲಾಚಾರ್ಯ, ಪಾ ವೆಂ)
ಜ 5-2-1915



ಉಡುಪಿ ; ಪಾಡಿಗರು ಲಕ್ಷ್ಮೀನಾರಾಯಣ ಆಚಾರ್ಯ-ಸೀತಮ್ಮ ; 5 ಗಂ 3 ಹೆ ಮಕ್ಕಳು ; ಉಡುಪಿಯ ಅನಂತೇಶ್ವರ ಎಲಿಮೆಂಟರಿ ಶಾಲೆ, ಎಸ್.ಎಸ್.ಎಲ್. ಸಿ. (1922) ; ಹಿಂದೀ ರಾಷ್ಟ್ರಭಾಷಾ ; ಶಿಕ್ಷಕ, ಅಂಗಡಿ ಗುಮಾಸ್ತೆ, ಕಂಪನಿ ಕಾರ್ಯದರ್ಶಿ,

'ಕರ್ಮವೀರ'ದ ಉಪಸಂಪಾದಕ ; 'ಕಸ್ತೂರಿ'ಯ ಸಹ ಸಂಪಾದಕರಾಗಿ ನಿವೃತ್ತಿ ; ಮುಂಬಯಿ ಸರಕಾರದಿಂದ ಬಹುಮಾನ (ನವನೀರದ) ; 5 ಕೃತಿಗಳು : ನವನೀರದ (ಕ), ಪ್ರಹಾರ (ಪ್ರ), ಮಧುವನ (ಸಂ), ರಷಿಯದ ರಾಜ್ಯಕ್ರಾಂತಿ (ರಾ), ಲೋಕದ ಡೊಂಕು, ವಿಪರೀತ (ಪ್ರ)

82 ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲನಿ ಹುಬ್ಬಳ್ಳಿ 580 022

ಆದ್ಯ ಅನಂತಾಚಾರ್ಯ

ಜ 25-2-1884



ಧಾರವಾಡ ಜಿಲ್ಲೆಯ ಮುನವಳ್ಳಿ ; ರಘುನಾಥಾಚಾರ್ಯ-ಭೀಮಾಬಾಯಿ ; 4 ಗಂ ಮಕ್ಕಳು ; ಕನ್ನಡ 7ನೆಯ ತರಗತಿ, ಸಂಸ್ಕೃತ ನ್ಯಾಯ, ವ್ಯಾಕರಣ, ಅಲಂಕಾರ, ವೇದಾಂತ ಮತ್ತು ವೈದ್ಯ ಶಾಸ್ತ್ರಗಳಲ್ಲಿ ಪರಿಣತಿ ; 'ಧನ್ವಂತರಿ' ಮಾಸ ಪತ್ರಿಕೆಯ ಸಂಪಾದಕ ; ವೈದ್ಯಗುರು, ಆಯುರ್ವೇದ ರತ್ನ ಪ್ರಶಸ್ತಿಗಳು ; 14 ಕೃತಿಗಳು : ಅಷ್ಟಾಂಗಹೃದಯ 3 ಭಾಗಗಳು, ಗೃಹವೈದ್ಯ, ಚರಕ ಸಂಹಿತಾ 3 ಭಾಗಗಳು (ವೈ)

ವೈದ್ಯಗುರು ಆದ್ಯ ಅನಂತಾಚಾರ್ಯ ಗಾಂಧೀರೋಡ್ ಬಿಜಾಪುರ

ಆದ್ಯ ರಂಗಾಚಾರ್ಯ (ಶ್ರೀರಂಗ)

ಜ 26-9-1904

ಇಂಡಿ ತಾಲೂಕು ಆಗರ ಖೇಡ ; ವಾಸುದೇವಾಚಾರ್ಯ-ರಮಾಬಾಯಿ ; 1 ಗಂ 2 ಹೆ ಮಕ್ಕಳು ; ಪ್ರಾ ಮಾ ಶಿಕ್ಷಣ ಅಗರಖೇಡ ಮತ್ತು ಬಿಜಾಪುರಗಳಲ್ಲಿ, ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಪದವಿ ವ್ಯಾಸಂಗ, ಲಂಡನ್ನಿನ ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸ್‌ನಲ್ಲಿ ಎಂ.ಎ. ; ಇಂಗ್ಲೆಂಡ್ (1925-28), ಪೂರ್ವ ಜರ್ಮನಿ ಮತ್ತು ಹಂಗರಿ (1969) ಗಳಲ್ಲಿ ಪ್ರವಾಸ ; ಸದಸ್ಯತ್ವ : ಕೇಂದ್ರ ಸಾಹಿತ್ಯ ಅಕಾದೆಮಿ, ಸಂಗೀತ ನಾಟಕ ಅಕಾದೆಮಿ, ರಾಜ್ಯ ಸಾಹಿತ್ಯ ಅಕಾದೆಮಿ ಅಧ್ಯಕ್ಷ ; ಕೇಂದ್ರ ಸಂಗೀತ ನಾಟಕ ಅಕಾದೆಮಿಯ ಪ್ರಶಸ್ತಿ ಮತ್ತು ಫೆಲೋಷಿಪ್, ಕೇಂದ್ರ ಸಾಹಿತ್ಯ ಅಕಾದೆಮಿ ಬಹುಮಾನ (ಕಾಳಿದಾಸ), ಪದ್ಮಭೂಷಣ ; 113 ಕೃತಿಗಳು : ಅನಾದಿ (ಕಾ) ಅಶ್ವಮೇಧ, ಉದರ ವೈರಾಗ್ಯ (ನಾ), ಕಾಳಿದಾಸ (ವಿಮ), ಕುಮಾರ ಸಂಭವ (ಕಾ), ಕವಿಯ ಪಾಪಾ (ಜೀ), ಭರಮಪ್ಪನ ಭೂತ (ಕಾ) ವೈದ್ಯರಾಜ, ಶ್ರೀರಂಗ ನಾಟ್ಯತರಂಗ, ಹರಿಜನ್ವಾರ (ನಾ) ; ಹವ್ಯಾಸ : ಕ್ರಿಕೆಟ್ ಮತ್ತು ಟೆನಿಸ್ ಆಟಗಳು

28 ಸಂಜೀವನೀ 6ನೇ ಮೇನ್ ಮಲ್ಲೇಶ್ವರಂ ಬೆಂಗಳೂರು 560 003



ಆನಂದಮೂರ್ತಿ, ಅಂಕಯ್ಯ
ಜ 24-10-1953

ತುಮಕೂರು ಜಿಲ್ಲೆ ಕುಣಿಗಲು ತಾಲೂಕಿನ ಕೆಂಚನಹಳ್ಳಿ ; ಸಿ ಅಂಕಯ್ಯ-ಕೆಂಪಮ್ಮ ; ಒಬ್ಬಳು ಮಗಳು : ಪ್ರಾ ಶಿಕ್ಷಣ ಅಂಕನಹಳ್ಳಿ, ಹಿಂದೀ ಭಾಷಾ ಪ್ರವೀಣ : ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯದಲ್ಲಿ ಮುದ್ರಕ ; 1 ಕೃತಿ : ಉಜ್ಜನಿ ಚೌಡಮ್ಮನ ಪೂಜಾ ವೈಶಿಷ್ಟ್ಯ ; ಹವ್ಯಾಸ : ಜಾನಪದ ಅಧ್ಯಯನ

ಮೈ ವಿ ಮುದ್ರಣಾಲಯ ಮೈಸೂರು 570 012

ಆನಂದಿ ಸದಾಶಿವರಾವ್
ಜ 20-1-1929



ಮಂಗಳೂರು ; ಎಸ್ ನರಸಪ್ಪಯ್ಯ-ಕಾವೇರಿಯಮ್ಮ ; 3 ಹೆ ಮಕ್ಕಳು ; ಪ್ರಾ ಮಾ ಶಿಕ್ಷಣ ಕದ್ರಿ, ಮುನಿಸಿಪಲ್ ಶಾಲೆ ಹಾಗೂ ಬೆಸೆಂಟ್ ಬಾಲಿಕಾ ಪಾಠಶಾಲೆಗಳಲ್ಲಿ, ಸೇಂಟ್ ಆಗ್ನೇಸ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ; 6 ಕೃತಿಗಳು: ಅಪರ್ಣಾ (ಸಕ), ನಿರ್ಲಿಪ್ತ (ಕಾ), ಭಾರತದ ಐಕ್ಯತೆ (ಅ), ಸ್ನೇಹಸುಧೆ (ಕಾ) ; ಹವ್ಯಾಸ : ಕಸೂತಿ

ಕೇರಾಫ್ ಸದಾಶಿವರಾವ್ ಅಡ್ವೋಕೇಟರು ಕದ್ರಿರಸ್ತೆ ಮಂಗಳೂರು 3




ಆಮೂರ, ಕೃಷ್ಣ ಶಾಮಾಚಾರ್ಯ
ಜ 23-8-1931

ಧಾರವಾಡ ಜಿಲ್ಲೆಯ ಸೂರಣಗಿ ; 2 ಗಂ ಮಕ್ಕಳು : ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ. (1955), ಎಂ.ಎಸ್ಸಿ. (1957), ಪಿ.ಎಚ್‌ಡಿ. (1963) : ಗಣಿತಶಾಸ್ತ್ರ ಪ್ರಾಧ್ಯಾಪಕ : ಫುಲ್ ಬ್ರೈಟ್ ವ್ಯಾಸಂಗ ವೇತನದಿಂದ ಅಮೇರಿಕ ಪ್ರವಾಸ ; 28 ಕೃತಿಗಳು : ಕಲನಶಾಸ್ತ್ರ ಪರಿಚಯ,

ತ್ರಿಕೋನಮಿತಿ, ಬೀಜಗಣಿತ, ಭೂಮಿತಿ (ವಿ) ; ಹವ್ಯಾಸ : ಅಂಚೆ ಚೀಟಿ ಸಂಗ್ರಹ, ಛಾಯಾಚಿತ್ರ ಗ್ರಹಣ

ಕೃಷ್ಣಕುಂಜ ಗೋಪಾಲಪುರ ಧಾರವಾಡ 580 007



ಆಮೂರ, ಗುರುರಾಜ ಶಾಮಾಚಾರ್ಯ

ಜ 8-5-1925

ಬೊಮ್ಮನಹಟ್ಟಿ ; ಶಾ ಗು ಆಮೂರ – ಗಂಗಾದೇವಿ ; 3 ಗಂ 1 ಹೆ ಮಕ್ಕಳು ; ಪ್ರಾ ಶಿಕ್ಷಣ ಧಾರವಾಡ ಜಿಲ್ಲೆಯ ಸೂರಣಗಿ, ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯ ಹಾಗೂ ಯೇಲ್ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ.ಎಚ್‌ಡಿ, ; ಅಮೆರಿಕಾ–ಇಂಗ್ಲೆಂಡ್ ಪ್ರವಾಸ (1972–73) ; ಸದಸ್ಯತ್ವ : ಕರ್ನಾಟಕ ವಿದ್ಯಾವರ್ಧಕ ಸಂಘ ; 2 ಕೃತಿಗಳು : ಕೃತಿ ಪರೀಕ್ಷೆ, ಮಹಾಕವಿ ಮಿಲ್ಟನ್ (ವಿಮ) ; ಹವ್ಯಾಸ : ಛಾಯಾಚಿತ್ರಗ್ರಹಣ ಮತ್ತು ತೋಟಗಾರಿಕೆ

ಇಂಗ್ಲಿಷ್ ಪ್ರಾಧ್ಯಾಪಕ ಮರಾಠವಾಡಾ ವಿಶ್ವವಿದ್ಯಾಲಯ ಔರಂಗಾಬಾದ್ ಮಹಾರಾಷ್ಟ್ರ



ಆರ್ಯಾಂಬ ಪಟ್ಟಾಭಿ

ಜ 12-3-1936

ಮಂಡ್ಯ ; ಬಿ ಎಂ ಕೃಷ್ಣಸ್ವಾಮಿ–ತಂಗಮ್ಮ ; 2 ಹೆ ಮಕ್ಕಳು ; ಮೈಸೂರು ಮಹಾರಾಜ ಕಾಲೇಜಿನಿಂದ ಬಿ.ಎ. ; ಮಹಿಳಾಧ್ಯಾನ ವಿದ್ಯಾಪೀಠದ ಅಧ್ಯಕ್ಷೆ, ಭಾವಾತೀತಧ್ಯಾನದ ಶಿಕ್ಷಕಿ ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯೆ ; 19 ಕೃತಿಗಳು : ಹೊಂಗನಸು, ಎರಡು ಮುಖ, ಬೇವು ಬೆಲ್ಲ, ಅತ್ತು ನಗಿಸಿದಾಗ, ಕಸ್ತೂರಿ, ದೇವ ಮಾನವ, ಪ್ರಿಯ ಸಂಗಮ, ಮರಳಿ ಗೂಡಿಗೆ (ಕಾ) ; ಬೆಕ್ಕಿನ ಕಣ್ಣು (ನಾ) ; ಭಾರತದ ಮಹಾಪುರುಷರು (ಜೀ) ; ನನ್ನವಳು, ಮರಳಿ ಬಂದ ಮಮತೆ, ಉದಯ ರವಿ (ಸಕ) ; ಹವ್ಯಾಸ : ಯೋಗಾಸನದ ಅಭ್ಯಾಸ, ಅಂಚೆ ಚೀಟಿ, ನಾಣ್ಯ ಸಂಗ್ರಹ

1239, ಕೃಷ್ಣಮೂರ್ತಿಪುರಂ ಮೈಸೂರು



ಇಟ್ಟಿಗಿ, ಕಲ್ಲೇಶ [ಕಲ್ಲೇಶ]
ಜ 22-3-1950

ಬಳ್ಳಾರಿ ಜಿಲ್ಲೆಯ ಹಗರಿ ಕ್ಯಾದ್ಗಿಹಳ್ಳಿ ; ಇಟ್ಟಿಗಿ ತಿಂದಪ್ಪ–ತೋಟಮ್ಮ ; ಒಂದು ಗಂಡು ಮಗು : ಬಿ.ಎ. : ವ್ಯಾಪಾರ ವೃತ್ತಿ ; 3 ಕೃತಿಗಳು : ಜಾನಪದ ಸಾಹಿತ್ಯ, ನಮ್ಮ ಹಳ್ಳಿಯ ಕಥೆಗಳು, ಹೊಲ ಮನಿಯ ಪದಗಳು (ಜಾ)

ಹಗರಿಬೊಮ್ಮನಹಳ್ಳಿ ಬಳ್ಳಾರಿ ಜಿಲ್ಲೆ

ಇನಾಂದಾರ್. ಯಾದೋನಾಥ ಲಕ್ಷ್ಮಣರಾವ
ಜ 9-8-1935

ಧಾರವಾಡ ; ಲಕ್ಷ್ಮಣರಾವ-ಯಮುನಾಬಾಯಿ : 2 ಗಂ 1 ಹೆ ಮಕ್ಕಳು ; ಕರ್ನಾಟಕ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಎಂ. ಎ. : ಅಧ್ಯಾಪಕ ; 3 ಕೃತಿಗಳು : ಅರ್ಥಶಾಸ್ತ್ರ ತತ್ವ ವಿವೇಚನೆ. ಅರ್ಥಶಾಸ್ತ್ರ ಪರಿಚಯ (ಅಶಾ) ; ಹವ್ಯಾಸ : ತೋಟಗಾರಿಕೆ

ಅರ್ಥಶಾಸ್ತ್ರ ಅಧ್ಯಾಪಕ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003



ಇನಾಂದಾರ್, ವೆಂಕಟೇಶ ಮಧ್ವರಾವ್
ಜ 1-10-1912

ಹುದಲಿ ಬೆಳಗಾವಿ ತಾಲ್ಲೂಕು ; ಮಧ್ವರಾವ್ ಇನಾಂದಾರ್–ಕಮಲಾಬಾಯಿ ; 1 ಗಂ 2 ಹೆ ಮಕ್ಕಳು ; ಪ್ರಾ ಹುದಲಿ ಬಿ.ಎ. ಆನರ್ಸ್ (1934) ಸುವರ್ಣ ಪದಕ. ಕರ್ನಾಟಕ ವಿಶ್ವವಿದ್ಯಾಲಯ. ಎಂ.ಎ. ಎಲ್‌ಫಿನ್‌ಸನ್ ಕಾಲೇಜು ಮುಂಬಯಿ (1941) ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಇಂಗ್ಲಿಷ್ ಅಧ್ಯಾಪಕ (1943–50), ಉಪಪ್ರಾಧ್ಯಾಪಕ (1950–60), ಪ್ರಾಧ್ಯಾಪಕ ಮತ್ತು ಪ್ರಿನ್ಸಿಪಾಲ್ (1960-67), ಯು ಜಿ ಸಿ ಪ್ರಾಧ್ಯಾಪಕ (1967–70) ; ಇಂಗ್ಲೆಂಡ್, ಕೆನಡಾ, ಅಮೆರಿಕಾಗಳಲ್ಲಿ ಪ್ರವಾಸ ; ಸಂಸ್ಕೃತ ನಾಟಕಗಳಲ್ಲಿಯ ನಾಯಿಕೆಯರು ದೀರ್ಘ ಪ್ರಬಂಧಕ್ಕೆ ಮುಂಬಯಿ ವಿಶ್ವವಿದ್ಯಾಲಯದ ಮಾಂಡಲಿಕ ಸುವರ್ಣ ಪದಕ, ಸಂಸ್ಕೃತ ನಾಟಕಗಳಲ್ಲಿಯ ವಿದೂಷಕ ದೀರ್ಘ ಪ್ರಬಂಧಕ್ಕೆ ಭಾರತೀಯ ವಿದ್ಯಾಭವನದ ಸುವರ್ಣ ಪದಕ, ಕಾದಂಬರಿ ಹಾಗೂ ವಿಮರ್ಶಾ ಕೃತಿಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ರಾಜ್ಯ ಸಾಹಿತ್ಯ ಅಕಾದೆಮಿಯ ಬಹುಮಾನ, 38 ಕೃತಿಗಳು : ಚಿತ್ರಲೇಖ, ಯಾತ್ರಿಕರು (ಕಾ), ದೃಷ್ಟಿಲಾಭ, ಯಯಾತಿ (ಅನು),

ಗೋವಿಂದ ಪೈಗಳ ಕಾವ್ಯ, ಕುವೆಂಪು ಕಾದಂಬರಿಗಳು, ಪಾಶ್ಚಾತ್ಯ ವಿಮರ್ಶೆಯು ಪ್ರಾಚೀನ ಪರಂಪರೆ (ವಿ), ಬಿಡುಗಡೆ (ನಾ), ವಿಸೀ 75 (ಸಂ), ಡಾ॥ ಅಂಬೇಡ್ಕರ್ (ಜೀ)

406/3 3ನೇ ಮೇನ್, ಸರಸ್ವತಿಪುರಂ ಮೈಸೂರು 9



ಈರನಟ್ಟಿ, ಅಪ್ಪಣ್ಣ ಕಲ್ಲಪ್ಪ
[ಅ ಕ ಈರನಟ್ಟಿ]
ಜ 25-4-1936

ಬೆಳಗಾವಿ ಜಿಲ್ಲೆಯ ಉಳ್ಳಾಗಡ್ಡಿ ಖಾನಾಪುರ; ಕಲ್ಲಪ್ಪ-ಅಕ್ಕಮ್ಮ: 1 ಗಂ 2 ಹೆ ಮಕ್ಕಳು; ಎಸ್ ಎಸ್ ಸಿ, ಕನ್ನಡ ಜಾಣ, ಮುಂಬಯಿ ಹಿಂದೀ ವಿದ್ಯಾಪೀಠದ ಸಾಹಿತ್ಯ ಸುಧಾಕರ; ಶಿಕ್ಷಕರು; 2 ಕೃತಿಗಳು: ತಪ್ಪಿದ್ದೆಲ್ಲಿ, ತ್ಯಾಗಮಯಿ (ಕಾ)

ಶಿಕ್ಷಕರು ಕೊಣ್ಣೂರ ಗೋಕಾಕ ತಾಲೂಕು ಬೆಳಗಾವಿ ಜಿಲ್ಲೆ



ಈರೇಗೌಡ, ದೇವೇಗೌಡ ಕೊಪ್ಪಲು
ಜ 15-5-1942

ಹಾಸನ ತಾಲೂಕು ಹೊಸಹಳ್ಳಿ; ನಂಜೇಗೌಡ-ಕಾಳಮ್ಮ; 1 ಗಂ 1 ಹೆ ಮಕ್ಕಳು; ಪ್ರಾ ಮಾ ಪ್ರೌ ಶಿಕ್ಷಣ ನೈಗೆರೆ ಮತ್ತು ಅರಕಲಗೂಡು, ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ.; ಮೈ ವಿ ಪ್ರಸಾರಾಂಗದಲ್ಲಿ ಸಂಪಾದನ ಸಹಾಯಕ; 5 ಕೃತಿಗಳು: ಕುದುರೆ ಮೊಟ್ಟೆ, ಗೋಪಣ್ಣನ ಸಾಹಸ, ನನಗೆರಡು ನಿನಗೊಂದು (ಬಾ), ಕೋಲಾಟದ ಪದಗಳು, ನೂರೊಂದು ಗಿಳಿ ಮತ್ತು ಇತರ ಕತೆಗಳು (ಜಾ)

ಚೇತನ 15ಜೋಡಿ ರಸ್ತೆ ಸರಸ್ವತಿಪುರಂ ಮೈಸೂರು 570 009

ಈಶ್ವರಚಂದ್ರ, ವಿದ್ಯಾಸಾಗರ ಹೋದಿಗ್ಗೆರೆ ರಾಮರಾವ್ [ಈಶ್ವರಚಂದ್ರ]
ಜ 14-7-1946

ಚನ್ನಗಿರಿ ತಾಲೂಕಿನ ಹೋದಿಗ್ಗೆರೆ; ಹೋದಿಗ್ಗೆರೆ ನಾಡಿಗ ರಾಮರಾವ್-ಪದ್ಮಾವತಮ್ಮ; ಪ್ರಾ ಮಾ ಪ್ರೌ ಶಿಕ್ಷಣ ಹೋದಿಗ್ಗೆರೆ ಚನ್ನಗಿರಿ ಸಾಗರಗಳಲ್ಲಿ, ಮೆಕ್ಯಾ

ನಿಕಲ್ ಎಂಜಿನಿಯರಿಂಗ್ ಡಿಪ್ಲೊಮ (1964) ; ಹಿಂದೂಸ್ಥಾನ ವಿಮಾನ ಕಾರ್ಖಾನೆಯ ವಿನ್ಯಾಸ ವಿಭಾಗದಲ್ಲಿ ಅಸಿಸ್ಟೆಂಟ್ ಏರೋನಾಟಿಕಲ್ ಎಂಜಿನಿಯರ್ ; ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (ತೀರ-1968), ಕೇಂದ್ರ ಸರಕಾರದ ಬಹುಮಾನ (ಮಕ್ಕಳ ನರೇಂದ್ರ ವಿವೇಕಾನಂದ-1970) ; 10 ಕೃತಿಗಳು : ರಾತ್ರಿರಾಣಿ, ಗುಂಪಿನಲ್ಲಿ ಕಂಡ ಮುಖ (ಸಕ), ಜಾರ್ಜ್ ಸೈಮನ್ ಓಮ್, ಭಗತ್‌ಸಿಂಗ್, ಸುಬೋಧ ರಾಮ ರಾಯರು (ಜಾ) ; ಅ.ನ. ಕೃಷ್ಣರಾವ್, ಅಕ್ಬರನಿಂದ ಔರಂಗಜೇಬನವರೆಗೆ (ಅನು) ; ಹವ್ಯಾಸ : ಪುಸ್ತಕಗಳಿಗೆ ರಕ್ಷಾಪುಟ ವಿನ್ಯಾಸ ರಚನೆ

2-69 ಆರನೇ ಮೇನ್ ಚಾಮರಾಜಪೇಟೆ ಬೆಂಗಳೂರು 560 018



ಈಶ್ವರಯ್ಯ, ಕೂಡ್ಲೂರು ಮಠದ [ವಿಹಾರಿ]

ಜ 5-5-1954

ಮುದ್ದಾಪುರ ; ಕೆ ಎಂ ಶಿವಯ್ಯ-ಪಾರ್ವತಮ್ಮ ; ಪ್ರಾ ಶಿಕ್ಷಣ ಮೈಸೂರಿನ ಮರಿಮಲ್ಲಪ್ಪ ಪ್ರೌಢ ಶಾಲೆ, ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎಸ್‌ಸಿ. ಕರ್ನಾಟಕ ವಿಶ್ವವಿದ್ಯಾಲಯದಿಂದ ಭಾಷಾ ವಿಜ್ಞಾನದಲ್ಲಿ ಎಂ.ಎ. ; ಕನ್ನಡ ಜಗಲಿ ಕೂಟ ಕಂಪ್ಲಿಯ ಸದಸ್ಯ ; 1 ಕೃತಿ: ಜ್ಞಾನಭಿಕ್ಷು (ಸಂ) ; ಹವ್ಯಾಸ : ಗ್ರಂಥಾಧ್ಯಯನ, ಭಾಷಾಂತರ ಲೇಖನ ಕಲೆ

10 ಮುದ್ದಾಪುರ ಅಂಚೆ ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆ



ಉಡುಪ ಐರೋಡಿ ಯಜ್ಞನಾರಾಯಣ

ಜ 15-8-1910

ಉಡುಪಿ ತಾಲೂಕಿನ ಬಾಳೆ ಕುದುರು ; ಐರೋಡಿ ಶಿವರಾಮಯ್ಯ-ಭವಾನಿ ; 2 ಗಂ 4 ಹೆ ಮಕ್ಕಳು ; ಪ್ರಾ ಶಿಕ್ಷಣ ಬಿ.ಆರ್. ರಾವ್ ಶಾಲೆಯಲ್ಲಿ, ಹಂಗರಕಟ್ಟೆ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿ ; ಕುಂದಾಪುರ ಮತ್ತು ಹಂಗರಕಟ್ಟೆ, ಕನ್ನಡ ವಿದ್ವಾನ್ (1940) ; 2 ಕೃತಿಗಳು : ಉಪಾಸನೆ (ಪ್ರ), ಪುರಾಣ ಭಾರತ ಕೋಶ (ಕೋ) ; ಹವ್ಯಾಸ : ಪುಸ್ತಕ ಸಂಗ್ರಹ, ಎಡಬಿಡದೆ ಓದುವುದು, ಯೋಗಾಸನ ವ್ಯಾಯಾಮಗಳ ಅಭ್ಯಾಸ

ಕೆನರಾ ಬ್ಯಾಂಕಿನ ಇದಿರು ಕುಂದಾಪುರ(ದ ಕ)



ಉಡುಪ, ಕೊಡತ್ತೂರು ರಾಮಕೃಷ್ಣ
ಜ 25-11-1916

ಮಂಗಳೂರು ತಾಲೂಕಿನ ಕೊಡತ್ತೂರು; ತಮ್ಮಯ್ಯ ಉಡುಪ–ಗಂಗಮ್ಮ; 3 ಗಂ 1 ಹೆ ಮಕ್ಕಳು; ಪ್ರಾ ಶಿಕ್ಷಣ ಕಟೀಲಿನಲ್ಲಿ, ಕಾರ್ಕಳ ಮತ್ತು ಉಡುಪಿಗಳಲ್ಲಿ ಸಂಸ್ಕೃತ ಶಿಕ್ಷಣ, ವೇದಾಂತ ಶಿರೋಮಣಿ, ಕನ್ನಡ ವಿದ್ವಾನ್. ಬಿ.ಓ.ಎಲ್.ಬಿ.ಟಿ ಮತ್ತು ಎಂ.ಎ.: ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾದ ನಂತರ ಈಗ ಗೋಣಿಕೊಪ್ಪಲಿನ ಕಾವೇರಿ ಕಾಲೇಜಿನ ಪ್ರಿನ್ಸಿಪಾಲರು: ಭಾರತ ಸರಕಾರವ ಬಹುಮಾನ (ಕುಟುಂಬ ಯೋಜನೆ, ನಮ್ಮ ಮನಸ್ಸು); 9 ಕೃತಿಗಳು: ಆರೋಗ್ಯಸಾರ ಸಮುಚ್ಚಯ (ವಿ), ಗೋದಾನ (ಅ), ನಾಮದ ಬಲ (ಪ್ರ), ಶಾಲೆಯ ಕತೆಗಳು (ಅ)

ಪ್ರಿನ್ಸಿಪಾಲರು ಕಾವೇರಿ ಕಾಲೇಜು ಗೋಣಿಕೊಪ್ಪಲು ಕೊಡಗು



ಉಡುಪ, ಶ್ರೀನಿವಾಸ
[ಹೊ ಶ್ರೀ, ಶ್ರೀಮುಖ, ಶ್ರೀಶ]
ಜ 8-1-1933

ಹೊಸನಗರ ತಾಲೂಕು ನಲ್ಲುಂಡೆ; ಸುಬ್ರಾಯ ಉಡುಪ–ವೆಂಕಟಲಕ್ಷ್ಮಮ್ಮ; 1 ಗಂ 3 ಹೆ ಮಕ್ಕಳು: ಪ್ರೌ ಶಿಕ್ಷಣ ಹೊಸನಗರದಲ್ಲಿ, ಅಕೌಂಟ್ಸ್ ಲೋಯರ್; ಲೋಕೋಪಯೋಗಿ ಇಲಾಖೆಯಲ್ಲಿ ನೌಕರಿ; ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (ಒಲಿದು ಬಂದವಳು 1967), ಅಖಿಲಭಾರತ ಆಕಾಶವಾಣಿ ಪ್ರಶಸ್ತಿ (ಅಮೃತ ಹೃದಯಿ 1962); ಸದಸ್ಯತ್ವ: ಸಾಗರ ಕನ್ನಡ ಸಂಘ, ಬರಹಗಾರರ ಸಂಘ, ಕನ್ನಡ ಸಾಹಿತ್ಯ ಪರಿಷತ್ತು: 40 ಕೃತಿಗಳು: ಅಡಿಕೆ ಮರದಡಿಯಲ್ಲಿ (ಕಾ), ಕಲಾ ಸಂಗಮ (ಸಂ), ಕೆಂಪುತುಟಿ (ಕಾ), ಚಂದ್ರಹಾಸ, ಪುರಾಣ ಕಥೆಗಳು (ಬಾ), ಬೈಲಂಗಡಿಯ ರಾಣಿ, ಮದುವೆ ಹೆಣ್ಣು (ನಾ), ಮನೆಗೆ ಬಂದವಳು (ಕಾ), ಸಮರ್ಪಣೆ (ಸಂ), ಹೆಣ್ಣಿನ ಹೃದಯ, ಸೂರ್ಯ ಮುಖಿ, ಸೋತ ಹೃದಯ, ತೋಟಗಾರನ ಹೊಡತಿ, ಪ್ರೇಮದ ಮನೆ, ಆಕರ್ಷಣೆ, ಅವಳ ಬಳಿ (ಕಾ); ಹವ್ಯಾಸ: ಪ್ರವಾಸ, ನಾಟಕಗಳ ಅಭ್ಯಾಸ

ಕಾದಂಬರಿಕಾರ ‘ವಿಜಯಲಕ್ಷ್ಮಿ’ ಎಸ್ ವಿ ಪಿ ಕಾಲನಿ ಸಾಗರ ಶಿವಮೊಗ್ಗ ಜಿಲ್ಲೆ

ಉಡುಪ, ಸುಳುಗೋಡು ಶ್ರೀನಿವಾಸ ಅನಂತ [ಸ್ಕಂದ]



ಜ 6-11-1945

ಸುಳುಗೋಡು; ಅನಂತ ಉಡುಪ-ತುಂಗಭದ್ರಮ್ಮ; ಪ್ರೀ-ಯೂನಿವರ್ಸಿಟಿ ; ಬೇಸಾಯ ವೃತ್ತಿ ; 3 ಕೃತಿಗಳು : ಕೂಡಲೆ ಕೊಟ್ಟಳು, ಕೇಸ್ ಡಿಸ್‌ಮಿಸ್, ಸಾಲ್ಕನೆಯುವನ ತಲೆ (ಪ್ರ)

ಸಿದ್ದು ಸದನ ಕಮ್ಮರಡಿ ಅಂಚೆ ತೀರ್ಥಹಳ್ಳಿ ತಾಲೂಕು



ಉದ್ಯಾವರ, ಸುನೀತಿ [ಸುನೀತಿ ಉದ್ಯಾವರ]

ಜ 11-7-1937

ಮಂಗಳೂರು ; ಉದ್ಯಾವರ ಶಾಂತಾರಾಮರಾವ್–ಸೀತಾಬಾಯಿ ; ಮದರಾಸು ಎಸ್.ಎಸ್.ಎಲ್.ಸಿ. ರಾಷ್ಟ್ರಭಾಷಾ ವಿಶಾರದ ; ವಡಾಲಾದ ರಾಷ್ಟ್ರೀಯ ಶಿಕ್ಷಣ ಸಮಿತಿ ಪ್ರೌಢಶಾಲೆಯಲ್ಲಿ ಅಧ್ಯಾಪಕಿ ; ಸದಸ್ಯತ್ವ : ಮುಂಬಯಿ ಸಾಹಿತ್ಯಕೂಟ ; 3 ಕೃತಿಗಳು : ಋಣೋಸ್ಮೃತಿ, ತಂಗಿಯ ಕಾಣಿಕೆ, ಸ್ನೇಹ ಸ್ಮಾರಕ (ಕಾ) ; ಹವ್ಯಾಸ : ಚಿತ್ರ ಬಿಡಿಸುವುದು

ಕೇರಾಫ್ ಯು ಬಿ ರಾವ್ ಪ್ರತೀಕ್ ವಲ್ಲಭಭಾಯಿ ಪಟೇಲ್ ಮಾರ್ಗ್ ಸಾಂತಾಕ್ರುಜ್ ಪಶ್ಚಿಮ ಮುಂಬಯಿ 400 054

ಉಪಾಧ್ಯೆ, ಬಾಳು ಬಾಬಾಜಿ



ಜ 20-7-1918

ಸದಲಗಿ ; ಬಾಬಾಜಿ-ಚಂದ್ರಾಬಾಯಿ ; 2 ಗಂ 3 ಹೆ ಮಕ್ಕಳು ; ಕನ್ನಡ ಮುಲ್ಕಿ ಪರೀಕ್ಷೆ ; ದರ್ಜಿ ವೃತ್ತಿ ; ಭಾರತ ಸ್ವಾತಂತ್ರ್ಯ ಆಂದೋಲನದಲ್ಲಿ 6 ತಿಂಗಳ ಜೈಲು, ಕೇಂದ್ರದ ನಿವೃತ್ತಿ ವೇತನ, ತಾಮ್ರಫಲಕ ಪ್ರಶಸ್ತಿ ; ಶಮನೇವಾಡಿಯ ಸ್ನೇಹ ಪ್ರಕಾಶನದ ಸಂಪಾದಕ ; ಅಖಿಲ ಕರ್ನಾಟಕ ಕವಿತಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ; 3 ಕೃತಿಗಳು : ಐದಳ ಮಲ್ಲಿಗೆ, ಬಾಳ ಬಂಡಿ (ಕ)

ಅಂಚೆ ಮತ್ತು ಮೊಕ್ಕಾಂ : ಶಮನೇವಾಡಿ ಬೆಳಗಾವಿ ಜಿಲ್ಲೆ



ಉಪ್ಪಿನ, ಶಿವರುದ್ರಪ್ಪ ಫಕೀರಪ್ಪ
ಜ 3–6–1913

ಧಾರವಾಡ : 1 ಗಂ 2 ಹೆ ಮಕ್ಕಳು ; ಮ್ಯಾಟ್ರಿಕ್ ಶಿಕ್ಷಣ ; ಅರಣ್ಯ ಇಲಾಖೆಯಲ್ಲಿ 32 ವರ್ಷ ಸೇವೆ; ಕೊಯಮತ್ತೂರಿನ ಫಾರೆಸ್ಟ್ ರೇಂಜರ್ ಕಾಲೇಜಿನಲ್ಲಿ ಶ್ರೇಷ್ಠ ಹೊರಾಂಗಣ 'ರೇಂಜರ್' ಪ್ರಶಸ್ತಿ; 1963ರಲ್ಲಿ ಇಟಲಿ ಹಾಗೂ ಫ್ರಾನ್ಸ್ ದೇಶಗಳ ಪ್ರವಾಸ ; ಇಂಟರ್ ನ್ಯಾಷನಲ್ ಸೊಸೈಟಿ ಆಫ್ ಟ್ರಾಫಿಕಲ್ ಸೊಸೈಟಿಯ ಸದಸ್ಯ ; 1971 ರಲ್ಲಿ ನಿವೃತ್ತಿ ; 1ಕೃತಿ : ಕರ್ನಾಟಕದ ಸಸ್ಯ ಸಂಪದ ; ಹವ್ಯಾಸ : ಅಂಚೆ ಚೀಟಿ ಸಂಗ್ರಹ

24 ಸಾರಸ್ವತಪುರ ಧಾರವಾಡ 580 002

ಉಬರಡ್ಕ, ಗಣಪತಿ ಸುಬ್ರಹ್ಮಣ್ಯ ಭಟ್ಟ [ಶೇಣಿ]
ಜ 4-2-1944



ದಕ್ಷಿಣ ಕನ್ನಡ ಜಿಲ್ಲೆಯ ಉಬರಡ್ಕ ; ವೆಂಕಪ್ಪಯ್ಯ ಭಟ್ಟ-ಗಂಗಮ್ಮ : ವೃತ್ತಿ ಬೇಸಾಯ : 2 ಕೃತಿಗಳು : ಕ್ರ್ಯಾನಿಂತ ಪಾಶಗಳು (ಕ), ಸಿರಿಗಂಧ ಸೂಸ್ರಾವೆ (ಜಾ) : ಹವ್ಯಾಸ : ಛಾಯಾಚಿತ್ರಗ್ರಹಣ, ಪಕ್ಷಿ ವೀಕ್ಷಣೆ, ತೋಟಗಾರಿಕೆ. ಜೇನು ಸಾಕಣೆ, ದೇಶ ಪರ್ಯಟನ

ಕಾರ್ತೀಕ ದೊಡ್ಡತೋಟ ಅಂಚೆ ಸುಳ್ಯ ತಾಲೂಕು



ಉಮರಾಣಿ, ಈಶ್ವರಪ್ಪಾ ಶಿವಲಿಂಗಪ್ಪಾ
ಜ 12–1–1903

ಬೆಳಗಾವಿ ಜಿಲ್ಲೆಯ ಮದಲಮಟ್ಟಿ ; ಶಿವಲಿಂಗಪ್ಪ-ರುದ್ರಮ್ಮ : 2 ಗಂ 7 ಹೆ ಮಕ್ಕಳು ; ಪ್ರಾ ಶಿಕ್ಷಣ ರಬಕವಿ. ಕರ್ನಾಟಕ ಕಾಲೇಜಿನಿಂದ ಬಿ.ಎ.(1927); ಸಬ್ ರಿಜಿಸ್ಟ್ರಾರ್ ಮತ್ತು ರಿಜಿಸ್ಟ್ರೇಷನ್ ಆಫೀಸರ್ ಆಗಿ ನಿವೃತ್ತಿ (1958) ; ಅಖಿಲ ಭಾರತ ವೀರಶೈವ ಮಹಾ ಸಭೆಯ ಸದಸ್ಯ ; 8 ಕೃತಿಗಳು : ಇಷ್ಟಲಿಂಗವನ್ನಗಲಿರಕೂಡದು, ಲಿಂಗವಂತಿಕೆ (ಧ), ವೀರೇಶ ವಿಜಯ (ನಾ) ; ತಾಯಿನೆರಳು, ಪರಮ ಶ್ರೀ ಚನ್ನವೀರ ಶಾಸ್ತ್ರಿಗಳು ಯಡ್ರಾವಿ ಮಠ–ಕಮತಂಗಿ (ಜೀ.ಚ)

ಕಾರ್ಪೊರೇಷನ್ ಕಾಲನಿ ರಾಮನಗರ ಧಾರವಾಡ 580 001



ಉಮಾಪತಿ ಶಾಸ್ತ್ರಿ, ಗೌರಾಪುರ ಮಲ್ಲಿಕಾರ್ಜುನ
[ಶಾಸ್ತ್ರಿ ಸಾಧಕ]
ಜ 15-4-1927

ತರೀಕೆರೆ ತಾಲೂಕು ಗೌರಾಪುರ : ಮಲ್ಲಿಕಾರ್ಜುನ ಶಾಸ್ತ್ರಿ-ಮರುಳಮ್ಮ ; 2 ಗಂ ಮಕ್ಕಳು ; ಪ್ರಾ ಪ್ರೌ ಶಿಕ್ಷಣ ಬಾದಾಮಿಯ ಶಿವಯೋಗ ಮಂದಿರ ಮತ್ತು ವಾರಣಾಸಿ, ಬನಾರಸ್ ಹಿಂದೂ ವಿಶ್ವ ವಿದ್ಯಾಲಯದಿಂದ ಎಂ.ಎ. (1957), ನವ್ಯನ್ಯಾಯದಲ್ಲಿ ಶಾಸ್ತ್ರೀ, ಸಾಹಿತ್ಯರತ್ನ ; ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (ವಿವೇಕ ಚಿಂತಾಮಣಿ (ಸಂ) 1968); ನಾಗರೀ ಪ್ರಚಾರಿಣೀ ಸಭಾ (ಕಾಶಿ), ಮಿಥಿಕ್ ಸೊಸೈಟಿ (ಬೆಂಗಳೂರು) ಸದಸ್ಯ ; 15 ಕೃತಿಗಳು : ಚಿತ್ಕಳೆ, ಪಾರಮಾರ್ಥ ಪ್ರಕಾಶಿಕೆ, ಬಸವ ವಚನಾಮೃತ (ಧ) ; ಪಂಚಾಕ್ಷರ ಪ್ರಕಾಶ, ಸಿದ್ಧಲಿಂಗೇಶ್ವರ ವಚನಾಮೃತ, ಬಿಡಿಸ್ವರ ವಚನಗಳು, ಸರ್ವಜ್ಞ ಮೂರ್ತಿಯ ಆಚರಣೆಯ ಸಂಬಂಧದ ವಚನಗಳು ; ಹವ್ಯಾಸ : ಪ್ರಾಚೀನ ಹಸ್ತಪ್ರತಿ ಸಂಗ್ರಹ

ಶಾರದಾ ಭವನ ಸಿ–4 ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ಬಾಗಲಕೋಟೆ



ಎಕ್ಕುಂಡಿ, ಸುಬ್ಬಣ್ಣ ರಂಗನಾಥ
ಜ 20–1–1923

ಧಾರವಾಡ ಜಿಲ್ಲೆಯ ರಾಣಿಬೆನ್ನೂರು ; ರಂಗನಾಥ-ರಾಜಕ್ಕ ; 2 ಗಂ 1 ಹೆ ಮಕ್ಕಳು ; ಪ್ರಾ ಮಾ ಶಿಕ್ಷಣ ಹುಬ್ಬಳ್ಳಿ, ಸಾಂಗ್ಲಿಯ ವಿಲಿಂಗ್ಡನ್ ಕಾಲೇಜು, ಹೈದರಾಬಾದಿನಲ್ಲಿ ಸಿ ಐ ಈ ಪದವಿ ; ಬಂಕಿಕೊಡ್ಲದ ಆನಂದಾಶ್ರಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ; ಸೋವಿಯತ್‌ಲ್ಯಾಂಡ್ ನೆಹರೂ ಪ್ರಶಸ್ತಿ (1970), ರಾಜ್ಯ ಶಿಕ್ಷಕ ಪ್ರಶಸ್ತಿ (1974) : ಸದಸ್ಯತ್ವ : ಉತ್ತರ ಕನ್ನಡ ಜಿಲ್ಲಾ ಬರಹಗಾರರ ಸಂಘ ; 15 ಕೃತಿಗಳು : ಕಾವ್ಯ ವಿಮರ್ಶೆ, ನವ್ಯಕವಿತೆ, ವರುಣ ಕುಂಜ, ತಾಳ ತಂಬೂರಿ, ಎರಡು ಕಾದಂಬರಿಗಳು, ಪು.ತಿ.ನ, ಮಧ್ವಮುನಿ (ವಿಮ) , ನೆರಳು (ಸಕ), ಪ್ರತಿಬಿಂಬಗಳು, ಸಂತಾನ, ಹಾವಾಡಿಗರ ಹುಡುಗ, ಆನಂದ ತೀರ್ಥರು, ಮತ್ಸ್ಯಗಂಧಿ, ಲೆನಿನ್ನರ ನೆನಪಿಗಾಗಿ (ಕ)

ಬಂಕಿ ಕೊಡ್ಲ ಅಂಚೆ (ಉ ಕ)



ಎಲಿಗಾರ, ಸಿದ್ಧರಾಮು ಶಿವಸಂಗಪ್ಪ
ಜ 28-5-1928

ಧಾರವಾಡ ಜಿಲ್ಲೆ ಗದಗು ತಾಲೂಕಿನ ನಿಲಗುಂದ; ಶಿವಸಂಗಪ್ಪ–ಮಲ್ಲಮ್ಮ; ಪ್ರಾ ಮಾ ಶಿಕ್ಷಣ ಗೌಡಗೋಳಿ ಮತ್ತು ಹೊಳೆ ಆಲೂರು, ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ., ಎಂ.ಎಡ್.; ಉತ್ತಮ ಶಿಕ್ಷಣ ಸಮೀಕ್ಷಕ ಪ್ರಶಸ್ತಿ ; 8 ಕೃತಿಗಳು : ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ (ನಾ), ಕೋಳೂರು ಕೊಡಗೂಸು, ಸಿರಿಗೌರಿ (ಬಾ), ಹುತಿಯ ಹಾಡುಗಳು (ಜಾ) ; ಹವ್ಯಾಸ : ಜಾನಪದ ಗೀತೆಗಳ ಗಾಯನ

ಸಹಾಯಕ ನಿರ್ದೇಶಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಳ್ಳಾರಿ 583 101

ಏರ್ಯ ಲಕ್ಷ್ಮೀನಾರಾಯಣ ಆಳ್ವ
ಜ 19-3-1926

ಬಂಟ್ವಾಳ ತಾಲೂಕಿನ ಏರ್ಯಬೀಡು ಆಮಟಾಡಿಗ್ರಾಮ ; ಮೂಡಂತೂರು ಸುಬ್ಬಯ್ಯ ಆಳ್ವ–ಏರ್ಯ ಸೋಮಕ್ಕ ; ಒಬ್ಬಳು ಮಗಳು ; ಪ್ರೌ ಶಿಕ್ಷಣ ಬಂಟ್ವಾಳ ಮತ್ತು ಮಂಗಳೂರು ; ಕೃಷಿ ವೃತ್ತಿ ; ಸದಸ್ಯತ್ವ ; ಕರ್ನಾಟಕರಾಜ್ಯ ಜನಪದ ಸಾಹಿತ್ಯ ಅಕಾದೆಮಿ ; 4 ಕೃತಿಗಳು : ಮುಳಿಯ ತಿಮ್ಮಪ್ಪಯ್ಯ (ಜೀ), ರಾಮಾಶ್ವಮೇಧದ ರಸತರಂಗಗಳು (ವಿಮ), ಸ್ನೇಹಸೇತು

ಸಾಕೇತ ಮೊಡಂಕಾಪು ಅಂಚೆ ಬಂಟ್ವಾಳ ದ ಕ



ಐತಾಳ, ಗುಂಡ್ಮಿ ಚಂದ್ರಶೇಖರ
ಜ 20-1-1936

ಉಡುಪಿ ತಾಲೂಕಿನ ಗುಂಡ್ಮಿ; ರಾಮಚಂದ್ರ ಐತಾಳ–ಸತ್ಯಮ್ಮ ; 2 ಗಂ 3 ಹೆ ಮಕ್ಕಳು ; ಪ್ರೌ ಶಿಕ್ಷಣ ಕೋಟದ ವಿವೇಕ ಪ್ರೌಢಶಾಲೆ ಹಾಗೂ ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಆನರ್ಸ್ (1958), ಎಂ.ಎ. (1961) ; ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕ ; ಬಿ ಎಂ ಶ್ರೀ ಸುವರ್ಣ ಪದಕ (ಪಟಾಚಾರಾ 1961), ದೇವರಾಜ ಬಹದ್ದೂರು ಸಾಹಿತ್ಯ ಪ್ರಶಸ್ತಿ (ಸೌಂದ

ಯುದ ಸಾನಿಧ್ಯದಲ್ಲಿ 1962), ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ (ಕೈಲಿಯ ಕರೆದ ನೊರೆಹಾಲು 1972), ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣೋತ್ಸವ ಪ್ರಶಸ್ತಿ (ಮುಪ್ಪಿಂಟೆ ಜನನ ಮರಣಕ್ಕೆ 1976), ಕಡೆಂಗೋಡ್ಲು ಶಂಕರಭಟ್ಟ ಸ್ಮಾರಕ ಕಾವ್ಯ ಪ್ರಶಸ್ತಿ (ಸೀಯಾಳ 1981) ; 19 ಕೃತಿಗಳು : ಕೈಲಿಯ ಕರೆದ ನೊರೆಹಾಲು (ಜಾ), ಗುಂಡುಸೂಜಿ (ಕ), ಪೂರ್ಣ ಕುಂಭ (ಸಂ), ಬೆಳಕಿನ ಬೀಜ (ವಿಮ), ಬೆಳಗಾಯಿತು (ಕ), ಮಂಗಳ ಗಂಗೆ (ಸಂ), ಮಾತೃ ಸಂಹಿತೆ (ಕ), ಸಮಾರಾಧನ, ಸಾಂತ್ಯಾರು ವೆಂಕಟರಾಜ, ಕನಕದಾಸರು, ಶ್ರೀ ವ್ಯಾಸರಾಯ, ರುದ್ರಭಟ್ಟ (ವಿಮ), ಸೌಂದರ್ಯದ ಸಾನ್ನಿಧ್ಯದಲ್ಲಿ, ಚೆಲುವು ಚೆಲ್ಲಿದಲ್ಲಿ (ಪ್ರವಾ), ಹೂವಿನ ಕೋಲು, ಪಟಾಚಾರ (ಕ)

ಅಧ್ಯಾಪಕ ಮಂಗಳೂರು ವಿಶ್ವವಿದ್ಯಾನಿಲಯ ಕೊಣಾಜೆ ಮಂಗಳೂರು (ದ ಕ)

ಐತಾಳ, ಹಾಯ್ರ್ಯಾಡಿ ಗಣೇಶ [ಶಂಸ ಐತಾಳ]
ಜ 18-6-1942

ದಕ್ಷಿಣ ಕನ್ನಡ ಜಿಲ್ಲೆಯ ಬಸ್ರೂರು ; ಹಾಯ್ರ್ಯಾಡಿ ಶಂಕರನಾರಾಯಣ ಐತಾಳ-ನಾಗ ವೇಣಿ : 1 ಗಂ 2 ಹೆ ಮಕ್ಕಳು ; ಪ್ರಾ ಪ್ರೌ ಶಿಕ್ಷಣ ಬಸ್ರೂರು, ಖಾಸಗಿ ಕಲಿಕೆಯಿಂದ ಬಿ.ಎ., ಉಡುಪಿಯ ಮಣಿಪಾಲ ಶಿಕ್ಷಣ ಕಾಲೇಜಿನಲ್ಲಿ ಬಿ.ಎಡ್. ಮೈಸೂರು ವಿಶ್ವ ವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ., ಎಂ.ಫಿಲ್ ; ಮೈ ವಿ ಕನ್ನಡ ಅಧ್ಯಯನ ಸಂಸ್ಥೆ ಯಲ್ಲಿ ಸಹಾಯಕ ಭಾಷಾಂತರಕಾರರು ; 3ಕೃತಿಗಳು : ಅನಿರೀಕ್ಷಿತ, ಅಸ್ಪಷ್ಟ ಮತ್ತು ಅತಂತ್ರ (ಕಾ), ರಮಣ ಮಹರ್ಷಿ, ಕೃಷ್ಣರಾಜ ಸಾಗರ (ಬಾ)

238-ಎ 3ನೇ ಕ್ರಾಸ್ 12ನೇ ಮೇನ್ ಸರಸ್ವತೀಪುರಂ ಮೈಸೂರು 570 009

ಐನಾಪೂರ, ಲಕ್ಷ್ಮಣರಾವ ಸಿದ್ದಪ್ಪ
ಜ 31-12-1933

ಚಿಂಚೋಳಿ ತಾಲೂಕು ಐನಾಪುರ ; ಸಿದ್ದಪ್ಪ-ಕಾಶೀಬಾಯಿ ; 2 ಗಂ ಮಕ್ಕಳು ; ಪ್ರಾ ಪ್ರೌ ಶಿಕ್ಷಣ ಐನಾಪೂರ ಹಾಗೂ ಕಲಬುರ್ಗಿ, ಉಸ್ಮಾನಿಯ ವಿಶ್ವವಿದ್ಯಾನಿಲಯದಿಂದ ಬಿ.ಎ. (1956) ಮತ್ತು ಸಮಾಜಶಾಸ್ತ್ರದಲ್ಲಿ ಎಂ.ಎ. (1958), ಪಿ.ಎಚ್‌ಡಿ. ; ಧಾರವಾಡದ ಕರ್ನಾಟಕ ಆರ್ಟ್ಸ್ ಕಾಲೇಜಿನಲ್ಲಿ ಸಾಮಾಜಿಕ ಮಾನವಶಾಸ್ತ್ರದ ಪ್ರಾಧ್ಯಾಪಕರು (1960ರಿಂದ) ; 3 ಕೃತಿಗಳು : ಮಾನವ ವಿಜ್ಞಾನ ಹಾಗೂ ಇಂದಿನ ಭಾರತ, ಮಾನವಶಾಸ್ತ್ರ ಪರಿಚಯ (ಮಾ)

ಧನ್ವಂತರಿ ಬಿಲ್ಡಿಂಗ್ ಟಿ ಸಿ ರೋಡ್ ಧಾರವಾಡ



ಐರಸಂಗ, ವೀರಭದ್ರ ಚನ್ನಪ್ಪ [ವ್ಹಿ ಸಿ ಐರಸಂಗ]
ಜ 23-9-1930

ಧಾರವಾಡ; ಚನ್ನಪ್ಪ-ಚನ್ನವ್ವ: 1 ಗಂ 3 ಹೆ ಮಕ್ಕಳು; ಪ್ರಾ ಪ್ರೌ ಶಿಕ್ಷಣ ಧಾರವಾಡ, ಕರ್ನಾಟಕ ಕಾಲೇಜಿನಿಂದ ಬಿ.ಎಸ್‌ಸಿ.; 7 ಕೃತಿಗಳು: ಉದಯಗೀತ, ಗುಬ್ಬಿಯ ಗೂಡು, ನವರಸ, ಸುಧಾ ಸರಿತ (ಕಾ); ಹವ್ಯಾಸ: ಚಿತ್ರಕಲೆ

ಲಕಮನಹಳ್ಳಿ ಓಣಿ ಧಾರವಾಡ



ಒಡೆಯರ, ಸದಾಶಿವ ಶಿವದೇವ [ಸದಾಶಿವ ಒಡೆಯರ]
ಜ 7-8-1924

ಧಾರವಾಡ ಜಿಲ್ಲೆಯ ಮರೇವಾಡ; 2 ಗಂ 3 ಹೆ ಮಕ್ಕಳು; ಬೆಳಗಾವಿಯ ಆರ್.ಎಲ್. ಲಾ ಕಾಲೇಜಿನಿಂದ ಎಲ್‌ಎಲ್.ಬಿ., ಮುಂಬಯಿ ವಿಶ್ವವಿದ್ಯಾನಿಲಯದಿಂದ ಎಂ.ಎ.: ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ನಿವೃತ್ತಿ (1981): ಅಮೆರಿಕಾ ಮತ್ತು ಇಂಗ್ಲೆಂಡ್ ಪ್ರವಾಸ: ಕರ್ನಾಟಕ ಸಾಹಿತ್ಯ ಅಕಾದೆಮಿ ಪ್ರಶಸ್ತಿ (ರವೀಂದ್ರ ದರ್ಶನ 1966); 4 ಕೃತಿಗಳು: ಇದು ಜೀವನ, ಜೀವನಕಲೆ (ಪ್ರ), ಜೋನ್ ಆಫ್ ಆರ್ಕ್ ಮತ್ತು ಇತರ ನಾಟಕಗಳು (ನಾ), ರವೀಂದ್ರ ದರ್ಶನ (ಪ್ರ); ಹವ್ಯಾಸ: ಸಂಗೀತ ಚಿತ್ರಕಲೆ

ಸಾದಮಂಗಲ ಹಲ್ಯಾಳ ರೋಡ ಸಪ್ತಾಪುರ ಧಾರವಾಡ 580 007



ಓಂಕಾರಯ್ಯ, ಗೌರಾಪುರ ರುದ್ರಯ್ಯ
ಜ 15-12-1929

ಗೌರಾಪುರ; ರುದ್ರಯ್ಯ-ಪಾರ್ವತಮ್ಮ; 1 ಗಂ 3 ಹೆ ಮಕ್ಕಳು; ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಕನ್ನಡದಲ್ಲಿ ಎಂ.ಎ.; ಪ್ರೌಢಶಾಲಾ ಅಧ್ಯಾಪಕ; ಸದಸ್ಯತ್ವ: ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಬರಹಗಾರರ ಸಂಘ; 1 ಕೃತಿ: ಹಂಪೆ

ಅಧ್ಯಾಪಕ ಕೆ ಎಲ್ ಕೆ ಸರ್ಕಾರಿ ಪ್ರೌಢಶಾಲೆ ಬೀರೂರು



ಕಂಗಿಲ ಶಂಭಟ್ಟ
ಜ 24-5-1900

ದ ಕ ಜಿಲ್ಲೆಯ ಕಂಗಿಲ ; ನರಸಿಂಹಭಟ್ಟ-ಗಂಗಮ್ಮ ; 3 ಹೆ ಮಕ್ಕಳು ; ಪ್ರಾ ಶಿಕ್ಷಣ ಉಕ್ಕಿನಡ್ಕ, ಚಿತ್ರಕಲೆ ಮತ್ತು ಜ್ಯೋತಿಷ ಅಭ್ಯಾಸ ; ಪ್ರೌಢ ಶಾಲೆಯಲ್ಲಿ ಅಧ್ಯಾಪಕನಾಗಿ ನಿವೃತ್ತಿ ; 8 ಕೃತಿಗಳು : ಕಾಣ್ಕೆ (ಕ), ಶೃಂಗೇರಿ ಚರಿತ್ರೆ (ಇ), ವಿಜಯನಗರ ಸಮಾಧಿ, ಸ್ಮರಣೆ (ಕ)

ಉಕ್ಕಿನಡ್ಕ ಮನೆ ಅಂಚೆ ಉಕ್ಕಿನಡ್ಕ ಕಾಸರಗೋಡು ತಾಲೂಕು

ಕಂಚಗಾರ, ಹನುಮಂತಪ್ಪಪ್ಪ ಗುರುಮೂರ್ತಪ್ಪ
ಜ 3-3-1946

ಹೊಸಪೇಟೆ ; ಗುರುಮೂರ್ತಪ್ಪ-ಸಂಗಮ್ಮ ; 2 ಗಂ 1 ಹೆ ಮಕ್ಕಳು ; ಪ್ರಾ ಪ್ರೌ ಶಿಕ್ಷಣ ಹಳ್ಳಿಕೇರಿ, ಕೊಪ್ಪಳ, ಹೊಸಪೇಟೆಗಳಲ್ಲಿ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿ ; 2 ಕೃತಿಗಳು : ಕಾವು ನೋವು, ತುಂಗಾ ತರಂಗ (ಕ) ; ಹವ್ಯಾಸ : ನಾಟಕಗಳಲ್ಲಿ ಅಭಿನಯ ಮತ್ತು ಪ್ರಸಾಧನ ಕಲೆ

ಶಿಕ್ಷಕರು 1ನೇ ವಿಭಾಗ ಕಾಮಲಾಪೂರ (ಹೊಸಪೇಟೆ)

ಕಂಬಾರ, ಚಂದ್ರಶೇಖರ ಬಸವಣ್ಣೆಪ್ಪ [ಚಂದ್ರಶೇಖರ ಕಂಬಾರ]
ಜ 2-1-1938

ಬೆಳಗಾವಿ ಜಿಲ್ಲೆಯ ಘೋಡಗೇರಿ ; ಬಸವಣ್ಣೆಪ್ಪರಾಮಪ್ಪ ಕಂಬಾರ-ಚೆನ್ನವ್ವ ; 1 ಗಂ 2 ಹೆ ಮಕ್ಕಳು ; ಪ್ರಾ ಮಾ ಶಿಕ್ಷಣ ಘೋಡಗೇರಿ ಮತ್ತು ಬೆಳಗಾವಿ ಲಿಂಗರಾಜಾ ಕಾಲೇಜಿನಿಂದ ಬಿ.ಎ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ. (1962) ; ಶಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕ (1968–69), ಈಗ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ರೀಡರ್ ; 18 ಕೃತಿಗಳು : ಉತ್ತರ ಕರ್ನಾಟಕದ ಜನಪದ ರಂಗಭೂಮಿ (ಸಂಶೋ), ಋಷ್ಯಶೃಂಗ (ನಾ), ಕರಿಮಾಯಿ (ಕಾ), ಜೋಕುಮಾರಸ್ವಾಮಿ (ನಾ), ತಕರಾರಿನವರು (ಕ), ನಾರ್ಸಿಸಸ್, ಬೆಂಬತ್ತಿದ ಕಣ್ಣು (ನಾ), ಮಾತಾಡು ಲಿಂಗವೆ (ಸಂ), ಮುಗುಳು, ಹೇಳತೇನ ಕೇಳ (ಕ) ; ಹವ್ಯಾಸ : ಫೋಟೋಗ್ರಫಿ

ಕನ್ನಡ ವಿಭಾಗ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನ ಭಾರತಿ ಬೆಂಗಳೂರು-560 056



ಕಂಬಿ, ವೀರಬಸವಯ್ಯ ಶಿವಲಿಂಗಯ್ಯ
ಜ 23-11-1927

ಬೆಳಗಾವಿ ಜಿಲ್ಲೆಯ ಕಣಾದಿ ಕರವಿನ ಕೊಪ್ಪ; ಶಿವಲಿಂಗಯ್ಯ ವೀ ಕಂಬಿ–ನಾಗಲಾಂಬಿಕೆ: 3 ಗಂ 3 ಹೆ ಮಕ್ಕಳು: ಪ್ರಾ ಪ್ರೌ ಶಿಕ್ಷಣ ಅಂಕಲಗಿ, ಬೈಲಹೊಂಗಲಗಳಲ್ಲಿ, ಕರ್ನಾಟಕ ವಿಶ್ವವಿದ್ಯಾಲಯ ದಿಂದ ಎಂ.ಎ., ವೀರಶೈವ ಸಿದ್ಧಾಂತವನ್ನು ಕುರಿತ ನಿಬಂಧಕ್ಕೆ ಪಿ.ಎಚ್‌ಡಿ.; ಸದಸ್ಯತ್ವ: ಕರ್ನಾಟಕ ವಿದ್ಯಾವರ್ಧಕ ಸಂಘ; ಕನ್ನಡದಲ್ಲಿ 5 ಕೃತಿಗಳು: ವಿಜ್ಞಾನ, ವೀರಶೈವ ದರ್ಶನ ಮೀಮಾಂಸೆ ಸಂ 1, 2. ವೈಷ್ಣವ ಮತದ ಉಗಮ ಹಾಗೂ ಪ್ರಗತಿ (ಅ)
ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–580003



ಕರ್ಕಿ, ದುಂಡಪ್ಪ ಸಿದ್ದಪ್ಪ [ಡಿ ಎಸ್ ಕರ್ಕಿ]
ಜ 15-11-1907

ಹಿರೇಕೊಪ್ಪ, ಬೆಳಗಾವಿ ಜಿಲ್ಲೆ: ಸಿದ್ದಪ್ಪ-ದುಂಡವ್ವ. 4 ಗಂ 1 ಹೆ ಮಕ್ಕಳು; ಪ್ರಾ ಬಾಗೇವಾಡಿ ಮಾ ಬೆಳಗಾವಿ ಕಾ ಎಂ.ಎ., ಬಿ.ಟಿ., ಪಿ.ಎಚ್‌ಡಿ. ಮುಂಬಯಿ ವಿಶ್ವವಿದ್ಯಾನಿಲಯ, ರಷ್ಯಾ, ಫ್ರಾನ್ಸ್ ಪ್ರವಾಸ; ಕೇಂದ್ರಸಾಹಿತ್ಯ ಅಕಾದೆಮಿಯ ಸಲಹಾ ಸದಸ್ಯ: 13 ಕೃತಿಗಳು: ನಕ್ಷತ್ರಗಾನ, ಭಾವತೀರ್ಥ (ಕ). ಸಾಹಿತ್ಯ-ಸಂಸ್ಕೃತಿ-ಸ್ಮೃತಿ (ವಿ). ಕನ್ನಡ ಛಂದೋವಿಕಾಸ (ಸಂಶೋ) ಬೇಜ್ ಬರುವಾ (ಅನು)
ಸಿದ್ಧೇಶ್ವರ ಸದನ ಹೊಸೂರು ಹುಬ್ಬಳ್ಳಿ 21



ಕರ್ಕಿ, ರಾಜಶೇಖರ ದುಂಡಪ್ಪ
ಜ 20-2-1936

ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿ. ದುಂಡಪ್ಪ–ಪಾರ್ವತಿದೇವಿ; 1 ಹೆಣ್ಣು ಮಗು: ಪ್ರಾ ಪ್ರೌ ಬೆಳಗಾವಿ ಕೆ. ಎಲ್. ಇ. ಸೊಸೈಟಿ, ಬಿ.ಎ., ಬಿ.ಎಡ್. ಕರ್ನಾಟಕ ವಿಶ್ವವಿದ್ಯಾಲಯ. ಶಿಕ್ಷಕ ಜಿ. ಎ. ಕಾಂಪೋಜಿಟ್ ಜ್ಯೂನಿಯರ್ ಕಾಲೇಜ್. ಬೆಳಗಾವಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ (1970–74). 1 ಕೃತಿ; ರಿಂಗಣ (ಕ)
ಪದ್ಮರಾಗ ಸದನ ಹಿಂದವಾಡಿ ಬೆಳಗಾವಿ



ಕಟ್ಟೀಮನಿ, ಬಸವರಾಜ
ಜ 5-10-1919

ಗೋಕಾಕ, ಬೆಳಗಾವಿ ಜಿಲ್ಲೆ ; ಅಪ್ಪಯ್ಯಣ್ಣ – ಬಾಳವ್ವ ; 2 ಗಂ 3 ಹೆ ಮಕ್ಕಳು ; ಸೋವಿಯತ್ ರಷ್ಯಾ ಪ್ರವಾಸ (1969), ಸೋವಿಯತ್ ದೇಶ ನೆಹರು ಪ್ರಶಸ್ತಿ (1968), ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯ (1968-74), ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ (1970-73) ; ಅಖಿಲಭಾರತ 52 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (ಬೆಳಗಾವಿ) ; 60 ಕೃತಿಗಳು : ಮಾಡಿಮಡಿದವರು, ಜರತಾರಿ ಜಗದ್ಗುರು, ಜ್ವಾಲಾಮುಖಿಯ ಮೇಲೆ, ಮೋಹದ ಬಲೆಯಲ್ಲಿ, ಗಿರಿಯ ನವಿಲು, ಸ್ವಾತಂತ್ರ್ಯದೆಡೆಗೆ, ಐದನೆಯ ದೇಸಾಯಿಣಿ, ಸಮರ ಭೂಮಿ, ಸಂಗೊಳ್ಳಿ ರಾಯನಾಯಕ' ಪೌರುಷ ಪರೀಕ್ಷೆ, ಕಿತ್ತೂರ ಕೇಸರಿ (ಕಾ), ಕಾರವಾನ್, ಜೋಳದ ಬೆಳೆಯ ನಡುವೆ, ಆಗಸ್ಟ್ ಒಂಬತ್ತು, ಗರಡಿಯಾಳು, ಸೆರೆಯಿಂದ ಹೊರಗೆ (ಸ ಕ), ಕುಂದರ ನಾಡಿನ ಕಂದ (ಆ ಕ)

'ಸಾಹಿತ್ಯ ಶ್ರೀ' ನವೋದಯನಗರ ಧಾರವಾಡ 3

ಕಡೆತೋಟದ, ನಿಂಗಪ್ಪ ಕಲ್ಲಪ್ಪ [ಎನ್ ಕೆ ಕೆ]
ಜ 10-4-1933



ರಾಯಚೂರು ಜಿಲ್ಲೆಯ ಬಂಡಿಹಾಳ ಗ್ರಾಮ ; 1 ಗಂ 2 ಹೆ ಮಕ್ಕಳು ; ಪ್ರಾ ಮಾ ಶಿಕ್ಷಣ ನರೇಗಲ್ಲ ಮತ್ತು ಧಾರವಾಡ, ಕರ್ನಾಟಕ ವಿಶ್ವ ವಿದ್ಯಾನಿಲಯದಿಂದ ಅರ್ಥಶಾಸ್ತ್ರ ಮತ್ತು ಸಮಾಜ ಶಾಸ್ತ್ರಗಳಲ್ಲಿ ಎಂ.ಎ. (1958), ಅಲಹಾಬಾದ ಹಿಂದೀ ವಿಶ್ವವಿದ್ಯಾಲಯದ ಸಾಹಿತ್ಯರತ್ನ ; ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರ ಪ್ರಾಧ್ಯಾಪಕ ; ಅಮೆರಿಕಾ ಪ್ರವಾಸ (1973) ; ಸದಸ್ಯತ್ವ : ಕರ್ನಾಟಕ ವಿದ್ಯಾವರ್ಧಕ ಸಂಘ, ಭಾರತೀಯ ಸೈನ್ಸ್ ಕಾಂಗ್ರೆಸ್ ಕಲ್ಕತ್ತ, ಇಂಡಿಯನ್ ಆಂಥ್ರೊಪಲಾಜಿಕಲ್ ಸೊಸೈಟಿಯ ಆಜೀವ ಸದಸ್ಯ; 3 ಕೃತಿಗಳು : ಧರ್ಮ ಸಂಸ್ಕೃತಿ ಸಮಾಜ, ಹರಿಜನರ ಸಮಸ್ಯೆಗಳು ಹಾಗೂ ಅವುಗಳ ಪರಿಹಾರ, ಹರಿಜನೋದ್ಧಾರ ಕಾರ್ಯ

ಮಾನವಶಾಸ್ತ್ರ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003



ಕಣವಿ, ಚೆನ್ನವೀರ ಸಕ್ರಪ್ಪ
ಜ 2[illegible]-6-1928

ಧಾರವಾಡ ಜಿಲ್ಲೆ ಗದಗ ತಾಲೂಕಿನ ಹೊಂಬಳ: ಸಕ್ರಪ್ಪ-ಪಾರ್ವತವ್ವ; 4 ಗಂ 1 ಹೆ ಮಕ್ಕಳು; ಪ್ರಾ ಶಿಕ್ಷಣ ಧಾರವಾಡ ತಾಲೂಕಿನ ಗರಗ, ಮುಲ್ಕಿ ಧಾರವಾಡ. ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಕನ್ನಡದಲ್ಲಿ ಎಂ.ಎ.; ಕ ವಿ ಪ್ರಸಾರಾಂಗದ ನಿರ್ದೇಶಕ; ಮುಂಬಯಿ ರಾಜ್ಯ ಪ್ರಶಸ್ತಿ (ಆಕಾಶ ಬುಟ್ಟಿ). ಮೈಸೂರು ರಾಜ್ಯದ ಬಹುಮಾನ (ದೀಪಧಾರಿ, ನೆಲಮುಗಿಲು). ಕವನ ಕಲಾರವಿ ಬಿರುದು: ಸದಸ್ಯತ್ವ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ, ಪಿ. ಇ. ಎನ್.. ಕೇಂದ್ರ ಸಾಹಿತ್ಯ ಅಕಾದೆಮಿ; 17 ಕೃತಿಗಳು: ಆಕಾಶ ಬುಟ್ಟಿ, ಕಾವ್ಯಾಕ್ಷಿ. ಜೀವಧ್ವನಿ. ದೀಪಧಾರಿ, ನಗರದಲ್ಲಿ ನೆರಳು (ಕ), ನೈವೇದ್ಯ (ಸಂ). ಭಾವಜೀವಿ. ಮಣ್ಣಿನ ಮೆರವಣಿಗೆ (ಕ), ಸಮಾಹಿತ, ಸಾಹಿತ್ಯ ಚಿಂತನ, (ವಿ); ಹವ್ಯಾಸ: ನಿಸರ್ಗದಲ್ಲಿಯ ವಿವಿಧ ಬಣ್ಣಗಳ ವೀಕ್ಷಣೆ. ತೋಟಗಾರಿಕೆ

ಚೆಂಬೆಳಕು ಕಲ್ಯಾಣನಗರ ಧಾರವಾಡ 580 007

ಕಣವಿ, ಶಾಂತಾದೇವಿ ಚೆನ್ನವೀರ
ಜ 12-1-1933

ವಿಜಾಪುರ; ಸಿದ್ಧಬಸಪ್ಪ ವೀರಪ್ಪ ಗಿಡ್ನವರ-ಭಾಗೀರಥಿದೇವಿ; ಪತಿ ಚೆನ್ನವೀರ ಕಣವಿ; 4 ಗಂ 1 ಹೆ ಮಕ್ಕಳು; ಪ್ರಾ ಶಿಕ್ಷಣ ಬೈಲಹೊಂಗಲ, ಹಿಂದೀ ರಾಷ್ಟ್ರಭಾಷಾ (1949); ಗೃಹಿಣಿ; ಕರ್ನಾಟಕ ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ (ಬಯಲು ಆಲಯ 1973); 4 ಕೃತಿಗಳು: ಜಾತ್ರೆ ಮುಗಿದಿತ್ತು, ಬಯಲು ಆಲಯ, ಮರುವಿಚಾರ, ಸಂಜೆ ಮಲ್ಲಿಗೆ (ಸ ಕ); ಹವ್ಯಾಸ: ಜಾನಪದ ಸಂಗೀತ, ಭಾವಗೀತಾ ಗಾಯನ, ಹೆಣಿಕೆ

ಚೆಂಬೆಳಕು ಕಲ್ಯಾಣನಗರ ಧಾರವಾಡ 580 007

ಕಬಾಡಿ, ದ್ವಾರಕಾನಾಥ್ ಹೊನ್ನೂಸಾ
ಜ 17-2-1936



ಬೆಂಗಳೂರು; ಕೆ ಜಿ ಹೊನ್ನೂಸಾ-ಗೌರಮ್ಮಾ ಬಾಯಿ; 3 ಗಂ ಮಕ್ಕಳು; ಬಿ.ಕಾಂ., ಬಿ.ಎಲ್. ವರೆಗೆ ಶಿಕ್ಷಣ; ಆಡಿಟರ್ ಮತ್ತು ವಕೀಲರು: ಫ್ರೊಯಿಟೆಟ್ಸ್ ಇಂಟರ್‌ನ್ಯಾಷನಲ್ ಆರ್ಗನೈಸೇಶನ್ ಸಂಸ್ಥೆಯ ಸ್ಥಾಪಕರು; ಅಧ್ಯಕ್ಷರು: ಶ್ರೀಕಲಾ ಗಂಗೋತ್ರಿ ಲಲಿತ ಕಲಾಸಂಘ: 7 ಕೃತಿಗಳು:

ಮಹಾಪಿಪ್ಲವ (ನಾ), ವಿಷವರ್ತುಲ, ಸೃಷ್ಟಿಗಾನ, ಪುಷ್ಪಾಂಜಲಿ (ಕ), ಜೀವನ ಚಕ್ರ, ಮುಗಿಲು ಹೇಳಿತು, ಹೊನ್ನಿನ ಮಡಿಲಲ್ಲಿ (ಕಾ), ; ಹವ್ಯಾಸ : ಸಾಹಿತ್ಯಾಭ್ಯಾಸ, ಚಿತ್ರನಿರ್ಮಾಣ, ಪುಸ್ತಕಸಂಗ್ರಹ

21 ಗೋಪಾಲಕೃಷ್ಣಸ್ವಾಮಿಗುಡಿ ಬೀದಿ ಚಿಕ್ಕಪೇಟೆ ಕ್ರಾಸ್ ಬೆಂಗಳೂರು 560 053

ಕಮಲಮ್ಮ, ಮೈಸೂರು [ಕಮಲೇಶ]
ಜ 13-3-1921

ಮೈಸೂರು ; ಎಂ ಕೆ ಶಿಂಗ್ರಾಚಾರ್–ವೇಂಗಡಮ್ಮ ; 3 ಗಂ 3 ಹೆ ಮಕ್ಕಳು ; ಟಿ.ಸಿ.ಎಚ್. ಶಿಕ್ಷಣ; ಕನ್ನಡ ಉಪಾಧ್ಯಾಯಿನಿ ; 6 ಕೃತಿಗಳು : ಕವನ ಕುಸುಮ ಮಾಲೆ, ಗೀತ ಕುಸುಮಾವಳಿ (ಕ) ಪಶ್ಚಾತ್ತಾಪ (ನಾ) ಪ್ರಾಯಶ್ಚಿತ್ತ (ಕಾ)

2426 ಹೊಸಬಂಡೀಕೇರಿ 1ನೇ ಕ್ರಾಸ್ ಮೈಸೂರು 570 004



ಕಮಲಾಕ್ಷರಾಯ ಉಡುಪಿ
ಜ 25–8–1924

ಉಡುಪಿ ; ಯು ಅನಂತ ಕೃಷ್ಣನಾಯಕ–ಕಲ್ಯಾಣಿ ; 1 ಗಂ 5 ಹೆ ಮಕ್ಕಳು ; ಪ್ರಾಥಮಿಕ 4ನೇ ತರಗತಿ ವರೆಗೆ ಶಿಕ್ಷಣ ; ಪುಸ್ತಕ ವ್ಯಾಪಾರ ; 7 ಕೃತಿಗಳು : ಒಗಟುಗಳು (ಜಾ), ಏಕೀಕರಣ, ತವರ್ಮನೆ ಪತ್ರ ಬರಲೇ ಇಲ್ಲ, ನಾ ಹಳ್ಳಿ ಮನಷಾ, ಸಾವಿರಾರು ರೂಪಾಯಿಗಳು, ಸೆರೆಮನೆಯೋ ಅರಮನೆಯೋ (ನಾ) ; ಹವ್ಯಾಸ : ಸಮಾಜ ಸೇವೆ ಮತ್ತು ಭಜನೆ

ಜನತಾ ಕಟ್ಟಿಗೆ ವಟಾರ 2537 ಕಿತ್ತೂರ ಚೆನ್ನಮ್ಮ ರೋಡ್ ಚಿಕ್ಕೋಡಿ

ಕಮ್ಮಾರ, ಈಶ್ವರಪ್ಪ ಶಂಕರಪ್ಪ
(ಈಶ್ವರ ಕಮ್ಮಾರ)
ಜ 4–1–1933



ಬೆಳಗಾವಿ ಜಿಲ್ಲೆಯ ಹಿರೇನಂದಿಹಳ್ಳಿ ; 3 ಗಂ 1 ಹೆ ಮಕ್ಕಳು ; ಪ್ರಾ ಪ್ರೌ ಶಿಕ್ಷಣ ಇಟಗಿ ಮತ್ತು ಬೈಲಹೊಂಗಲ, ಕನ್ನಡ ಎಂ.ಎ. (1970) ಹಿಂದೀ ರಾಷ್ಟ್ರಭಾಷಾ ಪ್ರವೀಣ ; ಮಾದರಿ ಪ್ರಾಥಮಿಕ ಶಾಲೆಯ ಪ್ರಧಾನ ಅಧ್ಯಾಪಕ (1969),

ಸವಣೂರಿನ ಸರಕಾರಿ ಜೂನಿಯರ್ ಕಾಲೇಜಿನ ಕನ್ನಡ ಪ್ರಾಧ್ಯಾಪಕ (1972-73), ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗದಲ್ಲಿ ಸಹಾಯಕ ನಿರ್ದೇಶಕ (1973ರಿಂದ) : ಆದರ್ಶ ಶಿಕ್ಷಕ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (ಮಕ್ಕಳ ಲೋಕ 1968) ; ಸದಸ್ಯತ್ವ : ಕಿತ್ತೂರ ನಾಡಿನ ವಿದ್ಯಾವರ್ಧಕ ಸಂಘ ; 9 ಕೃತಿಗಳು : ಗೀತಾಂಜನ (ಕ), ಚೂಡಾರತ್ನ, ದಾರಿದೀಪ, ಮಂಗಲಗೌರಿ (ನಾ), ಪಾಪಾ, ಮಕ್ಕಳಲೋಕ (ಬಾವಾ)' ಮೊರಬನ ತವರ (ಜಾ) ; ಹವ್ಯಾಸ : ಸಂಗೀತ ಶ್ರವಣ, ನಾಟಕಾಭಿನಯ

ಸಹಾಯಕ ನಿರ್ದೇಶಕ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003



ಕರಗುದರಿ, ರಾಮಚಂದ್ರ ವೆಂಕಟೇಶ
[ಶಾರದಾ ತನಯ, ಹಾನಗಲ್ಲವ]
ಜ 8-10-1905

ತೋಟಗಂಟಿ ತಾಲ್ಲೂಕು ಹಿರೇಕೆರೂರು ; ವೆಂಕಣ ಭಟ್ಟ ಶ್ರೀನಿವಾಸ ಭಟ್ಟ ಕರಗುದರಿ-ಶಾರದಾ ಬಾಯಿ : 4 ಗಂ 4 ಹೆ ಮಕ್ಕಳು ; ಪ್ರಾ ಹಾನಗಲ್ಲು ಮಾ ಧಾರವಾಡ : ಜಯಹಿಂದ ವಾರಪತ್ರಿಕೆಯ ಸಂಪಾದಕ (1939-56) ; ಕೀರ್ತನ ಭೂಷಣ ಪ್ರಶಸ್ತಿ (1965), ಸಮಗ್ರ ವೇದಾಂತಕ್ಕೆ ಸ್ಕೂಲ್‌ಬುಕ್ಸ್ ಅಂಡ್ ಲಿಟರೇಚರ್ ಸೊಸೈಟಿ ಬಹುಮಾನ ; 6 ಕೃತಿಗಳು : ರಾಷ್ಟ್ರೀಯ ಪದ್ಯಗಳು (ಕ), ಸೇನಾಪತಿ ಡಾ॥ ಹರಡೀಕರರು (ಜೀಚ) ; ಸಮಗ್ರ ವೇದಾಂತ (ಧ)

59-ಅ ಅಶೋಕನಗರ ಹುಬ್ಬಳ್ಳಿ 22

ಕರುಣಾಕರನ್, ಕಲ್ಲಿ ಶಂಕರನ್
ಜ 10-11-1933

ಬೆಂಗಳೂರು ಜಿಲ್ಲೆ ಆನೇಕಲ್ ; ವೈ ಸುಬ್ರಹ್ಮಣ್ಯಯ್ಯ-ಗೌರಮ್ಮ ; 1 ಗಂ 3 ಹೆ ಮಕ್ಕಳು ; ಎಸ್.ಎಸ್.ಎಲ್.ಸಿ.; ಉಪಾಧ್ಯಾಯ ವೃತ್ತಿ, ಶೈಕ್ಷಣಿಕ ಸೇವೆಗಾಗಿ ರಾಷ್ಟ್ರಪ್ರಶಸ್ತಿ (1963), ಕರ್ನಾಟಕ ರಾಜ್ಯ ಸರ್ಕಾರದಿಂದ ಬಹುಮಾನ (1966), ಸ್ಕೌಟ್ ಸಂಸ್ಥೆಯಿಂದ ಪದಕ ; ಕರ್ನಾಟಕ ಸಂಘ ಕೋಲಾರ, ಮಕ್ಕಳ ಕೂಟ, ಕಲಾ ಸಂಘಗಳ ಸದಸ್ಯ ; 10 ಕೃತಿಗಳು : ಗಾನರಸಾಯನ, ಸದ್ಗುರು ಗೀತೆ (ಕ), ಬಾಲ ಕಬೀರ್, ಕಾಸಿನ ಗಂಟು (ನಾ), ಅಹಿಂಸಾ ಪರಮೋಧರ್ಮ, ತೋಳರಾಯನ ಸಭೆ (ಸ ಕ)

ಶ್ರೀ ರಾಮಮಂದಿರ ರಸ್ತೆ ಎನ್ ಆರ್ ಬಡಾವಣೆ ಚಿಂತಾಮಣಿ ಕೋಲಾರ ಜಿಲ್ಲೆ

ಗುಂಡಪ್ಪ ಲಿಂಗಣ್ಣಯ್ಯ
ಜ 1-8-1903

ಹಾಸನ ಜಿಲ್ಲೆ ಮತಿಘಟ್ಟ ; ಲಿಂಗಣ್ಣಯ್ಯ-ಚೆನ್ನಮ್ಮ ; 2 ಗಂ 5 ಹೆ ಮಕ್ಕಳು ; ಪ್ರಾ ಬೆಳವಾಡಿ, ಪ್ರೌ ಚಿಕ್ಕಮಗಳೂರು, ಬಿ.ಎ. (1928), ಎಂ.ಎ. (ಕನ್ನಡ) 1930 ಮೈ.ವಿ.ವಿ., ಪತ್ರಿಕಾ ವ್ಯವಸಾಯ, ಭಾಷಾಂತರಕಾರ, ಇಂಗ್ಲಿಷ್ ಕನ್ನಡ ನಿಘಂಟು ಸಂಪಾದಕ (1933-1942), 1942ರಿಂದ ಕನ್ನಡ ಅಧ್ಯಾಪಕ 1958ರಲ್ಲಿ ನಿವೃತ್ತಿ. ಕವಿತಾ ರಚನೆಗಾಗಿ 1930ರಲ್ಲಿ ಮೈ ವಿ ವಿ ಸಿಲ್ವರ್ ಜ್ಯೂಬಿಲಿ ಕನ್ನಡ ಸ್ವರ್ಣ ಪದಕ, ಭಾಷಾಂತರದ ಮೂಲಕ ತಮಿಳು-ಕನ್ನಡ ಭಾಂದವ್ಯಕ್ಕೆ ಶ್ರಮಿಸಿದ್ದಕ್ಕಾಗಿ ನಾಗರ್ ಕೋಯಿಲಿನಲ್ಲಿ ಬಂಗಾರದ ಪದಕ 1958, ಹಲವು ಸಂಘ ಸಂಸ್ಥೆಗಳಿಂದ ಸನ್ಮಾನ, ಗಾಂಧಿ ಶತಮಾನೋತ್ಸವ ಸ್ವರ್ಣ ಪದಕ, ಕರ್ನಾಟಕ ಸರ್ಕಾರದ ಮಾಸಿಕ ಗೌರವ ಸಂಭಾವನೆ, ಅಕಾಡೆಮಿ ಪ್ರಶಸ್ತಿ, ದೇವರಾಜ ಬಹದ್ದೂರ್ ಬಹುಮಾನ; 52 ಕೃತಿಗಳು : ನಾಡಪದಗಳು (ಜಾ), ಭಾರತ ಕಥಾ ಮಂಜರಿ (ಗದ್ಯ), ಕನ್ನಡ ವ್ಯಾಕರಣ ಪಾಠಗಳು (ವ್ಯಾ),

ಥಾಮಸ್ ಅಲ್ವ ಎಡಿಸನ್, ಫ್ಲಾರೆನ್ಸ್ ನೈಟಿಂಗೇಲ್ (ಜೀ ಚ), ಮುಕುಂದಮಾಲಾ, ಭಾಸ ನಾಟಕಗಳು (ಅನು), ತಿರುಕ್ಕುರಳ್ (ಧ)

114 24ನೇ ಕ್ರಾಸ್ 3ನೇ ಬ್ಲಾಕ್ ಜಯನಗರ ಬೆಂಗಳೂರು 560011



ಗುಂಡಾಜೋಯಿಸ್, ಕೆಳದಿ
ಜ 27-9-1931

ಶಿವಮೊಗ್ಗ ಜಿಲ್ಲೆ ಹುರಳಿಗ್ರಾಮ; ಕೆಳದಿ ನಂಜುಂಡ ಜೋಯಿಸ್–ಮೂಕಮ್ಮ; ಎಸ್ ಎಸ್ ಎಲ್ ಸಿ, ಕನ್ನಡರತ್ನ, ಕನ್ನಡ ಪಂಡಿತ್, ಆಗಮ ಪ್ರವರ, ಹಿಂದಿ ಮಾಧ್ಯಮ; ಗೌರವ ಕ್ಯೂರೇಟರ್ ಕೆಳದಿ ವಸ್ತು ಸಂಗ್ರಹಾಲಯ; ಅಖಿಲ ಭಾರತ ವಸ್ತು ಸಂಗ್ರಹಾಲಯ ದೆಹಲಿ ಸದಸ್ಯ; 7 ಕೃತಿಗಳು: ಶ್ರೀರಾಮ ಕರ್ಣಾಮೃತಂ, ಪಾರ್ವತಿ ವಲ್ಲಭ ಶತಕ (ಸಂ), ಇಕ್ಕೇರಿಯ ಅರಸರು, ಕೆಳದಿಯ ಸಂಕ್ಷಿಪ್ತ ಇತಿಹಾಸ (ಇ), ಬೆಂಗಳೂರು ಕೆಂಪೇಗೌಡ (ಜಾ ವಾ); ಹವ್ಯಾಸ: ಇತಿಹಾಸ ಸಂಶೋಧನೆ, ತಾಳೆಗರಿಗಳ ಸಂಪಾದನೆ

ಕೆಳದಿ ಅಂಚೆ ಸಾಗರ ತಾ ಶಿವಮೊಗ್ಗ ಜಿಲ್ಲೆ



ಗುಂಡ್ಮಿ, ಗೋವಿಂದಪ್ಪ ನಾಗಪ್ಪ
ಜ 21-8-1932

ವಿಜಾಪುರ ಜಿಲ್ಲೆ ಇಲಕಲ್ಲ; ನಾಗಪ್ಪ–ವೆಂಕಮ್ಮ; 2 ಗಂ 1 ಹೆ ಮಕ್ಕಳು; ಪ್ರಾ ಇಲಕಲ್ಲ, ಮಾ ಹುನಗುಂದ, ಬಿ.ಎಸ್ಸಿ. ಧಾರವಾಡ, ಬಿ.ಎಡ್., ಎಂ.ಎಡ್. ಬೆಳಗಾವಿ, ಎಂ.ಎಸ್ಸಿ. ಬೆಂಗಳೂರು; ಗಣಿತ ಪ್ರಾಧ್ಯಾಪಕ; 3 ಕೃತಿಗಳು: ಸಾಮಾಜಿಕ ಅಭ್ಯಸನಗಳು, ಸಾಮಾನ್ಯ ಗಣಿತ (ಗ ವಿ) ಭಾರತೀಯ ಶೈಕ್ಷಣಿಕ ಇತಿಹಾಸ ದರ್ಶನ (ಶಿ ಶಾ)

ಪ್ರಾಧ್ಯಾಪಕ ವಿಜಯ ಮಹಾಂತೇಶ ಕಾಲೇಜು ಇಲಕಲ್ಲ

ಗುಂಡ್ಮಿ ಮಹಾಬಲಭಟ್ಟ

ಉಡುಪಿಯ ಗುಂಡ್ಮಿ ಗ್ರಾಮ; ಪ್ರಾ ಪಾರಂಪಳ್ಳಿ, ಋಗ್ವೇದ ಮತ್ತು ಪ್ರವೇಶ ಪರೀಕ್ಷೆ. ವೇದಾಂತಾಧ್ಯಯನ: ದ್ವಾರಕಾ ಶಾರದಾ ಪೀಠ (ಗುಜರಾತ್)ದ ಕಾರ್ಯದರ್ಶಿ: 2 ಕೃತಿಗಳು: ಮೋಜಿನ ಜೀವನ ಅರ್ಥಾತ್ ಮೋಹನ, ಪನ್ನೆ


ದ್ವಾರಕಾ ಶಾರದಾ ಪೀಠ ಗುಜರಾತ್

ಗುಂಡೂರಾವ್. ಅಗ್ರಹಾರ ವೆಂಕಟಸುಬ್ಬಯ್ಯ
ಜ 10-9-1930



ಅಗ್ರಹಾರ ವೆಂಕಟಸುಬ್ಬಯ್ಯ–ಸುಬ್ಬಲಕ್ಷ್ಮಮ್ಮ; 1 ಗಂ 1 ಹೆ ಮಕ್ಕಳು; ಪ್ರಾ ಪ್ರೌ ಇಂಟರ್ ಮೀಡಿಯೆಟ್ ಮೈಸೂರು; ಜೀವವಿಮಾ ಕೇಂದ್ರದಲ್ಲಿ ಡೆವಲಪ್‌ಮೆಂಟ್ ಆಫೀಸರ್; ಫಿಲಂ ಸೊಸೈಟಿ, ಬಿಡಾರಂ ಕೃಷ್ಣಪ್ಪ ಸಂಗೀತ ಸಮಿತಿ, ಲಿಟರರಿ ಯೂನಿಯನ್ ಮೈಸೂರು ಸದಸ್ಯ; 2 ಕೃತಿಗಳು: ಸಾಷ್ಟಾಂಗ ನಮಸ್ಕಾರ (ನಾ), ಚಲನಚಿತ್ರ ದಿಗ್ದರ್ಶನ (ಕಲೆ)

2769 5ನೇ ಮೈನ್ ವಿ ವಿ ಮೊಹಲ್ಲಾ ಮೈಸೂರು 2



ಗುಂಡೂರಾವ್, ಬೆಳಮಾರನಹಳ್ಳಿ ಲಕ್ಷ್ಮೀನರಸಿಂಹಯ್ಯ
ಜ 16-4-1917

ಕೋಲಾರ ಜಿಲ್ಲೆ ಬೆಳಮಾರನಹಳ್ಳಿ: ಲಕ್ಷ್ಮೀನರಸಿಂಹಯ್ಯ–ಸುಬ್ಬಲಕ್ಷ್ಮಮ್ಮ: 4 ಹೆ ಮಕ್ಕಳು ಪ್ರಾ ಮಡಿವಾಳ, ಪ್ರೌ ಬೆಂಗಳೂರು. ಬಿ.ಎ. (1942) ಮೈಸೂರು; ಎ ಜಿ ಆಫೀಸಿನಲ್ಲಿ ಸೀನಿಯರ್ ಆಡಿಟರ್: 2 ಕೃತಿಗಳು: ಬಾಬು ಸುಭಾಸ್ ಚಂದ್ರಬೋಸ್ (ಜೀ ಚ), ಸೌಂದರ್ಯಾಕ್ಷ (ನಾ)

22 ಶ್ರೀರಾಮಮಂದಿರಂ ರೋಡ್ ಬಸವನಗುಡಿ ಬೆಂಗಳೂರು 4



ಗುಂಡೂರಾವ್, ಸಾತ್ವಿಕ್
ಜ 9-2-1931

ಶಿವಮೊಗ್ಗ : ಸಾತ್ವಿಕ್ ಕೃಷ್ಣರಾವ್–ಎಸ್ ರಾಧಾಬಾಯಿ : 2 ಗು 1 ಹೆ ಮಕ್ಕಳು : ಪ್ರಾ ಶಿವಮೊಗ್ಗ, ಪ್ರೌ ಮೈಸೂರು. ಆಯುರ್ವೇದ ವಿದ್ವಾನ್, ನಾಟಕ ಶಾಸ್ತ್ರದಲ್ಲಿ ಡಿಪ್ಲೊಮಾ : ಸಾಹಿತ್ಯ ಕಲಾ ಸಂಘ ಬೆಂಗಳೂರು ಅಧ್ಯಕ್ಷ. ಮಿತ್ರ ಕಲಾವಿದರು ಬೆಂಗಳೂರು ಕಾರ್ಯದರ್ಶಿ : 11 ಕೃತಿಗಳು : ಭಾವ ಪ್ರೈಮಾಸ್, ಫೋಟೋ ಅವಾಂತರ (ನಾ), ಕನ್ನೇಶ್ವರದ ರಾಮು (ಕಾ), ಹಾಸ್ಯಲಹರಿ, ಹಾಸ್ಯದ ಹೊನಲು (ಪ್ರ), ಪೆದ್ದ ಚೆನ್ನ (ಬಾ ಸಾ) : ಹವ್ಯಾಸ : ಛಾಯಾ ಚಿತ್ರ, ಪ್ರವಾಸ
ಆಯುರ್ವೇದಿಕ್ ಡಿಸ್ಪೆನ್ಸರಿ ಕ್ವಾರ್ಟರ್ಸ್ 7ನೇ ಮುಖ್ಯ ರಸ್ತೆ ಶ್ರೀರಾಮಪುರಂ ಬೆಂಗಳೂರು



ಗುಂಡೂರಾವ್, ಹರಿಹರ
ಜ 24-12-1893

ರಾಣೇಬೆನ್ನೂರು : ರಾಮಣ್ಣನಾಯಕ್–ತುಳಸಾಬಾಯಿ : 5 ಗು 2 ಹೆ ಮಕ್ಕಳು ; ಪ್ರಾ ರಾಣೇಬೆನ್ನೂರು, ಪ್ರೌ ಧಾರವಾಡ, ನ್ಯಾಯಶಾಸ್ತ್ರ ಪದವಿ ಫರ್ಗ್ಯೂಸನ್ ಕಾಲೇಜು ಪುಣೆ ; ವಕೀಲ ವೃತ್ತಿ ; ತಿಲಕ್ ಸಂಘದ ಸ್ಥಾಪಕ ಹಾಗೂ ಕಾರ್ಯದರ್ಶಿ (ಚಿತ್ರದುರ್ಗ) ; 4 ಕೃತಿಗಳು : ಬಾಬಿಯ ಮಹಿಮೆ, ಪರಮಾತ್ಮ ಇದ್ದಾನೆ, ಗೀತೋಕ್ತ ಕರ್ಮಯೋಗ




ಗುಂಕಾರ್, ಜನಾರ್ದನ
ಜ 26-11-1932

ಮಾದ್ರಪೆಟ್ಟು ದ ಕ : ರಾಮಯ್ಯ–ಕಲ್ಯಾಣಿ : 2 ಗು 1 ಹೆ ಮಕ್ಕಳು : ಪ್ರಾ ಅಶ್ವತ್ಥಪುರ, ಪ್ರೌ, ಬಿ.ಎ., ಎಂ.ಎ. ಧಾರವಾಡ ; ದಕ್ಷಿಣ ರೈಲ್ವೆ ಅಕೌಂಟ್ಸ್ ಆಫೀಸಿನಲ್ಲಿ ಸೆಕ್ಷನ್ ಆಫೀಸರ್ ; 18 ಕೃತಿಗಳು : ಪರಾವಲಂಬಿ, ಹಳ್ಳದಿಂದ ಹಾದಿಗೆ, ದಾರಿ ತಾಯಿ, ದಾರಿ ನೋಡಿದವರು (ಕಾ), ಕಂಬದ

ಮುಚ್ಚು (ಸ ಕ), ಎವರೆಸ್ಟ್ ವೀರ, ಬೆಂಜಮಿನ್ ಫ್ರಾಂಕ್ಲಿನ್ (ಅನು), ಜಾತಿ ಮತ್ತು ಭಾರತ (ವಿ ಚಾ) ; ಹವ್ಯಾಸ ; ಆಯುರ್ವೇದ ವೈದ್ಯಕೀಯ ಅಭ್ಯಾಸ, ತೋಟಗಾರಿಕೆ

349 16ನೇ ಅಡ್ಡರಸ್ತೆ ಜಯನಗರ ಮೈಸೂರು 570 009



ಗುಜ್ಜಾರಪ್ಪ, ತಿಮ್ಮಣ್ಣ

ಜ 25-4-1947

ತುಮಕೂರು ಜಿಲ್ಲೆ ಲಕ್ಕನಹಳ್ಳಿ ; ಪ್ರಾ ಲಕ್ಕನ ಹಳ್ಳಿ, ಪ್ರೌ ಮಧುಗಿರಿ,ಬಿ.ಎ. ಮೈಸೂರು, ಎಂ.ಎ., ಎಲ್.ಎಲ್.ಬಿ. ಬೆಂಗಳೂರು ; ಬಾಪೂಜಿ ಸಂಘದ ಸದಸ್ಯ ; 3 ಕೃತಿಗಳು : ದೇಶ ಭಕ್ತಿಗೀತೆ (ಕ), ಮಧುಗಿರಿಯ ಮಹತ್ವ (ಪ್ರ ಪ), ಸನ್ನೂರ ಜಾತ್ರೆ

ಲಕ್ಕನಹಳ್ಳಿ ಶಿರಾ ತಾಲೂಕು ತುಮಕೂರು ಜಿಲ್ಲೆ

ಗುರಾಣಿ, ಬಸವರಾಜ ಅಪ್ಪಣ್ಣ

ಜ 5-11-1927

ಬಾಡಗಿ ; ಅಪ್ಪಣ್ಣ–ಹನಮವ್ವ ; 2 ಗಂ 1 ಹೆ ಮಕ್ಕಳು ; ಮುಲ್ಕಿ ಪರೀಕ್ಷೆ ; ಉಪಾಧ್ಯಾಯ ; ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಸದಸ್ಯ ; 4 ಕೃತಿಗಳು : ಬಯಲಿನುಡಿಯಲ್ಲಿ (ಸ ಕ), ನಿಸರ್ಗನುಡಿ, ನಿಸರ್ಗದುಡಿ (ಕ)

ಜಮುಗಿ ಅಂಚೆ ವಿಜಾಪುರ ಜಿಲ್ಲೆ



ಗುರುಮೂರ್ತಿ, ಕಂದಗಲ್ ಗೌಡ್ರ

ಜ 1-1-1938

ದಾವಣಗೆರೆ ತಾಲೂಕು ಕಂದಗಲ್ಲು ; ಪಟೇಲ್ ಮಲ್ಲಪ್ಪ–ಶಾಂತಮ್ಮ ; 1 ಗಂ 2 ಹೆ ಮಕ್ಕಳು; ಬಿ.ಎ. ಮೈಸೂರು(1961).ಎಂ.ಎ. ಕರ್ನಾಟಕ ವಿಶ್ವವಿದ್ಯಾಲಯ (1963). ಎಂ.ಎ. ಫಿಲಿಫೈನ್ಸ್ ವಿಶ್ವವಿದ್ಯಾಲಯ (1966),ಪಿ.ಎಚ್.ಡಿ. ಕರ್ನಾಟಕ ವಿಶ್ವವಿದ್ಯಾಲಯ (1973); ಉಪಪ್ರಾಧ್ಯಾಪಕ (ಮಾನವಶಾಸ್ತ್ರ) ಕರ್ನಾಟಕ ವಿಶ್ವವಿದ್ಯಾಲಯ ;

ಫಿಲಿಫೈನ್ಸ್, ಹಾಂಕಾಂಗ್‌ಗಳಲ್ಲಿ ಪ್ರವಾಸ ; 2 ಕೃತಿಗಳು : ವ್ಯಾವಹಾರಿಕ ಮಾನವಶಾಸ್ತ್ರ, ಮಾನವಶಾಸ್ತ್ರ

ಉಪಪ್ರಾಧ್ಯಾಪಕ ಮಾನವಶಾಸ್ತ್ರ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003



ಗುರುರಾಜರಾವ್, ಬೈರತ್ನಹಳ್ಳಿ ಕೃಷ್ಣಮೂರ್ತಿ ರಾವ್

ಜ 14-4-1932

ಕೋಲಾರ ಜಿಲ್ಲೆ ಐಮರೆಡ್ಡಿಹಳ್ಳಿ ; ಕೃಷ್ಣಮೂರ್ತಿ ರಾವ್–ಸುಬ್ಬಮ್ಮ ; 2 ಗಂ 1 ಹೆ ಮಕ್ಕಳು ; ಪ್ರಾ ಕಾಗತಿ, ಪ್ರೌ ಕೋಲಾರ, ಬಿ.ಎ. ಮೈಸೂರು, ಎಂ.ಎ. ಪದವಿ, ಪಿ.ಎಚ್.ಡಿ. ಮದರಾಸು; ಎಂ.ಎ. ಸುವರ್ಣ ಪದಕ ; ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯಲ್ಲಿ 5ವರ್ಷ ಸೇವೆ (1956–60), ಮದರಾಸು (1960–68), ಮೈಸೂರು (1968–72), ಕರ್ನಾಟಕ ವಿಶ್ವವಿದ್ಯಾಲಯ (1972–79), ಮೈಸೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ ; ಆಲ್ ಇಂಡಿಯಾ ಓರಿಯಂಟಲ್ ಕಾನ್‌ಫರೆನ್ಸ್, ನ್ಯಾಷನಲ್ ಇಂಡಿಯನ್ ಸೈನ್ಸ್ ಅಸೋಸಿಯೇಷನ್, ಆರ್ಕಿಯಲಾಜಿಕಲ್ ಸೊಸೈಟಿ ಆಫ್ ಸೌತ್ ಇಂಡಿಯಾ, ಇಂಡಿಯನ್ ಪ್ರಿ ಹಿಸ್ಟಾರಿಕ್ ಸೊಸೈಟಿಗಳ ಸದಸ್ಯ ; 4 ಕೃತಿಗಳು : ಕರ್ನಾಟಕದಲ್ಲಿ ಶಿಲಾಯುಗ ಸಂಸ್ಕೃತಿಗಳು, ಕರ್ನಾಟಕದಲ್ಲಿ ಲೋಹಯುಗ ಸಂಸ್ಕೃತಿಗಳು, ಭಾರತದಲ್ಲಿ ಆದಿ ಶಿಲಾಯುಗ

ಉಪಪ್ರಾಧ್ಯಾಪಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಮಾನಸಗಂಗೋತ್ರಿ ಮೈಸೂರು 570 006

ಗುರುರಾಜಾಚಾರ್, ಸುಘಲ ನರಸಿಂಹಮೂರ್ತ್ಯಾಚಾರ್

ಜ 15–1–1901

ಮೈಸೂರು ; ನರಸಿಂಹ ಮೂರ್ತ್ಯಾಚಾರ್ಯ–ಕಮಲಾಬಾಯಿ ; 3 ಗಂ 3 ಹೆ ಮಕ್ಕಳು ; ಮೆಟ್ರಿಕ್ಯುಲೇಷನ್, ಮುಖ್ಯೋಪಾಧ್ಯಾಯರಾಗಿ ನಿವೃತ್ತಿ ; ಕಲ್ಕತ್ತಾ ಹಾಗೂ ದೆಹಲಿ ಸಾಹಿತ್ಯ ಸಂಘಗಳ ಸದಸ್ಯತ್ವ ; 140 ಕೃತಿಗಳು : ಕೈಲಾಸ ಯಾತ್ರೆ, ಕಪಟ ಸನ್ಯಾಸಿ, ಕಳುವಾದ ಕನ್ಯೆ (ಕಾ), ಅಶೋಕ, ಬಡವರ ಭಾಗ್ಯ (ನಾ), ಸರಳ ಮಗ್ಗಿ ಪುಸ್ತಕ, ನವ ಕನ್ನಡ 2ನೇ ಪುಸ್ತಕ

ನಂ 711 ಕತ್ವಾಡಿಪುರ ಅಗ್ರಹಾರ ಕೃಷ್ಣರಾಜ ಮೊಹಲ್ಲಾ ಮೈಸೂರು 4



ಗುರುಸ್ವಾಮಿ, ಮಲೆಯೂರು [ಮಗು]
ಜ 1-10-1947

ಚಾಮರಾಜನಗರ ತಾಲ್ಲೂಕು ಮಲೆಯೂರು ; ಶಿವಣ್ಣ ಕುಂಟಮ್ಮನ ಹಟ್ಟಿ-ಮರಮ್ಮ ; ಬಿ.ಎ. ಮಹಾರಾಜಾ ಕಾಲೇಜು. ಎಂ.ಎ.(ಕನ್ನಡ) ಮಾನಸ ಗಂಗೋತ್ರಿ ಮೈ.ವಿ ; ಅಧ್ಯಾಪಕ ; ಮೈಸೂರು ನಗರ ಕಾಲೇಜುಗಳ ಕನ್ನಡ ಅಧ್ಯಾಪಕರ ಸಂಘದ ಕಾರ್ಯದರ್ಶಿ, ನಂಜನಗೂಡಿನ ಸ್ನೇಹ ಸಮಾಗಮ ಬಳಗದ ಅಧ್ಯಕ್ಷ ; 2 ಕೃತಿಗಳು : ಖಾಸಗೀ ಬದುಕಿನ ಕಾಮ ಪ್ರೇಮ ಇತ್ಯಾದಿ (ಕ), ಚಿಕ್ಕದಣ್ಣಾಯಕ ಚನ್ನಬಸವಣ್ಣ (ಜಾ)

17ನೇ ಕ್ರಾಸ್ ಲವಕುಶ ಬಿಲ್ಡಿಂಗ್ಸ್ ನಂಜನಗೂಡು

ಗುರುಸಿದ್ದಪ್ಪ, ಬೀರನಹಳ್ಳಿ
ಜ 10-7-1932

ಚಿತ್ರದುರ್ಗ ಜಿಲ್ಲೆ ನಾಗಗೊಂಡನಹಳ್ಳಿ ; ಬಿ ಬಸಪ್ಪ-ರುದ್ರಮ್ಮ ; 1 ಗಂ 2 ಹೆ ಮಕ್ಕಳು ; ಎಸ್.ಎಸ್.ಎಲ್.ಸಿ., ಕನ್ನಡ ರತ್ನ, ಸಂಗೀತ ಸೀನಿಯರ್ ; ಸಂಗೀತ ಶಿಕ್ಷಕ ; ನಾಟ್ಯ ಕವಿ ಚತುರ ; ಕನ್ನಡ ಸಾಹಿತ್ಯ ಪರಿಷತ್ ಸದಸ್ಯ ; 8 ಕೃತಿಗಳು : ಭಕ್ತ ಸುಧನ್ವ, ತ್ಯಾಗ, ಗ್ರಾಮ ಸುಧಾರಣೆ, ಝಾನ್ಸಿರಾಣಿ (ನಾ)

ಸಂಗೀತ ಶಿಕ್ಷಕ ಚಳ್ಳಕೆರೆ ಚಿತ್ರದುರ್ಗ ಜಿಲ್ಲೆ



ಗೊರೂರು, ರಾಮಸ್ವಾಮಿ ಅಯ್ಯಂಗಾರ್
ಜ 4-7-1904

ಹಾಸನ ಜಿಲ್ಲೆ ಗೊರೂರು ; ಶ್ರೀನಿವಾಸಯ್ಯಂಗಾರ್-ಲಕ್ಷ್ಮಮ್ಮ ; 2 ಗಂ 1 ಹೆ ಮಕ್ಕಳು ; ಸಬರಮತಿ ವಿದ್ಯಾ ಪೀಠದಲ್ಲಿ ಅಧ್ಯಯನ, ಮದ್ರಾಸ್ ವಿಶ್ವವಿದ್ಯಾಲಯದ ವಿದ್ವತ್ ಪದವಿ, ಮೈ ವಿ ಗೌರವ ಡಾಕ್ಟರೇಟ್ ; ಅಮೆರಿಕಾ, ಕೆನಡಾ ಪ್ರವಾಸ ; ಕರ್ನಾಟಕ ಸಂಸ್ಕೃತಿ ಇಲಾಖೆ, ಕೇಂದ್ರ

ಹಾಗೂ ರಾಜ್ಯ ಸಾಹಿತ್ಯ ಅಕಾದೆಮಿ, ದೇವರಾಜ ಬಹದ್ದೂರ್ ಪ್ರಶಸ್ತಿಗಳು ; ಕೇಂದ್ರ ಸಾಹಿತ್ಯ ಅಕಾದೆಮಿ ಕರ್ನಾಟಕ ಶಾಖೆ, ಕರ್ನಾಟಕ ಸಾಹಿತ್ಯ ಅಕಾದೆಮಿ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ. ಜಾನಪದ ಸಮ್ಮೇಳನದ ಅಧ್ಯಕ್ಷ ; 60 ಕೃತಿಗಳು : ಹಳ್ಳಿಯ ಚಿತ್ರಗಳು, ನಮ್ಮ ಊರಿನ ರಸಿಕರು, ಬೈಲಹಳ್ಳಿಯ ಸರ್ವೆ (ಪ್ರ), ಹೇಮಾವತಿ, ರಾಜನರ್ತಕಿ (ಕಾ) ಅಮೆರಿಕದಲ್ಲಿ ಗೊರೂರು (ಪ್ರ ವಾ), ಬೆಸ್ತರ ಕರಿಯ, ಭೂತಯ್ಯನ ಮಗ ಅಯ್ಯು (ಸ ಕ), ಜನಪದ ಜೀವನ ಮತ್ತು ದರ್ಶನ (ಜಾ), ಸರ್ವಜ್ಞನು ತೋರಿಸಿದ ದಾರಿ, ಸಾಹಿತ್ಯಾನುಭವ (ವಿ ಮ), ಗಾಂಧೀಜಿಯವರ ಹಾಸ್ಯ ಪ್ರವೃತ್ತಿ, ಗಾಂಧೀಜಿ, ಸತ್ಯ ಅಹಿಂಸೆ (ಬಾ ಸಾ)

400 1ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು 10



ಗೋಕಾಕ, ವಿನಾಯಕ ಕೃಷ್ಣ [ವಿನಾಯಕ]
ಜ 10–8–1909

ಧಾರವಾಡ ಜಿಲ್ಲೆ ಸವಣೂರು ; ಗೋಕಾಕ ಕೃಷ್ಣರಾವ್–ಸುಂದರಾಬಾಯಿ ಕೃಷ್ಣರಾವ್ ಗೋಕಾಕ ; 1 ಗಂ 3 ಹೆ ಮಕ್ಕಳು ; ಪ್ರಾ ಸವಣೂರು, ಬಿ.ಎ. (1929), ಎಂ.ಎ.(ಇಂಗ್ಲಿಷ್ 1931) ಮುಂಬಯಿ ವಿಶ್ವವಿದ್ಯಾನಿಲಯ : ಪುಣೆ ಫರ್ಗ್ಯುಸನ್ ಕಾಲೇಜಿನಲ್ಲಿ ಅಧ್ಯಾಪಕ (1931), ಸಾಂಗ್ಲಿ ವಿಲಿಂಗ್ಡನ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ (1940), ಹೈದ್ರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ (1945), ಉತ್ತರ ಗುಜರಾಥದ ವೀಸನಗರ ಕಾಲೇಜಿನ ಪ್ರಿನ್ಸಿಪಾಲ್ (1946), ಕೊಲ್ಹಾಪುರ ರಾಜಾರಾಮ ಕಾಲೇಜಿನ ಪ್ರಿನ್ಸಿಪಾಲ್ (1949), ಹೈದ್ರಾಬಾದ್‌ನ 'ಸೆಂಟ್ರಲ್ ಇನ್ಸ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್' ಸಂಸ್ಥೆಯ ನಿರ್ದೇಶಕ (1959), ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ (1966) ; ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡ್ ಪ್ರವಾಸ (1936), ಬೆಲ್ಜಿಯಂ ಅಂತರರಾಷ್ಟ್ರೀಯ ಕವಿ ಮೇಳದಲ್ಲಿ ಭಾರತದ ಪ್ರತಿನಿಧಿ (1959), ಪೂರ್ವ ಆಫ್ರಿಕಾ (1960), ಜಪಾನ್ ಪಿ ಇ ಎನ್ ಅಧಿವೇಶನದಲ್ಲಿ ಭಾರತದ ಪ್ರತಿನಿಧಿ (1957) : ಬಳ್ಳಾರಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (1958), ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ, ಕೇಂದ್ರ ಸಾಹಿತ್ಯ ಅಕಾದೆಮಿಯ ಉಪಾಧ್ಯಕ್ಷ ; ಪದ್ಮಶ್ರೀ ಪ್ರಶಸ್ತಿ (1961), ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಿಲಿಟ್ (1967), ಕ್ಯಾಲಿಫೋರ್ನಿಯಾದ ಪೆಸಿಫಿಕ್ ವಿಶ್ವವಿದ್ಯಾನಿಲಯ ಗೌರವ ಡಿಲಿಟ್ (1971) ; ದ್ಯಾವಾ ಪೃಥಿವೀ ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾದೆಮಿ ಬಹುಮಾನ (1961) ; 40 ಕೃತಿಗಳು : ದ್ಯಾವಾ ಪೃಥಿವೀ, ಪಯಣ, ಸಮುದ್ರ ಗೀತೆಗಳು (ಕ),

ಸಮರಸವೇ ಜೀವನ (ಕಾ), ವಿಮರ್ಶಕ ವೈದ್ಯ, ಜನ ನಾಯಕ (ನಾ), ಸಮುದ್ರದಾಚೆಯಿಂದ, ಸಮುದ್ರದೀಚೆಯಿಂದ (ಪ್ರ, ನಾ), ಸಾಹಿತ್ಯದಲ್ಲಿ ಪ್ರಗತಿ, ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು, ನವ್ಯತೆ ಹಾಗೂ ಕಾವ್ಯ ಜೀವನ (ವಿಮ), ಜೀವನ ಪಾಠಗಳು, ಚೆಲುವಿನ ನಿಲವು, (ಪ್ರ) ಇಂಗ್ಲಿಷಿನಲ್ಲೂ ಕೃತಿ ರಚನೆ ಮಾಡಿದ್ದಾರೆ.

ಮೀರಾ ಕಾಟೇಜ್ ರಾಜಮಹಲ್ ವಿಸ್ತರಣ ಬೆಂಗಳೂರು



ಗೋಕುಲನಾಥ್ ಕೃಷ್ಣರಾವ್
ಜ 10-1-1949

ಮೈಸೂರು ; ಕೆ. ಎಂ. ಕೃಷ್ಣರಾವ್–ಮಂಜುಳ ; ಎಂ.ಎ. ಬೆಂ ವಿ. ಪಿ.ಎಚ್‌ಡಿ. (ಶ್ರೀ ವಿಜಯ ದಾಸರು ಜೀವನ ಮತ್ತು ಕೃತಿಗಳ ಸಮೀಕ್ಷೆ) ಮೈ ವಿ ವಿ; ಕನ್ನಡ ಉಪನ್ಯಾಸಕ, ಆಚಾರ್ಯ ಪಾಠ ಶಾಲಾ ಕಲಾವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಬೆಂಗಳೂರು ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ; 4 ಕೃತಿಗಳು : ಶ್ರೀ ವಿಜಯದಾಸರ ಜೀವನ ಮತ್ತು ಕೃತಿಗಳ ಸಮೀಕ್ಷೆ, ಶ್ರೀ ಜಗನ್ನಾಥದಾಸರು, ಶ್ರೀ ವಿಜಯದಾಸರು, ಶ್ರೀ ಮೋಹನದಾಸರು ಮತ್ತು ಶ್ರೀ ಗೋಪಾಲದಾಸರು

467 5ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು 560 010

ಗೋಖಲೆ, ಭಾಸ್ಕರ ಗೋವಿಂದರಾವ
ಜ 20-1-1907



ಬೆಳಗಾವಿ ; 4 ಗಂ 1 ಹೆ ಮಕ್ಕಳು ; ಪ್ರಾ ಗದಗ, ಮಾ ಕಾರವಾರ, ಪ್ರೌ ಸಾಂಗಲಿ ಬಿ.ಎಸ್‌ಸಿ., ಎಲ್.ಎಲ್.ಬಿ. ; ವಕೀಲವೃತ್ತಿ ; 1930 ರಿಂದ ಪಂಚಾಯತ್ ರಾಜ್ಯ ತರಬೇತಿ ಕೇಂದ್ರ ಧಾರವಾಡದಲ್ಲಿ ಶಿಕ್ಷಕ ಮತ್ತು ಪ್ರಾಚಾರ್ಯ ; ಕರ್ನಾಟಕ ವಿದ್ಯಾವರ್ಧಕ ಸಂಘ, ಗದಗಿನ ವಿದ್ಯಾದಾನ ಸಮಿತಿ, ಗಾಂಧೀ ಶಾಂತಿ ಪ್ರತಿಷ್ಠಾನದ ಸದಸ್ಯ, ಕೆಲವು ಕಾಲ ಹೊಸ ಬಾಳು ಮಾಸ ಪತ್ರಿಕೆಯ ಸಂಪಾದಕ ; 5 ಕೃತಿಗಳು : ಭಾರತೀಯ ಸಂಸ್ಕೃತಿ, ಸೊಗಸಿನ ಕತೆ, ನನ್ನ ಸಮಾಚಾರ (ಅನು)

'ಗೀತಗೋವಿಂದ' ಧಾರವಾಡ



ಗೋಖಲೆ, ಸುಧೀರ ಭಾಸ್ಕರ
ಜ 13-3-1939

ಹುಬ್ಬಳ್ಳಿ ; ಭಾಸ್ಕರ ಗೋವಿಂದ ಗೋಖಲೆ–ಅನುಸೂಯಾ ; 1ಗಂ 1ಹೆ ಮಕ್ಕಳು ; ಪ್ರಾ, ಪ್ರೌ, ಬಿ.ಎ.,ಎಂ.ಎ. ಧಾರವಾಡ : ಗಣಿತ ಶಾಸ್ತ್ರದ ಅಧ್ಯಾಪಕ ; 3 ಕೃತಿಗಳು : ಯುಕ್ಲೀಡ ವಿಶ್ವದಲ್ಲಿಯ ಭೂಮಿತಿ ಹಾಗೂ ತ್ರಿಕೋನಮಿತಿ, ಬೀಜಗಣಿತ ಕಲನ ಶಾಸ್ತ್ರ ಪರಿಚಯ (ಗ ವಿ)

ಮುಸಲೇಕರರ ಮನೆ ಸ್ಟೇಷನ್ ಮಾರ್ಗ ಗುಲ್ಬರ್ಗ

ಗೋಗೇರಿ, ಮುಹಮುದಲಿ ದಸ್ತಗೀರ ಸಾಹೇಬ
ಜ 21-1-1942



ರೋಣ ತಾಲ್ಲೂಕು ಗೋಗೇರಿ : 2 ಗು 1 ಹೆ ಮಕ್ಕಳು : ಪ್ರಾ ಗೋಗೇರಿ. ಪ್ರೌ ಗಜೇಂದ್ರಗಡ, ಟಿ.ಸಿ.ಎಚ್. ಹುಬ್ಬಳ್ಳಿ ; ಶಿಕ್ಷಕ : 2 ಕೃತಿಗಳು : ಜೀವಜೇನು, ತಾಯಿಯ ಉಡಿಯಲ್ಲಿ (ಕ)

ಸಾಲೀಮಠ ಚಾಳ ನವ ಅಯೋಧ್ಯಾನಗರ ಹುಬ್ಬಳ್ಳಿ



ಗೋಣಿ, ಗುರುಸಿದ್ಧ ರುದ್ರಪ್ಪ
ಜ 27-1-1925

ಬೆಳಗಾಂ ಜಿಲ್ಲೆ ಮುಗುಟಖಾನ ಹುಬ್ಬಳ್ಳಿ; ರುದ್ರಪ್ಪ-ಮಲ್ಲವ್ವ : 2 ಗಂ ಮಕ್ಕಳು : ಪ್ರಾ ಮುಗುಟಖಾನ ಹುಬ್ಬಳಿ, ಹಿಂದಿ ಹಾಗೂ ಪ್ರಾಥಮಿಕ ಶಿಕ್ಷಕ ತರಬೇತಿ, ಕನ್ನಡ ಜಾಣ ; ಶಿಕ್ಷಕ ವೃತ್ತಿ : 4 ಕೃತಿಗಳು : ಕಿತ್ತೂರರಸಿ ಚೆನ್ನಮ್ಮ, ಶಿವಪ್ರಭಾ (ಕ), ಆದರ್ಶ ಸಮಾಜ ಸೇವಕ (ಜೀ ಚ) ಹಿಂದಿಯಲ್ಲೂ ಕೃತಿ ರಚಿಸಿದ್ದಾರೆ

ಮಾದರಿಶಾಲೆ ಕಟಕೋಳ ರಾಮದುರ್ಗ ತಾಲ್ಲೂಕ್ ಬೆಳಗಾವಿ ಜಿಲ್ಲೆ



ಗೋಪಾಲ್, ಗಿರಿಯಯ್ಯ
ಜ 15-11-1931

ಮಂಡ್ಯ ಜಿಲ್ಲೆ ಹೆಮ್ಮನಹಳ್ಳಿ ; ಗಿರಿಯಯ್ಯ–ಸಿದ್ದಮ್ಮ ; 1 ಗಂ 5 ಹೆ ಮಕ್ಕಳು ; ಪ್ರಾ ಸೋಮನಹಳ್ಳಿ,ಮಾ ಮದ್ದೂರು, ಪ್ರೌ ಬೆಂಗಳೂರು, ಎಂ.ಬಿ.ಬಿ.ಎಸ್., ಎಂ.ಎಸ್. ಮೈಸೂರು; ಮಕ್ಕಳ ಶಸ್ತ್ರಚಿಕಿತ್ಸಾ ಪ್ರಾಧ್ಯಾಪಕ ಹಾಗೂ ವಿಭಾಗ ಮುಖ್ಯ : ಇಂಗ್ಲೆಂಡ್ ಪ್ರವಾಸ (1968–69), ಸ್ಪೇಯಿನ್ (1977), ಥಾಯ್ಲೆಂಡ್ (1978), ಮೆಕ್ಸಿಕೊ (1980) ಪ್ರವಾಸ; ಕರ್ನಾಟಕ ಎಸ್ ಸಿ ಎಸ್ ಟಿ ಪದವೀಧರರ ಸಂಘ ಬೆಂಗಳೂರು ಅಧ್ಯಕ್ಷ : 3 ಕೃತಿಗಳು : ವೈದ್ಯನ ವಿದೇಶಪ್ರವಾಸ, ಮೈಸೂರಿಂದ ಮೆಕ್ಸಿಕೋಗೆ (ಪ್ರವಾ), ಚಂದಳ್ಳಿಯ ಅಸ್ಪೃಶ್ಯರು (ಕಾ)

121 ಸಾಮಗಿರಿ 4ನೇ ಮುಖ್ಯರಸ್ತೆ ಜಯನಗರ ಮೈಸೂರು 570 014

ಗೋಪಾಲ್, ಬಾಲಕೃಷ್ಣನ್, ರಾಜ
ಜ 21–10–1930

ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ; ಸಿ ಕೆ ಬಾಲಕೃಷ್ಣನ್–ಸಿ ಬಿ ಜಾನಕಿ ; 3 ಹೆ ಮಕ್ಕಳು ; ಪ್ರೌ ಚಿಕ್ಕಬಳ್ಳಾಪುರ, ಬಿ.ಎ. ಆನರ್ಸ್, ಎಂ.ಎ. ಮೈಸೂರು (ಇತಿಹಾಸ–1954), ಕಲ್ಯಾಣದ ಚಾಲುಕ್ಯರ ಒಂದು ಶತಮಾನದ ಇತಿಹಾಸ ಪ್ರೌಢ ಪ್ರಬಂಧಕ್ಕೆ ಪಿ.ಎಚ್‌ಡಿ. (1963), ಉದಕಮಂಡಲದ ಪುರಾತತ್ವ ಇಲಾಖೆಯ ಶಾಸನ ತಜ್ಞರ ಕಚೇರಿಯಲ್ಲಿ ಸಂಶೋಧನ ಸಹಾಯಕರಾಗಿ ವೃತ್ತಿ ಆರಂಭ, ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಅಧ್ಯಾಪಕ (1964). ಉಪಪ್ರಾಧ್ಯಾಪಕ (1971). ಮೈಸೂರಿನ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶಾಸನ ತಜ್ಞ (1972); ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸನ್ಮಾನ (1977), ಇತಿಹಾಸ, ಶಾಸ್ತ್ರ ಮತ್ತು ತತ್ವಕ್ಕೆ ಕನ್ನಡ ಅಧ್ಯಯನ ಸಂಸ್ಥೆಯ ಬಹುಮಾನ, ಅಖಿಲ ಭಾರತ ಇತಿಹಾಸ ಸಮ್ಮೇಳನ ಭುವನೇಶ್ವರ (ಅಧ್ಯಕ್ಷ), ಕೊಂಗುನಾಡಿನ ಇತಿಹಾಸ ಸಮ್ಮೇಳನದ ಅಧ್ಯಕ್ಷ (ತಮಿಳುನಾಡು), ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಮಿಥಿಕ್ ಸೊಸೈಟಿ, ಬೆಂಗಳೂರು ಸದಸ್ಯ ; 12 ಕೃತಿಗಳು : ಕನ್ನಡ ನಾಡಿನ ಐತಿಹಾಸಿಕ ಮಹಾಪುರುಷರು, ಪ್ರಾಚೀನ ಭಾರತದ ಚರಿತ್ರೆ, ಕಲ್ಯಾಣದ ಚಾಲುಕ್ಯರು, ವಿಜಯನಗರದ ವಾಸ್ತುಶಿಲ್ಪ

ಎಲ್ 15 ಅಧ್ಯಾಪಕರ ನಿವಾಸ ಮಾನಸಗಂಗೋತ್ರಿ ಮೈಸೂರು 570 006



ಗೋಪಾಲ್, ಮೈಸೂರು ಹಟ್ಟಿ
ಜ 3-10-1904

ಮೈಸೂರು ; ಹಟ್ಟಿ ರಂಗ ಅಯ್ಯಂಗಾರ್–ಹಟ್ಟಿ ಲಕ್ಷ್ಮಮ್ಮ ; 2 ಗಂ 4 ಹೆ ಮಕ್ಕಳು ; ಪ್ರಾ, ಪ್ರೌ, ಬಿ.ಎ. ಮೈಸೂರು, ಎಂ.ಎ., ಪಿ.ಎಚ್‌ಡಿ. (ಲಂಡನ್), ಡಿಲಿಟ್ (ಮುಂಬೈ), ಡಿ ಎಸ್ ಸಿ ಲಂಡನ್, ಅರ್ಥಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರು ಮೈ ವಿ ; ಅಮೆರಿಕಾ, ಯೂರೋಪ್, ಕೆನಡಾ, ಫ್ರಾನ್ಸ್, ಜರ್ಮನಿ, ಡೆನ್ಮಾರ್ಕ್, ಸ್ವೀಡನ್, ಸ್ವಿಡ್ಜರ್ಲೆಂಡ್, ಇಟಲಿ, ಈಜಿಪ್ಟ್, ಥೈಯ್‌ಲ್ಯಾಂಡ್, ಜಪಾನ್‌ಗಳ ಪ್ರವಾಸ ; ಸದಸ್ಯತ್ವ: ರಾಯಲ್ ಸ್ಟ್ಯಾಟಿಸ್ಟಿಕಲ್ ಸೊಸೈಟಿ,ಇನ್‌ಸ್ಟಿಟ್ಯೂಟ್ ಆಫ್ ಎಕನಾಮಿಕ್ ಹಿಸ್ಟರಿ : 1 ಕೃತಿ ; ಸಾರ್ವಜನಿಕ ವೆಚ್ಚ

2629 ದೇವಸ್ಥಾನದ ರಸ್ತೆ ವಿ ವಿ ಮೊಹಲ್ಲ ಮೈಸೂರು-2

ಗೋಪಾಲಕೃಷ್ಣ, ಪಾಲೆಪ್ಪಾಡಿ [ಕೃಷ್ಣನಲಿಂಕ]
ಜ 7-1-1912



ಪಾಲೆಪ್ಪಾಡಿ ದ ಕ ; ಗಣಪಯ್ಯಭಟ್ಟ-ತಿರುಮಲೇಶ್ವರಿ ; 1 ಗಂ 3 ಹೆ ಮಕ್ಕಳು ; ಎಂ.ಎ., ಬಿ.ಟಿ.ಎಲ್. ವಿದ್ವಾನ್, ವಿದ್ಯಾವಿಶಾರದ್ : ನಿವೃತ್ತ ಕನ್ನಡ ಪ್ರಾಧ್ಯಾಪಕ ಸೈಂಟ್ ಆಗ್ನೆಸ್ ಕಾಲೇಜು ಮಂಗಳೂರು ; 10 ಕೃತಿಗಳು : ಸ್ವ್ನ ಪಾಡುಗಳು, ಧ್ಯಾನರಾಮಾಯಣ, ಈರೇಳು ಕಥೆಗಳು, ಭಾರತದ ಅಡಿಕೆ ಬೆಳೆಯ ಸರ್ವೆ

3-401 ಬಿ ಟಿ ಗಾರ್ಡನ್ ಕದ್ರಿ ಮಂಗಳೂರು



ಗೋಪಾಲ ಶ್ರೀವತ್ಸ, ಕಾಡುಕೊತ್ತನಹಳ್ಳಿ ಶ್ರೀಕಂಠಯ್ಯ
ಜ 12-10-1936

ಮಂಡ್ಯ ಜಿಲ್ಲೆ ಕಾಡುಕೊತ್ತನಹಳ್ಳಿ ; ಶ್ರೀಕಂಠಯ್ಯ-ಲಕ್ಷ್ಮೀದೇವಮ್ಮ ; 3 ಗಂ 1 ಹೆ ಮಕ್ಕಳು ; ಹಿಂದಿ ರತ್ನ ; ಶಿಕ್ಷಕ ವೃತ್ತಿ ; ಕಿರಣಸಾಹಿತ್ಯ ಸಂಘ, ಮಂಡ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 4 ಕೃತಿಗಳು : ಪೃಥ್ವೀಸಿಂಹನ ಸಿಂಹಸಾಹಸ, ಯಾರಿವನು,

ಎಂಥ ಪ್ರತೀಕಾರ (ಬಾ) ; ಹವ್ಯಾಸ : ಅಂಚೆಚೀಟಿ ಸಂಗ್ರಹ, ಸಾಹಿತಿಗಳ ಭಾವಚಿತ್ರ ಸಂಗ್ರಹ

ಅಧ್ಯಾಪಕ ಸರಕಾರಿ ಉನ್ನತ ಪ್ರಾಥಮಿಕ ಶಾಲೆ ದೊಡ್ಡರಸಿನಕೆರೆ ಮದ್ದೂರು ತಾಲ್ಲೂಕು



ಗೋಪಿನಾಥ್, ಬೆಂಗಳೂರು ರಾಘವೇಂದ್ರ ಮೂರ್ತಿ [ಚಿರಂಜೀವಿ]
ಜ 5-12-1939

ಬೆಂಗಳೂರು : ಎಲ್ ರಾಘವೇಂದ್ರಮೂರ್ತಿ– ಗಿರಿಜಾಬಾಯಿ ; 2 ಗಂ ಮಕ್ಕಳು : ಪ್ರಾ. ಪ್ರೌ ಪತ್ರಿಕೋದ್ಯಮ ಡಿಪ್ಲೊಮಾ ಬೆಂಗಳೂರು; ಬೆಂಗಳೂರು ವಿಮಾನ ಕಾರ್ಖಾನೆಯಲ್ಲಿ ಏರೋ ಇಂಜಿನ್ಸ್ ವಿಭಾಗದಲ್ಲಿ ಉದ್ಯೋಗ ; ಅಭಿರುಚಿ ಲೇಖಕರ ಸಹಕಾರ ಪ್ರಕಾಶನದ ಸಂಚಾಲಕ ; 4 ಕೃತಿಗಳು : ಋಣ (ಸ ಕ), ಸಿ ಕೆ ವೆಂಕಟರಾಮಯ್ಯ, ಗೇಂದಾಲಾಲ್ ದೀಕ್ಷಿತ್ (ಬಾ ಪಾ), ಆಂಡಾಳ್ (ಅನು)

84 5ನೇ ಬ್ಲಾಕ್ ರಾಜಾಜಿನಗರ 560 010 ಬೆಂಗಳೂರು



ಗೋವಿಂದಯ್ಯ, ಗೋವಿಂದೇಗೌಡ
ಜ 2-10-1946

ಮಂಡ್ಯಜಿಲ್ಲೆ ಕೋರೇಗಾಲ : ಗೋವಿಂದೇಗೌಡ– ವೆಂಕಟಮ್ಮ ; ಸಿ ಲಿಬ್, ಹಿಂದಿ ಮಾಧ್ಯಮ, ಗ್ರಂಥಾಲಯ ಸಹಾಯಕ ಭಾರತೀ ಹೈಸ್ಕೂಲ್ ಕಾಳಮುದ್ದನ ದೊಡ್ಡಿ ; 1 ಕೃತಿ : ಪ್ರಾರ್ಥನೆ (ಕ)

ಕೋರೇಗಾಲ ಮಾದಹಳ್ಳಿ ಅಂಚೆ ಮಳವಳ್ಳಿ ತಾಲ್ಲೂಕ್ ಮಂಡ್ಯ ಜಿಲ್ಲೆ



ಗೋವಿಂದರಾಜ, ಮೈಸೂರು ವೆಂಕಟಸ್ವಾಮಿ
[ಎಂ ವಿ ಜಿ ರಾಜ]
ಜ 15-11-1932

ಚಿಕ್ಕಮಗಳೂರು ; ವೆಂಕಟಸ್ವಾಮಿ–ಲಕ್ಷ್ಮಮ್ಮ ; ಪ್ರಾ ಮಾ ಪ್ರೌ ಇಂಟರ್ ಮೀಡಿಯೆಟ್ ಚಿಕ್ಕಮಗಳೂರು ; ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನ ಮೇಲ್ವಿಚಾರಕ ; ಸ್ಕೌಟ್ ಸಂಘದ ಸದಸ್ಯ ; 4 ಕೃತಿಗಳು : ಮಲೆನಾಡ ಕುಸುಮ, ಉಪಾಯನ, ಯೋಧ ಗೀತ (ಕ), ಹಳ್ಳಿಯ ಮುತ್ತುಗಳು (ಜಾ)

2296 ಸಾಡೇರಸ್ತೆ 4ನೇ ಅಡ್ಡಹಾದಿ ಮಂಡಿಮೊಹಲ್ಲಾ ಮೈಸೂರು

ಗೋವಿಂದರಾಜು, ಬೋರಸಂದ್ರ ಹೊನ್ನಪ್ಪ
ಜ 11-12–1947

ತುಮಕೂರು ಜಿಲ್ಲೆ ಬೋರಸಂದ್ರ ; ಹೊನ್ನಪ್ಪ–ಚಿಕ್ಕೆಂಚಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ರಂಗನಾಥಪುರ, ಮಾ ಇಟಕ ದಿಬ್ಬನಹಳ್ಳಿ, ಪ್ರೌ ಸಿದ್ಧಗಂಗೆ, ಬಿ.ಎ. ಎಂ.ಎ. ಬೆಂಗಳೂರು ವಿಶ್ವವಿದ್ಯಾಲಯ, ಸಾರ್ವಜನಿಕ ಸಂಪರ್ಕಾಧಿಕಾರಿ, ಎಚ್ ಎಂ ಟಿ ಗಡಿಯಾರ ಕಾರ್ಖಾನೆ ಬೆಂಗಳೂರು ; ಕನ್ನಡ ಕತೆಗಾರರ ಸಂಘದ ಖಜಾಂಚಿ, 'ಸುದ್ದಿ ಸಾರ'ದ ಸಂಪಾದಕ ; 3 ಕೃತಿಗಳು : ಕೃಷಿ, ಗುಮ್ಮ (ಕ) ಸೊಗಡು (ಸಂ); ಹವ್ಯಾಸ ; ಚಿತ್ರಕಲೆ, ಶಾಸ್ತ್ರೀಯ ಸಂಗೀತ, ನಾಟಕ

182 ಜೋಗನಹಳ್ಳಿ ರಾಜಾಜಿನಗರ 2ನೇ ವಿಭಾಗ ಬೆಂಗಳೂರು 560 010



ಗೋವಿಂದರಾಜುಲು, ಬೋಗಾರಂ ವೆಂಕಟಾಚಲಪತಿ ಶೆಟ್ಟಿ
ಜ 29-7-1925

ಬೆಂಗಳೂರು ಜಿಲ್ಲೆ ರಾಮನಗರಂ; 3 ಗಂ ಮಕ್ಕಳು; ಪ್ರಾ ಚನ್ನಪಟ್ಟಣ, ಬಿ.ಎಸ್ಸಿ. ಆನರ್ಸ್ (ಚಿನ್ನದ ಪದಕ) 1947, ಎಂ.ಎಸ್ಸಿ. (1950), ಪಿ.ಎಚ್‌ಡಿ. (1959), ಪ್ರಾಧ್ಯಾಪಕ ಭೂವಿಜ್ಞಾನ ಮೈ ವಿ ವಿ ; ಲಂಡನ್ ಪ್ರವಾಸ ; 'ಅಗ್ನಿಶಿಲೆ' ಕೃತಿಗೆ ಕನ್ನಡ ಅಧ್ಯಯನ ಸಂಸ್ಥೆ ಬಹುಮಾನ ; 5 ಕೃತಿಗಳು : ಅಗ್ನಿಶಿಲೆಗಳು, ಭಾರತದ ಖನಿಜಗಳು (ವಿ), ವಿಜ್ಞಾನ ಮಹರ್ಷಿಗಳು (ಜೀ)

ಗೋವಿಂದರಾಯ ಕೃಷ್ಣಗಿರಿ [ಗೋರಾ]
ಜ 11-4-1925

ಪಡುಬಿದ್ರೆ ದ ಕ ; ಎಸ್ ಕೃಷ್ಣರಾಯ–ಜಿ ಗಿರಿಜಮ್ಮ ; 3 ಗಂ 1 ಹೆ ಮಕ್ಕಳು ; ಹಿಂದಿ ವಿಶಾರದ ; ರಾಷ್ಟ್ರಬಂಧು ದಿನಪತ್ರಿಕೆ ಸಂಪಾದಕ ; ಬೆಂಗಳೂರಿನ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ (1973) ; 2 ಕೃತಿಗಳು : ಬಾಪೂರವರ ಅಮರ ಕಥೆ, ತಪಸ್ವಿನಿ

ಕೃಷ್ಣಗಿರಿ ವಿರಾಜಪೇಟೆ



ಗೋವಿಂದಾಚಾರ್ಯ, ಚಿಕ್ಕೇರೂರು
ಜ 17-5-1898

ಬಳ್ಳಾರಿ ಜಿಲ್ಲೆ ಚಿಕ್ಕೇರೂರು ; ಪಂಡಿತ ರಾಜಾ ಬಂಡಾಚಾರ್ಯ–ರುಕ್ಮಿಣೀಬಾಯಿ ; ಎಸ್.ಎಸ್.ಎಲ್.ಸಿ. ; ರೆವಿನ್ಯೂ ಇಲಾಖೆಯಲ್ಲಿ ಮೂವತ್ತ ನಾಲ್ಕು ವರ್ಷ ಸೇವೆಯ ನಂತರ ನಿವೃತ್ತಿ ; ಗುರುರಾಜ ಪ್ರಿಯ, ಸರಸಕವಿ ಪ್ರಶಸ್ತಿ ; ಹರಪನಹಳ್ಳಿಯ ಸನಾತನ ಧರ್ಮ ಸಂಜೀವಿನೀ ಸಭಾ ಅಧ್ಯಕ್ಷ ; 14 ಕೃತಿಗಳು : ಶ್ರೀ ಸತ್ಯಜ್ಞಾನತೀರ್ಥ ಚರಿತಾಮೃತ, ಶ್ರೀ ರಘೋತ್ತಮತೀರ್ಥ ಚರಿತಾಮೃತ, ಹರಪನಹಳ್ಳಿ ರಾಯರ ಮಠದ ಚರಿತ್ರೆ, ಶ್ರೀ ಭಗವಂತರಾಯರ ಚರಿತ್ರೆ, ಶ್ರೀ ಸರ್ವಮೂಲ ಪ್ರವೇಶಿನೀ

ಕೂಡ್ಲಿಗಿ ಬಳ್ಳಾರಿ ಜಿಲ್ಲೆ



ಗೌರಮ್ಮ, ಕವಡಿಕೆ ಬಸವಯ್ಯ
ಜ ಆಗಸ್ಟ 1922

ಚಳ್ಳಕೆರೆ ; ಬಿ ಹನುಮಂತಯ್ಯ-ಶಾಂತಮ್ಮ ; 1 ಗಂ 3 ಹೆ ಮಕ್ಕಳು ; ಎಸ್.ಎಸ್.ಎಲ್.ಸಿ. ಹಿಂದಿ ರಾಷ್ಟ್ರಭಾಷಾ ; ಗೃಹಿಣಿ ; ಮಾತೃ ಮಂಡಲಿ, ಚಿನ್ಮಯ ಮಿಷನ್ ಸದಸ್ಯೆ ; 5 ಕೃತಿಗಳು : ಭಗ್ನ ಹೃದಯಿಯ ಶಾಪ, ಆರ್ಯಾವರ್ತದ ಮಂಗಳ ಲಕ್ಷ್ಮಿಯರು, ದೇಶ ವಿದೇಶದ ಜಾನಪದ ಕಥೆಗಳು ; ಪ್ರವಾಸ : ಕಸೂತಿ

ಜ್ಞಾನಾಮೃತ ವಿ ವಿ ಮೊಹಲ್ಲ ಮೈಸೂರು



ಗೌರಮ್ಮ, ಭುಜಂಗಾರಾಧ್ಯ
ಜ 1–10–1912

ಮೈಸೂರು ; ಭುಜಂಗಾರಾಧ್ಯ–ಪಾರ್ವತಮ್ಮ ; ಪ್ರಾ ಮಾ ಪ್ರೌ ಪಂಡಿತ ಪರೀಕ್ಷೆ ಮೈಸೂರು ; ಪ್ರೌಢಶಾಲೆಯ ಉಪಾಧ್ಯಾಯಿನಿ ; ಅಕ್ಕನ ಬಳಗದ ಗೌರವ ಕಾರ್ಯದರ್ಶಿ, ಆರ್ಯ ಭಗಿನೀ ಸಮಾಜದ ಅಧ್ಯಕ್ಷಿಣಿ ; 2 ಕೃತಿಗಳು : ಕ್ಷಾತ್ರ ಬ್ರಹ್ಮರ್ಷಿ ಮತ್ತು ಬ್ರಾಹ್ಮಣ ಯೋಧ, ಕುಮಾರ ವಿಜಯ

ನಂ 10 ಶಂಕರಮಠದ ರಸ್ತೆ ಎರಡನೇ ತಿರುವು ಕೋಟೆ ಮೊಹಲ್ಲಾ ಮೈಸೂರು 570 004



ಗೌರು, ಎಸ್ ಭಟ್ [ಗೌರು ಮಾ ಭ ಪೆರ್ಲ]
ಜ 28–11–1934

ಕೊಡಗು ಜಿಲ್ಲೆಯ ವಿರಾಜಪೇಟೆ ; ಎಂ ಗಣಪತಿ–ಎಂ ಅಕ್ಕಮ್ಮ : ಪ್ರಾ ಪ್ರೌ ವಿರಾಜಪೇಟೆ, ಹಿಂದಿ ರಾಷ್ಟ್ರಭಾಷಾ ಪ್ರವೀಣ. ಬಿ.ಎ., ಎಂ.ಎ.. (ಹಿಂದಿ) ಎಂ.ಎ. (ಸಮಾಜಶಾಸ್ತ್ರ) ; 1952–65 ಹಿಂದಿ ಅಧ್ಯಾಪಕಿ, 1971ರಿಂದ ರಾಯಚೂರಿನ ಸೋಮಾ ಸುಭದ್ರಾ ರಾಮನಗೌಡ ಮಹಿಳೆಯರ ಕಲಾ ಮಹಾ ವಿದ್ಯಾಲಯದಲ್ಲಿ ಹಿಂದಿ ಪ್ರಾಧ್ಯಾಪಕಿ ; ಒಂದು ಕೃತಿ : ನನ್ನ ಪತಿ ನನ್ನ ದೇವರು (ಅನು); ಹವ್ಯಾಸ : ಅಂಚೆ ಚೀಟಿ ಸಂಗ್ರಹ ; ದೇಶ ವಿದೇಶಗಳ ನಾಣ್ಯಗಳ ಸಂಗ್ರಹ, ಫೋಟೋಗ್ರಫಿ, ಪ್ರವಾಸ

ಎಸ್ ಆರ್ ಜಿ ಮಹಿಳೆಯರ ಆರ್ಟ್ಸ್ ಕಾಲೇಜು ಸ್ಟೇಷನ್ ರೋಡು ರಾಯಚೂರು

ಘಟಪಣದಿ, ಶಂಕರ ಗೋಪಾಲಪ್ಪಾ
ಜ 5-5–1939

ಬೆಳಗಾವಿ ಜಿಲ್ಲೆ ಬೆಲ್ಲದ ಬಾಗೇವಾಡಿ ; ಗೋಪಾಲಪ್ಪಾ ನಿಂಗಪ್ಪಾ ಘಟಪಣದಿ–ಸಾವಿತ್ರಿದೇವಿ ; 2 ಗಂ ಮಕ್ಕಳು ; ಎಂ.ಎ. (ಇತಿಹಾಸ) ಧಾರವಾಡ ; ಕರ್ನಾಟಕ

ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕ; 2 ಕೃತಿಗಳು: ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು, ಆಧುನಿಕ ಯೂರೋಪ್

ಇತಿಹಾಸ ಪ್ರಾಧ್ಯಾಪಕ ಕರ್ನಾಟಕ ಕಾಲೇಜು ಧಾರವಾಡ



ಘಾಣೇಕರ, ಭಾಲಚಂದ್ರ ವೆಂಕಟೇಶ
ಜ 3-11-1910

ಗದಗ ತಾಲ್ಲೂಕು ಜಂತ್ಲಿ: 2 ಗಂ 2 ಹೆ ಮಕ್ಕಳು: ಮೆಟ್ರಿಕ್ ಪರೀಕ್ಷೆ; ಸ್ವಾತಂತ್ರ್ಯ ಹೋರಾಟಕ್ಕಾಗಿ ತಾಮ್ರ ಪತ್ರ ಪ್ರಶಸ್ತಿ: ಧಾರವಾಡ ನಗರ ಸಭೆಯ ಮಾಜಿ ಉಪಾಧ್ಯಕ್ಷ, ಕರ್ನಾಟಕ ವಿದ್ಯಾವರ್ಧಕ ಸಂಘದ ಮಾಜಿ ಕಾರ್ಯಾಧ್ಯಕ್ಷ; 28 ಕೃತಿಗಳು: ನಾರೀರತ್ನ, ತ್ಯಾಗದಗುಡಿ (ಸ ಕ), ಗಾಂಧೀ ಟೋಪಿ, ಬಡವರ ರೊಟ್ಟಿ (ನಾ), ಗುಡಗುಡಿಯ ರಹಸ್ಯ, ಲೋಕಮಾನ್ಯ ಟಿಳಕ (ಬಾ ವಾ), ಚಾಟಿ ಚುಟುಕುಗಳು (ಕ), ಶ್ಯಾಮನತಾಯಿ (ಅನು), ಪ್ರಾರ್ಥನಾ ಮಂಜರಿ (ಸಂ), ನನ್ನ ಜೀವನದ ಹೋರಾಟ (ಆ ಕ)

ಸಮಾಜ ಪುಸ್ತಕಾಲಯ ಶಿವಾಜಿ ಬೀದಿ ಧಾರವಾಡ



ಘಾಣೇಕರ, ಮನೋಹರ ಭಾಲಚಂದ್ರ
[ಮನೋಹರ, ಕಾವ್ಯಪ್ರೇಮಿ]
ಜ 2-8-1925

ಬನವಾಸಿ ಉ ಕ ಜಿಲ್ಲೆ; ಭಾಲಚಂದ್ರ ವೆಂಕಟೇಶ ಘಾಣೇಕರ–ಸರಸ್ವತಿ; 1 ಗಂ 1 ಹೆ ಮಕ್ಕಳು; ಪ್ರಾ, ಮಾ, ಬಿ.ಎ. ಧಾರವಾಡ ಬಿ.ಕಾಂ. ಹುಬ್ಬಳ್ಳಿ; 25 ಕೃತಿಗಳು: ತುಷಾರ ಮಣಿ, ಠಕ್ಕರ ಗುರು, ಗೌತಮ (ಬಾ ವಾ), ಪಂಪಭಾರತಂ, ಚತುರಾಸ್ಯ ನಿಘಂಟು (ಸಂ), ಸ್ವಾಮಿ, ಅನಾಥ ಬಾಲ್ಯಕಥನ (ಅನು): ಹವ್ಯಾಸ; ಚಿತ್ರಕಲೆ, ತೋಟಗಾರಿಕೆ

ಸಮಾಜ ಪುಸ್ತಕಾಲಯ ಧಾರವಾಡ 580 001



ಘೂಟೆ. ಎಂ ರಮಾನಂದ [ರಮಾನಂದ]

ಜ 2-2-1919

ಮಂಗಳೂರು ; ಚಿಂತಾಮಣಿ ವಿಷ್ಣು ಘೂಟೆ–ಲಕ್ಷ್ಮೀಬಾಯಿ ; 2 ಗಂ 3 ಹೆ ಮಕ್ಕಳು : ಆಯುರ್ವೇದ ವೈದ್ಯ ; 2 ಕೃತಿಗಳು : ಕಾನ್ವೆಂಟ್ ಗರ್ಲ್, ಸೀತಾರತ್ನ (ಸ ಕ)

ಶ್ರೀಚಿಕಿತ್ಸಾನಿಲಯ ಮಂಗಳೂರು 575 003



ಘೂಡುಖಾನ ಮಖ್ತುಂಖಾನ

ಜ 9-1-1898

ಧಾರವಾಡ ಜಿಲ್ಲೆ ಕಲಘಟಗಿ : 19 ಮಕ್ಕಳು : ಶಿಕ್ಷಕನಾಗಿ ನಿವೃತ್ತಿ : ಮೋಟಾರು ಮಹಿಮೆ ಕೃತಿಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ಬಹುಮಾನ : 8 ಕೃತಿಗಳು : ಮೋಟಾರು ಮಹಿಮೆ, ಬಡತನದ ಕಿಚ್ಚು, ಪೂರ್ಣಿಮೆ ಚಂದ್ರ

ಹಳೇ ಹುಬ್ಬಳ್ಳಿ ಧಾರವಾಡ ಜಿಲ್ಲೆ



ಚಂದ್ರಕಲಾ. ಕೊಂಡಾಣ ವಾಮನ [ಚಂದ್ರಕಲಾ ನಂದಾವರ]

ಜ 21-11-1950

ಮಂಗಳೂರು ; ಕೊಂಡಾಣ ವಾಮನ-ಸುಂದರಿ ; ಎಂ.ಎ.. (ಕನ್ನಡ) ರಾಷ್ಟ್ರಭಾಷಾ ಹಿಂದೀ ಪ್ರವೀಣ; ಕನ್ನಡ ಉಪನ್ಯಾಸಕಿ ಗಣಪತಿ ಜ್ಯೂನಿಯರ್ ಕಾಲೇಜು ಮಂಗಳೂರು : ಮಂಗಳೂರು ಕನ್ನಡ ಸಂಘ, ಕೋಟೆಕಾರು ಸಾಹಿತ್ಯಸಂಘದ ಸದಸ್ಯೆ ; 1 ಕೃತಿ : ಪ್ರಾ॥ ಎಂ ಮರಿಯಪ್ಪ ಭಟ್ಟ (ಜೀ)

ಕೋಟೆಕಾರು ಅಂಚೆ ದ ಕ 574 152



ಚಂದ್ರಕಲಾ, ಬೆಂಗಳೂರು ಸಿದ್ದಪ್ಪ
ಜ 21-3-1931

ಬೆಂಗಳೂರು ; ಜಿ ಆರ್ ಸಿದ್ದಪ್ಪ-ಭದ್ರಮ್ಮ ; 1 ಗಂ ಮಗು ; ಸೀನಿಯರ್ ಇಂಟರ್, ಹಿಂದಿ ವಿಶಾರದ, ಸಂಗೀತ ವಿದ್ವತ್ ; ಉಪಾಧ್ಯಾಯಿನಿ ; ಸಂಗೀತರತ್ನ ಬಿರುದು ; ಕರ್ನಾಟಕ ಗಾನಕಲಾ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯೆ ; 9 ಕೃತಿಗಳು : ಬಿಸಿಲು ನೆರಳು, ಸಂಗೀತದ ಸುಳಿಯಲ್ಲಿ (ಕಾ), ಕಾಂಚನದ ಕಮರು (ನಾ), ರಸರಾಗ ರಸಿಕೆ, ಕವಿತಾ ಕಿರಣ (ಕ), ಸಂಗೀತದ ಬಾಲ ಪಾಠಗಳು, ಝೇಂಕಾರಿ (ಕಲೆ), ನಿಜಗುಣ ಸ್ವರ ಸರಿತಾ ; ಹವ್ಯಾಸ : ಕಸೂತಿ, ತೋಟಗಾರಿಕೆ, ಅಭಿನಯ, ನಿರ್ದೇಶನ

ನಂ 233 ಉತ್ಕರ್ಷ ರಾಜಾಜಿನಗರ ಬೆಂಗಳೂರು 560 100

ಚಂದ್ರಯ್ಯ, ಬಿದಲೋಟಿ ನಂಜುಂಡಾರಾಧ್ಯ
ಜ 13-9-1936



ತುಮಕೂರು ತಾಲೂಕು ಕೆಸ್ತೂರು ; ನಂಜುಂಡಾರಾಧ್ಯ-ಅಕ್ಕಹೊನ್ನಮ್ಮ ; 3 ಗಂ 1 ಹೆ ಮಕ್ಕಳು; ಪ್ರಾ ಕೆಸ್ತೂರು, ಮಾ ಬಸಪ್ಪನ ಪಾಳ್ಯ, ಪ್ರೌ ಕೊರಟಗೆರೆ, ಬಿ.ಎ. ಎಂ.ಎ. (ಕನ್ನಡ) ಮೈಸೂರು; ಹಿಂದಿ ರಾಷ್ಟ್ರಭಾಷಾ ಪ್ರವೀಣ, ಸಂಸ್ಕೃತ ಕೋವಿದ; ಉಪಪ್ರಾಧ್ಯಾಪಕ ಮೈ ವಿ ; ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ, ಅಂತರರಾಷ್ಟ್ರೀಯ ದ್ರಾವಿಡ ಭಾಷಾ ವಿಜ್ಞಾನ ಸಂಸ್ಥೆ ಆಜೀವ ಸದಸ್ಯ ; ಬಸವ ಪವಾಡ ಮತ್ತು ಸಿದ್ಧೇಶ್ವರ ಪುರಾಣ ಗ್ರಂಥಗಳಿಗೆ ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ ; 10 ಕೃತಿಗಳು ; ಧ್ರುವಸ್ವಾಮಿನಿ, ಬಸವ ಪವಾಡ, ರಾಜ್ಯಶ್ರೀ (ಅ), ಸಿದ್ಧೇಶ್ವರ ಪುರಾಣ (ಸಂ), ಮಹಾದೇವಿಯಕ್ಕನ ಚರಿತ ಸಂಗ್ರಹ (ಸಂಗ್ರ), ಚಿತ್ರಲೇಖಾ, ಆಲದ ನೆರಳು (ಅನು) ; ಹವ್ಯಾಸ : ಉತ್ತಮ ಪುಸ್ತಕಗಳ ಪ್ರಕಟಣೆ, ಸಾಹಿತ್ಯಕ ಚಟುವಟಿಕೆ

712 16ನೇ ಮೈನ್ ಸರಸ್ವತಿಪುರಂ ಮೈಸೂರು 570 009



ಚಂದ್ರರಾಜಸೆಟ್ಟಿ, ತೋಡಾರು
ಜ 13-2-1908

ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ತೋಡಾರು : ತಂದೆ ಪಾರ್ಶ್ವಸೆಟ್ಟಿ-ರತ್ನಮಾಲೆ ಅಮ್ಮ : ಏಳನೆ ತರಗತಿ : ಶಿಕ್ಷಕರಾಗಿ ನಿವೃತ್ತಿ : ಯಕ್ಷಗಾನ ಸಂಘದ ಸದಸ್ಯ : 20 ಕೃತಿಗಳು : ವಿಧಿ ಮೀರಿದ ಮನೆ (ಕಾ) ಅಕ್ರಮ ಪಾತ್ರೆ (ನಾ) ಜಗಕ್ಕೆ ಎಚ್ಚರಿಕೆ (ಪ ಕ) ಚಂದನ ಮಾಲಾ (ನಾ), ಮಂಗಳೂರಿಂದ ಮಧುರೆಗೆ (ಪ್ರ ಕ), ಕನ್ನಡ ಬರಹಗಾರರ ಬಗೆಗೆ ಸಾಮಾಜಿಕ ಚಿತ್ರ ಚಾರಿತ್ರೆ ಸಂಗ್ರಹ

ಸಿದ್ಧಕಟ್ಟೆ ಅಂಚೆ ದ ಕ ಜಿಲ್ಲೆ

ಚಂದ್ರಶೇಖರ ತಾಳ್ಯ
ಜ 18-5-1949

ಹೊಳಲ್ಕೆರೆ ತಾಲ್ಲೂಕು ತಾಳ್ಯ : 1 ಗಂ ಮಗು ; ಎಂ.ಎ. (ತತ್ವಶಾಸ್ತ್ರ) ವ್ಯಾ ವಿ : ಹೊಳಲ್ಕೆರೆ ಕೆ ಎಸ್ ಜ್ಯೂನಿಯರ್ ಕಾಲೇಜಿನಲ್ಲಿ ಅಧ್ಯಾಪಕ ; ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ಸದಸ್ಯ, 'ಬಯಲು' ತ್ರೈಮಾಸಿಕದ ಸಹ ಸಂಪಾದಕ ; 1 ಕೃತಿ : ಹೊಸದಿಕ್ಕಿನೆಡೆಗೆ (ಸಂ)

ಅಧ್ಯಾಪಕ ಕೆ ಎಸ್ ಜೂನಿಯರ್ ಕಾಲೇಜು ಹೊಳಲ್ಕೆರೆ


ಚಂದ್ರಶೇಖರಪ್ಪ. ಚಿನಿವಾರ್ ಬಸವಶೆಟ್ಟಪ್ಪ
ಜ 1-4-1930



ತುಮಕೂರು ಜಿಲ್ಲೆ ಗುಬ್ಬಿ : ಬಸವ ಶೆಟ್ಟಪ್ಪ-ಗಂಗಮ್ಮ ; 1 ಗಂ 2 ಹೆ ಮಕ್ಕಳು : ಪ್ರಾ ಮಾ ಗುಬ್ಬಿ, ಪ್ರೌ ತುಮಕೂರು, ಬಿ.ಎ. ಆನರ್ಸ್, ಎಂ.ಎ. (ಅರ್ಥಶಾಸ್ತ್ರ) ವ್ಯಾ ವಿ : ಹೊಸಪೇಟೆ ವಿಜಯನಗರ ಕಾಲೇಜಿನ ಪ್ರಿನ್ಸಿಪಾಲ್ : ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ್ದಕ್ಕೆ ಪ್ರೊ|| ಎನ್ ಎಸ್ ಸುಬ್ಬರಾವ್ ಪ್ರಶಸ್ತಿ ; ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯ ; 3 ಕೃತಿಗಳು : ಅರ್ಥಶಾಸ್ತ್ರ ಪರಿಚಯ, ಅರ್ಥಶಾಸ್ತ್ರ

ತತ್ವನಿರೂಪಣೆ, ಬೆಲೆ ಸಿದ್ಧಾಂತ ಮತ್ತು ಅದರ ಉಪಯೋಗಗಳು (ಅನು)

ಪ್ರಿನ್ಸಿಪಾಲ್ ವಿಜಯನಗರ ಕಾಲೇಜು ಹೊಸಪೇಟೆ 583 201 ಬಳ್ಳಾರಿ ಜಿಲ್ಲೆ



ಚಂದ್ರಶೇಖರಯ್ಯ, ಕಂದವಾಡಿಮಠದ ಶಿದ್ದಯ್ಯ

ಜ 16-10-1931

ಶಿವಮೊಗ್ಗ ಜಿಲ್ಲೆ ರಾಜಗೊಂಡನಹಳ್ಳಿ ; ಎಂ ಶಿದ್ದಯ್ಯ-ಚನ್ನಬಸಮ್ಮ ; 2 ಹೆ 3 ಗಂ ಮಕ್ಕಳು; ಪ್ರಾ ರಾಜಗೊಂಡನಹಳ್ಳಿ, ಮಾ ಚನ್ನಗಿರಿ, ಪ್ರೌ ದಾವಣಗೆರೆ, ಬಿ.ಎಸ್ಸಿ. ಬೆಂಗಳೂರು;ಜಿಲ್ಲಾಭಿವೃದ್ಧಿ ಸಹಾಯಕ ; 6 ಕೃತಿಗಳು : ಮಧುರಯಾನ, ದಾಂಧಲೆ (ಕ), ಔತಣ (ನಾ), ರುದ್ರಭೂಮಿಯಲ್ಲಿ (ಪ್ರನಾ) ಗೌರಮ್ಮನ ಪದಗಳು (ಜಾ) ; ಹವ್ಯಾಸ: ಜ್ಯೋತಿಷ್ಯ, ತೋಟಗಾರಿಕೆ

ಪ್ರಿನ್ಸಿಪಾಲ್ ಜಿಲ್ಲಾ ತರಬೇತಿ ಸಂಸ್ಥೆ ಶಿವಮೊಗ್ಗ

ಚಂದ್ರಶೇಖರಯ್ಯ, ಸೊನ್ನದ ಮುರುಡಿ ಮಠದ [ಶಿಂಗಳ ಸೂಡಿದನ್]

ಜ 1-7-1921

ಬಳ್ಳಾರಿ ಜಿಲ್ಲೆ ಮು.ಬ. ಅಯ್ಯನಹಳ್ಳಿ ; ಕೊಟ್ರಯ್ಯ-ಬಸಮ್ಮ ; 4 ಗಂ ಮಕ್ಕಳು ; ಎಸ್ ಎಸ್ ಎಲ್ ಸಿ, ಮದರಾಸ್ ವಿಶ್ವವಿದ್ಯಾಲಯದ ವಿದ್ವಾನ್ ; ನಿವೃತ್ತ ಕನ್ನಡ ಪಂಡಿತ; ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಥಿಯಸಾಫಿಕಲ್ ಫೆಡರೇಷನ್ ಬೆಂಗಳೂರು ಸದಸ್ಯ ; 1 ಕೃತಿ : ಶಾಲಾ ಮಕ್ಕಳ ಗೀತೆಗಳು (ಜಾ)

ಬನಶಂಕರಿ ಬೀದಿ ಕೊಟ್ಟೂರು ಬಳ್ಳಾರಿ ಜಿಲ್ಲೆ 583134

ಚಂದ್ರಶೇಖರಶಾಸ್ತ್ರಿ, ಹಿರಿಯಮಠ [ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿ]

ಜ 4-5-1893

ಬಳ್ಳಾರಿ ಜಿಲ್ಲೆ ಹೊಳಲು ; ಪಟ್ಟದಯ್ಯಶಾಸ್ತ್ರಿ-ಬಸಮ್ಮ ; 4 ಗಂ 3 ಹೆ ಮಕ್ಕಳು ; ಮಾಗಳ ಮತ್ತು ಹೊಳಲು ಗ್ರಾಮದಲ್ಲಿ ವಿದ್ಯಾಭ್ಯಾಸ, ಹುಕ್ಕೇರಿಮಠ ಮತ್ತು ಗದಗಿನ ಜಗದ್ಗುರು ತೋಂಟದಾರ್ಯ ಮಠಗಳಲ್ಲಿ ಸಂಸ್ಕೃತ ಸಾಹಿತ್ಯಾಭ್ಯಾಸ, ವಾರಣಾಸಿ ಮತ್ತು

ಪಾಠ್ಯಗಳಲ್ಲಿ ಸಂಸ್ಕೃತ ಪ್ರೌಢಾಭ್ಯಾಸ. ವ್ಯಾಕರಣ ತೀರ್ಥ, ವಿದ್ಯಾಲಂಕಾರ, ವಿದ್ಯಾವಾರಿಧಿ, ವಿದ್ಯಾವಾಗೀಶ, ಬಸವ ತತ್ತ್ವ ರತ್ನ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1962, ಸಂಸ್ಕೃತ ಪಾಂಡಿತ್ಯಕ್ಕೆ ಕರ್ನಾಟಕ ಸರ್ಕಾರದ ಪ್ರಶಸ್ತಿ, ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ; 10 ಕೃತಿಗಳು : ಬಸವ ತತ್ತ್ವ ರತ್ನಾಕರ, ಶಿವಾಧಾರಾನ್ವಿತ-ದೇವಮಾನ್ಯ ಗ್ರಂಥ, ಆಧ್ಯಾತ್ಮಿಕ ದರ್ಪಣ, ಕಾದಸಿದ್ದೇಶ್ವರ ಚರಿತೆ, ಸ್ವತಂತ್ರ ಸಿದ್ಧಲಿಂಗೇಶ್ವರ ಚರಿತೆ

ಮಾಗಳ ಬಳ್ಳಾರಿ ಜಿಲ್ಲೆ



ಚಂಪಾಬಾಯಿ, ಶಂಕರರಾವ ದೇಶಪಾಂಡೆ
ಜ 15-12-1902

ಬಾಗಲಕೋಟೆ : ಗುರುರಾವ ಅಣ್ಣಾರಾವ ಪ್ರಭುದೇಸಾಯಿ-ಪಾರ್ವತಿಬಾಯಿ : 1 ಹೆ ಮಗಳು ; ಪ್ರಾ ಪಂದ್ಯೆ ಬಾದಾಮಿ, ಪ್ರೌ ಮೈಸೂರು, ಎಂ.ಎ. ಪ್ರ್ಯೆ ವಿ ಬಿ.ಟಿ. ಮದನಪಲ್ಲಿ ಲಕ್ಷ್ಮಮ್ಮ ಪದಕ, ಎಂ.ಎ. ಮಾಂತ್ರಿಯವರ ಸ್ವರ್ಣ ಬಂಗಾರದ ಪದಕ, ಮೈಸೂರು ಭಗಿನಿ ಸಮಾಜ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು ಸದಸ್ಯೆ, 1 ಕೃತಿ : ಸಂಚಿ ಹೊನ್ನಮ್ಮ ವಿರಚಿತ ಹದಿಬದೆಯ ಧರ್ಮ (ಸಂ),

ಬೆಳಗಾಂ ರೋಡ್ ಧಾರವಾಡ 8



ಚಕ್ರವರ್ತಿ, ಲಕ್ಷ್ಮೀ ನರಸಿಂಹ
ಜ 27-10-1924

ಮೈಸೂರು : ಚಕ್ರವರ್ತಿ ತಿರುಮಲಾಚಾರ್ಯ-ರುಕ್ಮಿಣಮ್ಮ : 1 ಗಂ 3 ಹೆ ಮಕ್ಕಳು ; ಪ್ರಾ ಪ್ರೌ ಬಿ ಎ ಆನರ್ಸ್ ಎಂ.ಎಸ್‌ಸಿ. ಮೈಸೂರು ; ಗಣಿತ ಶಾಸ್ತ್ರ ಪ್ರಾಧ್ಯಾಪಕ ಮೈ ವಿ ; 5 ಕೃತಿಗಳು : ಅಂಕಗಳ ಇತಿಹಾಸ, ಗಣಿತ ವಿಹಾರ, ಗಣಿತಶಾಸ್ತ್ರ ಪರಿಚಯ

38 6ನೇ ಮೈನ್ ಸರಸ್ವತೀಪುರಂ ಮೈಸೂರು 570 009



ಚಡಗ, ಸೂರ್ಯನಾರಾಯಣ ಪಾಂಡೇಶ್ವರ
[ಚಡಗ, ಶೇಷತನಯ, ಸೂನಾಚ]
ಜ 13-4-1932

ಉಡುಪಿ ತಾಲ್ಲೂಕಿನ ಪಾಂಡೇಶ್ವರ: ಪಾಂಡೇಶ್ವರ ನಾರಾಯಣ ಚಡಗ-ಶೇಷಮ್ಮ; 1 ಗಂ ಮಗು ಪ್ರೌಢಶಾಲೆಯವರೆಗೆ ಶಿಕ್ಷಣ; ದಕ್ಷಿಣ ಕನ್ನಡಿಗರ ಸಂಘದ ಉಪಾಧ್ಯಕ್ಷ, ನಂದನ ಪ್ರಕಾಶನದ ಸಂಪಾದಕ: ಮನೆತನ ಕಾದಂಬರಿಗೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ; 30 ಕೃತಿಗಳು: ರತ್ನ ಪಡೆದ ಭಾಗ್ಯ, ಮನೆ ತುಂಬಿದ ಮಡದಿ, ಹೆಣ್ಣು-ಹೊನ್ನು-ಮಣ್ಣು, ಮನೆ ನಿನ್ನದು ಮನ ನನ್ನದು (ಕಾ) ನಮ್ಮೂರಿನ ಕತೆಗಳು, ಜರತಾರಿ ಕುಪ್ಪಸ (ಸ ಕ) ಕಾಮಧೇನು, ನಗೆನಂದನ, ಜಯದೇವಿ ತಾಯಿ (ಸಂ)

62 12ನೇ ಅಡ್ಡರಸ್ತೆ ಮಲ್ಲೇಶ್ವರಂ ಬೆಂಗಳೂರು 560 055



ಚನ್ನಪ್ಪ [ಚಕ್ಕಲೂರು ಚನ್ನಪ್ಪ]
ಜ 13-6-1946

ಚನ್ನಪಟ್ಟಣ ತಾಲೂಕು ಚಕ್ಕಲೂರು; ಬೊಮ್ಮೇಗೌಡ-ದೇವಮ್ಮ; ಬಿ.ಎಸ್‌ಸಿ.: ವ್ಯವಸಾಯ, ಪತ್ರಿಕೋದ್ಯಮ; 1 ಕೃತಿ: ಕನ್ನಡ ಒಗಟು ಮಾಲೆ

ಚಕ್ಕಲೂರು ಚನ್ನಪಟ್ಟಣ ತಾಲೂಕು ಬೆಂಗಳೂರು



ಚನ್ನಪ್ಪ. ಸುಬ್ಬರಾಯಪ್ಪ
ಜ 5-9-1946

ದೇವನಹಳ್ಳಿ ತಾಲ್ಲೂಕು ಆವತಿ; ಡಿ ಸುಬ್ಬರಾಯಪ್ಪ-ನಾರಾಯಣಮ್ಮ; ಪ್ರಾ ಮಾ ಆವತಿ, ಪ್ರೌ ಚಿಕ್ಕಬಳ್ಳಾಪುರ, ಬಿ.ಎ. ಬೆಂಗಳೂರು, ಎಂ.ಎ. ಮೈಸೂರು; ಉಪಸಂಪಾದಕ ವಿಷಯ ವಿಶ್ವಕೋಶ, ಆವತಿ ಕನ್ನಡ ಸಹೃದಯರ ಸಂಘದ ಪ್ರಧಾನ ಕಾರ್ಯದರ್ಶಿ (1964-70); ಕುವೆಂಪು ಕಥೆ ಮಕ್ಕಳ

ಪುಸ್ತಕಕ್ಕೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ; 21 ಕೃತಿಗಳು : ಕುವೆಂಪು ಕಥೆ, ಚಿನ್ನದ ತಟ್ಟೆ, ವಾಙ್ಮಯ ವ್ಯಕ್ತಿಗಳು (ಬಾ), ಕವಿಗಳು ಕಂಡ ಕರ್ನಾಟಕ, ಕುವೆಂಪು ಸಾಹಿತ್ಯ ಕೆಲವು ಅವಲೋಕನಗಳು (ಸಂ)

ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು



ಚನ್ನಬಸವನಗೌಡ, ಕೊಟ್ರಗೌಡ್ರ

ಜ 13–5–1912

ಬಳ್ಳಾರಿ ಜಿಲ್ಲೆ ಬಾಚಿಗೊಂಡನಹಳ್ಳಿ ; ಕೆ ಶಿದ್ದನಗೌಡ-ಗೌರಮ್ಮ : 5 ಗಂ 8 ಹೆ ಮಕ್ಕಳು : ಪ್ರಾ ಬಾಚಿಗೊಂಡನಹಳ್ಳಿ, ಪ್ರೌ ಹೊಸಪೇಟೆ ಪದವಿ ಮದರಾಸು ವಿಶ್ವವಿದ್ಯಾನಿಲಯ : 1 ಕೃತಿ : ಮುತ್ತಿನ ಹಾರ (ಕ) : ಹವ್ಯಾಸ : ನೋಡುವುದು, ತೋಟಗಾರಿಕೆ

ಬಾಚಿಗೊಂಡನಹಳ್ಳಿ ಬಳ್ಳಾರಿ ಜಿಲ್ಲೆ

ಚನ್ನಬಸವಯ್ಯ, ಚಿಕ್ಕನಕೆರೆ ಮಠ [ಸಿ ಎಂ ಸಿ]

ಜ 15–7–1935



ಚಿತ್ರದುರ್ಗ ತಾಲೂಕು ಚಿಕ್ಕನಕೆರೆ ; ವೀರಬಸಪ್ಪಯ್ಯ–ಬಸಮ್ಮ ; 2 ಗಂ 1 ಹೆ ಮಕ್ಕಳು : ಬಿ.ಎಸ್‌ಸಿ. ತುಮಕೂರು : ಎಂ.ಎಸ್‌ಸಿ. (ಗಣಿತ) ಕರ್ನಾಟಕ ವಿಶ್ವವಿದ್ಯಾಲಯ ; ಅಧ್ಯಾಪಕ ವೃತ್ತಿ ; ಧರ್ಮತತ್ತ್ವ ಚಿಂತಾರತ್ನ ಪ್ರಶಸ್ತಿ, ಅಧ್ಯಾತ್ಮ ಮಂಡಳಿ, ಸಹ್ಯಾದ್ರಿಗೋಷ್ಠಿ, ಕನ್ನಡ ಸಾಂಸ್ಕೃತಿಕ ಸಂಘ ಕಲಬುರ್ಗಿ ಸದಸ್ಯ ; 3 ಕೃತಿಗಳು : ಶ್ರೀಶರಣ ಬಸವೇಶ್ವರ ನಾಟಕಂ, ತ್ಯಾಗವೀರ ಶಿರಸಂಗಿ ಲಿಂಗರಾಜರು, ಮಹಾಮಾತೆಯರು ; ಹವ್ಯಾಸ : ನಾಟ್ಯ ಕಲಾಕೃತಿಗಳ ಸಂಗ್ರಹ, ಅರಣ್ಯ ವೀಕ್ಷಣೆ

ಅಧ್ಯಾಪಕ ಪಾಲಿಟೆಕ್ನಿಕ್ ಬೆಳಗಾಂ



ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ

[ಜ ಚ ನಿ]

ಜ 28-9-1911

ಬೆಳಗಾವಿ ಜಿಲ್ಲೆ ಅಂಬಡಗಟ್ಟಿ ; ಮಡಿಯಯ್ಯ–ಶಾಂತಮ್ಮ ; 4ನೇ ವರ್ಗದವರೆಗೆ ಅಭ್ಯಾಸ, ಸಾಹಿತ್ಯ, ವೇದಾಂತ, ವ್ಯಾಕರಣ, ಸಾಂಖ್ಯಗಳಲ್ಲಿ ಪ್ರೌಢ ಶಿಕ್ಷಣ, ವಚನಬ್ರಹ್ಮ, ಕನ್ನಡ ಕವಿ ಗುರು, ಅದ್ಯತನ ಗದ್ಯಗೀತಾಚಾರ್ಯ, ಸಾಹಿತ್ಯ ಸಿಂಹಾಸನಾಧೀಶ್ವರ, ಶಿವಸಾಹಿತ್ಯ ಸಾರ್ವಭೌಮ, ಸಾಹಿತ್ಯ ಸುಧಾಕರ, ವಚನ ರಚನಾ ಪ್ರವೀಣ : ಮೈ ವಿ ಡಿ ಲಿಟ್ : ಧರ್ಮರಾಜ್ಯ ಬಳಗದ ಸಂಸ್ಥಾಪಕ, ಶಿವಾದ್ವೈತ ತತ್ವಪ್ರಚಾರ ಕೇಂದ್ರದ ಮಹಾಪೋಷಕ ; 140 ಕೃತಿಗಳು : ಮಣಿವಚನ, ದುಡಿವಚನ, ಸದಾಶಿವರುದ್ರಂ (ಕ). ಜೀವನ ಸಿದ್ಧಾಂತ, ದಾಸೋಹ ದೀಪ್ತಿ, ಪ್ರಸಾದಲಿಂಗ (ಧ) ಚಿತ್ಕಳೆ ಚೂಡಾಲಿ ಪಾರಮೇಶ್ವರಾಗಮ (ಅನು), ನಿಜಸುಖಿ ಅಪ್ಪಣ್ಣ, ಅಚ್ಚಾಳು ವೀರಭದ್ರ (ಜೀ) ; ಹವ್ಯಾಸ : ಧರ್ಮ ಸಂಸ್ಕೃತಿ ಪ್ರಚಾರ

49 ಎಚ್ ಬಿ ಸಮಾಜ ರಸ್ತೆ ಬಸವನಗುಡಿ ಬೆಂಗಳೂರು 560 004

ಚನ್ನಯ್ಯ, ಹೊನ್ನಾಳಿ ಮಹದೇವಯ್ಯ

ಜ 23-2–1935



ಶಿವಮೊಗ್ಗ ಜಿಲ್ಲೆ ಅನವಟ್ಟಿ : ಎಚ್ ಜಿ ಮಹದೇವಯ್ಯ–ಗಂಗಮ್ಮ ; 4 ಹೆ ಮಕ್ಕಳು : ಪ್ರಾ ಪ್ರೌ ಜಪ, ತೀರ್ಥಹಳ್ಳಿ, ಸಂತೆಬೆನ್ನೂರು, ಹೊನ್ನಾಳಿ, ಶಿರಾಳಕೊಪ್ಪ. ಇಂಟರ್ ಮೀಡಿಯೇಟ್ ಶಿವಮೊಗ್ಗ ; ಬಿ ಎ ಆನರ್ಸ್ ಎಂ.ಎ. (ಕನ್ನಡ) ಮೈ ವಿ ಉಪಪ್ರಾಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆ ಮೈ ವಿ : ಸ್ವಲ್ಪಕಾಲ ಪ್ರಬುದ್ಧ ಕರ್ನಾಟಕದ ಸಂಪಾದಕ ; 6 ಕೃತಿಗಳು : ಕಾಮಿ, ಅಮೆ (ಕ), ಎಲ್ಲರಂಥವನಲ್ಲ ನನ ಗಂಡ (ನಾ), ಜಿಜ್ಞಾಸೆ (ವಿ), ಅಯಾಜ್ (ಅನು) ; ಹವ್ಯಾಸ : ಚಲನಚಿತ್ರ, ನಾಟಕ ರಂಗಗಳಲ್ಲಿ ಅಭಿನಯ ಹಾಗೂ ನಿರ್ದೇಶನ

24 8ನೇ ಮೈನ್ ಸರಸ್ವತೀಪುರಂ ಮೈಸೂರು 570 009



ಚನ್ನೇಗೌಡ, ದೊಂದೇಗೌಡ ರೆಡ್ಡಿ
[ದೊ ರೆ ಚೆನ್ನಿಗರಾಯ]
ಜ **16-6-1906**

ಹಾಸನ ತಾಲ್ಲೂಕು ಬೂವನಹಳ್ಳಿ : ದೊಂದೇಗೌಡ-ಪುಟ್ಟಮ್ಮ : 2 ಗಂ 2 ಹೆ ಮಕ್ಕಳು; ಪ್ರಾ ಬೂವನಹಳ್ಳಿ ಮಾ ಪ್ರೌ ಹಾಸನ ಬಿ.ಎ. ಮೈಸೂರು (1930) ಮೈಸೂರು ಸರ್ಕಾರದ ಸೆಕ್ರೆಟೇರಿಯಟ್‌ನಲ್ಲಿ ರೆಕಾರ್ಡ್ಸ್ ಆಫೀಸರ್ ಆಗಿ ನಿವೃತ್ತಿ; ಸದಸ್ಯ : ಒಕ್ಕಲಿಗರ ಸಂಘ, ಕನ್ನಡ ಸಾಹಿತ್ಯ ಪರಿಷತ್ತು. ; 12 ಕೃತಿಗಳು : ಯುವಕರ ರಕ್ತ, ಅಶೋಕ ಚಕ್ರವರ್ತಿ (ಜೀ), ದಿನಚರಿ ಧ್ಯಾನ ಅಥವಾ ಸದ್ಭಾವರತ್ನಾಕರ, ವಿವೇಕಾನಂದರ ಸಿಂಹನಾದ

93 'ಶಾಂತಿನಿಲಯ' ಗವಿಪುರಂ ಬೆಂಗಳೂರು 560 019

ಚಲುವೇಗೌಡ, ತಳಗವಾದಿ ಚಿಕ್ಕಣ್ಣ
ಜ **15-6-1946**



ಮಂಡ್ಯ ಜಿಲ್ಲೆ ತಳಗವಾದಿ ; ಚಿಕ್ಕಣ್ಣ–ಲಿಂಗಮ್ಮ : 2 ಗಂಡು ಮಕ್ಕಳು : ಪ್ರಾ ಮಾ ತಳಗವಾದಿ ಪ್ರೌ ಮಳವಳ್ಳಿ ಬಿ ಎ. ಎಂ.ಎ. ಜಾನಪದ ಡಿಪ್ಲೊಮ, ಮೈ ವಿ; ಬೆರಳಚ್ಚುಗಾರ : 1 ಕೃತಿ : ಕೆಲವು ಜನಪದ ಸಂಪ್ರದಾಯಗಳು

ಎಂ ಎಚ್ 22 ವಿಜಯಶ್ರೀ ಸರಸ್ವತಿಪುರಂ ತೋಟಿ ಕೊಪ್ಪಲು ಬಡಾವಣೆ ಮೈಸೂರು 570 009



ಚಿಂತಾಮಣಿ, ಈಶ್ವರ ಅಪ್ಪಗೌಡ [ಈಶ್ವರ ಚಂದ್ರ ಚಿಂತಾಮಣಿ]
ಜ **10-5-1926**

ಬಿಜಾಪುರ ತಾಲೂಕು ಬಿಜ್ಜರಗಿ; 3 ಗಂ 3 ಹೆ ಮಕ್ಕಳು : ಶಿಕ್ಷಕ ತರಬೇತಿ ಪರೀಕ್ಷೆ, ಕನ್ನಡ ಜಾಣ, ಭಾಗ್ಯದ ಬಾಗಿಲು (1970) ಕೂಡಲ ಸಂಗಮ ಕೃತಿಗೆ ಕೇಂದ್ರ ಸರ್ಕಾರದ ವಯಸ್ಕರ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ, ಆದರ್ಶ ಶಿಕ್ಷಕ ರಾಷ್ಟ್ರ

ಪ್ರಶಸ್ತಿ(1974) ಜಾನಪದ ಪರಿಷತ್ತು ಮೈಸೂರು ಸದಸ್ಯ ; 28 ಕೃತಿಗಳು : ಬಸವಣ್ಣನವರು, ಆತ್ಮಜ್ಞಾನಿ ಅಲ್ಲಮ, ಸಾವಿತ್ರಿಯ ಸೌಭಾಗ್ಯ, ಜನಪ್ರಿಯ ರಾಮಾಯಣ, ಪುತ್ರಸಂತಾನ, ಮಹಾಭಾರತ ದರ್ಶನ ; ಹವ್ಯಾಸ : ಭಾಷಣ, ಹಾಡುಗಾರಿಕೆ

ಮುಖ್ಯೋಪಾಧ್ಯಾಯ ಸರಕಾರಿ ಮಾದರಿಶಾಲೆ ಲಚ್ಯಾಣ ಬಿಜಾಪುರ ಜಿಲ್ಲೆ

ಚಿಕ್ಕರಾಮಯ್ಯ ರಾಮಪ್ರಿಯ
ಜ 20–5–1933



ದೊಡ್ಡಬಳ್ಳಾಪುರ ತಾಲ್ಲೂಕು ಕೋಡಿಹಳ್ಳಿ ; ಕೆಂಪಣ್ಣ–ಮುನಿಸಿದ್ದಮ್ಮ ; 2 ಗಂ 2 ಹೆ ಮಕ್ಕಳು; ಪ್ರಾ ಮಾ ಕೊನಘಟ್ಟ, ಪ್ರೌ ದೊಡ್ಡಬಳ್ಳಾಪುರ ಬಿ.ಎಸ್‌ಸಿ. ಬೆಂಗಳೂರು, ಉಪಾಧ್ಯಾಯ ವೃತ್ತಿ : 3 ಕೃತಿಗಳು : ವಿಶ್ವವಿದ್ಯಾರ್ಥಿ (ಸ ಕ), ಯುಗಧರ್ಮ (ನಾ), ಕಿರಿಯ ರಾಜಕುಮಾರ (ಜಾ)

ನಂ 34 ಶ್ರೀರಾಮನಿಲಯ ವೇಣುಗೋಪಾಲಸ್ವಾಮಿಗುಡಿ ಬೀದಿ ಚಿಕ್ಕಬಳ್ಳಾಪುರ 562 101



ಚಿತ್ರಗಾರ ಪರಸಪ್ಪ ಹನಮಪ್ಪ
[ಪರಶುರಾಮ ಚಿತ್ರಗಾರ]
ಜ 9-1-1926

ಬಿಜಾಪುರ ಜಿಲ್ಲೆ ಜಾಲಿಹಾಳ ; ಹನಮಪ್ಪ–ಭೀಮವ್ವ ; 1 ಗಂ 6 ಹೆ ಮಕ್ಕಳು ; ಪ್ರಾ ಜಾಲಿಹಾಳ, ಮಾ ರೋಣ, ಶಿಕ್ಷಕ ತರಬೇತಿ ಬಿಜಾಪುರ ; ಶಾಲಾ ಶಿಕ್ಷಕ ; ನಾವು ಭಾರತೀಯರು, ನಾವೆಲ್ಲಾ ಹಕ್ಕಿಗಳು ಶಿಶುಸಾಹಿತ್ಯಕ್ಕೆ ರಾಜ್ಯ ಸರ್ಕಾರದ ಬಹುಮಾನ ; 8 ಕೃತಿಗಳು : ಪತಂಗ, ಬಂಪೈ ಮಿಠಾಯಿ, ನಾವೆಲ್ಲ ಹಕ್ಕಿಗಳು (ಜಾ), ಚೀತನ (ಕ) ; ಹವ್ಯಾಸ : ಚಿತ್ರಕಲೆ

ಒರಿಯ ಪ್ರಾಥಮಿಕ ಶಾಲೆ ಬೇಲೂರ ಅಂಚೆ ಬಾದಾಮಿ ತಾಲ್ಲೂಕು



ಚಿತ್ರಲಿಂಗಯ್ಯ, ಮೈಸೂರು ವೆಂಕಟಪ್ಪ
[ಅಂತರ್ಮುಖಿ]
ಜ 10-9-1933

ಮಂಡ್ಯ ಜಿಲ್ಲೆ ಕಾಳ್ಕೆರೆ : ಎಂ ಎಲ್ ವೆಂಕಟಪ್ಪ–ಲಕ್ಷ್ಮಮ್ಮ ; 1 ಗಂ 2 ಹೆ ಮಕ್ಕಳು : ಪ್ರಾ ಮಾ ಪ್ರೌ ಮೈಸೂರು, ಅಡ್ಮಿಷನ್ ಪರೀಕ್ಷೆ ಬನಾರಸ್ ವಿಶ್ವವಿದ್ಯಾನಿಲಯ, ಇಂಟರ್ ಮೀಡಿಯೆಟ್ ಮಧ್ಯ ಪ್ರದೇಶ, ಬಿ.ಎ. ಕರ್ನಾಟಕ ವಿಶ್ವವಿದ್ಯಾಲಯ ಎಂ.ಎ. (ಹಿಂದಿ) ಮೈ ವಿ ; 1951 ರಿಂದ 1968 ಮೈ ವಿ 2ನೇ ದರ್ಜೆ ಗುಮಾಸ್ತೆ, 1968 ರಿಂದ ಸಂಜೆ ಕಾಲೇಜಿನಲ್ಲಿ ಹಿಂದಿ ಉಪನ್ಯಾಸಕ, ಎಚ್ ವಿ ನಂಜುಂಡಯ್ಯನವರ ಚಿನ್ನದ ಪದಕ ; ಆರ್ಯಸಮಾಜ ಮೈಸೂರು ಸದಸ್ಯ. ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಮದರಾಸು ಅಜೀವ ಸದಸ್ಯ ; 3 ಕೃತಿಗಳು : ಖಯ್ಯಾಮ್ ಕವನ ಮಂಜರಿ (ಅನು), ಇನ್ನೇನಿನ್ನೇನು (ನಾ) ; ಹವ್ಯಾಸ : ಅಭಿನಯ, ದಿಗ್ದರ್ಶನ, ಸಂಗೀತ ಶ್ರವಣ, ಚಿತ್ರಕಲೆ

ನಂ 4 ಅಧ್ಯಾಪಕರ ನಿವಾಸ ರಾಮಸ್ವಾಮಿ ಸರ್ಕಲ್ ಮೈಸೂರು 5

ಚಿತ್ತಾಲ, ಗಂಗಾಧರ ವಿಠೋಬಾ [ಗಂಗಾಧರ ಚಿತ್ತಾಲ]
ಜ 12-11-1923

ಉತ್ತರ ಕನ್ನಡ ಜಿಲ್ಲೆ ಹನೇಹಳ್ಳಿ ; ವಿಠೋಬಾ ಪುಂಡಲೀಕ ಚಿತ್ತಾಲ–ರುಕ್ಮಿಣಿದೇವಿ ; 1 ಗಂ 2 ಹೆ ಮಕ್ಕಳು : ಪ್ರಾ ಹನೇಹಳ್ಳಿ ಪ್ರೌ ಕುಮಟಾ ಮೆಟ್ರಿಕ್ ಮುಂಬೈ ಬಿ.ಎ. ಕ ವಿ ಧಾರವಾಡ : ಚೀಫ್ ಆಡಿಟರ್. ಮುಂಬೈ ; ಅಮೆರಿಕ, ಲಂಡನ್ ಪ್ರವಾಸ ; 3 ಕೃತಿಗಳು : ಕಾಲದ ಕರೆ. ಮನುಕುಲದ ಹಾಡು. ಹರಿವ ನೀರಿದು (ಕ)

ಈಶ್ವರ್ ಕೃಷ್ಣ ಚರ್ಚ್‌ಗೇಟ್ ಮುಂಬೈ



ಚಿತ್ತಾಲ, ಯಶವಂತ ವಿಠೋಬಾ
[ಯಶವಂತ ಚಿತ್ತಾಲ]
ಜ 3-8-1928

ಉತ್ತರ ಕನ್ನಡ ಜಿಲ್ಲೆ ಹನೇಹಳ್ಳಿ : ವಿಠೋಬಾ ಪುಂಡಲೀಕ ಚಿತ್ತಾಲ–ರುಕ್ಮಿಣಿದೇವಿ ; 2 ಗಂ ಮಕ್ಕಳು ; ಪ್ರಾ ಹನೇಹಳ್ಳಿ ಮಾ ಕುಮಟಾ ಪದವಿ ಧಾರವಾಡ ಹಾಗೂ ಮುಂಬೈ, ಎಂ ಇ (ಯು ಎಸ್ ಎ) ; ಮುಂಬೈ ಪ್ಲಾಸ್ಟಿಕ್ ಕಂಪೆನಿಯಲ್ಲಿ ಜನರಲ್

ಮ್ಯಾನೇಜರ್ ; ಇಂಗ್ಲೆಂಡ್, ಅಮೇರಿಕ, ಹವಾಯ್, ಯೂರೋಪು, ಜಪಾನ್, ಈಜಿಪ್ಟ್ ಪ್ರವಾಸ ; ಕಥೆಯಾದಳು ಹುಡುಗಿ ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ; 5 ಕೃತಿಗಳು : ಸಂದರ್ಶನ, ಆಟ, ಕಥೆಯಾದಳು ಹುಡುಗಿ (ಸಕ), ಮೂರು ದಾರಿಗಳು, ಶಿಕಾರಿ (ಕಾ) ; ಹವ್ಯಾಸ : ಚಿತ್ರಕಲೆ

212-A ಬ್ಯಾಂಡ್ ಸ್ಟ್ಯಾಂಡ್ ಬಾಂದ್ರಾ ಮುಂಬೈ 400 050

ಚಿದಂಬರರಾವ್, ಸಾಲೀಸೂರು ಶಂಕರಪ್ಪ
ಜ 28-9-1936



ದಾವಣಗೆರೆ ತಾಲೂಕ್ ಹದಡಿ ; ಶಂಕರಪ್ಪ–ಸೀತಮ್ಮ : 1 ಗಂ 2 ಹೆ ಮಕ್ಕಳು ; ಪ್ರಾ ಚಿತ್ರದುರ್ಗ ಬಿ.ಎ. ಕೆ.ವಿ. ಬಿ. ಎ ಆನರ್ಸ್ ಬಿ ಎಡ್ ಮೈ.ವಿ. ಹಿಂದಿ ವಿಶಾರದ ; ಮಲ್ಲಾಡಿಹಳ್ಳಿ ಜ್ಯೂನಿಯರ್ ಕಾಲೇಜಿನಲ್ಲಿ ಅಧ್ಯಾಪಕ ; 1 ಕೃತಿ : ಸರಿಯುವ ತೆರೆಗಳು ; ಹವ್ಯಾಸ : ಸಂಗೀತ, ಜ್ಯೋತಿಷ್ಯ, ಅಭಿನಯ

ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ 577 531

ಚಿದಾನಂದಮೂರ್ತಿ, ಎಂಶದ
ಜ 10-5-1931



ಶಿವಮೊಗ್ಗ ಜಿಲ್ಲೆ ಹಿರೇಕೋಗಲೂರು ; ಕೆ ಕೊಟ್ಟೂರಯ್ಯ–ಪಾರ್ವತಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಸಿತಿಗೆರೆ ಮಾ ಹಿರೇಕೋಗಲೂರು ಪ್ರೌ ಇಂಟರ್ ಮೀಡಿಯೆಟ್ ದಾವಣಗೆರೆ, ಬಿ.ಎ. ಆನರ್ಸ್, ಎಂ.ಎ. ಪ್ರಥಮ ಸ್ಥಾನ ಮೈ ವಿ ; ಪಿ ಎಚ್ ಡಿ 1964, 1953ರಿಂದ 1969 ಅಧ್ಯಾಪಕ ಮೈ.ವಿ. 1970ರಿಂದ, ಬೆಂ ವಿ ಪ್ರಾಧ್ಯಾಪಕರು ; ಅಮೆರಿಕ ಪ್ರವಾಸ : ಶೂನ್ಯ ಸಂಪಾದನೆಯನ್ನು ಕುರಿತು, ಸಂಶೋಧನ ತರಂಗ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, ಭಾಷಾ ವಿಜ್ಞಾನದ ಮೂಲ ತತ್ವಗಳು ಕೃತಿಗೆ ದೇವರಾಜ

ಬಹದ್ದೂರ್ ಪ್ರಶಸ್ತಿ, ಮೈ ವಿ ಎಫಿಗ್ರಾಫಿಯಾ ಕರ್ನಾಟಿಕಾ ವಿಷಯ ವಿಶ್ವಕೋಶ ಸಲಹಾ ಸಮಿತಿ ಸದಸ್ಯ, ಬೆಂ ವಿ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಸಲಹಾ ಸಮಿತಿ ಸದಸ್ಯ, ತಿರುವಾಂಕೂರು ದ್ರಾವಿಡಭಾಷಾ ವಿಜ್ಞಾನ ಪರಿಷತ್ತು ಕಾರ್ಯದರ್ಶಿಗಳಲ್ಲೊಬ್ಬರು : 15 ಕೃತಿಗಳು : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂಶೋಧನೆ, ಸಂಶೋಧನ ತರಂಗ (ಸಂ ಶೋ), ಬಸವಣ್ಣನವರು (ವಿ ಮ), ಭಾಷಾ ವಿಜ್ಞಾನದ ಮೂಲತತ್ವಗಳು (ಭಾ ವಿ), ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು (ಶಾ ಶಾ), ಗ್ರಾಮಿಣ (ಜಾ)

ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ ಬೆಂಗಳೂರು 560 056

ಚಿಲಕವಾಡ ರಾಮಚಂದ್ರ ಗುರುರಾವ್

ಜ 2-5-1935



ಚಿಲಕವಾಡ; ಗುರುರಾವ್ ಚಿಲಕವಾಡ–ಸರಸ್ವತಿಬಾಯಿ; 1 ಗಂ 1 ಹೆ ಮಕ್ಕಳು; ಬಿ ಎ ಕರ್ನಾಟಕ ವಿಶ್ವವಿದ್ಯಾಲಯ: ಹಿಂದಿ ರಾಷ್ಟ್ರಭಾಷಾ : ಮುಬ್ಬಳ್ಳಿಯ ದಕ್ಷಿಣ ರೈಲ್ವೆ ಡಿವಿಜನಲ್ ಅಕೌಂಟ್ಸ್ ಅಫೀಸಿನಲ್ಲಿ ಉದ್ಯೋಗ; ಧಾರವಾಡ ಕಲಾವಿಕಾಸ ವೃಂದದ ಸಂಸ್ಥಾಪಕ : 6 ಕೃತಿಗಳು : ಸದ್ಗುರು ಸಂದರ್ಶನ, ಮದುವೆದಿನ, ಅನಿರೀಕ್ಷಿತ (ನಾ), ಸಂಶಯ ಸುಳಿ, ನೀರು ನೀರಡಿಕೆ (ಕಾ)

31 ಲಕಮನಹಳ್ಳಿ ಗಲ್ಲಿ ಧಾರವಾಡ 580 001

ಚುಳಕಿ, ಗೋವಿಂದ ವೆಂಕಟೇಶ [ಚಾಲುಕ್ಯ]

ಜ 22-11-1902

ಬೆಳಗಾವಿ ಜಿಲ್ಲೆ ಚುಳಕಿ; ವೆಂಕಟೇಶ–ಗೋದೂಬಾಯಿ; 2 ಗಂ 2 ಹೆ ಮಕ್ಕಳು; ಪ್ರಾಥಮಿಕ ಶಿಕ್ಷಣ; ಕರ್ನಾಟಕ ವಿದ್ಯಾವರ್ಧಕ ಸಂಘದ ಸದಸ್ಯ, ಮಿಂಚಿನಬಳ್ಳಿ ಗ್ರಂಥಮಾಲೆಯ ಸಂಪಾದಕ; 23 ಕೃತಿಗಳು : [illegible]ವಣೆ, ವೇದಕಥಾವಳಿ (ಸ ಕ), ಉತ್ಸರ್ಗ, ಜಲವಂತಿ (ಅನು), ವಾರದ ಮಲ್ಲಪ್ಪನವರು, ವಿವೇಕಾನಂದ (ಬಾ), ಲಕ್ಷ್ಮೀಶನ ರಾಮಾಯಣ, ಜೈಮಿನಿ ಭಾರತ (ಸಂ)

ಶಿರಹಟ್ಟಿ ಕಾಪೌಂಡ್ ಮಾಳಮಡ್ಡಿ ಧಾರವಾಡ 7



ಚೆನ್ನಬಸಪ್ಪ, ಕೋಣಸ

ಜ 21-2-1922

ಬಳ್ಳಾರಿ ಜಿಲ್ಲೆ ಆಲೂರು ಮಜರಾಕಾನಾ ಮಡುವು; ಕೋಣಸ ವೀರಣ್ಣ-ಬಸಮ್ಮ; 2 ಗಂ 3 ಹೆ ಮಕ್ಕಳು: ಪ್ರಾ ಮಾ ಕಾನಾಮಡುವು ಪ್ರೌ ಬಳ್ಳಾರಿ ಬಿ.ಎ. ಅನಂತಪುರ ಎಲ್ ಎಲ್ ಬಿ ಬೆಳಗಾಂ: 1946-65 ಬಳ್ಳಾರಿಯಲ್ಲಿ ವಕೀಲ ವೃತ್ತಿ: 1965ರಿಂದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ನಿವೃತ್ತಿ; ಖಜಾನೆ ಗ್ರಂಥಕ್ಕೆ ಭಾರತ ಸರ್ಕಾರದ ನೂತನ ಅಕ್ಷರಸ್ಥರ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ (1953) ಶ್ರೀ ರಾಮಾಯಣ ದರ್ಶನಂ ಮಹಾ ಕಾವ್ಯ ಸಮೀಕ್ಷೆ ಕೃತಿಗೆ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಬಹುಮಾನ (1973); ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯ (1958-61), ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯ ಸದಸ್ಯ (1958-59) ಬಳ್ಳಾರಿ ಸಾಹಿತ್ಯ ಅಕಾದೆಮಿಯ ಸ್ಥಾಪಕ ಸದಸ್ಯ (1960-65) ಶ್ರೀ ಅರವಿಂದ ಸೊಸೈಟಿ ಕರ್ನಾಟಕ ಶಾಖೆ ಉಪಾಧ್ಯಕ್ಷ; 50 ಕೃತಿಗಳು: ರಕ್ತತರ್ಪಣ, ಹಿಂದಿರುಗಿ ಬರಲಿಲ್ಲ (ಕಾ), ಗಡೀಪಾರು, ನಮ್ಮೂರ ದೀಪ (ಸ ಕ) ಪ್ರಾಣಪಕ್ಷಿ, ಹೃದಯ ನೈವೇದ್ಯ (ಕ), ಶ್ರೀರಾಮಾಯದರ್ಶನಂ ಮಹಾಕಾವ್ಯ ಸಮೀಕ್ಷೆ, ಶ್ರೀರಾಮ ಕೃಷ್ಣ ಲೀಲಾ ನಾಟಕಂ (ವಿ), ನನ್ನ ಮನಸ್ಸು ನನ್ನ ನಂಬುಗೆ (ಜೀ), ಬೆಳಕಿನೆಡೆಗೆ, ನಮಗೆ ಬೇಕಾದ ಸಾಹಿತ್ಯ (ಪ್ರ), ಶ್ರೀ ಅರವಿಂದರು, ಶ್ರೀ ಮೃತ್ಯುಂಜಯ ಸ್ವಾಮಿಗಳು (ಜೀ)

105 4ನೇ ಅಡ್ಡರಸ್ತೆ ವಸಂತನಗರ ಬೆಂಗಳೂರು 560 001

ಚೊಕ್ಕಾಡಿ, ಸುಬ್ಬರಾಯ [ಮುಕ್ತಹಂಸ, ಚೊ]

ಜ 29-6-1940

ದ ಕ ಜಿಲ್ಲೆಯ ಅಜ್ಜನಗದ್ದೆ; ಅಜ್ಜನಗದ್ದೆ ಗಣಪಯ್ಯ-ಸುಬ್ಬಮ್ಮ; 1 ಗಂ 3 ಹೆ ಮಕ್ಕಳು; ಶಿಕ್ಷಣ ಚೊಕ್ಕಾಡಿ, ಪಂಜ, ಮಂಗಳೂರು; ಅಧ್ಯಾಪಕ; ಸುಮನಸಾ ವಿಚಾರ ವೇದಿಕೆ ಚೊಕ್ಕಾಡಿ, ಅಧ್ಯಕ್ಷ, ಶಿಕ್ಷಕವಾಣಿಯ ಸಂಪಾದಕ ಮಂಡಳಿಯ ಸದಸ್ಯ; 3 ಕೃತಿಗಳು: ತೆರೆ, ಬೆಟ್ಟವೇರಿದ ಮೇಲೆ (ಕ), ಬೇರುಗಳು (ಸ ಕ); ಹವ್ಯಾಸ: ಸಂಗೀತ, ಚಿತ್ರ ಕಲೆ, ಯಕ್ಷಗಾನ

ಚೊಕ್ಕಾಡಿ ಅಂಚೆ ಬೆಳ್ಳಾರೆ ಮಾರ್ಗ 574 212



ಚೌಡೇಗೌಡ, ಬೀಡನಹಳ್ಳಿ ಚಾಮೇಗೌಡ
[ಚೌಡೇಗೌಡ ಬೀಡನಹಳ್ಳಿ]
ಜ **24-3-1948**

ಟಿ ನರಸೀಪುರ ತಾಲ್ಲೂಕು ಬೀಡನಹಳ್ಳಿ ; ಚಾಮೇಗೌಡ–ಗೌರಮ್ಮ ; ಪ್ರಾ ಬೀಡನಹಳ್ಳಿ ಮಾ ಪ್ರೌ ಬನ್ನೂರು ಬಿ. ಎಸ್‌ಸಿ. ಕನ್ನಡ ಡಿಪ್ಲೊಮಾ ಮೈಸೂರು ; 3 ಕೃತಿಗಳು : ಪ್ರಾದೇಶಿಕ ಗಾದೆಗಳು ಶ್ರೀಧರೆಗೆ ದೊಡ್ಡವರ ಪಡೆ, ಶಿಲಾಶಾಸನಗಳು : ಹವ್ಯಾಸ : ಶಿಲಾ ಶಾಸನ ಸಂಗ್ರಹ, ಛಾಯಾಚಿತ್ರ, ಹರಿಕಥಾಕಾಲಕ್ಷೇಪ

ಹನುಮನಾಳು ಅಂಚೆ ಟಿ ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ



ಜಂಬಣ್ಣ, ಅಮರಚಿಂತ
ಜ **4-7-1945**

ರಾಯಚೂರು : ಲಕ್ಷ್ಮಣ್ಣ–ಕುರುಮವ್ವ : 1 ಗಂ ಮಗು : ಪ್ರಾ ಮಾ ಪ್ರೌ ಬಿ.ಎ. ರಾಯಚೂರು, ಎಂ.ಎ. ಕೊಲ್ಹಾಪುರ ; ಜಿಲ್ಲಾ ಆರೋಗ್ಯ ಕೇಂದ್ರದಲ್ಲಿ ಅಕೌಂಟೆಂಟ್ ; 1 ಕೃತಿ : ಮುಂಜಾವಿನ ಕೊರಳು (ಕ) : ಹವ್ಯಾಸ : ಚಿತ್ರಕಲೆ, ಕ್ರೀಡೆ

10-5-97 ಮೊತ್ತಲ್ ಪೇಟೆ ರಾಯಚೂರು

ಜಗದೀಶ್, ಬೆಟ್ಟಹಲಸೂರು ಶ್ರೀಕಂಠಯ್ಯ
ಜ **10-3-1951**

ಬೆಂಗಳೂರು ಜಿಲ್ಲೆ ಬೆಟ್ಟಹಲಸೂರು : ಶ್ರೀಕಂಠಯ್ಯ–ಪಾರ್ವತಮ್ಮ ; ಪ್ರಾ ಬೆಟ್ಟಹಲಸೂರು ಪ್ರೌ ಯಲಹಂಕ ಸ್ನಾತಕ ಪದವಿ ಹಾಗೂ ಕಾನೂನು ಪದವಿ ಬೆಂಗಳೂರು; 1 ಕೃತಿ : ತಾಕಲಾಟ (ಕ) ; ಹವ್ಯಾಸ : ಈಜುಗಾರಿಕೆ

ಬೆಟ್ಟಹಲಸೂರು ಬೆಂಗಳೂರು ಜಿಲ್ಲೆ

ಜಗನ್ನಾಥರಾವ್, ನಾಮದೇವ್ ವೀರಭದ್ರಪ್ಪ
ಜ **28-5-1934**

ಮೈಸೂರು ; ವೀರಭದ್ರಪ್ಪ–ನಾಗೂಬಾಯಿ ; 3 ಮಕ್ಕಳು ; ಎಂ.ಎ. (ಸಮಾಜಶಾಸ್ತ್ರ)

ಮ್ಮೆ ವಿ. ಬಿ ಎಡ್ ಎಂ ವಿ, ಹಿಂದಿ ಸಾಹಿತ್ಯ ಪ್ರವೀಣ್, ಡಿಪ್ಲೊಮಾ ಇನ್ ಸೋಷಿಯಲ್ ಸೈನ್ಸ್, ನಾಟಕ ಕಲೆಯಲ್ಲಿ ಡಿಪ್ಲೊಮಾ, ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಉಪಪ್ರಾಧ್ಯಾಪಕ, ಶಾರದಾ ಕಲಾಮಂದಿರ ಮೈಸೂರು, ಕಲಾದೇಗುಲ ಧಾರವಾಡ ಸದಸ್ಯ : 9 ಕೃತಿಗಳು : ದೋಸ್ತಿ ಕೊಟ್ಟ ಗಸ್ತು, ಮುಟ್ಟಿದ್ದಾಳಿ, ಚಾಳೀಬಂಗಾರ. ಪ್ರಳಯವೋ ಪ್ರಣಯವೋ (ನಾ) ; ಹವ್ಯಾಸ : ನಿರ್ದೇಶನ

ಕೃಷಿಮಹಾವಿದ್ಯಾಲಯ ಪಾಲನಕರ್ ಚಾಳ ಶಿವಪುರಿ ಕಾಲೋನಿ ಧಾರವಾಡ 1

ಜಡೆ, ರಂಗರಾವ್ [ರಘು]

ಜ 19-2-1909

ಪಂಢರ ; ಜಡೆ ರಾಮರಾವ್-ಸೀತಾಬಾಯಿ ; 1 ಗಂ 1 ಹೆ ಮಕ್ಕಳು : ಪ್ರಾ ಚಿತ್ರದುರ್ಗ, ಪ್ರೌ ದಾವಣಗೆರೆ ಬಿ.ಎ. ಬೆಂಗಳೂರು ; ರಾಯಚೂರು ಜಿಲ್ಲೆಯ ಮುನಿರಾಬಾದಿನ ಸಕ್ಕರೆ ಕಾರ್ಖಾನೆಯಲ್ಲಿ ಉದ್ಯೋಗದಲ್ಲಿದ್ದು ನಿವೃತ್ತಿ ; 4 ಕೃತಿಗಳು : ಮೆಚ್ಚಿನದು (ಸ ಕ), ಮೈಸೂರಿನ ನೋಟಗಳು (ವ), ವಿಚಿತ್ರ ಪ್ರೇಮ (ಅನು), ಎಲ್ಲಾ ಒಳ್ಳೇದಕ್ಕೆ (ನಾ) ; ಹವ್ಯಾಸ : ಟೆನ್ನಿಸ್, ತೋಟಗಾರಿಕೆ, ಛಾಯಾಚಿತ್ರ, ಪ್ರವಾಸ

15ನೇ ವಾರ್ಡ್ ನೆಹರೂ ಕಾಲೋನಿ ಹೊಸಪೇಟೆ 583 201

ಜಡೆ ಶಾರದಾ [ಶಾರದಾ]

ಜ 2–7–1923



ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ; ಕೆ ಆರ್ ಸುಂದರ ರಾವ್–ರಾಜೀಬಾಯಿ ; 1 ಗಂ 1 ಹೆ ಮಕ್ಕಳು ; ಎಸ್ ಎಸ್ ಎಲ್ ಸಿ, ವಿಶಾರದ, ಪ್ರಚಾರಕ್ ; ಅಧ್ಯಾಪಕಿ ; ಕನ್ನಡ ಸಾಹಿತ್ಯ ಪರಿಷತ್ತು ಸದಸ್ಯೆ ; 2 ಕೃತಿಗಳು : ನವರತ್ನದ ಕಡಗ (ಸ ಕ), ಸಾಗರ ದೀಪ (ಕ) ; ಹವ್ಯಾಸ : ಸಂಗೀತ, ಚಿತ್ರಕಲೆ, ಕುಶಲ ಕೈಗಾರಿ

ರಾಜೇಶ್ವರಿ ನೆಹರೂ ಕಾಲೋನಿ ಹೊಸಪೇಟೆ ಬಳ್ಳಾರಿ ಜಿಲ್ಲೆ



ಜತ್ತಿ. ದಾನಪ್ಪ ಸಿದ್ರಾಮಪ್ಪ

ಜ 31-8-1938

ಬಿಜಾಪುರ ಜಿಲ್ಲೆ ತಿಕೋಟಾ ; ಸಿದ್ರಾಮಪ್ಪ–ದೊಡ್ಡವ್ವ ; 1 ಗಂ ಮಗು ; 7ನೇ ತರಗತಿಯ ವರೆಗೆ ; ವ್ಯಾಪಾರ ಮತ್ತು ಕೃಷಿ ; ವಚನ ರಚನಾ ಚತುರ. ಮಾದರಿ ಮಾನವ : 4 ಕೃತಿಗಳು : ಅಮೂಲ್ಯ ಕಾಣಿಕೆ (ಸ ಕ), ಭಾವಸೌರಭ, ವಚನಾಮೃತ (ಕ), ಬಸವತತ್ವದರ್ಶನ : ಹವ್ಯಾಸ : ಅಭಿನಯ, ಭಜನೆ

ತಿಕೋಟಾ ಅಂಚೆ ಬಿಜಾಪುರ ಜಿಲ್ಲೆ

ಜಯಚಂದ್ರ, ಮಂಡ್ಯ ಆದಿರಾಜಯ್ಯ

[ಧವಳಶ್ರೀ]

ಜ 30-1-1944



ಮಂಡ್ಯ ; ಎಂ ಡಿ ಆದಿರಾಜಯ್ಯ–ಜಯ್ಯಮ್ಮ ; 2 ಮಕ್ಕಳು ; ಪ್ರಾ ಪ್ರೌ ಮಂಡ್ಯ, ಬಿ.ಎ. ಎಂ.ಎ. (ಕನ್ನಡ) ಮೈಸೂರು ; ಅಧ್ಯಾಪಕ ; 15 ಜಾನಪದ ಕಿರುಗತೆಗಳು ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ; ಕನ್ನಡ ಸಾಹಿತ್ಯ ಪರಿಷತ್ತು, ಮಿಥಿಕ್ ಸೊಸೈಟಿ ಸದಸ್ಯ ; 8 ಕೃತಿಗಳು : ಕವನಲೀಲೆ (ಕ), ಜಾನಪದ ಕಥಾಮೃತ, ಚಂದನಾಂಬಿಕೆಯ ಕತೆ (ಜಾ). ರಾಷ್ಟ್ರ ಕವಿ ಕಂಡ ಗೊಮ್ಮಟೇಶ್ವರ ಮತ್ತು ಇತರ ಪ್ರಬಂಧಗಳು (ಪ್ರ)

ಬ್ರಹ್ಮಕೃಪ 961/21 3ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು 560 010



ಜಯಂತಿಬಾಯಿ, ಮೂಲ್ಕಿ


ಜ 27-3-1937

ದ ಕ ಜಿಲ್ಲೆಯ ಮೂಲ್ಕಿ ; ಕೆ ನರಸಿಂಹಪ್ಪೈ–ಸಂಜೀವಿ; ಬಿ ಎಸ್‌ಸಿ, ಎಂ ಎ ಎಂ ಫಿಲ್, ಭಾಷಾಂತರ ಡಿಪ್ಲೊಮಾ, ಸ್ನಾತಕೋತ್ತರ ಪ್ರಾಕೃತ ಡಿಪ್ಲೊಮಾ, ಸ್ನಾತಕೋತ್ತರ ಜೈನಶಾಸ್ತ್ರ ಡಿಪ್ಲೊಮಾ ; ಭಾಷಾಂತರಕಾರರು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು ;

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಚೇತನ ಕನ್ನಡ ಸಂಘ ಮೈಸೂರು ಸದಸ್ಯ ; 6 ಕೃತಿಗಳು : ಮಹಿಳೆ ಮತ್ತು ಕನ್ನಡ (ಪ್ರ) ಆಧುನಿಕ ರಾಜ್ಯಶಾಸ್ತ್ರ ಪರಿಚಯ, ಬಿಸಿಲು (ಅನು)

ನಂ 24 2ನೇ ಮುಖ್ಯ ರಸ್ತೆ ವಿ ವಿ ಮೊಹಲ್ಲಾ ಮೈಸೂರು 2

ಜಯದೇವ್, ಹುಲಿಕಲ್ಲು ಕಾಳೇಗೌಡ
ಜ 16-4-1941



ಹಾಸನ ಜಿಲ್ಲೆ ಹುಲಿಕಲ್ಲು ; ಕಾಳೇಗೌಡ–ಸಣ್ಣಮ್ಮ ; ಎಂ.ಎ. (ಕನ್ನಡ) ; ಉಪಪ್ರಾಧ್ಯಾಪಕ ಬೆಂ ವಿ ; 5 ಕೃತಿಗಳು : ವಾಕ್ಯ ಮಾಣಿಕ್ಯ ಕೋಶ, ಪಂಪ ಒಂದು ಅಧ್ಯಯನ, ಧರ್ಮಸಂಪಾದನೆ, ರಾಘವಾಂಕ ಚತುರ್ಮುಖ (ಸು ಇ), ಶಾಸನ ಮತ್ತು ಗದ್ಯ (ಸಾ)

ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ ಬೆಂಗಳೂರು 560 056

ಜಯಪ್ಪಗೌಡ, ದಾರದಹಳ್ಳಿ ಸುಬ್ಬೇಗೌಡ
ಜ 6–12-1947



ಚಿಕ್ಕಮಗಳೂರು ಜಿಲ್ಲೆ ದಾರದಹಳ್ಳಿ ; ಎಂ ಸುಬ್ಬೇಗೌಡ–ಮೋಟಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಮಾ ದಾರದಹಳ್ಳಿ, ಪ್ರೌ ಮೂಡಿಗೆರೆ, ಬಿ.ಎ. ಚಿಕ್ಕಮಗಳೂರು ಮತ್ತು ತುಮಕೂರು ಎಂ.ಎ. (ಇತಿಹಾಸ), ಎಂ ಫಿಲ್ (ಭಾಷಾಂತರ), ಬಿ. ಲಿಬ್ ಎಸ್‌ಸಿ, ಡಿಪ್ಲೊಮಾ (ಜಾನಪದ) ; ಭಾಷಾಂತರಕಾರರು, ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ; 3 ಕೃತಿಗಳು : ಕರ್ನಾಟಕದ ಗ್ರಾಮೀಣ ಸೇವಾ ಸಂಸ್ಥೆಗಳು (ರಾ), ಮಾನವ ಭೂಗೋಳಶಾಸ್ತ್ರ ಪರಿಚಯ, ಸಾಮಾಜಿಕ ಅಧ್ಯಯನ (ಅನು)

57 4ನೇ ಹಂತ ತೊಣಚಿಕೊಪ್ಪಲ್ ವಿಸ್ತರಣ ಮೈಸೂರು 570 009

ಜಯಭಾರತಿ, ಪೂರಿಗಾಲಿ ಶ್ರೀನಿವಾಸನ್
ಜ 14-11-1942
ಮೈಸೂರು ಜಿಲ್ಲೆ ಕೊಳ್ಳೇಗಾಲ : ಶ್ರೀನಿವಾಸನ್-ಶಕುಂತಲಾ : ಎಂ.ಎ. (ಇಂಗ್ಲಿಷ್) : ಅಧ್ಯಾಪಕಿ ಮಹಾರಾಣಿ ಕಾಲೇಜು ಮೈಸೂರು ; 1 ಕೃತಿ : ಧರ್ಮದ ಏಳಿಗೆಗೆ ಮಹಿಳೆಯರ ಪಾತ್ರ ; ಹವ್ಯಾಸ : ಕಸೂತಿ, ಬೊಂಬೆ ನಿರ್ಮಾಣ, ಪ್ರವಾಸ
1473 ಕೃಷ್ಣಮೂರ್ತಿಪುರಂ ಮೈಸೂರು 570 004

ಜಯಲಕ್ಷ್ಮಿ, ಈಚನೂರು
ಜ 21-6-1950
ತುಮಕೂರು ಜಿಲ್ಲೆ ಈಚನೂರು : ಸೀತಾರಾಮಯ್ಯ-ಸಾವಿತ್ರಮ್ಮ ; ಪ್ರಾ ಮಾ ಈಚನೂರು, ಪ್ರೌ ಮತ್ತು ಕಾಲೇಜು ಶಿಕ್ಷಣ ತಿಪಟೂರು; 5 ಕೃತಿಗಳು : ಪ್ರೇಮಬಂಧನ, ಕನಸುಗಳು, ಮೋಡದ ಮನೆ, ನಾಂದಿ (ಕಾ) : ಹವ್ಯಾಸ : ತೋಟಗಾರಿಕೆ
ಈಚನೂರು ಅಂಚೆ ತಿಪಟೂರು ತಾಲ್ಲೂಕು



ಜಯಲಕ್ಷ್ಮಿರಾವ್ [ಜೇಜಿ]
ಜ 13-4-1925
ಮೈಸೂರು ಜಿಲ್ಲೆ ಕೊಳ್ಳೇಗಾಲ; ಜನಾರ್ಧನ ಅಯ್ಯಂಗಾರ್-ಲಕ್ಷ್ಮಮ್ಮ : 1 ಗಂ 2 ಹೆ ಮಕ್ಕಳು : ಪ್ರಾ. ಹೊಳೇನರಸೀಪುರ, ಹಿಂದಿ ರಾಷ್ಟ್ರ ಭಾಷಾ ; 2 ಕೃತಿಗಳು: ಕುಸುಮ, ವಿಷಬೀಜ (ಕಾ) ; ಹವ್ಯಾಸ : ಕಸೂತಿ, ಹೆಣಿಗೆ
95 ಗಾಯಿತ್ರಿದೇವಿ ಪಾರ್ಕ್ ಬಡಾವಣೆ ವೈಯ್ಯಾಳಿ ಕಾವಲ್ ಬೆಂಗಳೂರು 560 003



ಜಯಲಕ್ಷ್ಮೀದೇವಿ, ಚನ್ನಪಟ್ಟಣ ನಾರಾಯಣರಾವ್
ಜ 8-8-1931
ಬೆಂಗಳೂರು ಜಿಲ್ಲೆ ಚನ್ನಪಟ್ಟಣ ; ಸಿ ಕೆ ನಾರಾಯಣರಾವ್-ನಂಜಮ್ಮ : ಬಿ.ಎ. (1954), ಎಂ.ಎ. (1968) ; ಶುಭದೃಷ್ಟಿ ಕಥಾ ಸಂಕಲನಕ್ಕೆ ರಾಜ್ಯ ಪ್ರಶಸ್ತಿ, ಗಂಗರಸ ದುರ್ವಿನೀತ ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (1980),

ಕೋಳೂರು ಕೊಡಗೂಸು ಶಿಶುಸಾಹಿತ್ಯಕ್ಕೆ ಕೇಂದ್ರ ಶಿಶುಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ ; ಭಾರತೀ ಮಹಿಳಾ ಸಮಾಜ ಮೈಸೂರು ಗೌರವ ಕಾರ್ಯದರ್ಶಿ ; 7 ಕೃತಿಗಳು : ಅನಾಮಿಕಾ ಮತ್ತು ಇತರ ಕತೆಗಳು, ಶುಭದೃಷ್ಟಿ (ಸ ಕ) ಮಕ್ಕಳ ಮೂರು ನಾಟಕಗಳು, ಕೋಳೂರು ಕೊಡಗೂಸು (ಬಾ), ಗ್ರಾಮಲೀಲೆ, ಗಂಗರಸ ದುರ್ವಿನೀತ, ಶಪ್ತವಾಪಿ (ಕಾ)

23 1ನೇ ಮುಖ್ಯರಸ್ತೆ ಸರಸ್ವತಿಪುರಂ ಮೈಸೂರು 570 009



ಜಯಲಕ್ಷ್ಮೀ ಶ್ರೀನಿವಾಸನ್
ಜ 12-12-1911

ತಮಿಳುನಾಡಿನ ಕರೂರು ತಾಲ್ಲೂಕಿನ ವಾಂಗಲ್ ; ಎ ವಿ ರಾಮನಾಥನ್-ಸೀತಾಲಕ್ಷ್ಮಿ ; 4 ಮಕ್ಕಳು; ಮೈಸೂರು ಬೆಂಗಳೂರುಗಳಲ್ಲಿ ಶಿಕ್ಷಣ ; ಯೂರೋಪ್ ಪ್ರವಾಸ; ವಿದ್ಯಾರತ್ನ ಬಿರುದು (ತಮಿಳುನಾಡು), ಕರ್ನಾಟಕ ರಾಜ್ಯ ಪ್ರಶಸ್ತಿ (1971) 30 ಕೃತಿಗಳು : ಪುಷ್ಪಹಾರ, ಪ್ರೇಮ (ಕಾ), ಪರಿಮಳೆ ಮತ್ತು ಸುಲೋಚನೆ, ವಾತ್ಸಲ್ಯ (ಸ ಕ), ಮೂರು ಮುತ್ತುಗಳು, ಮಿಠಾಯಿ (ಬಾ), ಚಂಚಲೆ (ಪ್ರ ವಾ), ಸರೋಜ ನಳಿನೀ (ಜೀ), ಕಲಾವಿದನ ತ್ಯಾಗ, ಚಿನ್ನದ ಬಳೆ ಮತ್ತು ಇತರ ಕತೆಗಳು (ಅನು), ವೈಭವದ ಮನೆ (ಗ್ರ) ; ಹವ್ಯಾಸ : ಹೊಲಿಗೆ, ಕಸೂತಿ, ತೋಟಗಾರಿಕೆ

ಮುಕ್ಕಾಂ ನಂ 14 12ನೇ ಕ್ರಾಸ್ ಎಲ್ಲನ್ ಗಾರ್ಡನ್ ಬೆಂಗಳೂರು 560 027



ಜಯಸಿಂಹ
ಜ 24-4-1953

ಬೆಂಗಳೂರು ; ಎಚ್ ಶ್ರೀನಿವಾಸಮೂರ್ತಿ-ಮಧುರಾಬಾಯಿ ; ಬಿ ಕಾಂ ಬೆಂ ವಿ ; ಎಚ್ ಎಂ ಟಿ ಸಂಸ್ಥೆಯಲ್ಲಿ ಉದ್ಯೋಗ ; ಪರಿಮಳ ಗೆಳೆಯರ ಬಳಗ, ಪರಿಮಳ ಎಳೆಯರ ಬಳಗ ಸದಸ್ಯ ; ಪರಿಮಳ ಪ್ರಕಾಶನದ ಸ್ಥಾಪಕ ಮತ್ತು ಸಂಚಾಲಕ, ಎಚ್ ಎಂ ಟಿ ಯುವಸಂಪದದ ಸದಸ್ಯ ; 10 ಕೃತಿಗಳು : ಸಂದಿಗ್ಧ, ಮೊದಲ ನೋಟ (ಕ), ಏಕಲವ್ಯ, ಶರಸೇತುವೆ (ನಾ), ಹಾಡೋಣ ಬನ್ನಿ, ಹೆಳವನ ಕಟ್ಟೆ ಗಿರಿಯಮ್ಮ (ಬಾ), ಗುರುರಾಘವೇಂದ್ರರು, ಮಂತ್ರಾಲಯದ ಮಹಾಪ್ರಭುಗಳು, (ಜೀ); ಹವ್ಯಾಸ : ಈಜುಗಾರಿಕೆ

178 ಬನಶಂಕರಿ 1ನೇ ಸ್ಟೇಜ್ ಬೆಂಗಳೂರು 560 050



ಜಯಸಿಂಹರೆಡ್ಡಿ, ಗೂಡಾ [ಜಿ ಜೆ ಹರಿಜಿತ್]
ಜ 26–7–1938

ಚಿತ್ರದುರ್ಗ ; ಜಿ ತಿಪ್ಪಾರೆಡ್ಡಿ–ಅಜ್ಜಮ್ಮ ತಿಪ್ಪಾರೆಡ್ಡಿ ; 1 ಹೆ ಮಗು ; ಪ್ರಾ, ಪ್ರೌ ಚಿತ್ರದುರ್ಗ, ಇಂಟರ್ ಮೀಡಿಯೆಟ್ ಮಧ್ಯಪ್ರದೇಶ, ಬಿ.ಎ. ಮೈಸೂರು, ಎಂ.ಎ. (ಹಿಂದಿ) ಕಾಶಿ, ಎಂ.ಎ. (ಹಿಂದಿ) ಲಕ್ನೋ ; ಹಿಂದಿ ಅಧ್ಯಾಪಕ ಆಚಾರ್ಯ ಪಾಠಶಾಲಾ ಸಂಜೆ ಕಾಲೇಜು ; ಮುಗಿಲು ಮಂಜು ನಾಟಕ ಕೃತಿಗೆ ಕೇಂದ್ರ ಸರ್ಕಾರದ ಬಹುಮಾನ ; ಪಿ ಇ ಎನ್ ಆಲ್ ಇಂಡಿಯಾ ಸೆಂಟರ್‌ನ ಸದಸ್ಯ ; 9 ಕೃತಿಗಳು : ಏರಿಳಿತ, ಮುಗಿಲು ಮಂಜು, ಸ್ನೇಹಸೂತ್ರ, ರೈಲು ಸತ್ಯಾಗ್ರಹ (ನಾ), ಕಾಡಿನ ಮಕ್ಕಳು (ಅನು) ; ಹವ್ಯಾಸ : ನಾಟಕ ನಿರ್ದೇಶನ
221 ಮಹಡಿಮನೆ 2ನೇ ಕ್ರಾಸ್ ಹನುಮಂತನಗರ ಬೆಂಗಳೂರು 560 019

ಜಲಜಾ ಗಂಗೂರ [ಕಂದ ಜಲಜಾ]
ಜ 10-6-1940

ಬಳ್ಳಾರಿ ಜಿಲ್ಲೆ ಕಂಪ್ಲಿ : ಕಪ್ಪಬಾಳ ಪ್ರಹ್ಲಾದಾಚಾರ್ಯ–ಕಪ್ಪಬಾಳ ಪದ್ಮಾವತಿ : 5 ಗಂ 1 ಹೆ ಮಕ್ಕಳು ; ಪ್ರಾ. ಮಾ, ಪ್ರೌ ಹೊಸಪೇಟೆ ; 5 ಕೃತಿಗಳು : ಶೃಂಗಾರ ರಸಮಂಜರಿ, ಪಿತನ ಸಂದೇಶ, ರಾಯರ ಅಂತರಂಗ, ಶ್ರೀ ಸತ್ಯಜ್ಞಾನತೀರ್ಥರ ಸ್ಮರಣ ಕವನಗಳು
ರಾಣಿಪೇಟೆ ಹೊಸಪೇಟೆ ಬಳ್ಳಾರಿ ಜಿಲ್ಲೆ



ಜವರೇಗೌಡ, ದೇವೇಗೌಡ [ದೇಜಗೌ]
ಜ 6-7–1918

ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಚಕ್ಕೆರೆ; ದೇವೇಗೌಡ–ಚನ್ನಮ್ಮ ; 1 ಗಂ 1 ಹೆ ಮಕ್ಕಳು ; ಚಕ್ಕೆರೆ ಚನ್ನಪಟ್ಟಣ ಮೈಸೂರು ಬೆಂಗಳೂರುಗಳಲ್ಲಿ ವಿದ್ಯಾಭ್ಯಾಸ, ಎಂ.ಎ. ಡಿಲಿಟ್; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕ, ಉಪ ಪ್ರಾಧ್ಯಾಪಕ, ಪರೀಕ್ಷಾಧಿಕಾರಿ, ಶಿವಮೊಗ್ಗ ಸಹ್ಯಾದ್ರಿ ಕಾಲೇಜು ಪ್ರಿನ್ಸಿಪಾಲ್, ಪ್ರಾಧ್ಯಾಪಕ, ಕಲಾ ವಿಭಾಗದ ಡೀನ್, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ

(1965–75) ನಿವೃತ್ತಿ (1977) ; ರಷ್ಯಾ, ಜರ್ಮನಿ, ಆಸ್ಟ್ರಿಯಾ, ಇಟಲಿ, ಇಸ್ರೇಲ್, ಇರಾನ್, ಇಂಗ್ಲೆಂಡ್, ಐರ್ಲೆಂಡ್, ಫ್ರಾನ್ಸ್, ಕೆನ್ಯಾ, ನೈಜೀರಿಯಾ ಪ್ರವಾಸ ; ದೇಜಗೌ ಟ್ರಸ್ಟಿನ ಸಂಸ್ಥಾಪಕ, ನಲವತ್ತೇಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ; ಸೋವಿಯತ್ ಲ್ಯಾಂಡ್ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ ; ಅಭಿನಂದನ ಗ್ರಂಥಗಳು : ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ, ಅಂತಃಕರಣ, ರಸಷಷ್ಟಿ ; 85 ಕೃತಿಗಳು : ಕಬ್ಬಿಗರ ಕಾವಂ. ರುಕ್ಮಾಂಗದ ಚರಿತೆ, (ಸಂ), ಗದ್ಯಶೈಲಿ, ಜಾನಪದ ಅಧ್ಯಯನ, ನೂರೆಂಟು ಪುಸ್ತಕಗಳು, ಕುವೆಂಪು ಅವರ ಶಿಕ್ಷಣ ತತ್ವ ವಿಚಾರಗಳು (ವಿಮ), ಆಲ್ಬರ್ಟ್ ಐನ್‌ಸ್ಟೀನ್, ಕ್ರಾಂತಿಕಾರಿ ಅಂಬೇಡ್ಕರ್, ಬೆಂಗಳೂರು ಕೆಂಪೇಗೌಡ (ಜೀ), ನೆನಪು ಕಹಿಯಲ್ಲ, ಪುನರುತ್ಥಾನ, ಹಮ್ಮುಬಿಮ್ಮು (ಅನು), ಮೋತಿಲಾಲ್ ನೆಹರೂ (ಪ್ರ), ಕುವೆಂಪು ಸೂಕ್ತಿ ಮಾಲೆ, ಸಾಹಿತ್ಯಾರಾಧನೆ (ಇತರರೊಡನೆ), ಇಂಗ್ಲಿಷ್‌ನಲ್ಲೂ ಕೃತಿರಚನೆ ಮಾಡಿದ್ದಾರೆ

ಕಲಾನಿಲಯ 3ನೇ ಕ್ರಾಸ್ ಜಯಲಕ್ಷ್ಮೀಪುರಂ ಮೈಸೂರು 12

ಜವಳಿ, ಬಸವಪ್ಪ ಚನ್ನವೀರಪ್ಪ
ಜ **10-3-1931**

ಧಾರವಾಡ ಜಿಲ್ಲೆ ಹಾನಗಲ್ ; 1 ಗಂ 4 ಹೆ ಮಕ್ಕಳು ; ಪ್ರಾ ಹಾವಣಗಿ ಮತ್ತು ಅಕ್ಕಿ ಆಲೂರು, ಪ್ರೌ ಧಾರವಾಡ ಹಾಗೂ ಮುಂಬೈ, ಬಿ.ಎ. ಎಂ.ಎ. ಧಾರವಾಡ ; ಅಧ್ಯಾಪಕ ಕ ವಿ ; ಕರ್ನಾಟಕ ವಿದ್ಯಾವರ್ಧಕ ಸಂಘದ ಸದಸ್ಯ ; 11 ಕೃತಿಗಳು : ಗಿರಿಜಾಕಲ್ಯಾಣ, ಬಸವಣ್ಣನವರ ಯೋಜನೆಗಳು, ಹರಿಹರ ಕವಿಯ ಮಹೋನ್ನತ ವಿಚಾರಗಳು, ನಂಬಿಯಣ್ಣನ ರಗಳೆ, ಹರಿಹರ ಕವಿಯ ಬಸವೇಶ್ವರ ದೇವರ ಚರಿತೆ

ತೇಜಸ್ವಿ ಬಿಲ್ಡಿಂಗ್ ಕಲ್ಯಾಣನಗರ ಧಾರವಾಡ 7

ಜಹಗೀರದಾರ, ಮಧ್ವಾಚಾರ್ಯ ರಾಮಾಚಾರ್ಯ
ಜ **3-6-1924**



ಬಿಜಾಪುರ ಜಿಲ್ಲೆ ಅಗರಖೇಡ ; 2 ಗಂ 2 ಹೆ ಮಕ್ಕಳು ; ಬಿ.ಎ. ಮುಂಬೈ ವಿಶ್ವವಿದ್ಯಾನಿಲಯ, ಎಂ.ಎ. ಬಿ.ಎಡ್. ಕರ್ನಾಟಕ ವಿಶ್ವವಿದ್ಯಾಲಯ ; ಬಿ.ಎಡ್. ಪದವಿಯಲ್ಲಿ ಸ್ವರ್ಣ ಪದಕ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಆದರ್ಶ ಶಿಕ್ಷಕ ಪ್ರಶಸ್ತಿ; 3 ಕೃತಿಗಳು : ನಿತ್ಯಜೀವನದಲ್ಲಿ ಪೂರ್ಣ ಯೋಗ, ಯೋಗದ ಮೂಲಾಧಾರ, ದಿವ್ಯಜೀವನ ಪಥದಲ್ಲಿ ; ಹವ್ಯಾಸ : ಚದುರಂಗ, ಇಂದ್ರಜಾಲ

ಚಡಚಣ ಇಂಡಿ ತಾಲ್ಲೂಕು ಬಿಜಾಪುರ ಜಿಲ್ಲೆ



ಜಾಗೀರ್‌ದಾರ್, ಸೀತಾರಾಮ ಸ್ವಾಮಿರಾವ್
[ಶಶಿತನಯ]
ಜ 7–5–1935

ಸೊಲ್ಲಾಪುರ; ಸ್ವಾಮಿರಾವ್–ಚಂದವ್ವ ; 2 ಗಂ 1 ಹೆ ಮಕ್ಕಳು; ಪ್ರಾ ಹೂವಿನಹಳ್ಳಿ. ಪ್ರೌ ಬಿ ಎ, ಎಂ.ಎ. (ಕನ್ನಡ) ಹೈದರಾಬಾದ್ ; ಶಾಸನ ಸಹಾಯಕ ಕನ್ನಡ ಅಧ್ಯಯನ ಸಂಸ್ಥೆ ಮೈ ವಿ; ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯ ; 2 ಕೃತಿಗಳು : ಕನ್ನಡ ಸಾಹಿತ್ಯದ ಬೆಳವಣಿಗೆ ಹಾಗೂ ರಾಷ್ಟ್ರಕೂಟ ಅರಸು ಮನೆತನ, ಗ್ರಂಥ ಸಂಪಾದನಾ ಶಾಸ್ತ್ರ ಪರಿಚಯ ; ಹವ್ಯಾಸ : ಸಂಗೀತ ಶ್ರವಣ

ನಂ 9 3ನೇ ಮುಖ್ಯರಸ್ತೆ ಸರಸ್ವತಿಪುರಂ ಮೈಸೂರು 9



ಜಾಫರ್, ಹಾಜಿ ಸೈಯ್ಯದ್
ಜ 2-2-1956

ಮೈಸೂರು ; ಬಿ.ಎ. ಮೈಸೂರು, ಹಿಂದಿ ವಿಶಾರದ; ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಯುವ ಬರಹಗಾರರ ಸಂಘದ ಸದಸ್ಯ ; 1 ಕೃತಿ: ಆವಿಷ್ಕಾರ (ಸ ಕ)

ಗುತ್ತಲು ಕಾಲೋನಿ ಮಂಡ್ಯ



ಜಾಯದೆ, ಪಾಂಡುರಂಗ ವಿಷ್ಣು
[ಡಾ॥ ಜಯದೇವ]
ಜ 14–6–1914

ಬೆಳಗಾಂ ಜಿಲ್ಲೆ ಖಾನಾಪುರ : 2 ಗಂ 1 ಹೆ ಮಕ್ಕಳು ; ಮ್ಯಾಟ್ರಿಕ್ಯುಲೇಷನ್, ಆಯುರ್ವೇದ ತೀರ್ಥ, ಅಹಮದನಗರ ; ದಂತ ವೈದ್ಯರು : ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸ್, ಸ್ವಿಟ್ಜರ್ ಲೆಂಡ್ ಪ್ರವಾಸ; 7 ಕೃತಿಗಳು: ವೈದ್ಯ ಸಸ್ತ್ರ

(ಭಾ 1, 2), ಸ್ತ್ರೀರೋಗ ವಿಜ್ಞಾನ ಮತ್ತು ಚಿಕಿತ್ಸೆ, ಹಲ್ಲುಗಳ ಆರೋಗ್ಯ (ವೈ), ಇಂಗ್ಲಿಷ್ ಹಾಗೂ ಮರಾಠಿಯಲ್ಲೂ ಕೃತಿ ರಚನೆ: ಹವ್ಯಾಸ : ಯೋಗ

ಮಣಿಯಾರ ಬಿಲ್ಡಿಂಗ್ ಕೊಪ್ಪೀಕರ್ ರಸ್ತೆ ಹುಬ್ಬಳ್ಳಿ



ಜ್ಞಾನಾನಂದ, ಘಂಟಾನ್ವಯಂ
ಜ 5-7-1940

ಕೋಲಾರ ಜಿಲ್ಲೆ ನಂದಿ ; ಎಂ ಆರ್ ಜಿ ಶಂಕರ್-ಈಶ್ವರಮ್ಮ ; ಪ್ರಾ, ಪ್ರೌ ಚಿಕ್ಕಬಳ್ಳಾಪುರ, ಬಿ.ಎಸ್‌ಸಿ. ಮೈಸೂರು. ರಾಷ್ಟ್ರಭಾಷಾ ಪ್ರವೀಣ್ ; ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಕಾರ್ಖಾನೆಯಲ್ಲಿ ಅಸಿಸ್ಟೆಂಟ್ ಸೂಪರ್‌ವೈಜರ್ ; ನವ ಅಕ್ಷರಸ್ಥರಿಗಾಗಿ ಬರೆದ ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಆಕಾಶಯಾತ್ರೆ ಮತ್ತು ಸೂರ್ಯದೇವನ ಸಂಸಾರ ಕೃತಿಗಳಿಗೆ ಕೇಂದ್ರ ಸರ್ಕಾರದ ಬಹುಮಾನ ; 24 ಕೃತಿಗಳು : ನಮೂನಾ, ಅನ್ನಪೂರ್ಣ (ಕಾ), ರಾಜೂರಾದ್ಧಾಂತ (ಬಾ), ಹೊಸ ವರ್ಷಕ್ಕೊಂದು ಕಥೆ, ದೋಸನೀರು (ಅನು), ಇಂಗ್ಲಿಷ್‌ನಲ್ಲೂ ಕೃತಿರಚನೆ ; ಹವ್ಯಾಸ : ಛಾಯಾಗ್ರಹಣ, ಚಿತ್ರಕಲೆ

2-163 ಬಿ ಇ ಎಂ ಎಲ್ ನಗರ ಕೆ ಜಿ ಎಫ್ 563 115

ಜಿನರಾಜಶಾಸ್ತ್ರೀ, ಶಿರ್ತಾಡಿ
ಜ 11-5-1914

ದ ಕ ಜಿಲ್ಲೆ ಶಿರ್ತಾಡಿ ; ಅಪ್ಪುಸೇಮಿತ-ನೀಲಮ್ಮ ; 4 ಗಂ 4 ಹೆ ಮಕ್ಕಳು ; ಪ್ರಾ ಶಿರ್ತಾಡಿ ಜೈನವೇದ ಸಂಸ್ಕೃತ ಪಾಠಶಾಲೆ ಶ್ರವಣಬೆಳಗೊಳ. ಶ್ರೀ ಗೋಪಾಲದಾಸ್ ಸಂಸ್ಕೃತ ಕಾಲೇಜು ಮಧ್ಯಪ್ರದೇಶ, ಜೈನ ಸಂಸ್ಕೃತ ಕಾಲೇಜು ರಾಜಾಸ್ಥಾನ. ಜೈನ ಸ್ಯಾದ್ವಾದ ಸಂಸ್ಕೃತ ಕಾಲೇಜು ಕಾಶಿಗಳಲ್ಲಿ ಶಾಸ್ತ್ರಿ, ನ್ಯಾಯತೀರ್ಥ ಪದವಿ ; ಸಿದ್ಧಾಂತಾಚಾರ್ಯ ಪ್ರಶಸ್ತಿ ; ವಿವೇಕೋದಯ ಗ್ರಂಥಮಾಲೆ, ಸಮವಸರಣ ಗ್ರಂಥಮಾಲೆ ಸದಸ್ಯ ; 5 ಕೃತಿಗಳು : ಗೊಮ್ಮಟಸಾರ ಜೀವಕಾಂಡ (ಅನು), ವೃಷಭ ದೇವನಾಟಕ, ವೃಷಭ ದೇವಚರಿತೆ. ಉಪನಯನ ವಿಧಿ, ಸಂಕ್ಷಿಪ್ತ ಪೂಜಾ ವಿಧಾನ

ಉಪನ್ಯಾಸಕರು ಶ್ರೀ ಸಿದ್ಧವನ ಗುರುಕುಲ ಉಜಿರೆ ದ ಕ ಜಿಲ್ಲೆ

ಜೈಕುಮಾರ್, ಮರಿಯಪ್ಪ
ಜ 22-2-1951

ಮೈಸೂರು ; ಕೆ ಮರಿಯಪ್ಪ-ವಿಜಯಮ್ಮ ; ಪ್ರೌ ಹಾಸನ ಮತ್ತು ಚಿಕ್ಕಮಗಳೂರು ; ಬಿ.ಎಸ್‌ಸಿ. ಶಿವಮೊಗ್ಗ, ಎಂ.ಎ. (ಕನ್ನಡ) ಮಂಗಳೂರು ವಿ ; 3 ಕೃತಿಗಳು : ದಾಟಿ, ಕವನ (ವಿ), ಸಂಕಲನ (ಸ ಕ) : ಹವ್ಯಾಸ : ಛಾಯಾಗ್ರಹಣ, ಪ್ರವಾಸ

115/1 ಜಿವನ್ ಬಿಮಾನಗರ ಬೆಂಗಳೂರು 560 017



ಜೋಗಳೇಕರ, ನಾಗನಾಥ ಕಲ್ಲೋಪಂತ
[ತ್ರಿಕಾಲಜ್ಞ, ರೇವತೀಪ್ರಿಯ, ಉಮಾಸುತ]
ಜ 10-6-1932

ಧಾರವಾಡಜಿಲ್ಲೆ ಭರಡಿ : ಕಲ್ಲೋಪಂತ ಮಹಾದೇವ ಜೋಗಳೇಕರ-ಉಮಾಬಾಯಿ : ಎಸ್.ಎಸ್.ಸಿ, ಆಯುರ್ವೇದ ಡಿಪ್ಲೊಮಾ, ಹೋಮಿಯೋಪತಿ, ಸಂಗೀತ ಶಿಕ್ಷಣ ; ಸಂಸ್ಕೃತ ಶಿಕ್ಷಣ ಸಮಿತಿ ಧಾರವಾಡ ಅಧ್ಯಕ್ಷ ; ಜ್ಯೋತಿರ್ವಾಣಿ ಮಾಸ ಪತ್ರಿಕೆ ಸಂಪಾದಕ (1961-62) ; 12 ಕೃತಿಗಳು : ವಧೂವರರ ಜ್ಯೋತಿಷ್ಯ, ಗ್ರಹಗತಿ, ಪಂಚಾಂಗ ಪ್ರದೀಪ, ಆಕಸ್ಮಿಕ ಧನಯೋಗ

ಜ್ಯೋತಿಷ್ಯ ಕಾರ್ಯಾಲಯ ಜವಳಿಪೇಟೆ ಧಾರವಾಡ 580 001

ಜೋಶಿ, ಕೃಷ್ಣ ಗುರುನಾಥ
ಜ 1-3-1944



ಧಾರವಾಡ ಜಿಲ್ಲೆ ಹೊಳೆಮಣ್ಣೂರು ; ಗುರುನಾಥ-ಬನಶಂಕರಿ ; ಎಸ್.ಎಸ್.ಸಿ. ಹುನಗುಂದ, ಬಿ.ಎ., ಎಂ.ಎ. (ಸಮಾಜಶಾಸ್ತ್ರ) ಧಾರವಾಡ ; ಅಧ್ಯಾಪಕ; ಇಂಡಿಯನ್ ಸೋಷಿಯಾಲಾಜಿಕಲ್ ಸೊಸೈಟಿ ನವದೆಹಲಿ ಆಜೀವ ಸದಸ್ಯ ; 4 ಕೃತಿಗಳು : ಸಾಮಾಜಿಕ ಸಮಸ್ಯೆಗಳು, ಸಾಮಾಜಿಕ ಬದಲಾವಣೆ ಮತ್ತು ಪ್ರಗತಿ, ಸಂಧಿಕಾಲದ ಹಿಂದೂ ಸಮಾಜ, ಸಮಾಜ ಶಾಸ್ತ್ರದ ಮೂಲ ಸಿದ್ಧಾಂತಗಳು (ಸ)

ಎಲ್ ವಿ ಡಿ ಕಾಲೇಜ ರಾಯಚೂರು



ಜೋಶಿ, ಕೃಷ್ಣಭಟ್ಟ ಪರಶುರಾಮಭಟ್ಟ
ಜ 9-9-1931

ಧಾರವಾಡ ಜಿಲ್ಲೆ ಮಿಶ್ರೀಕೋಟೆ; ಪರಶುರಾಮ ಭಟ್ಟ ರಾಮಭಟ್ಟ ಜೋಶಿ-ಅಂಬಕ್ಕ; ಪ್ರಾ ಮಿಶ್ರೀಕೋಟೆ, ಶಿಕ್ಷಕ ತರಬೇತಿ ವಿಜಾಪುರ; ಅರ್ಥ ವಿಕಾಸ ವಾರಪತ್ರಿಕೆ ಸಂಪಾದಕ; 8 ಕೃತಿಗಳು: ತತ್ತ್ವಮಥನ, ಮಾನವ ಕುಲದ ಸ್ಥಿತಿ ಮಾನ ದರ್ಶನ, ಸಮಾಜ ಮೀಮಾಂಸೆ, ಅರ್ಥಶಾಸ್ತ್ರ ಅನಾಹುತ (ಅ ಶಾ)

ವಿಠೋಬಾ ಗಲ್ಲಿ ಹುಬ್ಬಳ್ಳಿ 580 020

ಜೋಶಿ, ಗುರುರಾಜ ಭೀಮಾಚಾರ್ಯ
ಜ 20-3-1897

ಗದಗ ತಾಲ್ಲೂಕು ಹೊಂಬಳ; ಭೀಮಾಚಾರ್ಯ ಜೋಶಿ-ಭಾರತೀಬಾಯಿ; 4 ಗಂ ಮಕ್ಕಳು; ಎಂ.ಎ.ಬಿ.ಟಿ.; ಶಿಕ್ಷಕನಾಗಿ ನಿವೃತ್ತಿ; ಉಪನ್ಯಾಸ ಕೇಸರೀ ಬಿರುದು; ಸ್ಫೋಟವಾದ ಕೃತಿಗೆ ರಾಜ್ಯಪ್ರಶಸ್ತಿ; 8 ಕೃತಿಗಳು: ಅನಂತ, ಮೇದಿನಾಪುರ ಮಲ್ಲ (ಕಾ), ಭಾರತಮಾರ್ಗ, ಪ್ರೇಮಾಹುತಿ (ಅನು) ಸಂಸ್ಕೃತ ಕನ್ನಡ ಕೋಶ (ಕೋ) ಕನಸಿನ ಕಾಣಿಕೆ (ಜೀ)

ಜಿ ಬಿ ಜೋಶಿ ಗದಗ

ಜೋಶಿ, ಗುರುನಾಥ ಮಹಾದೇವ
[ಜೋಗು, ಗದಾಧರ, ಜಿ ನೀಲಕಂಠರಾಯರು]
ಜ 15-3-1908



ಧಾರವಾಡ ಜಿಲ್ಲೆ ಬಗಡಗೇರಿ; ಮಹಾದೇವ-ರಂಗೂಬಾಯಿ; 3 ಗಂ 4 ಹೆ ಮಕ್ಕಳು; ಪ್ರಾ ಬೆಲವಂತರ ಹಾಗೂ ಕಲಘಟಗಿ, ಮಾ ಧಾರವಾಡ, ಪ್ರೌ ಕಾಶಿ, ಎಂ.ಎ. ಕರ್ನಾಟಕ ವಿಶ್ವವಿದ್ಯಾಲಯ, ಸಾಹಿತ್ಯರತ್ನ ಪ್ರಯಾಗ, ಹಿಂದಿ ಶಿಕ್ಷಕ ಸನದ ಮುಂಬೈ; ಹಿಂದಿ ಪ್ರಾಧ್ಯಾಪಕ; ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯ, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಸದಸ್ಯ; 54 ಕೃತಿಗಳು: ಕಾಶ್ಮೀರ ಪ್ರವಾಸ, ಭಕ್ತ ಕವಿಗಳು, ಗೌರೀಶಂಕರ ಶಿಖರಾರೋಹಣ, ಕಾಂಗ್ರೆಸ್ಸಿನ ಇತಿಹಾಸ, ಸುಬೋಧ ಹಿಂದಿ ಕನ್ನಡ

ವ್ಯಾಕರಣ, ನಿಬಂಧ ರಚನಾ ಕೌಶಲ್ಯ, ಶರತ್‌ಚಂದ್ರ ಚಟ್ಟೋಪಾಧ್ಯಾಯ ; ಹವ್ಯಾಸ : ಸಂಗೀತ ಶ್ರವಣ, ಪ್ರವಾಸ

ನಾನಾದೀಕ್ಷಿತವಾಡಾ ಲೈನ್‌ಬಜಾರ್ ಧಾರವಾಡ 580 001



ಜೋಶಿ, ಗೋವಿಂದ ಭೀಮಾಚಾರ್ಯ
[ಜಡಭರತ, ಅನಾಮಧೇಯ]
ಜ 1-1-1905

ಧಾರವಾಡ ಜಿಲ್ಲೆ ಹೊಂಬಳ ; ಭೀಮಾಚಾರ್ಯ ಜೋಶಿ-ಭಾರತೀಬಾಯಿ ; 3 ಗಂ 1 ಹೆ ಮಕ್ಕಳು; ಪ್ರಾ ಗದಗ, ಪ್ರೌ ಮತ್ತು ಇಂಟರ್ ಮೀಡಿಯೆಟ್ ಧಾರವಾಡ ; ನಡೆದು ಬಂದ ದಾರಿ, ಮೂಕಬಲಿ, ಕದಡಿದ ನೀರು ಕೃತಿಗಳಿಗೆ ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ, ನಾಟಕ ಅಕಾಡೆಮಿ ಪುರಸ್ಕಾರ ; ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ, ಮನೋಹರ ಗ್ರಂಥಮಾಲೆಯ ಸಂಪಾದಕ ; 7 ಕೃತಿಗಳು : ಧರ್ಮಸೆರೆ (ಕಾ), ಜೀವಫಲ (ಕ), ಮೂಕಬಲಿ, ಆ ಊರು ಈ ಊರು, ಸತ್ತವರ ನೆರಳು (ನಾ), ಜಡಭರತನ ಕನಸುಗಳು (ಸ ಕ) ; ಹವ್ಯಾಸ : ಕುಸ್ತಿ, ಕ್ರೀಡೆ, ಈಜು

ಮನೋಹರ ಗ್ರಂಥಮಾಲೆ ಸುಭಾಸ್ ರಸ್ತೆ ಧಾರವಾಡ 580 001

ಜೋಶಿ, ತಿರುಮಲೇಶ್ವರ
ಜ 3-2-1928

ದ ಕ ಜಿಲ್ಲೆ ವೀರಕಂಬ ; ಎಸ್ ಗಣಪತಿ ಜೋಶಿ-ಸರಸ್ವತಿ ಅಮ್ಮ ; ಪ್ರಾಥಮಿಕ ವಿದ್ಯಾಭ್ಯಾಸ ; ಅಡಿಗೆ ವೃತ್ತಿ ; 1 ಕೃತಿ : ತ್ರಿಮಧುರ

ಪಂಜಾಳಮನೆ ಆರ್ಯಾಪು ಗ್ರಾಮ ಪುತ್ತೂರು ಮಾರ್ಗ

ಜೋಶಿ, ದತ್ತಾತ್ರೇಯ ತಿಮ್ಮಣಭಟ್ಟ
ಜ 6-2-1938



ಮುದ್ದೆಬಿಹಾಳ : ತಿಮ್ಮಣಭಟ್ಟ-ಸುಭದ್ರಾಬಾಯಿ; 2 ಗಂ ಮಕ್ಕಳು ; ಪ್ರಾ ಮಾ ಪ್ರೌ ಬಿ ಎ. ಗದಗ, ಎಂ.ಎ. ಧಾರವಾಡ : ಉಪಾಧ್ಯಾಪಕ ಕಾರವಾರ ಕಲಾ ಹಾಗೂ ವಿಜ್ಞಾನ ಕಾಲೇಜು ; 5 ಕೃತಿಗಳು : ಜಗತ್ತಿನ ಇತಿಹಾಸ, ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು, ಕನ್ನಡ ರಾಜ್ಯ ರಮಾರಮಣ ಕೃಷ್ಣದೇವರಾಯ,

ಮೊಗಲರ ಕಾಲದ ಭಾರತ (ಇ)

ಉಪಪ್ರಾಧ್ಯಾಪಕ ಕೆ ಜಿ ಎಸ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಕಾರವಾರ



ಜೋಶಿ, ಲಕ್ಷ್ಮಣ ಹರಿಹರ

ಜ 7-5-1918

ದ ಕ ಜಿಲ್ಲೆಯ ಮಾಳ; ಹರಿಹರ ಜೋಶಿ–ಪಾರ್ವತೀ ಬಾಯಿ; 5 ಗಂ 2 ಹೆ ಮಕ್ಕಳು; ಪ್ರಾಥಮಿಕ ವಿದ್ಯಾಭ್ಯಾಸ; ಕೃಷಿಕ; 1 ಕೃತಿ: ಪಂಡಿತ ರಮಾಬಾಯಿ ಸರಸ್ವತಿ (ಜೀ)

ಮಾಳ ಕಾರ್ಕಳ ತಾಲ್ಲೂಕು ದ ಕ ಜಿಲ್ಲೆ

ಜೋಶಿ, ಶಂಕರ ಬಾಳದೀಕ್ಷಿತ

[ತಿಸುಳಿ, ಶಾಂಡಿಲ್ಯ, ಬಸವರಸ]

ಜ 4-1-1896



ಚಿಕ್ಕಮಗಳೂರು ಜಿಲ್ಲೆ ಕಳಸ; ರಾಘವೇಂದ್ರ ರಾವ್-ಸುಬ್ಬಮ್ಮ; 2 ಹೆ ಮಕ್ಕಳು; ಪ್ರಾ ಮಾ ಪ್ರೌ ಕಳಸ ಆನವಟ್ಟಿ ಸೊರಬ ಸಾಗರ ಶಿರಾಳಕೊಪ್ಪ, ಇಂಟರ್ ಮೀಡಿಯೆಟ್ ಶಿವಮೊಗ್ಗ, ಬಿ ಎ ಆನರ್ಸ್, ಎಂ ಎ ಬೆಂಗಳೂರು; ಇಂಗ್ಲಿಷ್ ಅಧ್ಯಾಪಕ (1965-71) ಗೋವಾ, ಕನ್ನಡ ಅಧ್ಯಯನ ಕೇಂದ್ರ ಬೆಂ ವಿ; ಅಮೆರಿಕ ಪ್ರವಾಸ; 4 ಕೃತಿಗಳು: ನಿಮ್ಮ ಪ್ರೇಮಕುಮಾರಿಯ ಜಾತಕ, ಕಪ್ಪುದೇವತೆ (ಕ) ಎಂ ಗೋಪಾಲಕೃಷ್ಣ ಅಡಿಗ: ಒಂದು ಕಾವ್ಯಾಭ್ಯಾಸ (ವಿಮ) ಬೊಕ್ಕತಲೆಯ ನರ್ತಕಿ (ನಾ)

ಕರ್ನಾಟಕ ಬುಕ್ ಹೌಸ್ ಗಾಂಧಿಬಜಾರ್ ಬಸವನಗುಡಿ ಬೆಂಗಳೂರು 560 004



ನಾಡಿಗೇರ, ಕೃಷ್ಣರಾಯ [ಗೇಡಿನಾರ]
ಜ 25-3-1908

ಹರಿಹರ : ನಾಡಿಗೇರ ದತ್ತಾತ್ರೇಯರಾಯ–ಕಾಮಾಕ್ಷಮ್ಮ ; ಪ್ರೌಢಶಿಕ್ಷಣ ದಾವಣಗೆರೆ ; ಲೇಖನ ವೃತ್ತಿ ; 65 .ಕೃತಿಗಳು : ಎದಿರೇಟು, ಅದಲು ಬದಲು, ರಾಜಾರಾಣಿ ಗುಲಾಮ, ಕಮಲೆಯ ಕನಸು (ಕಾ) ತಲೆಹರಟೆ, ಕಸದಬುಟ್ಟಿ (ಪ್ರ) ರನ್ನಗನ್ನಡಿ (ಸ ಕ) ಪ್ರಣಯ ಕತೆಗಳು, ನರಕದಲ್ಲಿ ಸ್ವರ್ಗ (ಅ) ವಿ ವಿ ಗಿರಿ, ವಾಮನರಾವ್ ಮಾಸ್ತರ (ಜೀ) ಪುಡಾರಿ ಪೂರ್ಣಯ್ಯ (ನಾ) ಹರಿಹರ ಕ್ಷೇತ್ರ ಮಹಿಮೆ (ಧ)
ನಂ 86 2ನೇ ಕ್ರಾಸ್ ಚಾಂದಿನವರ ರಸ್ತೆ ಬಸವನಗುಡಿ ಬೆಂಗಳೂರು 560 004

ನಾಯಕ, ಗೋಪಾಲಕೃಷ್ಣ ಪಾಂಡುರಂಗ
ಜ 3-9-1928

ಉತ್ತರ ಕನ್ನಡ ಜಿಲ್ಲೆ ಹಿರೇಗುತ್ತಿ ; ಪಾಂಡುರಂಗ ಗೋಪಾಲ ನಾಯಕ–ಬೀರಮ್ಮ ಪಾಂಡುರಂಗನಾಯಕ ; 2 ಗಂ 2 ಹೆ ಮಕ್ಕಳು ; ಪ್ರಾ ಕುಮಟೆ ತೊರ್ಕೆ ಹಾವೇರಿ, ಪ್ರೌ ಬಿಜಾಪುರ ಕುಮಟಾ, ಬಿ ಎಸ್‌ಸಿ ಬಿ ಎಡ್ ಕುಮಟೆ ಧಾರವಾಡ ಬೆಳಗಾಂ ; ಮುಖ್ಯೋಪಾಧ್ಯಾಯ ; ಕನ್ನಡ ಸಾಹಿತ್ಯ ಪರಿಷತ್ತು, ಉತ್ತರ ಕನ್ನಡ ಜಿಲ್ಲಾ ಸಂಗೀತ ನಾಟಕ ಅಕಾಡೆಮಿ, ಸಾಹಿತ್ಯ ಪ್ರವರ್ತಕ ಸಂಘಗಳ ಸದಸ್ಯ ; 12 ಕೃತಿಗಳು : ಆ ರಾತ್ರಿ, ದೇವಮೂರ್ತಿ, ಅಬ್ಬಾ ಏನು ಹುಡುಗಿ (ನಾ) ವಿನೋಬಾ (ಜೀ) ಈ ಪರಿಯ ಸೊಬಗು (ಧ)
ಮುಖ್ಯೋಪಾಧ್ಯಾಯ ಶ್ರೀ ಸದ್ಗುರು ನಿತ್ಯಾನಂದ ಪ್ರೌಢಶಾಲೆ ಸಾಣಿಕಟ್ಟೆ ಉ ಕ ಜಿಲ್ಲೆ

ನಾಯಕ, ವಾಸುದೇವ ಕಡಿರುದ್ಯಾವರ
[ಯು ವಾಸುದೇವನಾಯಕ್]
ಜ 27-11-1918



ಮಂಜೇಶ್ವರ ; ದಾಸನಾಯಕ್–ಸರಸ್ವತಿ ; 2 ಗಂ 1 ಹೆ ಮಕ್ಕಳು ; ಬೆಳ್ತಂಗಡಿ, ಮಂಗಳೂರುಗಳಲ್ಲಿ ಶಿಕ್ಷಣ : ಎಸ್ ಎಸ್ ಎಲ್ ಸಿ ; ಶಿಕ್ಷಕ ; ಲಲಿತ ಕಲಾ ಯಕ್ಷಗಾನ ಸಂಘದ ಸದಸ್ಯ, ಹರಿದಾಸ ಸಾಹಿತ್ಯ ಸೇವಾ ಪರಿಷತ್ತಿನ ಕಾರ್ಯದರ್ಶಿ ; 16

ಕೃತಿಗಳು : ಜ್ವಾಲಾಮುಖಿ, ಕರಾಳಕೂಟ (ಕಾ) ಹೊಂಬುಜಕ್ಷೇತ್ರ ಮಹಾತ್ಮೆ. ಗಣಪತಿ ಪ್ರತಾಪ (ಯ) ಜಿನದತ್ತರಾಯ ಚರಿತ್ರಂ (ನಾ) ವಸಂತ ವಿಹಾರ (ಖಂ) ಹವ್ಯಾಸ : ಯಕ್ಷಗಾನ, ಹರಿಕಥೆ, ಪ್ರವಾಸ, ಚಿತ್ರಕಲೆ

ಮುಖ್ಯೋಪಾಧ್ಯಾಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಡಿರುದ್ಯಾವರ ದ ಕ ಜಿಲ್ಲೆ



ನಾಯಕ, ಗೋವಿಂದರಾಯ ಹಮ್ಮಣ್ಣ
ಜ 18–9–1935

ಉತ್ತರ ಕನ್ನಡ ಜಿಲ್ಲೆ ಸೂರ್ವೆ ; ಹಮ್ಮಣ್ಣ ರಾಕಂ ನಾಯಕ–ಬಾಳು ಹಮ್ಮಣ್ಣನಾಯಕ ; 1 ಹೆ ಮಗು ; ಪ್ರಾ ಬಾಸಗೋಡ, ಮಾ ಪ್ರಾ ಅಂಕೋಲಾ, ಕಾಲೇಜು ಶಿಕ್ಷಣ ಯುವರಾಜ ಕಾಲೇಜು, ಮಹಾರಾಜ ಕಾಲೇಜು, ಶಾರದಾ ವಿಲಾಸ ಲಾ ಕಾಲೇಜು ಎಂ ಎ ಬಿ ಎಲ್ ; ಮಾನಸಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪಕ : ಮೈಸೂರಿನ ಚೇತನ ಕನ್ನಡ ಸಂಘದ ಅಧ್ಯಕ್ಷ : 4 ಕೃತಿಗಳು : ಸಮಕಾಲೀನ, ಅನಿವಾರ್ಯ (ವಿ) ಕನ್ನಡ ಸಣ್ಣ ಕಥೆಗಳ ಸಂಚಯ (ಸಂ) ಸಂವೇದನೆ (ಸಂ–ಇತರರೊಂದಿಗೆ)

ಅಧ್ಯಾಪಕ ಕನ್ನಡ ಅಧ್ಯಯನಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006

ನಾಯಕ. ಜಿನದೇವ ಕೃಷ್ಣ [ಜಿನದೇವ]
ಜ 18-6-1937

ಉತ್ತರ ಕನ್ನಡ ಜಿಲ್ಲೆ : ಕೃಷ್ಣರಾಮನಾಯಕ–ಕಾಮಾಕ್ಷಿ ಕೃಷ್ಣನಾಯ್ಕ ; 1 ಗಂ 2 ಹೆ ಮಕ್ಕಳು : ಪ್ರಾ ಬೆಳಗಾವಿ ಕಾರವಾರ ಯಲ್ಲಾಪುರ ಹಳಿಯಾಳ ನವಿಲುಗುಂದ. ಮಾ ಬಂಕಿಕೊಡ್ಲ. ಕಾಲೇಜು ಶಿಕ್ಷಣ ಮೈಸೂರು ಕುಮಟಾ ಧಾರವಾಡ. ಎಂ ಎ (ರಾಜ್ಯ ಶಾಸ್ತ್ರ); ಅಧ್ಯಾಪಕ ; ಹೊನ್ನಾವರ ಕರ್ನಾಟಕ ಸಂಘದ ಅಧ್ಯಕ್ಷ ; 4 ಕೃತಿಗಳು : ರಾಜ್ಯ ಶಾಸ್ತ್ರ, ಕಡಲಧ್ವನಿ. ಕನ್ನಡ ರಜತ ಪರದೆಯ ಸುವರ್ಣ ರೇಖೆಗಳು

ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಹೊನ್ನಾವರ ಉ ಕ ಜಿಲ್ಲೆ



ನಾಯಕ, ಜೆ ದತ್ತಾತ್ರೇಯ
ಜ 8-3-1916

ಕಾರವಾರ ; ಜನಾರ್ಧನ–ಪುತಳಾಬಾಯಿ ; 4 ಗಂ 2 ಹೆ ಮಕ್ಕಳು ; ಕನ್ನಡ ಏಳನೇ ತರಗತಿ, ಇಂಗ್ಲಿಷ್ ಮೆಟ್ರಿಕ್ಯುಲೇಷನ್ ; ವೈದ್ಯವೃತ್ತಿ ; 1 ಕೃತಿ : ಜಟಾಧಾರಿ ಸಾಧು

ತಡಸ ಶಿಗ್ಗಾಂವ ತಾಲೂಕ್ ಧಾರವಾಡ ಜಿಲ್ಲೆ

ನಾಯಕ, ನಾರಾಯಣ ರಾಮ
ಜ 28-6-1935


ಉತ್ತರ ಕನ್ನಡ ಜಿಲ್ಲೆ ಭಾವಿಕೇರಿ ; ರಾಮನಾಯಕ–ದೇವಮ್ಮ ನಾಯಕ ; 2 ಗಂ 1 ಹೆ ಮಕ್ಕಳು ; ಪ್ರಾ ಭಾವಿಕೇರಿ, ಮಾ ಅಂಕೋಲಾ, ಪದವಿ ಕುಮಟೆ, ಎಂ ಎ ಪಿಎಚ್ ಡಿ ಕ ವಿ ; ಅಧ್ಯಾಪಕ ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ, ಹೊನ್ನಾವರದ ಕರ್ನಾಟಕ ಸಂಘದ ಅಧ್ಯಕ್ಷ; 6 ಕೃತಿಗಳು: ವಿಮೋಚನೆ (ನಾ) ಜೇಂಗೊಡ, ಪಡುಕೋಗಿಲೆ (ಜಾ)

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಹೊನ್ನಾವರ ಉ ಕ ಜಿಲ್ಲೆ

ನಾಯಕ, ವಿನಾಯಕ ಗಣಪತಿ [ತಾಯುಸುತ]
ಜ 1-6-1950

ಉತ್ತರ ಕನ್ನಡ ಜಿಲ್ಲೆ ಕರ್ಕಿಕೋಡಿ ; ಗಣಪತಿ ಲಕ್ಷಣ ನಾಯಕ–ಸೀತಾ ಗಣಪತಿ ನಾಯಕ; 1 ಹೆ ಮಗು ; ಪ್ರಾ ಬೇರಂಕಿ ಶಿರಾಲಿ ವಾಲಗಳ್ಳಿ ಹೊನ್ನಾವರ, ಮಾ ಪ್ರೌ ಕಾಲೇಜು ಶಿಕ್ಷಣ ಹೊನ್ನಾವರ; ಪ್ರೌಢಶಾಲಾ ಉಪಾಧ್ಯಾಯ ; ಸ್ಮೃತಿ ಪ್ರಕಾಶನದ ಸಂಪಾದಕ; 4 ಕೃತಿಗಳು : ಹೊನ್ನೂರ ಜಾಜಿ (ಕ) ನಿಮ್ಮ ಸೃಷ್ಟಿ–ನಮ್ಮ ದೃಷ್ಟಿ, ಮದುವೆ ಮನೆ ಚಂದ (ಜಾ)

ಜನತಾ ಹೈಸ್ಕೂಲ್ ಅಡ್ಯನಡ್ಕ ಅಂಚೆ ದ ಕ ಜಿಲ್ಲೆ



ನಾಯಕ, ಸದಾನಂದ ನಾರಾಯಣ
[ಸದಾನಂದ ನಾಯಕ]
ಜ **24-5-1913**

ಉತ್ತರ ಕನ್ನಡ ಜಿಲ್ಲೆ ಅವರ್ಸಾ ; ನಾರಾಯಣ ನಾಯಕ–ಸಾವಿತ್ರಿ ನಾಯಕ ; 5 ಹೆ 1 ಗಂ ಮಗು; ಪ್ರಾ ಅವರ್ಸಾ, ಮೆಟ್ರಿಕ್ಯುಲೇಶನ್ ಹುಬ್ಬಳ್ಳಿ, ಬಿ ಎ ಕೊಲ್ಹಾಪುರ, ಬಿ ಟಿ ಎಂ ಎ ಮುಂಬೈ ಪಿ ಎಚ್ ಡಿ ಕ ವಿ ; 14 ಕೃತಿಗಳು : ಕನ್ನಡ ಸಾಹಿತ್ಯದಲ್ಲಿ ವೀರಶೈವ ಪುರಾಣಗಳು, ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ (ವಿಮ) ದೇವ ವಿವಿಷ. ಪದ್ಮಪಾಣಿ ಮತ್ತು ಇತರ ಕವನಗಳು (ಕ) ಪ್ರಬಂಧ ಪರಿಮಳ (ಪ್ರ)

ಸರಕಾರಿ ಹೆಣ್ಣುಮಕ್ಕಳ ಟ್ರೈನಿಂಗ್ ಕಾಲೇಜು ಧಾರವಾಡ

ನಾಯಕ, ಹಾರೋಗದ್ದೆ ಮಾನಪ್ಪ
ಜ **5-2-1931**



ಶಿವಮೊಗ್ಗ ಜಿಲ್ಲೆ ಹೊಸಮನೆ; ಶ್ರೀನಿವಾಸ ನಾಯಕ–ರುಕ್ಮಿಣಿಯಮ್ಮ : 1 ಗಂ 1 ಹೆ ಮಕ್ಕಳು; ಬಿ ಎ ಆನರ್ಸ್ ಮೈ ವಿ, ಎಂ ಎ ಕಲ್ಕತ್ತ, ಪಿ ಎಚ್ ಡಿ ಇಂಡಿಯಾನ ವಿ ಅಮೆರಿಕ ; ಕನ್ನಡ ಮತ್ತು ಭಾಷಾಶಾಸ್ತ್ರ ಪ್ರಾಧ್ಯಾಪಕ ಮತ್ತು ವಿಭಾಗ ಮುಖ್ಯಸ್ಥ, ನಿರ್ದೇಶಕ ಕನ್ನಡ ಅಧ್ಯಯನ ಸಂಸ್ಥೆ ಮೈ ವಿ ; ಅಮೆರಿಕ, ಕೆನಡ, ರುಮೇನಿಯಾ, ಫ್ರಾನ್ಸ್, ಇಟಲಿ, ಜರ್ಮನಿ, ಯು ಕೆ ಪ್ರವಾಸ ; 'ಸಲ್ಲಾಪ' ಕೃತಿಗೆ ಮೈ ವಿ ಸುವರ್ಣ ಮಹೋತ್ಸವ ಬಹುಮಾನ ; ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷ, ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯಕಾರಿ ಸಮಿತಿ ಸದಸ್ಯ, ಭಾರತೀಯ ಜ್ಞಾನಪೀಠ ಸಮಿತಿ ಸದಸ್ಯ, ನ್ಯಾಷನಲ್ ಬುಕ್ ಟ್ರಸ್ಟ್ ಸಲಹಾ ಸಮಿತಿ ಸದಸ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 40 ಕೃತಿಗಳು : ಹಾವು ಮತ್ತು ಹೆಣ್ಣು (ಸ ಕ) ನಮ್ಮ ಮನೆಯ ದೀಪ, ಬಾಳ್ನೋಟಗಳು, ಸಲ್ಲಾಪ (ಪ್ರ) ಅಕ್ಕಮಹಾದೇವಿ, ರವೀಂದ್ರನಾಥ ಠಾಕೂರರು, ಸ್ಮರಣ (ಜೀ) ಸಮೀಕ್ಷೆ, ಸಂಪುಟ, ಸಂಪದ, ಸಿಂಗಾರ, ಜಾನಪದ ಸ್ವರೂಪ (ವಿಮ) ಕನ್ನಡ ಜಾನಪದ ಗ್ರಂಥಸೂಚಿ (ಗ್ರಂ ಸೂ) ಕರ್ನಾಟಕಕ್ಕೆ ಶುಭವಾಗಲಿ, ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ, ಗೊರೂರು ಗೌರವ ಗ್ರಂಥ (ಸಂ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

'ಗೋಧೂಳಿ' ಜಯಲಕ್ಷ್ಮೀಪುರಂ ಮೈಸೂರು 570 012



ನಾಯ್ಕ, ವಿಷ್ಣು ನಾಗಪ್ಪ
ಜ 1-2-1944

ಉತ್ತರ ಕನ್ನಡ ಜಿಲ್ಲೆ ಅಂಬಾರಕೊಡ್ಲ ; ನಾಗಪ್ಪ ಗೋವಿಂದನಾಯ್ಕ-ಬುದುವಂತಿ ನಾಯಕ ; ಪ್ರಾ ಅಂಬಾರಕೊಡ್ಲ ಅಂಕೋಲಾ, ಮಾ ಅಂಕೋಲಾ· ಬಿ ಎ ಕಾರವಾರ ಕುಮಟಾ, ಎಂ ಎ ಬಿ ಎಡ್ ಮೈ ವಿ; ಅಧ್ಯಾಪಕ; ಅಂಕೋಲೆಯ ರಾಘವೇಂದ್ರ ಪ್ರಕಾಶನದ ಸಂಸ್ಥಾಪಕ ಅಧ್ಯಕ್ಷ, ಉತ್ತರ ಕನ್ನಡ ಜಿಲ್ಲೆ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ ; 6 ಕೃತಿಗಳು : ಸುಮನ, ಆರತಿ ಈ ರೀತಿ (ಕ) ಪರಿಮಳ (ಧ) ಉತ್ತರ ಕನ್ನಡದ ಕವನಗಳು, ಸಾಹಿತ್ಯದಲ್ಲಿ ನವ್ಯತೆ (ಸಂ) ಹವ್ಯಾಸ : ನಾಟಕ ನಿರ್ದೇಶನ, ಅಭಿನಯ, ಹಾಡುಗಾರಿಕೆ

ಅಧ್ಯಾಪಕ ಜನತಾ ವಿದ್ಯಾಲಯ ದಾಂಡೇಲಿ ಉ ಕ ಜಿಲ್ಲೆ

ನಾಯ್ಡು, ಗೋಣಿಕೊಪ್ಪಲು ವೆಂಕಟಸ್ವಾಮಿ ಭಕ್ತವತ್ಸಲ [ವತ್ಸಲ]
ಜ 10-7-1920

ತಮಿಳುನಾಡು ತಿರುವಣ್ಣಾಮಲೈ ; ಟಿ ಎಂ ವೆಂಕಟಸ್ವಾಮಿನಾಯ್ಡು –ಗಜರಾಜಮ್ಮ : 4 ಗಂ 1 ಹೆ ಮಕ್ಕಳು ; ಬಿ ಎಸ್‌ಸಿ ಮೈಸೂರು ; ವ್ಯವಸಾಯ ಇಲಾಖೆಯಲ್ಲಿ ಸಹ ನಿರ್ದೇಶಕರಾಗಿ ನಿವೃತ್ತಿ ; ವ್ಯವಸಾಯ ಕೈಪಿಡಿ ಗ್ರಂಥಕ್ಕೆ ಬಹುಮಾನ ; 20 ಕೃತಿಗಳು: ದೆವ್ವದ ಕಥೆಗಳು, ತಿರುಗು ಮುರುಗು ಕಥೆಗಳು (ಸ ಕ) ಸಸ್ತನಿಗಳು, ವನ್ಯಮೃಗ ನಮ್ಮ ಸಂಪತ್ತು (ಪ್ರಾ) ತಾಂಬೂಲ ಮಂಜರಿ, ತರಕಾರಿಗಳು (ಅಸು) ಕಬ್ಬು, ತೆಂಗು (ಕೃ) ಹವ್ಯಾಸ : ಅಂಚೆ ಚೀಟಿ ಸಂಗ್ರಹ. ಬೇಟೆ

ನಂ 60 2ನೇ ಕ್ರಾಸ್ ಕಾಳಿದಾಸ ರಸ್ತೆ ಜಯಲಕ್ಷ್ಮೀಪುರಂ ಮೈಸೂರು

ನಾರಾಯಣ. ಕಿಕ್ಕೇರಿ
ಜ 2-5-1950



ಮಂಡ್ಯ ಜಿಲ್ಲೆ ಕಿಕ್ಕೇರಿ ; ದೇವರಯ್ಯ–ಸಾವಿತ್ರಮ್ಮ : 2 ಗಂ ಮಕ್ಕಳು ; ಪ್ರಾ ಮಾ ಪ್ರೌ ಕಿಕ್ಕೇರಿ, ಬಿ ಎ ಮೈಸೂರು, ಎಂ ಎ (ಭಾಷಾಶಾಸ್ತ್ರ) ಪೂನ ; ಭಾರತೀಯ ಭಾಷಾ ಕೇಂದ್ರದಲ್ಲಿ ಉಪನ್ಯಾಸಕ ; ಬಂಡಾಯ ಸಾಹಿತ್ಯ ಸಂಘಟನೆ ಮೈಸೂರು ಜಿಲ್ಲೆ

ಸಂಚಾಲಕ ; 2 ಕೃತಿಗಳು : ತುಂಬೇ ಹೂವಿಟ್ಟು ಶರಣೆನ್ನಿ (ಜಾ) ಬಾಲಂಗೋಚಿ (ಕಾ) ಹವ್ಯಾಸ : ನಾಟಕಾಭಿನಯ

ಭಾರತೀಯ ಭಾಷಾ ಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006



ನಾರಾಯಣ, ಪ್ರಧಾನ್ ವೆಂಕಪ್ಪಯ್ಯ

ಜ 18–12–1942

ತುಮಕೂರು ಜಿಲ್ಲೆ ಅಕ್ಕಿರಾಂಪುರ ; ಪ್ರಧಾನ್ ವೆಂಕಪ್ಪಯ್ಯ–ನರಸಮ್ಮ ; 1 ಗಂ ಮಗು ; ಪ್ರಾ ಬೆಂಗಳೂರು, ಮಾ ಕೊಂಡೇತಿಮ್ಮನಹಳ್ಳಿ, ಪ್ರೌ ಬೆಂಗಳೂರು, ಬಿ ಎ ತುಮಕೂರು, ಎಂ ಎ (ಕನ್ನಡ) ಮೈಸೂರು ಎಂ ಎ (ಇಂಗ್ಲಿಷ್) ಕ ವಿ; ಪಿ ಎಚ್ ಡಿ (ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ) ಬೆಂ ವಿ ; ಅಧ್ಯಾಪಕ ವಿಜಯ ಕಾಲೇಜು ಬೆಂಗಳೂರು : ಸಮಾಜದ ಮೇಲೆ ವಿಜ್ಞಾನದ ಪ್ರಭಾವ ಅನುವಾದ ಕೃತಿಗೆ ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ ; 17 ಕೃತಿಗಳು : ಸಾಮಾನ್ಯ, ವಿಕಾಸ (ಕಾ) ಮದುವೆ ಮತ್ತು ನೀತಿ, ಅರಿಸ್ಟೋಫೇನೀಸ್‌ನ ಎರಡು ನಾಟಕಗಳು (ಅ) ಪದ್ಮಿನೀ ಪರಿಣಯ, ಕುಮುದೇಂದು ರಾಮಾಯಣ (ಸಂ) ಬಸವ ಪುರಾಣ ಸಂಗ್ರಹ (ಸಂಗ್ರ)

25/12 6ನೇ ಕ್ರಾಸ್ ಎಲ್ ಐ ಸಿ ಕಾಲೋನಿ ಜಯನಗರ ಬೆಂಗಳೂರು 560 011

ನಾರಾಯಣಮೂರ್ತಿ, ಗೂಳೂರು ವೆಂಕಣ್ಣಾಚಾರ್ಯ

ಜ 2-5-1912



ತುಮಕೂರು ಜಿಲ್ಲೆ–ಗೂಳೂರು; ವೆಂಕಣ್ಣಾಚಾರ್ಯ–ಶೇಷೀಬಾಯಿ ; 1 ಗಂ ಮಗು ; ಪ್ರಾ ಗೂಳೂರು, ಪ್ರೌ ಇಂಟರ್ ಮೀಡಿಯೆಟ್ ತುಮಕೂರು, ಬಿ ಎ ಮೈಸೂರು ಕಲ್ಕತ್ತ ; ರಾಜ್ಯಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯಿಂದ ಗಾಂಧೀ ಸಾಹಿತ್ಯ ಕೃತಿಗೆ ಬಹುಮಾನ ; ಮಾಯಸಂದ್ರದ ಸರ್ವೋದಯ ಶಿಕ್ಷಣ ಸಮಿತಿಯ ಸ್ಥಾಪಕ ; 30 ಕೃತಿಗಳು : ಸತೀ ಕಸ್ತೂರಬಾ, ಠಕ್ಕರ್ ಬಾಪಾ (ಜೀ) ಹಿಂದೂಧರ್ಮ, ಗೀತಾ ಪತ್ರಗಳು (ಧ) ರಾಜ್ಯಶಾಸ್ತ್ರಸಾರ, ಭಾರತೀಯ ಇತಿಹಾಸ ಸಮೀಕ್ಷೆ (ಅ)

ಚಿಕ್ಕನಾಯ್ಕನಹಳ್ಳಿ ಅಂಚೆ ತುಮಕೂರು ಜಿಲ್ಲೆ



ನಾರಾಯಣರಾವ್, ಕಣಕಟ್ಟೆ ಶ್ರೀಕಂಠಯ್ಯ
ಜ 16-9-1936

ಹಾಸನ ಜಿಲ್ಲೆ ಕಣಕಟ್ಟೆ ; ಶ್ರೀಕಂಠಯ್ಯ–ಭಾಗೀರಥಮ್ಮ ; 1 ಗಂ 1 ಹೆ ಮಕ್ಕಳು ; ಶಿಕ್ಷಣ ಮೈಸೂರು ; ಮೈಸೂರು ವಿಶ್ವವಿದ್ಯಾನಿಲಯ ಸಹಕಾರಿ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ; 2 ಕೃತಿಗಳು : ಗೀಳು (ಕ) ನೆತ್ತರ ಕರೆ (ಕಾ)

ಅಧ್ಯಾಪಕರನಿವಾಸ ಮಾನಸಗಂಗೋತ್ರಿ ಮೈಸೂರು 570 006

ನಾರಾಯಣರಾವ್, ಗುಡ್ಡೆಹಿತ್ಲು ತಿಮ್ಮಪ್ಪಯ್ಯ
ಜ 14-9-1926

ಮಡಕೇರಿ ; ಜಿ ಎನ್ ತಿಮ್ಮಪ್ಪಯ್ಯ–ವೆಂಕಟಲಕ್ಷ್ಮಿ ; 3 ಗಂ ಮಕ್ಕಳು ; ಪ್ರಾ ಮಾ ಪ್ರೌ ಮಡಕೇರಿ, ಇಂಟರ್ ಮೀಡಿಯೆಟ್ ಮಂಗಳೂರು, ಎಂ ಎ (ಗಣಿತ) ಮದರಾಸು; ಕನ್ನಡ ವಿಶ್ವಕೋಶ ಕಾರ್ಯನಿರ್ವಾಹಕ ಸಂಪಾದಕ ಮೈ ವಿ : 20 ಕೃತಿಗಳು : ವನಸುಮ, ಕೊಡಗಿನ ಕಥೆಗಳು, ನಕ್ಷತ್ರಲೋಕ, ಎನ್ ಸಿ ಸಿ ದಿನಗಳು, ಮಾನವ ಚಂದ್ರನ ಮೇಲೆ ಡಾ॥ ಸಿ ಎನ್ ಶ್ರೀನಿವಾಸಅಯ್ಯಂಗಾರ್, ಐನ್‌ಸ್ಟೈನ್, ಕೊಪರ್ನಿಕಸ್ (ಜೀ) ಹವ್ಯಾಸ : ಸಂಗೀತ ಶ್ರವಣ, ಪರ್ವತಾರೋಹಣ

'ಅತ್ರಿ' 8ನೇ ಅಡ್ಡರಸ್ತೆ ಸರಸ್ವತೀಪುರಂ ಮೈಸೂರು 570 009

ನಾರಾಯಣರಾವ್, ದೈವಜ್ಞ ಸಾನು [ಸಾನು]
ಜ 6-6-1917



ಶಿವಮೊಗ್ಗ ಜಿಲ್ಲೆ ಈಸೂರು ; ಮಹಾಬಲೇಶ್ವರಪ್ಪ-ಪಾರ್ವತಿಬಾಯಿ : 2 ಗಂ 4 ಹೆ ಮಕ್ಕಳು : ಪ್ರಾ ಮಾ ಈಸೂರು, ಪ್ರೌ ಶಿವಮೊಗ್ಗ, ಬಿ ಎ ಮೈಸೂರು, ಎಂ ಎ ಎಂಎಡ್ ಧಾರವಾಡ, ಸಾಹಿತ್ಯರತ್ನ ಪ್ರಯಾಗ ; ಶಿಕ್ಷಕ ವೃತ್ತಿ : 2 ಕೃತಿಗಳು : ಸುಗಂಧ, ಶ್ರೀ ಸ್ವಾಮಿ ಶಿವಾನಂದ ಸರಸ್ವತಿ

ನಂ 5 ಕುಣಿಗಲ್ ರೋಡ್ ತುಮಕೂರು

ನಾರಾಯಣರಾವ್ ವೆಂಕಟರಾವ್ ತಾಳೀಕೋಟ
ಜ 20-10-1920

ಬಿಜಾಪುರ ಜಿಲ್ಲೆ ಕುಂದರಗಿ ; ವೆಂಕಟರಾವ್ ನರಸಿಂಹರಾವ್ ತಾಳೀಕೋಟ-ಸರಸ್ವತಿ ಬಾಯಿ ; ಪ್ರಾ ಕಲಾದಗಿ, ಮಾ ಗುಳೇದ ಗುಡ್ಡ, ಬಿ ಎ ಧಾರವಾಡ, ಎಲ್ ಎಲ್ ಬಿ ಪೂನ ; ವಕೀಲಿ ವೃತ್ತಿ ; ರಾಯಚೂರು ಠಾಗೋರ ಸ್ಮಾರಕ ವಿದ್ಯಾಸಂಸ್ಥೆ ಸದಸ್ಯ ; 6 ಕೃತಿಗಳು : ರಾಗಿಣಿ, ಬಭ್ರುವಾಹನ, ರಾಮಾಯಣಸುಧೆ, ಮಾಸತಿ ಕಲ್ಲು
ಆಜಾದ್‌ನಗರ ಸ್ಟೇಶನ್ ರಸ್ತೆ ರಾಯಚೂರು



ನಾರಾಯಣರಾವ್, ಶಾನುಭಾಗರ ರಾಮಯ್ಯ
[ಭಾರತೀಸುತ]
ಜ 15-5-1915-1976

ಕೊಡಗು ಜಿಲ್ಲೆ ಬಿಳಿಗೇರಿ ; ಶಾನುಭಾಗರ ರಾಮಯ್ಯ-ಸುಬ್ಬಮ್ಮ ; 2 ಗಂ 6 ಹೆ ಮಕ್ಕಳು ; ಮದರಾಸು ವಿಶ್ವವಿದ್ಯಾನಿಲಯ ಸಂಸ್ಕೃತ-ಕನ್ನಡ ವಿದ್ವಾನ್ ; ಪ್ರೌಢಶಾಲಾ ಉಪಾಧ್ಯಾಯನಾಗಿ ನಿವೃತ್ತಿ ; ಹುಲಿಬೋನು, ಗಿರಿಕನ್ನಿಕೆ, ಜಿಂಬ ಹಿಡಿದ ಮಿಾನು ಕೃತಿಗಳಿಗೆ ರಾಜ್ಯ ಸರ್ಕಾರದ ಬಹುಮಾನ, ಸೊಳ್ಳೆ ಹರಡುವ ರೋಗಗಳು ಕೃತಿಗೆ ಕೇಂದ್ರ ಸರ್ಕಾರದ ಬಹುಮಾನ, ಎಡಕಲ್ಲು ಗುಡ್ಡದ ಮೇಲೆ ಕೃತಿಗೆ ಸುಧಾ ಕಾದಂಬರಿ ಸ್ಪರ್ಧೆ ಬಹುಮಾನ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 56 ಕೃತಿಗಳು: ಗಿರಿಕನ್ನಿಕೆ, ಬಯಲುದಾರಿ, ಎಡಕಲ್ಲು ಗುಡ್ಡದ ಮೇಲೆ, ಹುಲಿಯ ಹಾಲಿನ ಮೇವು (ಕಾ) ಬೆಂಕಿಯಲ್ಲಿ ಬೆಂದವಳು, ಪ್ರೇಮ ಪಂಚಮಿ (ಸ ಕ) ಜ್ಞಾನಯಾತ್ರಿಕ (ಪ್ರ ವ) ಮಲ್ಲಿಗೆ ಹಳ್ಳಿಯ ಜಾಣರು, ಡಾ॥ ಝಕೀರ ಹುಸೇನರು ಕಾಣೆಯಾದ ಕಬ್ಬಿಣರಾಯ, ಬೇಸ್ತು ಬಿದ್ದ ನರಿ (ಬಾ) ತಲೆ ತಿರುಕ ಯೋಧ, ದೊರೆ ಮಗಳು (ಅ) ಹವ್ಯಾಸ : ಅಭಿನಯ
14/140-2 ಹೊಸ ವಿಸ್ತೀರ್ಣ ಮಡಕೇರಿ

ನಾರಾಯಣರಾವ್, ಹೆಬ್ಬೂರು ವೆಂಕಟರಾಮಯ್ಯ
ಜ 19-6-1927



ತುಮಕೂರು ಜಿಲ್ಲೆ ಗುಬ್ಬಿ ; ಎಚ್ ವೆಂಕಟ ರಾಮಯ್ಯ-ಸುಬ್ಬಮ್ಮ ; 1 ಗಂ ಮಗು ; ಪ್ರಾ ಮಾ ಪ್ರೌ ಇಂಟರ್ ಮಿಾಡಿಯೆಟ್ ತುಮಕೂರು, ಬಿ ಎ ಮೈಸೂರು, ರಾಷ್ಟ್ರ ಭಾಷಾ ವಿಶಾರದ, ರಾಷ್ಟ್ರ ಭಾಷಾ ಪ್ರವೀಣ, ಸಾಹಿತ್ಯ ರತ್ನ ; 10 ಕೃತಿಗಳು : ಶ್ರೀ ಗಾಯತ್ರೀ ಮಂತ್ರಾರ್ಥ, ಶ್ರೀ

ಗಾಯತ್ರೀ ಕುಸುಮಾಂಜಲಿ, ಶ್ರೀ ಗಾಯತ್ರೀ ಚಿತ್ರ (ಅನು)

786 8ನೇ ಕ್ರಾಸ್ ರಾಮಾನುಜ ರಸ್ತೆ ಮೈಸೂರು 570 004



ನಾರಾಯಣಸ್ವಾಮಿ, ಜನಿವಾರ ಹೊನ್ನಯ್ಯ

ಜ 13.6-1941

ಹಾಸನ: ಜಿ ವಿ ಹೊನ್ನಯ್ಯ–ತಿಮ್ಮಮ್ಮ ; 1 ಹೆ ಮಗು ; ಬೆಂಗಳೂರಿನ ಬಿ ಇ ಎಂ ಎಲ್ ಕಾರ್ಖಾನೆಯಲ್ಲಿ ಅಕೌಂಟೆಂಟ್ ; ಬಿ ಇ ಎಂ ಎಲ್ ಕಾರ್ಖಾನೆಯ ಕನ್ನಡ ಸಾಹಿತ್ಯ ಸಂಘದ ಸದಸ್ಯ ; 2 ಕೃತಿಗಳು: ಜಗದ ತೊಟ್ಟಿಲು (ಕ) ಸಿದ್ಧಾರ್ಥ (ಅ) ಹವ್ಯಾಸ : ಸಂಗೀತ ಕ್ರೀಡೆ ಪ್ರವಾಸ

ಯೂನಿಟಿ ಕಟ್ಟಡ ಜಯಚಾಮರಾಜೇಂದ್ರ ರಸ್ತೆ ಬೆಂಗಳೂರು 560002

ನಾರಾಯಣಸ್ವಾಮಿ ನಾಯುಡು, ಸಕಲೇಶಪುರ ವೆಂಕಟಸ್ವಾಮಿ ನಾಯುಡು

ಜ 9-8-1923



ಹಾಸನಜಿಲ್ಲೆ ಸಕಲೇಶಪುರ ; ಸಕಲೇಶಪುರ ಭದ್ರಾವತಿ ತರೀಕೆರೆಗಳಲ್ಲಿ ವಿದ್ಯಾಭ್ಯಾಸ. ಲೋಯರ್ ಸೆಕೆಂಡರಿ ; 3 ಕೃತಿಗಳು : ಮಾರಿದ ಮಡದಿ, ಛೇದದ ಬಾಳು (ನಾ) ನಾ ಕಂಡ ಪವಿತ್ರ ಭೂಮಿ (ಕಾ) ಹವ್ಯಾಸ : ನಾಟಕ ನಿರ್ದೇಶನ, ಅಭಿನಯ

ನಂ 1 ಎಚ್ ಸಿದ್ದಯ್ಯ ರಸ್ತೆ 1ನೇ ಕ್ರಾಸ್ ರಾಮಸ್ವಾಮಿ ಲೇ ಔಟ್ ಬೆಂಗಳೂರು 560 027



ನಾರಾಯಣಸ್ವಾಮಿ, ವೆಂಕಟಸ್ವಾಮಪ್ಪ

ಜ 7-10-1934

ಬೆಂಗಳೂರು ; ಡಿ ವೆಂಕಟಸ್ವಾಮಪ್ಪ–ದೊಡ್ಡ ಚೌಡಮ್ಮ ; 3 ಗಂ 1 ಹೆ ಮಕ್ಕಳು ; ಪ್ರಾ ಪ್ರೌ ಬೆಂಗಳೂರು ; ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ನಲ್ಲಿ ಸೂಪರ್ ವೈಸರ್ ; 15 ಕೃತಿಗಳು : ಬಡವರ ಬಂಧು, ಕಣ್ಣೀರ ಕಾಣಿಕೆ, ಪ್ರೇಮಹಸ್ತ (ನಾ) ಪೂಜಾಪುಷ್ಪ, ನೇತ್ರಾರ್ಚನೆ, ಪವಿತ್ರ ಯಾತ್ರೆ (ಕಾ)

ಹವ್ಯಾಸ : ನಾಟಕ ನಿರ್ದೇಶನ

73 ಆದಿನಾರಾಯಣಸ್ವಾಮಿಗುಡಿ ಬೀದಿ ಅರಳೇಪೇಟೆ ಬೆಂಗಳೂರು



ನಾರಾಯಣಾಚಾರ್ಯ, ಕಾನಕಾನಹಳ್ಳಿ
ಶ್ರೀನಿವಾಸ ದೇಶಿಕಾಚಾರ್ಯ
ಜ 30-10-1933

ಬೆಂಗಳೂರು ಜಿಲ್ಲೆ ಕಾನಕಾನಹಳ್ಳಿ ; ಶ್ರೀನಿವಾಸ ದೇಶಿಕಾಚಾರ್ಯ_ಶ್ರೀರಂಗನಾಯಕಮ್ಮ ; 1 ಗಂ 3 ಹೆ ಮಕ್ಕಳು ; ಪ್ರಾ ಪ್ರೌ ಕಾನಕಾನಹಳ್ಳಿ, ಎಂ ಎ ಮೈಸೂರು ; ವೇದ ಸಂಸ್ಕೃತಿ ಪರಿಚಯ ಸಂಪುಟ 1 ಕೃತಿಗೆ ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ ; ಧಾರವಾಡದ ವೇದ ವಿದ್ಯಾ ಪ್ರಕಾಶನದ ಅಧ್ಯಕ್ಷರು ; 3 ಕೃತಿಗಳು : ವೇದ ಸಂಸ್ಕೃತಿಯ ಪರಿಚಯ ಸಂ 1 ರಿಂದ 3

ಗೋವಿಂದ ನಿವಾಸ ಸ್ಟೇಷನ್ ರಸ್ತೆ ಧಾರವಾಡ 580 001

ನಿರುಪಮಾ
ಜ 1931

ತುಮಕೂರು ಜಿಲ್ಲೆ ಹೊಳವನಹಳ್ಳಿ : 1 ಗಂ 1 ಹೆ ಮಕ್ಕಳು ; ಎಸ್ ಎಸ್ ಎಲ್ ಸಿ; ಮುಟಿಳಿ ಮತ್ತು ವಿವಾದ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ ; ಕನ್ನಡ ಲೇಖಕ ಲೇಖಕಿಯರ ಸಂಸ್ಥೆ ಕಾರ್ಯದರ್ಶಿ, ಲೇಖಕಿಯರ ಸಹಕಾರಿ ಪ್ರಕಾಶನ ಸಂಪಾದಕಿ ; 25 ಕೃತಿಗಳು : ರಣಹದ್ದು, ಅಧಿಕಾರಿಗಳ ಅವಾಂತರ (ನಾ) ರಾಗರಾಗಿಣಿ, ಮಿಹಿತ, ಅಮೃತ ಕಲಶ (ಕಾ) ಕಸ್ತೂರಿ ಬಾ (ಜೀ) ಮಹಾಭಾರತದಲ್ಲಿ ಮಹಿಳಾ ಪಾತ್ರಗಳು (ಸಂ)

ಹವ್ಯಾಸ : ಸಂಗೀತ, ಹೊಲಿಗೆ, ಕಸೂತಿ

ನಂ 9 3ನೇ ಕ್ರಾಸ್ ಮಲ್ಲೇಶ್ವರಂ ಬೆಂಗಳೂರು 560 003



ನಿಸಾರ್ ಅಹಮದ್, ಕೊಕ್ಕರೆ ಹೊಸಹಳ್ಳಿ ಷೇಕ್ ಹೈದರ್

ಜ 5-2-1936

ಬೆಂಗಳೂರು ಜಿಲ್ಲೆ ದೇವನಹಳ್ಳಿ: ಷೇಕ್ ಹೈದರ್-ಹಮೀದಾಬೇಗಂ ; 2 ಗಂ 1 ಹೆ ಮಕ್ಕಳು : ಪ್ರಾ ಮಾ ಬೆಂಗಳೂರು. ಪ್ರೌ ಹೊಸಕೋಟೆ, ಎಂ ಎಸ್ ಸಿ ಬೆಂಗಳೂರು ; ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರದ ಅಧ್ಯಾಪಕ ; ರಾಷ್ಟ್ರೀಯ ಶಿಕ್ಷಣ ಸಂಶೋಧನ ಮಂಡಳಿ, ರಾಜ್ಯ ಸಾಹಿತ್ಯ ಅಕಾದೆಮಿ ಸದಸ್ಯ ; 10 ಕೃತಿಗಳು : ಮನಸು ಗಾಂಧಿ ಬಜಾರು, ಸಂಜೆ ಐದರ ಮಳೆ, ನಿತ್ಯೋತ್ಸವ (ಕ) ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್, ಅಥೆಲ್ಲೊ (ಅ) ಹಕ್ಕಿಗಳು (ಬಾ) ಇದು ಬರಿ ಬೆಡಗಲ್ಲೋ ಅಣ್ಣ (ವಿ)

327 16-ಎ 4ನೇ ಬ್ಲಾಕ್ ಟಿ ಜಯನಗರ ಬೆಂಗಳೂರು 560 011

ನೂಲ್ವಿ, ಸಿದ್ದಪ್ಪ ಯಲ್ಲಪ್ಪ [ಪ್ರಭುಪ್ರಸಾದ]

ಜ 3-4-1933



ಧಾರವಾಡ ಜಿಲ್ಲೆ ನೂಲ್ವಿ ; ಯಲ್ಲಪ್ಪ-ಗೌರಮ್ಮ ; 2 ಗಂ 1 ಹೆ ಮಕ್ಕಳು ; ಶಿಕ್ಷಕ ; 2 ಕೃತಿ : ಕರುಳು ಸಂಬಂಧ (ಸ ಕ) ಬದುಕಿನ ಬೆಳಕು (ಕಾ)

ಬಂಗಾರಪೇಟೆ ಹಳೇ ಹುಬ್ಬಳ್ಳಿ ಹುಬ್ಬಳ್ಳಿ 24

ನೊರೋನ್ಹ, ಎಡ್ವರ್ಡ್

ಜ 13-10-1946

ಮಂಗಳೂರು ; ಫೀಲಿಕ್ಸ್ ಪಾವ್ಲ್ ನೊರೋನ್ಹಾ-ಮೇರಿ ಮ್ಯಾಗ್ಡಲೆನ್ ಪಿರೇರಾ : ಪ್ರಾ ಬೆಂದೂರು, ಮಾ ಪ್ರೌ ಬಿ ಎಸ್‌ಸಿ ಎಂ ಎ ಮಂಗಳೂರು ; ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕ ; 1 ಕೃತಿ : ವರ್ಜಿಲ್ (ವಿಮ) ಹವ್ಯಾಸ : ವಾಯಲಿನ್ ನುಡಿಸುವುದು

ಅಧ್ಯಾಪಕ ಕನ್ನಡ ಅಧ್ಯಯನಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006



ಪಂಕಜ, ಅನಂತಸ್ವಾಮಿ
ಜ 20-4-1932

ಪಾವಗಡ: ಟಿ ಶ್ರೀನಿವಾಸಾಚಾರ್–ಪಕಂಳಮ್ಮ; 2 ಗಂ ಮಕ್ಕಳು; ಇಂಟರ್ ಮಿಡಿಯೆಟ್, ಹಿಂದಿ ವಿದ್ವಾನ್: ಸೊಗಸುಗಾತಿ ಮತ್ತು ಕಾಗದದ ದೋಣಿ ಕಾದಂಬರಿಗಳಿಗೆ ಕೇಂದ್ರ ಸರ್ಕಾರದ ಬಹುಮಾನ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯೆ; 13 ಕೃತಿಗಳು: ನಾದಭಂಗ, ಸೊಗಸುಗಾತಿ, ಪ್ರೇಮಸಂಗಮ, ಬಂಗಾರದ ಬಲೆ (ಕಾ) ಹವ್ಯಾಸ: ಪೌರೋಹಿತ್ಯ, ಸಮಾಜ ಸೇವೆ
112 ಸಂಪಿಗೆರಸ್ತೆ ಮಲ್ಲೇಶ್ವರಂ ಬೆಂಗಳೂರು 560 003

ಪಂಚಯ್ಯ, ಹಿರೇಮಠದ
ಜ 1936

ಬಳ್ಳಾರಿ ಜಿಲ್ಲೆ ಕೋಗಳಿ; ಹಿ ಮ ವಿರೂಪಾಕ್ಷಯ್ಯ–ರೇವಕ್ಕ; 3 ಗಂ ಮಕ್ಕಳು; ಕನ್ನಡ 5ನೇ ತರಗತಿ; ಕಿರಾಣಿ ವ್ಯಾಪಾರ; 4 ಕೃತಿಗಳು: ಕಾವ್ಯಾವತರಣ (ಕ) ಮಗಳ ಮಾಂಗಲ್ಯ, ಯುಗಧರ್ಮ, ತುಂಬಿದ ಮನೆ (ನಾ)
ಕಡಲಬಾಳು ಅಂಚೆ ಹಗರಿಬೊಮ್ಮನಹಳ್ಳಿಮಾರ್ಗ ಬಳ್ಳಾರಿ ಜಿಲ್ಲೆ

ಪಂಚಲಿಂಗೇಗೌಡ, ಕೋಡಿಹಳ್ಳಿ ಚಿಕ್ಕೇಗೌಡ
[ಕೆ ಪಿ ಪಿ]
ಜ 29–4–1932



ಬೆಂಗಳೂರು ಜಿಲ್ಲೆ ಕೋಡಿಹಳ್ಳಿ: ಕೆ ಪಿ ಚಿಕ್ಕೇಗೌಡ-ಹೊನ್ನಮ್ಮ; 1 ಗಂ 2 ಹೆ ಮಕ್ಕಳು; ಪ್ರಾ ಮಾ ಕೋಡಿಹಳ್ಳಿ, ಪ್ರೌ ಕನಕಪುರ, ಬಿ ಎ ಆನರ್ಸ್, ಎಂ ಎ ಮೈ ವಿ: ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ, ಮೈ ವಿ ಕನ್ನಡ ಅಧ್ಯಾಪಕ, ಗೋಣಿ ಕೊಪ್ಪಲು ಕಾವೇರಿ ಕಾಲೇಜು ಪ್ರಿನ್ಸಿಪಾಲ್, ಮೈ ವಿ ಪರೀಕ್ಷಾ ನಿಯಂತ್ರಣಾಧಿಕಾರಿ, ಮೈ ವಿ ಕನ್ನಡ ಉಪ ಪ್ರಾಧ್ಯಾಪಕ; 3 ಕೃತಿಗಳು: ಜೀವಂಧರ ಚರಿತೆಯ ಸಂಗ್ರಹ, ನವನೀತ, ರಾಮಧಾನ್ಯ ಚರಿತೆ (ಸಂ)
ನಂ 56 ಮೊದಲನೆಯ ಮುಖ್ಯ ರಸ್ತೆ ಜಯಲಕ್ಷ್ಮೀಪುರಂ ಮೈಸೂರು 570 012



ಪಂಡಿತಾರಾಧ್ಯ, ಹೊಸಮಠ
ಜ 1-7-1953

ಬಳ್ಳಾರಿ ಜಿಲ್ಲೆ ಕೊಟ್ಟೂರು; ಕೊಟ್ರಯ್ಯ-ಚಂದ್ರಮ್ಮ; ಪ್ರಾ ಮಾ ಪ್ರೌ ಬಿ ಎಸ್‌ಸಿ ಕೊಟ್ಟೂರು, ಎಲ್‌ಎಲ್ ಬಿ ಧಾರವಾಡ, ಎಲ್ ಎಲ್ ಎಂ ಬೆಂಗಳೂರು; ವಕೀಲ; ಬಳ್ಳಾರಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಸದಸ್ಯ: 2 ಕೃತಿಗಳು: ಬೆತ್ತಲೆ ಪದ್ಯಗಳು, ಬಾಬಾ ಪದಗಳು (ಕ)

ಕೊಟ್ಟೂರು ಬಳ್ಳಾರಿ ಜಿಲ್ಲೆ

ಪಟ್ಟಣಶೆಟ್ಟಿ, ಸಿದ್ದಲಿಂಗ ಬಸೆಟ್ಟೆಪ್ಪ
ಜ 26-5-1939



ಧಾರವಾಡ ಜಿಲ್ಲೆ ಮಾದವಾಡ; 1 ಗಂ 1 ಹೆ ಮಕ್ಕಳು; ಪ್ರಾ ಮನಗುಂಡಿ, ಮಾ ಪ್ರೌ ಬಿ ಎ ಎಂ ಎ ಧಾರವಾಡ; ಉಪಪ್ರಾಧ್ಯಾಪಕ (ಹಿಂದಿ) ಕರ್ನಾಟಕ ಕಾಲೇಜು ಧಾರವಾಡ; ಕರ್ನಾಟಕ ವಿದ್ಯಾವರ್ಧಕ ಸಂಘದ ಸದಸ್ಯ; 13 ಕೃತಿಗಳು: ಸೀನಾ, ಔರಂಗಜೇಬ (ಕ) ಆಧುನಿಕ ಕನ್ನಡ ಹಿಂದಿ ಕಾವ್ಯ (ವಿಮ) ಸಂಕ್ರಮಣ ಕಾವ್ಯ (ಸಂ) ಆಷಾಢದ ಒಂದು ದಿನ (ಅ) ಹಿಂದಿಯಲ್ಲೂ ಕೃತಿ ರಚಿಸಿದ್ದಾರೆ; ಹವ್ಯಾಸ: ಪ್ರವಾಸ, ಅಭಿನಯ

ಶ್ರೀದೇವಿನಗರ ಧಾರವಾಡ 4

ಪಟೇಲಬರಿಗೆ, ಗಣಪತಿ ಸುಬ್ರಮಣ್ಯ
ಜ 17-8-1913

ಶಿವಮೊಗ್ಗ ಜಿಲ್ಲೆ ಬರಿಗೆ; ಸುಬ್ಬರಾಯ-ಸಾವಿತ್ರಮ್ಮ; 3 ಗಂ 2 ಹೆ ಮಕ್ಕಳು; ಲೋಯರ್ ಸೆಕೆಂಡರಿ; ಕೃಷಿ; 7 ಕೃತಿಗಳು: ಭಗವಾನ್ ಶ್ರೀಕೃಷ್ಣ, ಗೀತಾನುಷ್ಠಾನ ಪದ್ಧತಿ, ಮೃತ್ಯುವಿಜ್ಞಾನ (ಧ) ಕಥಾಕುಂಜ (ಅ) ಸ್ತ್ರೀ ಸಮಾಜ (ಪ್ರ) ಹವ್ಯಾಸ: ಆಯುರ್ವೇದೀಯ ಚಿಕಿತ್ಸೆ, ಜ್ಯೋತಿಷ, ಹಾರ್ಮೋನಿಯಂ ನುಡಿಸುವುದು

ಉಳವಿ ಅಂಚೆ ಶಿವಮೊಗ್ಗ ಜಿಲ್ಲೆ 577 434



ಪತ್ರೆ, ಚಿಕ್ಕಣ್ಣಯ್ಯ
ಜ 22-7-1920

ತುಮಕೂರು ಜಿಲ್ಲೆ ಪತ್ರೆ ಮಂತಿಘಟ್ಟ ; ಪತ್ರೆ ಸಿದ್ಧ ವೀರಪ್ಪ-ಗಂಗಮ್ಮ ; 2 ಗಂ 1 ಹೆ ಮಕ್ಕಳು : ಪ್ರಾ ಮತಿಘಟ್ಟ. ಪ್ರೌ ಅರಸೀಕೆರೆ, ಬಿ ಎಸ್‌ಸಿ ಆನರ್ಸ್ ಬೆಂಗಳೂರು, ಎಂ ಎಸ್‌ಸಿ ಪಿ ಎಚ್ ಡಿ ಮೈಸೂರು ; ಪ್ರಾಧ್ಯಾಪಕ ಕ.ವಿ ; 5 ಕೃತಿಗಳು : ಸಸ್ಯಶಾಸ್ತ್ರ, ಸಸ್ಯಶಾಸ್ತ್ರ ಪರಿಚಯ, ಸಸ್ಯಶಾಸ್ತ್ರ ಪ್ರವೇಶ ; ಹವ್ಯಾಸ : ತೋಟಗಾರಿಕೆ

ಸಸ್ಯಶಾಸ್ತ್ರ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003

ಪದ್ಮಜ, ಕಳ್ಳಂಬೆಳ್ಳ ನರಸಿಂಹಮೂರ್ತಿ
ಜ 25-12-1948



ಮೈಸೂರು ; ಸಿ ವಿ ನರಸಿಂಹಮೂರ್ತಿ–ಕಮಲ ; ಬಿ ಎಸ್‌ಸಿ ಬಿ ಎಡ್, ತೆಲುಗು ಡಿಪ್ಲೊಮಾ ಮೈಸೂರು ; ಪ್ರೌಢಶಾಲಾ ಶಿಕ್ಷಕಿ ; 3 ಕೃತಿಗಳು : ಅನಿರೀಕ್ಷಿತ, ಅಸ್ವಮಾನ, ಅರಸಿ ಬಂದ ಅದೃಷ್ಟ (ಕಾ) ಹವ್ಯಾಸ : ಹಾಡುಗಾರಿಕೆ

1314 4ನೇ ಕ್ರಾಸ್ 2ನೇ ಮುಖ್ಯರಸ್ತೆ ಕೃಷ್ಣಮೂರ್ತಿ ಪುರಂ ಮೈಸೂರು 570 004



ಪದ್ಮಜೆ, ಕಸ್ತೂರಿ ರಂಗಾಚಾರ್
ಜ 9-9-1944

ಬೆಂಗಳೂರು ; ಎಸ್ ವೈ ರಾವ್–ಕಾಂತಮ್ಮ ; 2 ಗಂ 1 ಹೆ ಮಕ್ಕಳು ; ಪ್ರಾ ಮಾ ಬೆಂಗಳೂರು, ಪ್ರೌ ಆಯನೂರು, ಟಿ ಸಿ ಎಚ್ ; ಪ್ರಾಥಮಿಕ ಶಾಲಾ ಶಿಕ್ಷಕಿ ; 22 ಕೃತಿಗಳು : ಬಾಳ ದೀವಿಗೆ ಶುಭ ತೋರಣ, ಬದುಕಿನ ಬಣ್ಣ, ಹಾಡುವ ಹಕ್ಕಿ (ಕಾ) ಭರತ (ನಾ) ಹವ್ಯಾಸ : ಕಸೂತಿ, ರಂಗೋಲಿ

ನಂ 7 10ನೇ ಕ್ರಾಸ್ 1ನೇ ಮೈನ್ ಯಶವಂತಪುರ ಬೆಂಗಳೂರು 560 054



ಪದ್ಮನಾಭರಾವ್, ಕೋಡಿಹಳ್ಳಿ
ಜ 16-3-1917

ಆಂಧ್ರಪ್ರದೇಶದ ಆದವಾನಿ ; ಭೀಮರಾವು-ಸೀತಮ್ಮ ; 6 ಮಕ್ಕಳು ; ಎಸ್ ಎಸ್ ಎಲ್ ಸಿ ; ಬೆರಳಚ್ಚುಗಾರನಾಗಿ ನಿವೃತ್ತಿ ; ನಟನಕಲಾ ಪ್ರಪೂರ್ಣ, ಸಾಹಿತ್ಯ ಸುಧಾಕರ ; 4 ಕೃತಿಗಳು : ದತ್ತುಪುತ್ರ, ತುಳಸೀದಳ, ಬೇಡರ ಕಣ್ಣಪ್ಪ, ಅಷ್ಟಾವಧಾನಿ ಅನಂತಶಾಸ್ತ್ರಿ (ನಾ)



ಪದ್ಮನಾಭಶರ್ಮ, ದೇವಚಂದ್ರಜೋಯಿಸ್
ಜ 27-11-1925

ಮೈಸೂರು ಜಿಲ್ಲೆ ಭುವನಹಳ್ಳಿ ; ದೇವಚಂದ್ರ ಜೋಯಿಸ-ಚಂದ್ರಮತಮ್ಮ : 3 ಗಂ 2 ಹೆ ಮಕ್ಕಳು ; ಪ್ರಾ ಭುವನಹಳ್ಳಿ ಮತ್ತು ಚಾಮರಾಜ ನಗರ, ಪ್ರೌ ಮಂಡ್ಯ ಮತ್ತು ಮೈಸೂರು, ಕನ್ನಡ ಪಂಡಿತ ಪರೀಕ್ಷೆ ಮತ್ತು ಹಿಂದೀ ರತ್ನ ; ಕಿರಿಯ ಕಾಲೇಜು ಶಿಕ್ಷಕರಾಗಿ ನಿವೃತ್ತಿ; ಕರ್ನಾಟಕ ಶಬ್ದಾನು ಶಾಸನ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, ಜೈನಸಾಹಿತ್ಯ ಭೂಷಣ ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ ; 75 ಕೃತಿಗಳು : ಅಭಿನವ ವಾಗ್ದೇವಿ ಕಂತಿ, ಸಾಹಸೀ ಸುಭಾಸ್, ಆತ್ಮದರ್ಶನ, ಭಗವಾನ್ ಮಹಾವೀರ, ಮಾಜಿಸ್ಟ್ರೇಟರ ಮಡದಿ, ಗೋಮಟೇಶ್ವರ ಲಾವಣಿ

33/1 4ನೇ ಬ್ಲಾಕ್ ತ್ಯಾಗರಾಜ ನಗರ ಬೆಂಗಳೂರು 560 028



ಪದ್ಮಪ್ರಸಾದ್, ಶ್ರವಣ ಬೆಳಗೊಳ ಪಾಯಪ್ಪಶೆಟ್ಟಿ [ಕಾವ್ಯಜೀವಿ]
ಜ 9-12-1949

ಶಿವಮೊಗ್ಗ ಜಿಲ್ಲೆ ಹೊಂಬುಜ ; ಎಸ್ ಪಿ ಪಾಯಪ್ಪಶೆಟ್ಟಿ-ಜಿನ್ನಮ್ಮ : ಪ್ರಾ ಮಾ ಪ್ರೌ ಹೊಸನಗರ, ಬಿ ಎಸ್‌ಸಿ ಬಿ ಎಡ್ ಶಿವಮೊಗ್ಗ, ಎಂ ಎ ಮೈಸೂರು, ಹಿಂದಿ ರತ್ನ ; ಪ್ರೌಢಶಾಲಾ ಶಿಕ್ಷಕ ; ಜೈನ ಜಾನಪದ ಸಾಹಿತ್ಯ-ಸಂಪಾದನೆ

ಮತ್ತು ಅಧ್ಯಯನ ನಿಬಂಧಕ್ಕೆ ಬೆಂ ವಿ ಡಾಕ್ಟರೇಟ್ ಪ್ರಶಸ್ತಿ; 8 ಕೃತಿಗಳು: ಇವರೆಲ್ಲ ನನ್ನ ಜನ (ಕ) ಬೃಂದಾವನ (ಪ್ರ) ಕೆರೆಗೆ ಹಾರ (ನಾ) ಹಾಡೇಳೆ ತಂಗಿ ದನಿಯೆತ್ತಿ (ಜಾ) ಗಾಜಿನ ಗೋಡೆಗಳು (ಅ) ಬಸವಪ್ಪ ಶಾಸ್ತ್ರಿ (ಜೀ) ಹವ್ಯಾಸ: ಪ್ರವಾಸ, ಅಂಚೆ ಚೀಟಿ ಸಂಗ್ರಹ, ಅಭಿನಯ
ದೇಶೀಯ ವಿದ್ಯಾಶಾಲಾ ಪ್ರೌಢಶಾಲೆ ಶಿವಮೊಗ್ಗ 577 201



ಪದ್ಮಾವತಿ, ತೊರೆನೂರು ವೆಂಕಟಪ್ಪ
ಜ **12-12-1953**

ಕೊಡಗು ಜಿಲ್ಲೆ ತೊರೆನೂರು; ಟಿ ಬಿ ವೆಂಕಟಪ್ಪ-ಟಿ ಬಿ ಜಯಲಕ್ಷ್ಮಿ; ಪ್ರಾ ತೊರೆನೂರು ಮತ್ತು ಹೆಬ್ಬಾಲೆ, ಪ್ರೌ ಸೋಮವಾರಪೇಟೆ ಮತ್ತು ಹೆಬ್ಬಾಲೆ, ಪಿ ಯು ಸಿ ಬಿ ಎ ಎಂ ಎ, ಡಿಪ್ಲೊಮಾ: ಜೈನಶಾಸ್ತ್ರ ಮೈಸೂರು; 3 ಕೃತಿಗಳು: ಜೈನ ಶಾಸ್ತ್ರ ಕೆಲವು ಅಧ್ಯಯನಗಳು (ಅ) ಸಮಾವೇಶ (ವಿಮ) ಕನ್ನಡ ಛಂದಸ್ಸು: ಒಂದು ಅವಲೋಕನ (ಛಂ) ಹವ್ಯಾಸ: ಪ್ರವಾಸ
ನಂ 2542 4ನೇ ಮುಖ್ಯರಸ್ತೆ ಕೆ ಜಿ ಕೊಪ್ಪಲು 570 009



ಪದ್ಮಾವತಿ, ಪೋರುಮಾಮಿಳ್ಳ ಲಕ್ಷ್ಮಣಮೂರ್ತಿ

ಭದ್ರಾವತಿ; ಎಂ ಎ ಎಂ ಎಡ್; ಉಪಪ್ರಾಧ್ಯಾಪಕಿ; 2 ಕೃತಿಗಳು: ಗಣಿತ ಶಾಸ್ತ್ರದ ಮೂಲತತ್ವಗಳ ಅರ್ಥಕೋಶ, ಗತಿಸಿದ ಚರಿತ್ರೆ ಬೋಧಿಸಿದ್ದೇನು
124 ಲಕ್ಷ್ಮಣ ನಿವಾಸ ಕೃಷ್ಣರಾಜೇಂದ್ರ ರಸ್ತೆ ಬಸವನಗುಡಿ 560 004

ಪಪ್ಪು ವೆಂಕಣ್ಣಾಚಾರ್ಯ, ತಮ್ಮಣ್ಣಾಚಾರ್ಯ
ಜ **16-9-1907**

ಹುಬ್ಬಳ್ಳಿ; 2 ಗಂ 2 ಹೆ ಮಕ್ಕಳು; ಬಿ ಎ ಎಲ್ ಎಲ್ ಬಿ; ವಕೀಲಿ ವೃತ್ತಿ; 4 ಕೃತಿಗಳು: ಕದ್ದು ಕೇಳಿದ್ದು, ಸರ್ವದಾನಯಜ್ಞ, ಸಮಾಜದ ಸ್ತಂಭಗಳು (ಪ್ರ)
ಘೋರ್ಪ ಹುಬ್ಬಳ್ಳಿ



ಪರಮಶಿವಯ್ಯ, ಜೀರಹಳ್ಳಿ ಶಂಕರೇಗೌಡ
[ಜೀ ಶಂ ಪ]
ಜ 12-11-1933

ಮಂಡ್ಯ ಜಿಲ್ಲೆ ಅಂಬಲ ಜೀರಹಳ್ಳಿ : ಶಂಕರೇಗೌಡ-ರಂಗಮ್ಮ ; 1 ಗಂ 2 ಹೆ ಮಕ್ಕಳು ; ಪ್ರಾ ಲಕ್ಷ್ಮಿಪುರ, ಮಾ ಮೈಸೂರು ಬೆಂಗಳೂರು, ಪ್ರೌ ಮೈಸೂರು ಬೆಂಗಳೂರು, ಬಿ ಎ ಎಂ ಎ ಪಿ ಎಚ್‌ಡಿ ಮೈ ವಿ ; ಕನ್ನಡ ಅಧ್ಯಾಪಕ ಜೆ ಎಸ್ ಎಸ್ ಕಾಲೇಜು, ಮೈ ವಿ ಸಂಜೆ ಕಾಲೇಜು, ಕುಲಪತಿಗಳ ಆಪ್ತ ಕಾರ್ಯದರ್ಶಿ, ಪ್ರಾಧ್ಯಾಪಕ ಕನ್ನಡ ಅಧ್ಯಯನ ಸಂಸ್ಥೆ ಜಾನಪದ ವಿಭಾಗ ಮೈ ವಿ; ಬ್ರಿಟನ್, ಫ್ರಾನ್ಸ್, ಜರ್ಮನಿ. ಡೆನ್ಮಾರ್ಕ್, ಸ್ವೀಡನ್, ಫಿನ್‌ಲೆಂಡ್, ಜಕೋಸ್ಲೊವೇಕಿಯ, ಅಮೆರಿಕ ಪ್ರವಾಸ; ರಾಜ್ಯಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಪ್ರಶಸ್ತಿ ; ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯದರ್ಶಿ, ಜನಪದ ಕಲಾ ಕೂಟದ ಸಂಚಾಲಕ, ಎಫ್ ಎಫ್ ಐ ಕೋಶಾಧ್ಯಕ್ಷ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ; 50 ಕೃತಿಗಳು : ಜೀವನ ಗೀತ, ದಿಬ್ಬದಾಚೆ (ಕ) ಕಾವಲುಗಾರ, ಮುಬ್ಬುಜಾರಿದ ಕಣಿವೆಯಲ್ಲಿ (ಸ ಕ) ಉಕ್ಕಿನ ಮನುಷ್ಯ, ಬೆಳುಗೊಳದ ಗೊಮ್ಮಟೇಶ (ಜೀ) ಅವರ ನೆನೆದೇನು, ಜಾನಪದ ಸಂಗಮ, ದಕ್ಷಿಣ ಕರ್ನಾಟಕದ ಜಾನಪದ ಕಾವ್ಯಪ್ರಕಾರಗಳು, ಕನ್ನಡ ಒಗಟುಗಳು (ಜಾ) ಸಾಹಸ ಯಾತ್ರೀ, ಸಹ್ಯಾದ್ರಿ, ಕಬ್ಬಿನ ಹಾಲು, ನಾಗವಲ್ಲಿ (ಸಂ) ಮೋದರ ಕಲ್ಲು (ಪ್ರ)

ಪ್ರಾಧ್ಯಾಪಕ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006

ಪರಮೇಶ್ವರಪ್ಪ, ತಳವಾರ
ಜ 1-7-1933



ಬಳ್ಳಾರಿ ಜಿಲ್ಲೆ ಹೊಳಗುಂದಿ ; 3 ಗಂ 3 ಹೆ ಮಕ್ಕಳು ; ಪ್ರೌಢಶಿಕ್ಷಣ ; 1 ಕೃತಿ : ಕತ್ತಲು ಬೆಳಕು (ನಾ) ಹವ್ಯಾಸ : ರಂಗಾಭಿನಯ

ಓಂಕಾರೇಶ್ವರಗುಡಿ ಹತ್ತಿರ ಮ್ಯಾದಾರು ಓಣಿ ಹೊಸಪೇಟೆ



ಪರಮೇಶ್ವರಭಟ್ಟ, ಶೃಂಗೇರಿ ವಿದ್ಯಾರಣ್ಯಪುರ

ಜ **8-2-1914**

ಶಿವಮೊಗ್ಗ ಜಿಲ್ಲೆ ಮಾಳೂರು ; ಸದಾಶಿವರಾವ್–ಲಕ್ಷ್ಮಮ್ಮ ; 2 ಗಂ 2 ಹೆ ಮಕ್ಕಳು ; ಪ್ರಾ ಮಾ ತೂದೂರುಕಟ್ಟೆ, ಪ್ರೌ ತೀರ್ಥಹಳ್ಳಿ, ಬಿ ಎ ಆನರ್ಸ್ ಎಂ ಎ ಮೈಸೂರು ; ಕೇಣಿಸಿದ್ದಪ್ಪ ಸುವರ್ಣ ಪದಕ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನಗಳು ; ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ, ಸಾಹಿತ್ಯ ಸೇವೆಗಾಗಿ ರಾಜ್ಯ ಸರ್ಕಾರದ ಮಾಸಾಶನ, ಪೂರ್ಣಕುಂಭ ಅಭಿನಂದನ ಗ್ರಂಥ ಸಮರ್ಪಣೆ ; ಪಿ ಇ ಎನ್, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 60 ಕೃತಿಗಳು : ಇಂದ್ರಚಾಪ, ಉಪ್ಪು ಕಡಲು, ತುಂಬೆ ಹೂವು (ಕ) ಕನ್ನಡ ಕಾಳಿದಾಸ ಮಹಾಸಂಪುಟ, ಗಾಥಾ ಸಪ್ತಶತಿ, ಗೀತ ಗೋವಿಂದ (ಅ) ಸೀಳು ನೋಟ, ಭಾವಗೀತೆ, ಅದ್ಭುತ ರಾಮಾಯಣದಕಥೆ (ವಿಮ) ಮುದ್ದಣ ಕವಿಯ ಶ್ರೀರಾಮ ಪಟ್ಟಾಭಿಷೇಕ (ಸಂ) ಮಂಥಾನ (ಜಾ)

1498 ಎ 'ಕಲ್ಪನಾ' ರಾಮಯ್ಯರ್ ರಸ್ತೆ ಕೃಷ್ಣಮೂರ್ತಿಪುರಂ ಮೈಸೂರು 570 004

ಪರಮೇಶ್ವರಯ್ಯ, ಹರ್ತಿಕೋಟೆ ಮಹಲಿಂಗಪ್ಪ

[ಪರಮೇಶ]

ಜ **6-11-1938**



ಚಿತ್ರದುರ್ಗ ಜಿಲ್ಲೆ ಹರ್ತಿಕೋಟೆ ; ಮಹಲಿಂಗಪ್ಪ–ತಿಪ್ಪಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಹರ್ತಿಕೋಟೆ, ಪ್ರೌ ಹಿರಿಯೂರು, ಬಿ ಎ ಎಂ ಎ ಮೈಸೂರು ; ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ; 3 ಕೃತಿಗಳು : ಪಿಸುಗುಟ್ಟಿತು ಬಯಕೆ (ಕ) ಹೊತ್ತು ಮುಳುಗುವ ಮುನ್ನ (ಅ) ಲೋಕನಾಯಕನ ಕತೆ (ಬಾ)

ಕನ್ನಡ ಅಧ್ಯಾಪಕ ಸರ್ಕಾರಿ ಕಾಲೇಜು



ಪರ್ವತಿ, ಪ್ರಹ್ಲಾದ ಶ್ರೀನಿವಾಸರಾವ

[ಇಂದಿರಾತನಯ]

ಜ **1-6-1953**

ಬಿಜಾಪುರ ಜಿಲ್ಲೆ ಬಾಗಲಕೋಟೆ ; ಪ್ರಾ ನಿಡಗುಂದಿ, ಪ್ರೌ ಬಿ ಎ ಹುಬ್ಬಳ್ಳಿ, ಬಿ ಎಡ್ ಬೆಳಗಾವಿ : ಬಳ್ಳಾರಿಯ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ವಾರ್ತಾಸಹಾಯಕ ; ಕಚೇರಿಯಲ್ಲಿ ಕನ್ನಡ ಬಳಕೆಗಾಗಿ ಜಿಲ್ಲಾ ಹಾಗೂ ವಿಭಾಗ ಮಟ್ಟದ

ಬಹುಮಾನ ; 2 ಕೃತಿಗಳು : ಪ್ರಗತಿ ಪಥದಲ್ಲಿ ಬಳ್ಳಾರಿ ಜಿಲ್ಲೆ, ಅಭಿವೃದ್ಧಿಯ ಹಾದಿಯಲ್ಲಿ ಬಳ್ಳಾರಿ ಜಿಲ್ಲೆ ; ಹವ್ಯಾಸ : ಅಂಚೆ ಚೀಟಿ ಸಂಗ್ರಹ, ಅಭಿನಯ

ವಾರ್ತಾ ಸಹಾಯಕ ವಾರ್ತಾ ಮತ್ತು ಪ್ರಚಾರ ಇಲಾಖೆ ಬಳ್ಳಾರಿ 583 101



ಪ್ರಧಾನ್ ಗುರುದತ್ತ
ಜ 30-5-1938

ಚಿಕ್ಕಬಳ್ಳಾಪುರ ; ತಿಮ್ಮಪ್ಪಯ್ಯ ಪ್ರಧಾನ್–ಲಲಿತಮ್ಮ ; 1 ಗಂ 2 ಹೆ ಮಕ್ಕಳು ; ಎಂ ಎ (ಕನ್ನಡ) ಮೈಸೂರು, ಎಂ ಎ (ಹಿಂದಿ) ವಾರಣಾಸಿ, ಎಂ ಫಿಲ್ (ಭಾಷಾಂತರ) ಮೈ ವಿ, ಸಂಸ್ಕೃತ ಕೋವಿದ ; ಮಾನಸ ಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯ ಭಾಷಾಂತರ ಮತ್ತು ಪಠ್ಯ ಪುಸ್ತಕ ವಿಭಾಗದಲ್ಲಿ ಉಪ ಪ್ರಾಧ್ಯಾಪಕ ; ಊರ್ಮಿಳಾ ವಿಮರ್ಶಾ ಗ್ರಂಥಕ್ಕೆ ಲೋಕಶಿಕ್ಷಣ ಟ್ರಸ್ಟ್ ಬಹುಮಾನ, ಆಡಳಿತ ಭಾಷೆ ಕೆಲವು ವಿಚಾರಗಳು ಗ್ರಂಥಕ್ಕೆ ಕರ್ನಾಟಕ ಸರ್ಕಾರದ ಬಹುಮಾನ ; 13 ಕೃತಿಗಳು : ಊರ್ಮಿಳಾ (ವಿಮ) ಜಯಪ್ರಕಾಶ ನಾರಾಯಣ (ಜೀ) ಡಾ॥ ನಗೇಂದ್ರರ ಶ್ರೇಷ್ಠ ಪ್ರಬಂಧಗಳು, ಗಾಂಧೀಜಿ ನಾನು ಕಂಡಂತೆ, ದಿವ್ಯಾ (ಅ) ಸ್ನೇಹಾಂಜಲಿ, ನಾಗವಲ್ಲಿ (ಸಂ) ಹಿಂದಿಯಲ್ಲೂ ಕೃತಿ ರಚಿಸಿದ್ದಾರೆ

ಎಲ್ 19 ಅಧ್ಯಾಪಕರ ನಿವಾಸ ಮಾನಸಗಂಗೋತ್ರಿ ಮೈಸೂರು 570 006



ಪ್ರಭಪ್ಪ, ಬಸಪ್ಪ ಬೊಮ್ಮನಹಳ್ಳಿ
[ಬೊಮ್ಮನಹಳ್ಳಿ ಪ್ರಭು]
ಜ 15-11-1936

ಧಾರವಾಡ ಜಿಲ್ಲೆ ಮುಳಗುಂದ ; ಬಸಪ್ಪ–ಬಸವಣ್ಣೆವ್ವ ; 5 ಜನ ಮಕ್ಕಳು ; ಪ್ರಾ ಮುಳಗುಂದ, ಮಾ ಲಕ್ಷ್ಮೇಶ್ವರ, ಪ್ರೌ ಹುಬ್ಬಳ್ಳಿ, ಬಿ ಎ ಎಂ ಎ ಬಿ ಇಡಿ ಧಾರವಾಡ ; ಪ್ರೌಢ ಶಾಲಾ ಶಿಕ್ಷಕ ; 1 ಕೃತಿ : ಮಾತೃಭಾಷಾ ಶಿಕ್ಷಣ ಪದ್ಧತಿ ; ಹವ್ಯಾಸ : ಸಂಗೀತ, ಚಿತ್ರಕಲೆ

ಬಸ್ತಿಬಣ ಶಿರಹಟ್ಟಿ ಧಾರವಾಡ ಜಿಲ್ಲೆ



ಪ್ರಭುಪ್ರಸಾದ್, ಕುರುವತ್ತಿ ಬಸಪ್ಪ
ಜ 27-12-1929

ದಾವಣಗೆರೆ ; ಬಿ ಎಸ್ ಕುರುವತ್ತಿ-ಸರ್ವಮಂಗಳಾ; 1 ಗಂ 1 ಹೆ ಮಕ್ಕಳು ; ಪ್ರಾ ಮಾ ಪ್ರೌ ದಾವಣಗೆರೆ, ಬಿ ಎ ಮೈಸೂರು, ಎಂ ಎ (ಇಂಗ್ಲಿಷ್) ಮುಂಬೈ ; ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಿನ್ಸಿಪಾಲ್ : ದೇಗುಲಗಳ ದಾರಿಯಲ್ಲಿ ಕೃತಿಗೆ ಲೋಕ ಶಿಕ್ಷಣ ಟ್ರಸ್ಟ್ ಬಹುಮಾನ ; 5 ಕೃತಿಗಳು : ದೇಗುಲಗಳ ದಾರಿಯಲ್ಲಿ (ಪ್ರವಾ) ಹಾಡೋಣ ಬಾ (ಸಂಕ) ನನಸಾದ ಕನಸು (ಜೀ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ಸಂಗೀತ, ಚಿತ್ರಕಲೆ, ಅಭಿನಯ, ನಾಟಕ ನಿರ್ದೇಶನ, ಛಾಯಾಗ್ರಹಣ

ನಂ 11 ದೇವಸ್ಥಾನದ ರಸ್ತೆ ಜಯಲಕ್ಷ್ಮೀಪುರಂ ಮೈಸೂರು 570 012



ಪ್ರಭುರಾಜ ಅರಣಕಲ್
ಜ 2-5-1946

ಕಲಬುರ್ಗಿ ಜಿಲ್ಲೆ ಅರಣಕಲ್ ; ನರಹರಿಭಟ್ಟ ಅರಣಕಲ್-ತುಳಸಾಬಾಯಿ ; 1 ಗಂ 1 ಹೆ ಮಕ್ಕಳು : ಎಚ್ ಎಸ್ ಸಿ ; ಕೃಷಿ ಸಹಾಯಕ : ಕನ್ನಡ ಸಾಹಿತ್ಯ ಪರಿಷತ್ತು, ನೃಪತುಂಗ ಅಧ್ಯಯನ ಸಂಸ್ಥೆ (ಸೇಡಂ) ಸದಸ್ಯ; 1 ಕೃತಿ : ಮೌನ ನುಂಗುವ ಶಬ್ದಗಳು (ಕ) ಹವ್ಯಾಸ : ಹಾಡು, ಈಜು, ತಬಲ ನುಡಿಸುವುದು

ಆಡಕಿ ಅಂಚೆ ಸೇಡಂ ತಾಲೂಕು ಕಲಬುರ್ಗಿ ಜಿಲ್ಲೆ 585 222



ಪ್ರಭುಶಂಕರ
ಜ 15-2-1929

ಚಾಮರಾಜನಗರ ; ಆರ್ ಕರಿಬಸಪ್ಪ-ರುದ್ರಮ್ಮ ; 2 ಹೆ ಮಕ್ಕಳು ; ಪ್ರಾ ಮಾ ಚಾಮರಾಜನಗರ, ಪ್ರೌ ಮೈಸೂರು ಮತ್ತು ಬೆಂಗಳೂರು, ಬಿ ಎ ಆನರ್ಸ್ ಎಂ ಎ ಪಿ ಎಚ್ ಡಿ ಮೈ ವಿ ; ಕನ್ನಡ ಅಧ್ಯಾಪಕ (1950-64) ಪ್ರಸಾರಾಂಗದ ನಿರ್ದೇಶಕ (1964-81) ಉಪಪ್ರಾಧ್ಯಾಪಕ ಮೈ ವಿ,

ಸಂದರ್ಶಕ ಪ್ರಾಧ್ಯಾಪಕರಾಗಿ ವಾರಣಾಸಿಯಲ್ಲಿ 2 ವರ್ಷ ಸೇವೆ ; ಅಮೆರಿಕ, ಲಂಡನ್, ಜರ್ಮನಿ ಪ್ರವಾಸ ; ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ; ಮೈ ವಿ ಕನ್ನಡ ಅಧ್ಯಯನ ಮಂಡಲಿಯ ಸದಸ್ಯ ; 20 ಕೃತಿಗಳು : ಕನ್ನಡದಲ್ಲಿ ಭಾವಗೀತೆ, ಸಾಹಿತ್ಯ ಮತ್ತು ಆಧುನಿಕತೆ (ವಿಮ) ಉಪನಿಷತ್ತುಗಳ ಸಂದೇಶ, ಭಾರತೀಯ ತತ್ವಶಾಸ್ತ್ರದ ರೂಪು ರೇಖೆಗಳು (ಅ) ಆಮ್ರಪಾಲಿ, ಅಂಗುಲೀಮಾಲ (ನಾ) ನಿವೇದಿತಾ (ಬಾ) ಚಿಂತೆ ಚಿಂತನ (ಪ್ರ) ಅಮೆರಿಕದಲ್ಲಿ ನಾನು ಶಾಂತಿ (ಪ್ರವಾ) ಹವ್ಯಾಸ : ಸಂಗೀತ

ಪ್ರಾಧ್ಯಾಪಕರ ನಿವಾಸ ಮಾನಸಗಂಗೋತ್ರಿ ಮೈಸೂರು 570 006



ಪ್ರಭುಸ್ವಾಮಿ, ನಂಜುಂಡಸ್ವಾಮಿ

ಜ 9-10-1928

ಟಿ ನರಸೀಪುರ ; ನಂಜುಂಡಸ್ವಾಮಿ–ಪುಟ್ಟಮ್ಮಣ್ಣಿ ; 2 ಗಂ 3 ಹೆ ಮಕ್ಕಳು ; ಪ್ರಾ ಮಾ ಪ್ರೌ ಬಿ ಎ ಎಂ ಎ ಮೈಸೂರು, ಎಂ ಎಸ್ ಅಮೆರಿಕ; ಅಮೆರಿಕ, ಕೆನಡ ಪ್ರವಾಸ ; ಭಾರತೀಯ ಅರ್ಥಶಾಸ್ತ್ರಜ್ಞರ ಸಂಘದ ಆಜೀವ ಸದಸ್ಯ ; 1 ಕೃತಿ : ಭಾರತಕ್ಕೆ ಅಮೆರಿಕದ ಆರ್ಥಿಕ ನೆರವು; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

1058 ಇಟ್ಟಿಗೆಗೂಡು ಮೈಸೂರು 570 010

ಪ್ರಸನ್ನ ಶ್ರೀನಿವಾಸ, ಕಸ್ತೂರಿ ರಂಗಾಚಾರ್

ಜ 11-2-1967

ಬೆಂಗಳೂರು ; ಕೆ ಆರ್ ರಂಗಾಚಾರ್–ಕೆ ಆರ್ ಪದ್ಮಜೆ; ಪ್ರಾ ಮಾ ಪ್ರೌ ಬೆಂಗಳೂರು ಚಿಕ್ಕಬಳ್ಳಾಪುರ ; 5 ಕೃತಿಗಳು : ಮಿಂಚಿನ ಮರಿ, ಮಂತ್ರದ ಕೋಲು, ತಂದೆಯ ವರ, ಶುಕದೇವ (ಬಾ)

7 10ನೇ ಕ್ರಾಸ್ 1ನೇ ಮೈನ್ ಯಶವಂತಪುರ
ಬೆಂಗಳೂರು 560 054





ಪ್ರಹ್ಲಾದರಾವ್, ನಗರ
ಜ 10-6-1920-1980

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ; ಎನ್ ಹನುಮಂತ ರಾವ್–ತುಳಸಾಬಾಯಿ ; 2 ಗಂ 4 ಹೆ ಮಕ್ಕಳು : ಪ್ರಾ ಪ್ರೌ ಶಿವಮೊಗ್ಗ, ಬಿ ಎ ಆನರ್ಸ್ ಎಂ ಎ ಮೈಸೂರು ; ಗುಮಾಸ್ತ (1945–48) ಕನ್ನಡ ಅಧ್ಯಾಪಕ (1948–67) ಉಪಪ್ರಾಧ್ಯಾಪಕ, ಕನ್ನಡ ವಿಶ್ವಕೋಶದ ಸಂಯೋಜಕ ಸಂಪಾದಕ ; ಮಿಂಚುಳ್ಳಿ ಮಕ್ಕಳ ಪುಸ್ತಕಕ್ಕೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ, ಪ್ರಹ್ಲಾದ ಸಂಸ್ಮರಣ ಗ್ರಂಥ ಸಮರ್ಪಣೆ ; 10 ಕೃತಿಗಳು : ಅವತಾರ (ಸ ಕ) ಅಮಲಿನ ವಚನಗಳು (ಕ) ಮುತ್ತಿನಹಾರ (ಪ್ರ) ಮಿಂಚುಳ್ಳಿ (ಬಾ) ಕ್ರಿಸ್ಟೊಫರ್ ಕೊಲಂಬಸ್ (ಜೀ)

510 13ನೇ ಮುಖ್ಯರಸ್ತೆ ಸರಸ್ವತಿಪುರಂ ಮೈಸೂರು 570 009

ಪ್ರಹ್ಲಾದರಾವ್, ಸಿ ಎಚ್
ಜ 13-1-1923

2 ಗಂ ಮಕ್ಕಳು ; ಬಿ ಎ ಮೈಸೂರು ; 4 ಕೃತಿಗಳು : ಬಂಜೆ ತೊಟ್ಟಿಲು, ಸುಂಕವಿಲ್ಲದ ದಾರಿ (ಕಾ) ನಂದಲಾಲ್ ಬೋಸ್ (ಜೀ) ದೇವರು ದೇವತೆಗಳು (ಬಾ)

ನಂ 201 37 ಎ ಕ್ರಾಸ್ 9ನೇ ಬ್ಲಾಕ್ ಜಯನಗರ ಬೆಂಗಳೂರು 11

ಪಾಂಡುರಂಗಿ, ಕೃಷ್ಣಾಚಾರ್ಯ ತಮಣಾಚಾರ್ಯ
ಜ 1–12–1918



ಧಾರವಾಡ ಜಿಲ್ಲೆ ತುಮ್ಮಿನಕಟ್ಟಿ ; 5 ಮಕ್ಕಳು ; ಪ್ರಾ ಮುನವಳ್ಳಿ. ಸಂಸ್ಕೃತ ಶಿಕ್ಷಣ ಧಾರವಾಡ ಸಾಂಗ್ಲಿ ಮೈಸೂರು ಅಣ್ಣಾಮಲೈ ವಿಶ್ವವಿದ್ಯಾಲಯ, ಎಂ ಎ ವಾರಣಾಸಿ, ವೇದಾಂತ ವಿದ್ವಾನ್, ಮೀಮಾಂಸ ಶಿರೋಮಣಿ, ದರ್ಶನರತ್ನ, ಮೀಮಾಂಸ ಭೂಷಣ, ಕೇಂದ್ರೀಯ ಸಂಸ್ಕೃತ ಮಂಡಲಿ ನವದೆಹಲಿ ಸದಸ್ಯ ; 11 ಕೃತಿಗಳು : ಸಂಸ್ಕೃತ ಕವಯಿತ್ರಿಯರು, ಕಾವ್ಯ ಶಾಸ್ತ್ರ ವಿನೋದ, ಕಾಲಿದಾಸನ ಸೌಂದರ್ಯ ದೃಷ್ಟಿ, ಉಪನಿಷದ್ ದರ್ಶನ ; ಇಂಗ್ಲಿಷ್ ಹಾಗೂ ಸಂಸ್ಕೃತದಲ್ಲಿ ಕೃತಿ ರಚನೆ

132/4 3ನೇ ಬ್ಲಾಕ್ ಜಯನಗರ ಬೆಂಗಳೂರು

ಪಾಟೀಲ, ಅಜ್ಜಣ್ಣ ಉಳುವಸಗೌಡ [ಅಜ್ಜಣ್ಣ]
ಜ 2-1-1931

ಬೆಳಗಾವಿ ಜಿಲ್ಲೆ ದೇವಗಾಂವಿ; 1 ಗಂ 3 ಹೆ ಮಕ್ಕಳು; ಪ್ರಾ ದೇವಗಾಂವಿ ಪ್ರೌ ಬಿ ಎ ಬಿ ಎಡ್ ಬೆಳಗಾವಿ, ಎಂ ಎ ಮುಂಬೈ; ಪ್ರಾಧ್ಯಾಪಕ ಕ ವಿ; 3 ಕೃತಿಗಳು: ಮೊಗ್ಗು (ಕ) ಹಿಂದೂಸ್ಥಾನಿ ಸಂಗೀತದ ರೂಪುರೇಷೆಗಳು, ಸಂಗೀತಶಾಸ್ತ್ರ ಪರಿಚಯ (ಕಲೆ) ಹವ್ಯಾಸ: ಚಿತ್ರ, ಅಭಿನಯ, ಸಂಗೀತ
ಆರ್ ಕೆ ನಾಯ್ಡು ಹೌಸ್ ಸಪ್ತಾಪುರ ಧಾರವಾಡ

ಪಾಟೀಲ, ಗುರುಲಿಂಗಪ್ಪ ಮಲ್ಲಪ್ಪ
ಜ 11-6-1910

ಬೆಳಗಾವಿ ಜಿಲ್ಲೆ ಗೋಕಾಕ; ಮಲ್ಲಪ್ಪ–ಶಿವಲಿಂಗಯ್ಯ; 3 ಗಂ ಮಕ್ಕಳು; ಬಿ ಎ ಎಲ್ ಎಲ್ ಬಿ, ಗ್ರಂಥಾಲಯಶಾಸ್ತ್ರದ ಡಿಪ್ಲೊಮಾ; ಗ್ರಂಥಾಲಯ ನಿರ್ವಾಹಕನಾಗಿ ನಿವೃತ್ತಿ; ಶರಣ ತ್ರೈಮಾಸಿಕದ ಗೌರವ ಸಂಪಾದಕ; 10 ಕೃತಿಗಳು: ನಮ್ಮ ಪುಸ್ತಕ ಭಂಡಾರ, ಪುಸ್ತಕ ಭಂಡಾರ ಸೇವೆ, ಗ್ರಂಥಸೂಚಿ ಮತ್ತು ಪುಸ್ತಕಶಾಸ್ತ್ರ, ಬಸವಣ್ಣನವರು ಲಿಂಗವಂತ ಧರ್ಮ ಸಂಸ್ಥಾಪಕರು; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ
ಗೋಪಾಲಪುರ ಧಾರವಾಡ–7




ಪಾಟೀಲ, ಚಂದ್ರಶೇಖರ
ಜ 18-6-1939

ಧಾರವಾಡ ಜಿಲ್ಲೆ ಹತ್ತೀಮತ್ತೂರು; ಬಿ ಎಚ್ ಪಾಟೀಲ-ಮುರಿಗೆವ್ವ; 1 ಗಂ 1 ಹೆ ಮಕ್ಕಳು; ಪ್ರಾ ಹತ್ತೀಮತ್ತೂರು, ಮಾ ಹಾವೇರಿ, ಪ್ರೌ ಧಾರವಾಡ, ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಹೈದರಾಬಾದ್, ಲೀಡ್ ಯೂನಿವರ್ಸಿಟಿ ಇಂಗ್ಲೆಂಡ್ ಎಂ ಎ (ಇಂಗ್ಲಿಷ್ ಮತ್ತು ಭಾಷಾಶಾಸ್ತ್ರ) ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ; ಇಂಗ್ಲೆಂಡ್ ಪ್ರವಾಸ; ಬಾನುಲಿ ಕವಿತಾ ಸಂಕಲನಕ್ಕೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ, ಗುರ್ತಿನವರು ನಾಟಕಕ್ಕೆ ಪ್ರಜಾವಾಣಿಯ ದೀಪಾವಳಿ ವಿಶೇಷಾಂಕದ ಬಹುಮಾನ; ಅಂತರಂಗ ನಾಟಕಕೂಟದ ಸದಸ್ಯ, ಸಂಕ್ರಮಣ ಸಾಹಿತ್ಯಾಂಕದ ಸಂಪಾದಕ; 15 ಕೃತಿಗಳು: ಬಾನುಲಿ, ಮಧ್ಯಬಿಂದು (ಕ) ಕೊಡೆಗಳು, ಅಪ್ಪ (ನಾ) ಸಂಕ್ರಮಣ ಕಾವ್ಯ, ಜೂನ್ 75 ಮಾರ್ಚ್ 77 (ಸಂ)
ಇಂಗ್ಲಿಷ್ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003

ಪಾಟೀಲ, ಚನಬಸನಗೌಡ ಶಂಕರಗೌಡ [ಪಿ ಚನ್ನಬಸವಣ್ಣ]
ಜ 2-2-1939

ತೆವರಮೆಳ್ಳಹಳ್ಳಿ; ಶಂಕರಗೌಡ–ಚನ್ನಬಸಮ್ಮ ; 1 ಗಂ 1 ಹೆ ಮಕ್ಕಳು; ಎಸ್ ಎಸ್ ಸಿ, ಹಿಂದಿ ಮಾಧ್ಯಮಿಕ ; ಬ್ರ್ಯಾಂಚ್ ಪೋಸ್ಟ್‌ಮಾಸ್ಟರ್ ; ದಕ್ಷಿಣ ಭಾರತ ಪುಸ್ತಕ ಸಂಸ್ಥೆ ಮದರಾಸು ಸದಸ್ಯ ; 4 ಕೃತಿಗಳು : ಗುಲಾಬಿ (ಕ) ಮಿಲನ, ಮೋಸದ ಬಲೆ, ಕಾಮದಹನ (ಕಾ)

ಪೋಸ್ಟ್‌ಮಾಸ್ಟರ್ ತೆವರಮೆಳ್ಳಹಳ್ಳಿ 581 202



ಪಾಟೀಲ, ದತ್ತಾತ್ರೇಯ ಲಿಂಗೋ
ಜ 4-4-1935

ಶಿವಮೊಗ್ಗ ಜಿಲ್ಲೆ ಅಗ್ರಹಾರೋಮುಚಡಿ ; ಲಿಂಗಪ್ಪಪಾಟೀಲ–ಗಂಗಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಮಾ ಚಿಕ್ಕೆರೂರ, ಪ್ರೌ ಹಾವೇರಿ, ಬಿ ಎ ಆನರ್ಸ್ ಎಂ ಎ ಪಿ ಎಚ್‌ಡಿ ಪ್ಮೈ ವಿ ; ತತ್ವ ಶಾಸ್ತ್ರದ ಅಧ್ಯಾಪಕ ; ಅಮೆರಿಕ, ಜಪಾನ್, ಥೈಯ್‌ಲಾಂಡ್ ಪ್ರವಾಸ ; 1 ಕೃತಿ : ಸಂಕಲ್ಪ (ಕಾ) ಹವ್ಯಾಸ : ಸಂಗೀತ

2961/31 ಮೊದಲನೆ ಮುಖ್ಯರಸ್ತೆ ಸರಸ್ವತಿಪುರಂ ಮೈಸೂರು 570 009

ಪಾಟೀಲ, ನಿಂಗನಗೌಡ ಫಕೀರಗೌಡ
ಜ 16-8-1917

ಬಿಜಾಪುರ ಜಿಲ್ಲೆ ಬಿಳಗಿ ; ಫಕೀರಗೌಡ–ಬಸವಲಿಂಗಮ್ಮ ; 2 ಗಂ 2 ಹೆ ಮಕ್ಕಳು : ಪ್ರಾ ಬಿಳಿಗಿ, ಪ್ರೌ ಬಾಗಲಕೋಟೆ, ಬಿ ಎಸ್ ಸಿ ಎಜಿ, ಪಿ ಎಚ್‌ಡಿ ಪೂನ, ಎಂ ಎಸ್ ಅಮೆರಿಕ ; ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನ ನಿರ್ದೇಶಕರು ; ಅಮೆರಿಕ, ಜಪಾನ್ ಫಿಲಿಫೈನ್ಸ್ ಪ್ರವಾಸ ; 4 ಕೃತಿಗಳು : ಕೃಷಿಮಾರುಕಟ್ಟೆ, ಕರ್ನಾಟಕದಲ್ಲಿ ಹತ್ತಿಯ ಸುಧಾರಣೆ, ಕೃಷಿ ಮತ್ತು ಮೊದಲನೆ ಯೋಜನೆ, ಅಂತರರಾಷ್ಟ್ರೀಯ ಸಹಕಾರ ಮತ್ತು ಸಹಕಾರೀ ಆಂದೋಲನ

ನಂ 189 ಸಿದ್ಧೇಶ್ವರಕೃಪಾ ನೆಹರೂ ನಗರ ಬೆಂಗಳೂರು560 020



ಪಾಟೀಲ, ಪುಂಡಲೀಕ ಗಂಗನಗೌಡ
[ಕಪಲ, ಶೂಲಧರ]
ಜ 26-4-1939

ಬೈಲಹೊಂಗಲ ತಾಲೂಕು ಹಿರೇಬೆಳ್ಳಿಕಟ್ಟಿ : ಗಂಗನಗೌಡ–ಸಾಬವ್ವ ; 1 ಗಂ 2 ಹೆ ಮಕ್ಕಳು ; ಎಸ್ ಎಸ್ ಸಿ; ಶಿಕ್ಷಕ ವೃತ್ತಿ ; ಜನಸಾಹಿತ್ಯ ಪೀಠದ ಅಧ್ಯಕ್ಷ. ಬೆಳಗಾವಿ ಜಿಲ್ಲೆ ಬರಹಗಾರರ ಸಂಘದ ಕಾರ್ಯದರ್ಶಿ ; 5 ಕೃತಿಗಳು

ಫುಲೆಗಲ್ಲಿ ವಡಗಾವಿ ಬೆಳಗಾವಿ 590 005

ಪಾಟೀಲ ಪುಟ್ಟಪ್ಪ [ಪಾಪು]
ಜ 14-1-1921

ರಾಣೇಬೆನ್ನೂರು ತಾಲೂಕಿನ ಹಲಗೇರಿ ; 2 ಗಂ 3 ಹೆ ಮಕ್ಕಳು ; ಎಂ ಎಸ್ ಸಿ (ಕ್ಯಾಲಿಫೋರ್ನಿಯ) ಎಲ್ ಎಲ್ ಬಿ ಬೆಳಗಾವಿ ; ವಿಶ್ವವಾಣಿ ದೈನಿಕ ಹಾಗೂ ಪ್ರಪಂಚ ಸಾಪ್ತಾಹಿಕ ಸಂಪಾದಕ ; ರಾಜ್ಯ ಸಭಾಸದಸ್ಯ (1962–1974) 15 ಕೃತಿಗಳು : ಸಾವಿನ ಮೇಜವಾನಿ, ಗವಾಕ್ಷ ತೆರೆಯಿತು, ಶಿಲಾಬಾಲಿಕೆ ನುಡಿದಳು (ಸ ಕ) ನನ್ನದು ಈ ನಾಡು, ಹೊಸದನ್ನು ಕಟ್ಟೋಣ ನಾವು. ಬದುಕುವ ಮಾತು (ಪ್ರ) ನೆಲದ ನಕ್ಷತ್ರಗಳು (ಜೀ)

ಸಂಪಾದಕ 'ಪ್ರಪಂಚ' ಹುಬ್ಬಳ್ಳಿ

ಪಾಟೀಲ, ಭೋಜರಾಜ ಬಸವಯ್ಯ
[ಭೋಜರಾಜ ಪಾಟೀಲ]
ಜ 12–3–1941



ದಾವಣಗೇರಿ : ಬಸವಯ್ಯ–ವೀರಮ್ಮ ; 1 ಗಂ ಮಗು : ಎಂ ಎ ಕ ವಿ ; ಮಹಾಂತಸ್ವಾಮಿ ಕಲಾ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ : 2 ಕೃತಿಗಳು : ವೀರಮಹಿಳೆ ಚಾರಿತ್ರ, ಅಪ್ಸರೆಗಳು ; ಹವ್ಯಾಸ : ಕ್ರಿಕೆಟ್

ಎಂ ಪಿ ಎಸ್ ಕಾಲೇಜು ಹಂಸಭಾವಿ ಧಾರವಾಡ ಜಿಲ್ಲೆ




ಪಾಟೀಲ, ಲಿಂಗೋ ಚಿಕ್ಕೋ [ಬಿಂದು ಮಾಧವ]
ಜ 26–4–1932

ಬೆಳಗಾವಿ ಜಿಲ್ಲೆ ಅಸುಂಡಿ; ಚಿಕ್ಕೋ ಬಾಳಾಜಿ ಪಾಟೀಲ–ಕಮಲಾಬಾಯಿ; 3 ಗಂ ಮಕ್ಕಳು; ಪ್ರಾ ಬೈಲಹೊಂಗಲ, ಮಾ ಪ್ರೌ ಬಿ ಎ ಎಂ ಎ (ಇಂಗ್ಲಿಷ್, ಸಂಸ್ಕೃತ) ಧಾರವಾಡ; ಪ್ರಾಧ್ಯಾಪಕ; 3 ಕೃತಿಗಳು: ಆದ್ಯ ಶಂಕರಾಚಾರ್ಯ ಸ್ತೋತ್ರಗಳು ಭಾ 1, 2, ಭಗವದ್ಗೀತೆ, ಸರೋಜಿನಿ ನಾಯ್ಡು; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ
ಹೊಸಯಲ್ಲಾಪುರ ರಸ್ತೆ ಧಾರವಾಡ 1

ಪಾಟೀಲ, ಲೋಕನಗೌಡ ವೆಂಕನಗೌಡ [ಲೋಕೇಶ ಪಾಟೀಲ]
ಜ 10-5–1948

ಧಾರವಾಡ ಜಿಲ್ಲೆ ಜಿಗಳೂರ; ವೆಂಕನಗೌಡ–ಶಿವಗಂಗವ್ವ; 1 ಗಂ ಮಗು; ಎಂ ಎ (ಕನ್ನಡ) ಎಲ್ ಕೆ ಖೋತ ವಾಣಿಜ್ಯ ಮಹಾ ವಿದ್ಯಾಲಯದಲ್ಲಿ ಅಧ್ಯಾಪಕ; 1 ಕೃತಿ: ಬಾಗಿಲ ತಗೀರೀ; ಹವ್ಯಾಸ: ನಾಟಕದಲ್ಲಿ ಅಭಿನಯ
ವಾಣಿಜ್ಯ ಮಹಾವಿದ್ಯಾಲಯ ಸಂಕೇಶ್ವರ ಬೆಳಗಾವಿ ಜಿಲ್ಲೆ

ಪಾಟೀಲ, ವಸಂತಮಾಧವ ಶಿವರಾಜ [ವಸಂತ ಪಾಟೀಲ]
ಜ 28–6–1939



ಧಾರವಾಡ ಜಿಲ್ಲೆ ಗಿರೇವಾಡ ಬಸವನಕೊಪ್ಪ; ಪಾಟೀಲ ಶಿವರಾಜ ಬಸವರಾಜ–ಗಂಗಮ್ಮ; 1 ಹೆ ಮಗು; ಪ್ರಾ ಗಿರೇವಾಡ ಬಸವನಕೊಪ್ಪ ಕಲಘಟಗಿ ಧುಮ್ಮವಾಡ. ಮಾ ಬಿ ಎ ಎಂ ಎ ಧಾರವಾಡ, ಮದರಾಸಿನ ಹಿಂದಿ ಪ್ರಚಾರ ಸಭಾದ ವಿಶಾರದ; ಕ ವಿ ರಾಜ್ಯಶಾಸ್ತ್ರ ಪ್ರಾಧ್ಯಾಪಕ; 6 ಕೃತಿಗಳು: ವಾಣಿಶ್ರೀ (ಕ) ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ, ರಾಜ್ಯ ಶಾಸ್ತ್ರ ಪ್ರವೇಶ (ರಾ)
ರಾಜ್ಯಶಾಸ್ತ್ರ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003



ಪಾಟೀಲ, ಶಂಕರ ವೆಂಕಟೇಶ
[ಶಂ ಪಾ, ವೈಶಂಪಾಯನ]
ಜ 14--81928

ಗದಗ ; 2 ಗಂ 2 ಹೆ ಮಕ್ಕಳು ; ಪ್ರಾ ಹಾವೇರಿ ಮುಂಡರಗಿ, ಪ್ರೌ ಹಾವೇರಿ ಧಾರವಾಡ, ಬಿ ಎ ಎಂ ಎ ಧಾರವಾಡ, ಕನ್ನಡ ಸಾಹಿತ್ಯ ಪರಿಷತ್ತಿನ ಜಾಣ ; ಪತ್ರಿಕೋದ್ಯಮಿ ; ಸೀಮಾ ದೀಪಾವಳಿ ವಾರ್ಷಿಕ ಸಂಚಿಕೆ ಸಂಪಾದಕ ; 11 ಕೃತಿಗಳು : ಒಳ್ಳೆಯ ಜೀವನ, ಓದುಗೂಥರ್ಮ, ರಾಜ ಮಹಾರಾಜರು (ಅ) ಮೊಹರೆ ಹಣಮಂತರಾಯರು, ಶ್ರೀ ಕೃಷ್ಣಮೂರ್ತಿ ಪುರಾಣಿಕರು (ಜೀ) ಕಾದಂಬರಿ ದರ್ಶನ (ಸಂ)

ಜಾಗೃತಿ ಪ್ರಿಂಟರ್ಸ್ ಅಂಚಟಗೇರಿ ಓಣಿ ಹುಬ್ಬಳ್ಳಿ 20

ಪಾಟೀಲ, ಶಿವಶರಣ ಜಾವಳಿ
[ಶಿವಶರಣ ಜಾವಳಿ]
ಜ 12-3-1938



ಕಲಬುರ್ಗಿ ಜಿಲ್ಲೆ ಜಾವಳಿ ; ಬಸವಂತರಾವ ಪಾಟೀಲ–ಲಕ್ಷ್ಮೀಬಾಯಿ ; 1 ಗಂ 3 ಹೆ ಮಕ್ಕಳು: ಪ್ರಾ ಜಾವಳಿ, ಮಾ ಪ್ರೌ ಕಲಬುರ್ಗಿ, ಬಿ ಎ ಎಂ ಎ ಧಾರವಾಡ ; ಕಲಬುರ್ಗಿಯ ಶ್ರೀಮತಿ ವೀರಮ್ಮ ಗಂಗಸಿರಿ ಮಹಿಳಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ; ವಿಚಾರ ಭಾರತಿ ಅಧ್ಯಯನ ವೇದಿಕೆ ಉಪಾಧ್ಯಕ್ಷ ; 2 ಕೃತಿಗಳು : ಹಾಲು ತೊರೆಯಿಂದ ಉಪ್ಪುನೀರಿಗೆ, ಹತ್ತರ ಕೂಡ ಹನ್ನೊಂದು (ಕ)


ಕನ್ನಡ ಪ್ರಾಧ್ಯಾಪಕ ವೀರಮ್ಮ ಗಂಗಸಿರಿ ಮಹಿಳಾ ಕಾಲೇಜು ಕಲಬುರ್ಗಿ 2



ಪಾಟೀಲ, ಸಿದ್ಧನಾಯ್ಕ ಯಲ್ಲನಾಯ್ಕ
ಜ 1-9-1949

ಬೆಳಗಾಂ ಜಿಲ್ಲೆ ಘೋಡಗೇರಿ ; ಯಲ್ಲನಾಯ್ಕ–ಸೀತಾದೇವಿ ; 2 ಮಕ್ಕಳು ; ಎಸ್ ಎಸ್ ಎಲ್ ಸಿ ; 3 ಕೃತಿಗಳು : ಕದಡಿದ ಬಾಳು, ಸ್ನೇಹ ಬಂಧನ (ಕಾ) ರೈತನ ಮಗಳು (ನಾ)


ಘೋಡಗೇರಿ ಅಂಚೆ ಹುಕ್ಕೇರಿ ತಾಲೂಕು ಬೆಳಗಾವಿ ಜಿಲ್ಲೆ



ಪಾಟೀಲ, ಸುರೇಂದ್ರ ಪೀರಗೌಡ
ಜ 1-6-1939

ಬೆಳಗಾವಿ ಜಿಲ್ಲೆ ಸೇಡಬಾಳ ; ಪೀರಗೌಡ–ಪದ್ಮಾವತಿ ; 2 ಹೆ ಮಕ್ಕಳು; ಪ್ರಾ ಸೇಡಬಾಳ, ಬಿ ಎ ಪೂನ, ಎಂ ಎ ಕೊಲ್ಲಾಪುರ ; ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಜೈನ ಸಾಹಿತ್ಯ ಸಂಶೋಧನ ಶಾಖೆಯಲ್ಲಿ ಸಹಾಯಕ ಸಂಶೋಧಕ ; 10 ಕೃತಿಗಳು : ಜೈನ ಸಂಸ್ಕೃತಿಯ ಹಬ್ಬಗಳು, ಪ್ರಮುಖ ಕನ್ನಡ ಜೈನಕವಿಗಳು, ಆದಿನಾಥ, ಮಹಾವೀರ ಭಕ್ತಿ ಗಂಗಾ, ಕವಿ ಬ್ರಹ್ಮಶಿವ

ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003




ಪಾಪಣ್ಣ, ಮುನಿಶಾಮಪ್ಪ
ಜ 10-5-1937

ಬೆಂಗಳೂರು ; ಮುನಿಶಾಮಪ್ಪ–ಈರಮ್ಮ ; 2 ಹೆ ಮಕ್ಕಳು ; ಎಂ ಬಿ ಬಿ ಎಸ್ ಎಂ ಡಿ ಬೆಂಗಳೂರು; ವೈದ್ಯವೃತ್ತಿ ; 2 ಕೃತಿಗಳು : ಮಗನಿಗೆ ತಂದೆಯ ಓಲೆ (ಅ) ಲೂಯಿಪ್ಯಾಶ್ಚರ್ (ಜೀ) ಹವ್ಯಾಸ : ವ್ಯಾಯಾಮ, ಕೈತೋಟ

460 ಇ 6ನೇ ಕ್ರಾಸ್ 7ನೇ ಬ್ಲಾಕ್ ಜಯನಗರ ಬೆಂಗಳೂರು 560 011

ಪಾವಟೆ, ಸಿದ್ಧರಾಮಪ್ಪ ದುಂಡಪ್ಪ
ಜ 1875

ಬೆಳಗಾವಿ ಜಿಲ್ಲೆ ಗಚ್ಚಿನ ಕುರುಬೆಟ್ಟ ; ದುಂಡಪ್ಪ–ನೀಲವ್ವ ; 3 ಗಂ 2 ಹೆ ಮಕ್ಕಳು : ಪ್ರಾ ಕುರುಬೆಟ್ಟ, ಪ್ರೌ ಬೆಳಗಾವಿ, ಬಿ ಎ ಪೂನ, ಎಲ್ ಎಲ್ ಬಿ ಮುಂಬೈ ; 8 ಕೃತಿಗಳು : ವೃಷೇಂದ್ರ ಪದ ಭೂಷಣ, ಬಸವಭಾಸು, ಅಲ್ಲಮ ವ್ಯೋಮ, ಹರಿಹರನ ಇನಿಗಬ್ಬ ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ



ಪಾರ್ವತಿ, ಹಾಸನ ಶ್ರೀನಿವಾಸರಾವ್
ಜ 3-2-1934

ಬೆಂಗಳೂರು: ಶ್ರೀನಿವಾಸರಾವ್-ಮಹಾಲಕ್ಷ್ಮಮ್ಮ; 1 ಗಂ 1 ಹೆ ಮಕ್ಕಳು: ಪ್ರಾ ಮಾ ಪ್ರೌ ಬೆಂಗಳೂರು, ಎಂ ಎ ಕಾಶಿ ವಿಶ್ವವಿದ್ಯಾಲಯ, ಕನ್ನಡ ಜಾಣ, ಪ್ರವೀಣ್; 'ನೇಸರು ನೇಸರು ನೆಳಲು' ಕೃತಿಗೆ ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ; ಕನ್ನಡ ಲೇಖಕಿಯರ ಸಂಘದ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯೆ; 25 ಕೃತಿಗಳು: ಹೆಣ್ಣು ಹೃದಯ, ಬದಲಾದ ಪ್ರತಿಬಿಂಬ (ಸ ಕ) ನೇಸರು ನೆಳಲು. ಜೀವನ ಜಾಲ (ಕಾ) ಹತ್ತಿರದವರು (ಪ್ರ) ದರ್ಬಾರಿ ರಾಗ (ಅ) ಕಥಾ ಮಂಜೂಷ (ಸಂ) ಆರ್ ಕಲ್ಯಾಣಮ್ಮ (ಬಾ) ಶಾರದಾಮಣಿ (ಜೀ)

649 10ನೇ ಮುಖ್ಯರಸ್ತೆ 4ನೇ ವಿಭಾಗ ಜಯನಗರ ಬೆಂಗಳೂರು



ಪ್ಯಾಟಿಮಠ, ರೇವಣಸಿದ್ಧಯ್ಯ ಮಲ್ಲಿಕಾರ್ಜುನಯ್ಯ [ರಾಮಲಿಂಗ]
ಜ 3-12-1921

ಧಾರವಾಡ ಜಿಲ್ಲೆ ಸಂಗೂರ: 2 ಗಂ 2 ಹೆ ಮಕ್ಕಳು; ಪ್ರಾ ಸಂಗೂರ. ಪ್ರೌ ಹಾವೇರಿ ಹಂಸಭಾವಿ ಧಾರವಾಡ; ಪ್ರಾಥಮಿಕ ಶಾಲಾ ಶಿಕ್ಷಕ: 10 ಕೃತಿಗಳು: ವರ್ಧಾ ಶಿಕ್ಷಣ ಲಾವಣಿ, ಮೂಕ ಬಸವೇಶ್ವರ ಲಾವಣಿ, ಸುಂದರ ಕವಿತೆಗಳು (ಕ) ಸರ್ವೋದಯ, ಸಂಜೀವಿನಿ. ಕಲ್ಯಾಣಜ್ಯೋತಿ (ನಾ) ನಿಬಂಧ ರಹಸ್ಯ (ಬಾ) ಹವ್ಯಾಸ: ನಾಟಕಾಭಿನಯ

ಮುಖ್ಯೋಪಾಧ್ಯಾಯ ಕನ್ನಡ ಗಂಡು ಮಕ್ಕಳ ಶಾಲೆ ನಂ 4 ಹಾವೇರಿ ಧಾರವಾಡ ಜಿಲ್ಲೆ



ಪುಟ್ಟಪ್ಪ, ಕುಪ್ಪಳಿ ವೆಂಕಟಪ್ಪಗೌಡ [ಕುವೆಂಪು]
ಜ 29-12-1904

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕು ಕುಪ್ಪಳಿ; ವೆಂಕಟಪ್ಪಗೌಡ–ಸೀತಮ್ಮ: 2 ಗಂ 2 ಹೆ ಮಕ್ಕಳು; ಪ್ರಾ ಕುಪ್ಪಳಿ, ಮಾ ತೀರ್ಥಹಳ್ಳಿ, ಪ್ರೌ ಬಿ ಎ (ಆನರ್ಸ್) ಎಂ ಎ ಮೈಸೂರು; ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ (1929) ಉಪ ಪ್ರಾಧ್ಯಾಪಕ (1939) ಪ್ರಾಧ್ಯಾ

ಪಕ (1946) ಪ್ರಿನ್ಸಿಪಾಲ್ (1955) ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ (1956–60) ನಿವೃತ್ತಿ ; ಕೇಂದ್ರ ಸರ್ಕಾರದ ಪದ್ಮ ಭೂಷಣ (1958) ಹಾಗೂ ರಾಜ್ಯ ಸರ್ಕಾರದ ರಾಷ್ಟ್ರಕವಿ ಪ್ರಶಸ್ತಿಗಳು, 'ಶ್ರೀರಾಮಾಯಣದರ್ಶನಂ' ಮಹಾ ಕಾವ್ಯಕ್ಕೆ ಜ್ಞಾನಪೀಠ ಹಾಗೂ ಕೇಂದ್ರ ಸಾಹಿತ್ಯ ಅಕಾದೆಮಿ ಪುರಸ್ಕಾರ. ಮೈಸೂರು ಕರ್ನಾಟಕ ಬೆಂಗಳೂರು ಮತ್ತು ಕಾನ್ಪುರ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್, ಉಡುಗೊರೆ, ಗಂಗೋತ್ರಿ, ಸಹ್ಯಾದ್ರಿ ಅಭಿನಂದನ ಗ್ರಂಥಗಳ ಸಮರ್ಪಣೆ; 75 ಕೃತಿಗಳು : ಶ್ರೀರಾಮಾಯಣ ದರ್ಶನಂ, ಪ್ರೇಮ ಕಾಶ್ಮೀರ, ಕೊಳಲು, ಕದರಡಕೆ (ಕ) ರಕ್ತಾಕ್ಷಿ, ಬೆರಳ್‌ಗೆ ಕೊರಳ್, ಬಿರುಗಾಳಿ (ನಾ) ವಿಭೂತಿಪೂಜೆ, ದ್ರೌಪದಿಯ ಶ್ರೀಮುಡಿ, ಕಾವ್ಯವಿಹಾರ (ವಿಮ) ನನ್ನ ದೇವರು ಮತ್ತು ಇತರ ಕಥೆಗಳು, ಸಂನ್ಯಾಸಿ ಮತ್ತು ಇತರ ಕಥೆಗಳು, ಮಲೆನಾಡಿನ ಚಿತ್ರಗಳು (ಸ ಕ) ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು (ಕಾ) ಮೋಡಣ್ಣನ ತಮ್ಮ, ನರಿಗಳಿಗೇಕೆ ಕೋಡಿಲ್ಲ (ಬಾ) ನೆನಪಿನ ದೋಣಿಯಲ್ಲಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ (ಜೀ) ನಿರಂಕುಶ ಮತಿಗಳಾಗಿ, ಮನುಜಮತ ವಿಶ್ವ ಪಥ, ವಿಚಾರ ಕ್ರಾಂತಿಗೆ ಆಹ್ವಾನ (ಭಾ)
ಉದಯರವಿ ವಾಣಿವಿಲಾಸಪುರಂ ಮೈಸೂರು 570 002



ಪುಟ್ಟಮಾದಯ್ಯ, ಶಿವಪುರ ಲಿಂಗಯ್ಯ
ಜ 8–8–1921

ಮಂಡ್ಯ ಜಿಲ್ಲೆ ಶಿವಪುರ ; ಲಿಂಗಯ್ಯ–ವೀರಮ್ಮ ; 1 ಗಂ 8 ಹೆ ಮಕ್ಕಳು; ಪ್ರಾ ಶಿವಪುರ ಮದ್ದೂರು, ಪ್ರೌ ಬೆಂಗಳೂರು ಮೈಸೂರು, ಲಾ ಪದವಿ ಬೆಳಗಾವಿ ; ವಕೀಲ ವೃತ್ತಿ ; ಮಂಡ್ಯದ ಕರ್ನಾಟಕ ಸಂಘದ ಕಾರ್ಯದರ್ಶಿ ; 2 ಕೃತಿಗಳು : ಸರ್ವಜ್ಞನ ಸಂದೇಶ (ವಿಮ) ನವನೀತಾ (ಸಂ)
ವಕೀಲ ಸುಭಾಷ್ ನಗರ ಮಂಡ್ಯ 571 401

ಪುಟ್ಟೇಗೌಡ, ಮಾಯಶೆಟ್ಟಿಗೌಡ
ಜ 3-6-1942



ಹುಣಸೂರು ತಾಲೂಕು ಗಾಗೇನಹಳ್ಳಿ ; ಮಾಯಶೆಟ್ಟಿಗೌಡ–ದೇವಮ್ಮ ; 2 ಗಂ 1 ಹೆ ಮಕ್ಕಳು ; ಪ್ರಾ ಮಾ ಗಾಗೇನಹಳ್ಳಿ, ಪ್ರೌ ಹುಣಸೂರು, ಬಿ ಎ ಎಂ ಎ (ಭೂಗೋಳಶಾಸ್ತ್ರ) ಬಿ ಎಡ್ ಮೈ ವಿ ; ಅಧ್ಯಾಪಕ : 4 ಕೃತಿಗಳು : ಪ್ರಿಯೂನಿವರ್ಸಿಟಿ ಇಂಡಿಯಾ ಭೂಗೋಳ ಶಾಸ್ತ್ರ, ಪ್ರಪಂಚದ ಮರು

ಭೂಮಿಗಳು, ಪ್ರಾಯೋಗಿಕ ಭೂಗೋಳಶಾಸ್ತ್ರ ; ಹವ್ಯಾಸ : ಕ್ರೀಡೆ, ಪ್ರವಾಸ
ರೂರಲ್ ಕಾಲೇಜ್ ಕನಕಪುರ



ಪುಣೇಕರ, ಶಂಕರ ಮೊಕಾಶಿ [ಕನಸಿಗ]
ಜ 8-5-1928

ಧಾರವಾಡ ; ರಾವಜಿರಾವ ಮೊಕಾಶಿ–ಸುಂದರಾಬಾಯಿ ; 3 ಗಂ 2 ಹೆ ಮಕ್ಕಳು ; ಎಂ ಎ ಪಿ ಎಚ್ ಡಿ ಕ ವಿ ; ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ ; ಮೈ ವಿ ಸುವರ್ಣ ಮಹೋತ್ಸವದ ಬಹುಮಾನ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಬಹುಮಾನ, ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ, ಸುಧಾ ಕಾದಂಬರಿ ಸ್ಪರ್ಧೆ ಬಹುಮಾನ ; ದಕ್ಷಿಣಭಾರತ ಪ್ರಾದೇಶಿಕ ಸಾಹಿತ್ಯ ಅಕಾದೆಮಿ–ಕನ್ನಡ ಸಮಿತಿ, ಭಾರತೀಯ ಜ್ಞಾನಪೀಠ ಕನ್ನಡ ಸಲಹಾ ಸಮಿತಿ ಸದಸ್ಯ ; 8 ಕೃತಿಗಳು : ಮಾಯಿಯ ಮೂರು ಮುಖಗಳು (ಕ) ಗಂಗವ್ವ–ಗಂಗಾಮಾಯಿ (ಕಾ) ಬೇಂದ್ರೆಯವರ ಕಾವ್ಯ ಮೀಮಾಂಸೆ (ವಿಮ) ಯೂರೋಪಿಯನ್ ವಿಮರ್ಶೆಯ ಇತಿಹಾಸ ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ
ಎಲ್ 38 ಪ್ರಾಧ್ಯಾಪಕರ ನಿವಾಸ ಮೈಸೂರು 570 006

ಪುತ್ತಿಗೆ, ಸುಬ್ರಮಣ್ಯ ಆಚಾರ್ಯ [ರಸಿಕ ಪುತ್ತಿಗೆ]
ಜ 15-6-1932



ಕಾರ್ಕಳ ತಾಲೂಕು ಪುತ್ತಿಗೆ ; ಪಿ ವೆಂಕಟರಮಣಾಚಾರ್ಯ–ನಾಗವೇಣಿ ಅಮ್ಮ ; 2 ಗಂ 1 ಹೆ ಮಕ್ಕಳು : ಎಸ್ ಎಸ್ ಎಲ್ ಸಿ, ರಾಷ್ಟ್ರಭಾಷಾ ಪ್ರವೀಣ, ಹಿಂದಿ ಪ್ರಚಾರಕ, ಪತ್ರಿಕೋದ್ಯಮ ಮತ್ತು ಭಾಷಾ ಶಿಕ್ಷಣದಲ್ಲಿ ಡಿಪ್ಲೊಮಾ, ಸಾಹಿತ್ಯ ರತ್ನ ; ಪ್ರೌಢಶಾಲಾ ಉಪಾಧ್ಯಾಯ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 30 ಕೃತಿಗಳು : ಏನೆಸ್ಕು ತ್ರೀರಿ ಮಹಾಸ್ವಾಮಿ, ಸಿಂಹನಾದ (ಕ) ಅಗ್ನಿ ಪರೀಕ್ಷೆ, ತಿಲೋತ್ತಮೆ (ನಾ) ಮುಕ್ತಾ, ವಿಷದ ಸೂಜಿ (ಕಾ) ಬೀಡದ ಬಾಳು (ಸ ಕ) ಕೋಟಿ ಚೆನ್ನಯ, ತುಲಸೀದಾಸ (ಬಾ) ಕನ್ನಡದ ಕಣ್ಣು ಉತ್ತರದ ಮಣ್ಣು (ಪ್ರವಾ) ಹವ್ಯಾಸ : ಪ್ರವಾಸ
ಮೂರನೇ ರಸ್ತೆ ನೆಹರೂ ಬಡಾವಣೆ ಚನ್ನಪಟ್ಟಣ



ಪುರಾಣಿಕ, ಅನ್ನದಾನಯ್ಯ [ನಿಜಾನಂದ]
ಜ **8-3-1928**

ರಾಯಚೂರು ಜಿಲ್ಲೆ ದ್ಯಾಂಪುರ ; ಕಲ್ಲಿನಾಥಶಾಸ್ತ್ರಿ ಪುರಾಣಿಕ-ದಾನಮ್ಮ ; 1 ಗಂ 1 ಹೆ ಮಕ್ಕಳು ; ಬಿ ಕಾಂ ಕ ವಿ, ಎಲ್ ಎಲ್ ಬಿ ಉಸ್ಮಾನಿಯಾ ವಿಶ್ವವಿದ್ಯಾಲಯ ; ವಕೀಲ ವೃತ್ತಿ ; ಸಾಹಿತ್ಯ ರತ್ನ ಪ್ರಶಸ್ತಿ ; ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ, ಕನ್ನಡ ನುಡಿ ಸಂಪಾದಕ ; 4 ಕೃತಿಗಳು : ಚೆನ್ನಬಸವ ಸಾಹಿತ್ಯ, ನ್ಯಾಯದರ್ಶನ (ಸಂ) ಶರಣುಸ್ವಾಮಿ (ಕ) ಭಗೀರಥ

'ಮೃತ್ಯುಂಜಯ ಕೃಪಾ' 38ನೇ ಕ್ರಾಸ್ ಜಯನಗರ ಬೆಂಗಳೂರು 560 041

ಪುರಾಣಿಕ, ಕೃಷ್ಣಮೂರ್ತಿ ತಮ್ಮಣಭಟ್ಟ [ಕೃಷ್ಣಮೂರ್ತಿ ಪುರಾಣಿಕ]
ಜ **5-9-1911**



ಬಿಜಾಪುರ ಜಿಲ್ಲೆ ಬೀಳಿಗಿ ; 3 ಗಂ 4 ಹೆ ಮಕ್ಕಳು ; ಪ್ರಾ ಬೀಳಿಗಿ, ಮಾ ಬಾಗಲಕೋಟೆ, ಬಿ ಎ ಧಾರವಾಡ, ಬಿ ಟಿ ಬೆಳಗಾವಿ ; ನಿವೃತ್ತ ಅಧ್ಯಾಪಕ ; ಮಣ್ಣಿನ ಮಗಳು ಕಾದಂಬರಿಗೆ ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ, ಕಾದಂಬರಿ ಶ್ರೀ ಪ್ರಶಸ್ತಿ, ಕಾದಂಬರಿ ದರ್ಶನ ಮತ್ತು ಕೆನೆಬೆಣ್ಣೆ ಅಭಿನಂದನ ಗ್ರಂಥಗಳ ಸಮರ್ಪಣೆ ; ಕನ್ನಡ ಸಾಹಿತ್ಯ ಪರಿಷತ್ತು, ರಾಷ್ಟ್ರೋತ್ಥಾನ ಪರಿಷತ್ತಿನ ಆಜೀವ ಸದಸ್ಯ, ಸಾಹಿತ್ಯ ಸೇವಾ ಮಂದಿರದ (ಗೋಕಾಕ) ಸ್ಥಾಪಕ ; 98 ಕೃತಿಗಳು : ಬಾಳ ಕನಸು, ಜೀವನಾದ (ಕ) ಜೀವನದ ಬೆಲೆ, ಮಣ್ಣಿನ ಮಗಳು, ಸನಾದಿ ಅಪ್ಪಣ್ಣ (ಕಾ) ಸೈರಂಧ್ರಿ, ಜಯಭೇರಿ (ನಾ) ಸಾಹಿತ್ಯ ಪ್ರಬಂಧಗಳು (ವಿಮ) ಅಳಿಯ ದೇವರ ಆಟ, ಬೆಳವಡಿ ಮಲ್ಲಮ್ಮ (ಬಾ)

'ಆಶೀರ್ವಾದ' ಸಾಹಿತ್ಯ ಸೇವಾ ಮಂದಿರ ಗೋಕಾಕ ಬೆಳಗಾವಿ ಜಿಲ್ಲೆ



ಪುರಾಣಿಕ, ದಕ್ಷಿಣಾಮೂರ್ತಿ ವಿಶ್ವನಾಥಶಾಸ್ತ್ರಿ
ಜ 20-3-1944

ದಡ್ಡಿ; ವಿಶ್ವನಾಥಶಾಸ್ತ್ರೀ-ಗಂಗವ್ವ; 3 ಹೆ ಮಕ್ಕಳು; ಪ್ರಾ ದಡ್ಡಿ, ಮಾ ಪ್ರೌ ಸಂಕೇಶ್ವರ, ಬಿ ಎ ಎಂ ಎ ಧಾರವಾಡ; ಸಂಕೇಶ್ವರದ ಕಲಾ ಹಾಗೂ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ; 4 ಕೃತಿಗಳು: ಸ್ಮರಣೆ, ಬಾಳಅಂಬುಧಿ (ಕ) ಕೊನೆ ಯಿಲ್ಲದೆ ಕೊನೆ (ಸ ಕ) ಕಾಂತಾ ಸಮ್ಮಿತ (ಪ್ರ)

ಕನ್ನಡ ಅಧ್ಯಾಪಕ ಕಲಾ ಹಾಗೂ ವಿಜ್ಞಾನ ಕಾಲೇಜು ಸಂಕೇಶ್ವರ



ಪುರಾಣಿಕ, ಬಸವರಾಜು
ಜ 19-1-1938

ರಾಯಚೂರು ಜಿಲ್ಲೆ ದ್ಯಾಂಪುರ; ಕಲ್ಲಿನಾಥಶಾಸ್ತ್ರಿ ಪುರಾಣಿಕ-ದಾನಮ್ಮ ಪುರಾಣಿಕ; 1 ಗಂ 1 ಹೆ ಮಕ್ಕಳು; ಪ್ರಾ ಕುಕನೂರು, ಮಾ ಹುಬ್ಬಳ್ಳಿ, ಬಿ ಇ ಉಸ್ಮಾನಿಯ ವಿಶ್ವವಿದ್ಯಾನಿಲಯ, ಎಂ ಇ ಬೆಂಗಳೂರು, ಎಂ ಎ ಎಸ್ ಸಿ ಕೆನಡ; ಬಾಗಲಕೋಟೆ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರ್ ವಿಭಾಗದಲ್ಲಿ ಪ್ರಾಧ್ಯಾಪಕ; ಕೆನಡ ಪ್ರವಾಸ; 2 ಕೃತಿಗಳು: ಸಿಮೆಂಟ್ ಕಾಂಕ್ರೀಟ್, ಉರ್ದೂ ಕಥೆಗಳು: ಹವ್ಯಾಸ: ಶಾಸ್ತ್ರೀಯ ಸಂಗೀತ

ಪ್ರಾಧ್ಯಾಪಕ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜು ಬಗಲಕೋಟೆ



ಪುರಾಣಿಕ, ಸಿದ್ಧಯ್ಯ [ಕಾವ್ಯಾನಂದ]
ಜ 18-6-1918

ರಾಯಚೂರು ಜಿಲ್ಲೆ ದ್ಯಾಂಪುರ: ಕಲ್ಲಿನಾಥಶಾಸ್ತ್ರಿ-ದಾನಮ್ಮ; 4 ಗಂ ಮಕ್ಕಳು: ಪ್ರಾ ದ್ಯಾಂಪುರ ಮತ್ತು ಕುಕ್ನೂರು, ಮಾ ಪ್ರೌ ಇಂಟರ್ ಮೀಡಿಯೆಟ್ ಕಲಬುರ್ಗಿ, ಬಿ ಎ ಎಲ್ ಎಲ್ ಬಿ ಉಸ್ಮಾನಿಯಾ ವಿಶ್ವವಿದ್ಯಾಲಯ, ಐ ಎ ಎಸ್ ಪರೀಕ್ಷೆ: ಲೇಬರ್ ಕಮಿಷನರ್ ಆಗಿ ನಿವೃತ್ತಿ; ಅಮೆರಿಕ.

ಕೆನಡ, ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್ ಪ್ರವಾಸ; ರಾಜ್ಯ ಸಾಹಿತ್ಯ ಅಕಾದೆಮಿ, ಭಾರತ ಸರ್ಕಾರ, ರಾಜ್ಯ ಸರ್ಕಾರ, ಬಂಗಾಳ ಸರ್ಕಾರದ ಭಾರತೀಯ ಭಾಷಾ ಪರಿಷತ್ತಿನ ಆಶ್ರಯದಲ್ಲಿ ದಕ್ಷಿಣ ಭಾಷೆಗಳಿಗಾಗಿರುವ ರಾಷ್ಟ್ರೀಯ ಬಹುಮಾನ ಭಿಲ್ವಾರ ಪ್ರಶಸ್ತಿ, ಸ ಸ ಮಾಳವಾಡ ಸಾಹಿತ್ಯ ಪ್ರಶಸ್ತಿ ; ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾದೆಮಿ ಸದಸ್ಯ, ಹೈದರಾಬಾದ್ ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ; 25 ಕೃತಿಗಳು : ಜಲಪಾತ, ಮೊದಲು ಮಾನವನಾಗು, ವಚನೋದ್ಯಾನ (ಕ) ಕಥಾ ಮಂಜರಿ, ತುಷಾರಹಾರ (ಸ ಕ) ಆತ್ಮಾರ್ಪಣೆ, ಭಾರತವೀರ (ನಾ) ಶರಣ ಚರಿತಾಮೃತ, ಸಿದ್ಧರಾಮ (ಜೀ) ತ್ರಿಭುವನಮಲ್ಲ (ಕಾ) ಶ್ರೀಕಾರ, ಶರಣಪ್ರಸಾದ (ಸಂ) ಹವ್ಯಾಸ: ಪ್ರವಾಸ

'ಶ್ರೀ ಗಿರಿ' 4/5 ಎ ಅಲಿ ಆಸ್ಕರ್ ರಸ್ತೆ ಬೆಂಗಳೂರು 560 001



ಪುರೋಹಿತ, ಹನುಮಂತಾಚಾರ್ಯ
ರಾಘವೇಂದ್ರಾಚಾರ್ಯ
ಜ 14-4-1900

ಬಿಜಾಪುರ ಜಿಲ್ಲೆ ಕೊಲ್ಹಾರ; ರಾಘವೇಂದ್ರಾಚಾರ್ಯ–ಸಾವಿತ್ರಿಬಾಯಿ ; ಪ್ರಾ ಮಾ ಬಾಗಲಕೋಟೆ, ಸಾಂಗ್ಲಿ ಪೂನ ಧಾರವಾಡಗಳಲ್ಲಿ ಪ್ರೌಢ ಶಿಕ್ಷಣ ಎಂ ಎ ; ಪತ್ರಿಕೋದ್ಯಮಿ ; ಪತ್ರಿಕೋದ್ಯಮ ಸೇವೆಗಾಗಿ ರಾಜ್ಯ ಪ್ರಶಸ್ತಿ ; 5 ಕೃತಿಗಳು : ಬದರಿ ಕೇದಾರನಾಥ ದರ್ಶನ, ಶ್ರೀ ರಾಘವೇಂದ್ರಗುರು ಸಾರ್ವಭೌಮರು ; ಹವ್ಯಾಸ : ಪ್ರವಾಸ

48 ಎ ಅಶೋಕನಗರ ಹುಬ್ಬಳ್ಳಿ 580 022



ಪೂಜಾರ, ಹನುಮಂತ ಮಹಾದೇವ
ಜ 14-4-1931

ಧಾರವಾಡ ; ಮ ಪ್ರ ಪೂಜಾರ–ಭಾಗೀರಥಿ : 2 ಗಂ 1 ಹೆ ಮಕ್ಕಳು ; ಪ್ರಾ ಮಾ ಪ್ರೌ ಬಿ ಎಸ್ ಸಿ ಎಂ ಎಸ್ ಸಿ ಧಾರವಾಡ ; ಭೌತ ಶಾಸ್ತ್ರದ ಉಪಪ್ರಾಧ್ಯಾಪಕ ; 2 ಕೃತಿಗಳು : ಭೌತ ಶಾಸ್ತ್ರ ಪರಿಚಯ ಭಾ 1, 2

ಪೂಜಾರ ಕಾಂಪೌಂಡ್ ನಗರಕರ ಕಾಲೋನಿ ಧಾರವಾಡ 580 007

ಪೂರ್ಣಚಂದ್ರ ತೇಜಸ್ವಿ, ಕುಪ್ಪಳಿ ಪುಟ್ಟಪ್ಪ [ಪೂ ಚಂ ತೇ]
ಜ 8-9-1938

ಶಿವಮೊಗ್ಗ ಜಿಲ್ಲೆ ಕುಪ್ಪಳಿ ; ಕೆ ವಿ ಪುಟ್ಟಪ್ಪ–ಹೇಮಾವತಿ ; 2 ಹೆ ಮಕ್ಕಳು ; ಎಂ ಎ (ಕನ್ನಡ) ಮೈಸೂರು ; ಕೃಷಿಕ ; ರಾಜ್ಯ ಸಾಹಿತ್ಯ ಅಕಾದೆಮಿಯಿಂದ 'ಕರ್ವಾಲೋ' ಕಾದಂಬರಿಗೆ 1981ರ ಶ್ರೇಷ್ಠ ಕೃತಿಪುರಸ್ಕಾರ ; 8 ಕೃತಿಗಳು : ಬೃಹನ್ನಳೆ, ಸೋಮುವಿನ ಸ್ವಗತ ಲಹರಿ (ಕ) ಸ್ವರೂಪ, ನಿಗೂಢ ಮನುಷ್ಯರು, ಕರ್ವಾಲೋ (ಕಾ) ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸು (ಸ ಕ) ಯಮಳ ಪ್ರಶ್ನೆ (ನಾ) ಹವ್ಯಾಸ : ಛಾಯಾಗ್ರಹಣ
ಚಿತ್ರಕೂಟ ಮೂಡಿಗೆರೆ ಹ್ಯಾಂಡ್‌ಪೋಸ್ಟ್ ಹಿಂಭಾಗ ಚಿಕ್ಕಮಗಳೂರು ಜಿಲ್ಲೆ



ಪೆಂಡಕೂರು, ಗುರುಮೂರ್ತಿ ವಿರುಪಣ್ಣ
ಜ 9–6–1938

ಬಳ್ಳಾರಿ ಜಿಲ್ಲೆ ನಾರಾಯಣದೇವರ ಕೆರೆ ; ಪೆಂಡಕೂರು ವಿರುಪಣ್ಣ–ರಾಮಕ್ಕ ; 3 ಗಂ 1 ಹೆ ಮಕ್ಕಳು ; ಎಣ್ಣೆ ಗಿರಣಿ ಮಾಲೀಕ ; ಮಧ್ಯ ಏಷ್ಯಾ, ಯೂರೋಪ್, ಅಮೆರಿಕ, ಕೆನಡ, ಜಪಾನ್ ಪ್ರವಾಸ ; ಕನ್ನಡ ಸಾಹಿತ್ಯ ಪರಿಷತ್ತು, ಗೋಖಲೆ ಸಾರ್ವಜನಿಕ ಸಂಸ್ಥೆ ಸದಸ್ಯ ; 5 ಕೃತಿಗಳು : ಕೆನಡಾದಲ್ಲಿ ಕನ್ನಡಿಗ, ಶ್ರೀ ಕನ್ಯಕಾ ಪರಮೇಶ್ವರೀ ಪುರಾಣ (ಅನು) ಜಾನಪದ ಸಂಚಯ, ಕಂಠೀಸರ (ಸಂ) ಬಹುರೂಪಾ ವಸುಂಧರಾ (ಪ್ರವಾ) ಹವ್ಯಾಸ : ಪ್ರವಾಸ, ನಾಣ್ಯ ಸಂಗ್ರಹ
ಹಗರಿ ಬೊಮ್ಮನಹಳ್ಳಿ ಬಳ್ಳಾರಿ ಜಿಲ್ಲೆ 583 212



ಪೆರ್ಲ, ಕೃಷ್ಣಭಟ್ಟ [ಕೃ ಭ ಪೆರ್ಲ]
ಜ 16-5-1923

ಕಾಸರಗೋಡು ತಾಲೂಕು ಪಡ್ರೆ ; ಪಡ್ರೆ ಶ್ರೀಪತಿ ಶಾಸ್ತ್ರಿ–ನೇತ್ರಾವತಿ ; 1 ಗಂ 2 ಹೆ ಮಕ್ಕಳು ; ಸಂಸ್ಕೃತಾಭ್ಯಾಸ ಬೆಂಗಳೂರು ; ಹಿಂದಿ ರಾಷ್ಟ್ರ ಭಾಷಾ ಪ್ರವೀಣ ; ಪೆರ್ಲದ ಶ್ರೀ ಸತ್ಯನಾರಾಯಣ ಪ್ರೌಢಶಾಲೆಯಲ್ಲಿ ಹಿಂದಿ ಉಪಾಧ್ಯಾಯ ; ಶೈಕ್ಷಣಿಕ ಸೇವೆಗಾಗಿ ಕೇರಳ ಸರ್ಕಾರದ ರಾಜ್ಯ ಪ್ರಶಸ್ತಿ;

7 ಕೃತಿಗಳು : ಪಾದುಕಾ ಪ್ರದಾನ, ತಾಳಮದ್ದಳೆ (ನಾ) ಮಹಾತ್ಮಾ ಗೌತಮ ಬುದ್ಧ (ಜೀ) ಭಗವಾನ್ ಪರಶುರಾಮ (ಅ) ಕಲಾ ತಪಸ್ವಿ (ಸಂ) ಹವ್ಯಾಸ : ಯಕ್ಷಗಾನ
ಪೆರ್ಲ ಅಂಚೆ ಕಾಸರಗೋಡು ಕೇರಳ



ಪ್ರೇಮಾ ಭಟ್
ಜ 22-9-1941

ಉಡುಪಿ ತಾಲೂಕಿನ ಹೆರ್ಗ ; 2 ಗಂ ಮಕ್ಕಳು ; ಎಸ್ ಎಸ್ ಎಲ್ ಸಿ ; ವಿಧಾನಸೌಧ ದಲ್ಲಿ ಉದ್ಯೋಗ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 15 ಕೃತಿಗಳು : ಮನ ಮೆಚ್ಚಿದವಳು, ಅಕ್ಷತೆ (ಸ ಕೆ) ಬಿದಿಗೆ ಚಂದ್ರ, ಅಲೆಗಳು, ಇದ್ದು ಹೋದ ಜೀವ, ಮಲ್ಲಿಗೆ ಮುಡಿಗೇರಿತು (ಕಾ)
ಗುರುಪ್ರಸಾದ ನಂ 845 4ನೇ ಮುಖ್ಯ ರಸ್ತೆ ವಿಜಯನಗರ ಬೆಂಗಳೂರು 560 040

ಪೈ, ಬಾಬಣಿ ಶೇಷಗಿರಿ
ಜ 22-4-1923

ಉತ್ತರ ಕನ್ನಡ ಜಿಲ್ಲೆ ಮಠಕೇರಿ ; ಶೇಷಗಿರಿ ಲಕ್ಷ್ಮಣ ಪೈ-ಪದ್ಮಾವತಿ ; 1 ಹೆ ಮಗು ರಾಷ್ಟ್ರಭಾಷಾ ವಿಶಾರದ, ಎಂ ಎ ಬಿ ಎಸ್‌ಸಿ ಬಿ ಇ ; ಎಂಜಿನಿಯರ್ ; ಪಾಕಿಸ್ತಾನ, ನೇಪಾಳ, ಇಂಗ್ಲೆಂಡ್, ಅಮೆರಿಕ ಪ್ರವಾಸ ; 8 ಕೃತಿಗಳು : ಋಗ್ವೇದ ಸಂಹಿತೆ, ಮಹಾಭಾರತ ಸಂಹಿತೆ, ಅಥರ್ವಣವೇದ ಸಂಹಿತೆ (ಅ)
ಮಠಕೇರಿ ಅಂಕೋಲ ಉ ಕ ಜಿಲ್ಲೆ



ಪೈ, ಮುಂಡರ್ಕೆ ಮಾಧವ
ಜ 21-12-1930

ದ ಕ ಜಿಲ್ಲೆ ಕಾರ್ಕಳ ; ನಾರಾಯಣ ಪೈ-ಲಕ್ಷ್ಮೀ ಬಾಯಿ ; 3 ಗಂ ಮಕ್ಕಳು ; ಮದರಾಸು ವಿ ವಿ ಕನ್ನಡ ವಿದ್ವಾನ್, ಅಲಹಾಬಾದ್ ಹಿಂದಿ ವಿಶ್ವವಿದ್ಯಾಲಯದ ಸಾಹಿತ್ಯರತ್ನ. ಮೈ ವಿ ಕನ್ನಡ ಡಿಪ್ಲೊಮಾ, ಎಂ ಎ ಮಂಗಳೂರು ; ಭದ್ರಾವತಿ ಎಸ್ ಜೆ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ

ಕನ್ನಡ ಉಪನ್ಯಾಸಕ; 2 ಕೃತಿಗಳು: ಚೆನ್ನಿಗ ಕವಿಮುದ್ದಣ (ನಾ) ಬೋಳಂತಕೋಡಿ ಶಂಕರಭಟ್ಟರು (ಜೀ)
ಕನ್ನಡ ಉಪನ್ಯಾಸಕ ಎಸ್ ಜೆ ಸರ್ಕಾರಿ ಜೂನಿಯರ್ ಕಾಲೇಜು ಭದ್ರಾವತಿ

ಪೈ, ಲಕ್ಷ್ಮಣ ಗುರುಪುರ ನರಸಿಂಹ ಪೈ
ಜ 11-5-1904

ಮಂಗಳೂರು ತಾಲೂಕು ಮರಕಡ; ಗುರುಪುರು ನರಸಿಂಹ ಪೈ-ರುಕ್ಮಿಣಿಯಮ್ಮ; 2 ಗಂ 7 ಹೆ ಮಕ್ಕಳು; ಪ್ರಾ ಮಾ ಪುತ್ತೂರು, ಪ್ರೌ ಮಂಗಳೂರು, ಮದರಾಸು ವಿ ವಿ ವಿದ್ವಾನ್; ಸೇಲ್ಸ್ ಟ್ಯಾಕ್ಸ್ ಪ್ರಾಕ್ಟೀಷನರ್; ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಘ ಮಂಗಳೂರು ಸದಸ್ಯ; 8 ಕೃತಿಗಳು: ಭಕ್ತ ಶಿಖಾಮಣಿ ದಾಮಾಜಿ ಪಂತ (ನಾ) ರಮಣ ಮಹರ್ಷಿಗಳ ಉಪದೇಶಸಾರ (ಅ) ಪದ್ಯ ರತ್ನಾವಳಿ, ಕೀರ್ತನಾಂಜಲಿ (ಕ) ಶಿಶು ಗೀತ ಮಾಲೆ (ಬಾ) ಹವ್ಯಾಸ: ಸಂಗೀತ
ಪುತ್ತೂರು ದ ಕ ಜಿಲ್ಲೆ

ಫಾಲಾಕ್ಷ
ಜ 10-5-1944

ತುಮಕೂರು ಜಿಲ್ಲೆ ಮೆಳೆಕಲ್ಲಹಳ್ಳಿ; ತಿಮ್ಮಯ್ಯ-ರಂಗಮ್ಮ; 3 ಮಕ್ಕಳು; ಪ್ರಾ ಮೆಳೆಕಲ್ಲಹಳ್ಳಿ, ಮಾ ಪ್ರೌ ಕಡಬ, ಬಿ ಎ ತುಮಕೂರು, ಎಂ ಎ ಮೈಸೂರು; ಅಧ್ಯಾಪಕ; 5 ಕೃತಿಗಳು: ವಿಶ್ವ ಇತಿಹಾಸ ಸಮೀಕ್ಷೆ, ಭಾರತೀಯ ಸಂಸ್ಕೃತಿಯ ಅಧ್ಯಯನ, ಪ್ರಪಂಚದ ಇತಿಹಾಸ (ಇ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ
ಮುಖ್ಯಸ್ಥ ಇತಿಹಾಸ ವಿಭಾಗ ಕಲ್ಪತರು ಕಾಲೇಜು ತಿಪಟೂರು

ಬಂಡೀವಡ್ಡರ, ಹುಲಗಪ್ಪ ರಾಮಪ್ಪ
ಜ 2-3-1932



ಧಾರವಾಡ ಜಿಲ್ಲೆ ಸೂಡಿ; ಎಂ ಎ (ಕನ್ನಡ) ಶಿಕ್ಷಕ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ; 4 ಕೃತಿಗಳು: ಪಂಚಾರತಿ (ಕ) ಬಂಗಾರದ ಬಳಿ (ನಾ) ತಾಯಿ ಶಿಕ್ಷಕಿ (ಸ ಕ) ಶಾಂತಿ ದೀಪ (ಸಂ)
ಗೋಪನಕೊಪ್ಪ ಹುಬ್ಬಳ್ಳಿ 580 023



ಬಕ್ಕಪ್ಪ, ಕಾಶೀಪುರದ ಬಿಸಲೇರಿ

ಜ 25-9-1936

ದಾವಣಗೆರೆ ; ಸಂಗನಬಸಪ್ಪ–ನೀಲಮ್ಮ ; 3 ಗಂ ಮಕ್ಕಳು ; ಪ್ರಾ ಮಾ ಪ್ರೌ ದಾವಣಗೆರೆ, ಬಿ ಎ ಮೈಸೂರು. ಎಂ ಎ ಧಾರವಾಡ ; ಗೋಕಾಕ್ ಎಜ್ಯುಕೇಷನ್ ಸೊಸೈಟಿಯ ಶ್ರೀ ಶಿವಲಿಂಗೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ರಾಜ್ಯಶಾಸ್ತ್ರದ ಉಪ ಪ್ರಾಧ್ಯಾಪಕ : 12 ಕೃತಿಗಳು : ಪ್ರಜಾ ಪ್ರಭುತ್ವದ ಮೂಲ ತತ್ವಗಳು, ಆಧುನಿಕ ಸರ್ಕಾರಗಳು, ರಾಜ್ಯಶಾಸ್ತ್ರ ಪರಿಚಯ (ರಾ) ಗೋಕಾಕದ ಅಣ್ಣ ಶ್ರೀ ಜಿ ವಿ ಘೋಡಗೇರಿಯವರು (ಜೀ)

ಉಪಪ್ರಾಧ್ಯಾಪಕ ಶಿವಲಿಂಗೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜು ಗೋಕಾಕ ಬೆಳಗಾವಿ ಜಿಲ್ಲೆ

ಬಡಿಗೇರ, ಪರಶುರಾಮ ಬಾ

ಜ 13-1-1931

ಪ್ರಾ ಬೀಡಿ. ಮಾ ಖಾನಾಪೂರ, ಪ್ರೌ ಬೆಳಗಾವಿ, ಕೊಲ್ಹಾಪುರ ಬಿ ಎ ಆನರ್ಸ್ ಎಂ ಎ (ಪ್ರಾಕೃತ. ಕನ್ನಡ ಭಾಷಾವಿಜ್ಞಾನ) ಪಿ ಎಚ್‌ಡಿ ಎಲ್ ಎಲ್ ಬಿ ; ದೇವರಾಜ ಬಹದ್ದೂರ್ ಪ್ರಶಸ್ತಿ. ವಿದ್ಯಾವರ್ಧಕ ಸಂಘದ ಬಹುಮಾನ ; ಲಿಂಗ್ವಿಸ್ಟಿಕ್ ಸೊಸೈಟಿ ಆಫ್ ಇಂಡಿಯಾ (ಪೂನ) ಸದಸ್ಯ ; 8 ಕೃತಿಗಳು : ಗಾಥಾ ಸಪ್ತಶತಿ, ಜೈನತತ್ವ ಸಂಗ್ರಹ, ಪ್ರಾಕೃತ ಭಾಷಾ ಸ್ವರೂಪ, ಮಹಾವೀರನು ಹೇಳಿದ ಕಥೆಗಳು

ಎಲ್ 2 ಮಾನಸಗಂಗೋತ್ರಿ ಮೈಸೂರು 570 006

ಬಡಿಗೇರ, ಬಾಲಚಂದ್ರ ಶಂಕರೆಪ್ಪ

[ಶ್ರೀ ಶಂಕರತನಯ]

ಜ 10-5-1947



ಬೆಳಗಾವಿ ಜಿಲ್ಲೆ ಮುಗುಟಖಾನ ಹುಬ್ಬಳ್ಳಿ ; ಶಂಕರೆಪ್ಪ–ಸರಸ್ವತೆಪ್ಪ ; 1 ಹೆ ಮಗು ; ಎಸ್ ಎಸ್ ಎಲ್ ಸಿ ; ಒಕ್ಕಲುತನ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 1 ಕೃತಿ : ಹೊಳ್ಳಿ ಅಲ್ಲ ಜಲಬಳ್ಳಿ (ಕ)

ಶ್ರೀ ಶಂಕರ ಕೃಪಾ ನಿಲಯ ಮುಗುಟಖಾನ ಹುಬ್ಬಳ್ಳಿ ಬೆಳಗಾವಿ ಜಿಲ್ಲೆ 591 118

ಬಣಕಾರ, ಮಹಾದೇವ
ಜ 3-10-1932

ಧಾರವಾಡ ಜಿಲ್ಲೆ ಮೋಟೆಬೆನ್ನೂರ; ಗದಿಗೆಪ್ಪ-ಸಿದ್ದಮ್ಮ; 5 ಗಂ 1 ಹೆ ಮಕ್ಕಳು; ಮಾಧ್ಯಮಿಕ ವಿದ್ಯಾಭ್ಯಾಸ; ಅನುಭವ ಪ್ರಿಂಟರ್ಸ್ ಮುದ್ರಣಾಲಯದ ಮಾಲೀಕ; ಬಣ್ಣದ ಕಾರಂಜಿ ಪ್ರೇಮಗೀತೆಗಳ ಸಂಕಲನಕ್ಕೆ ರಾಜ್ಯ ಸರ್ಕಾರದ ಬಹುಮಾನ; 15 ಕೃತಿಗಳು: ಬಣ್ಣದ ಕಾರಂಜಿ, ಮಹದೇವ ಬಣಕಾರ ವಚನಗಳು, ಹೊಸಹುಟ್ಟು (ಕ) ಲೋಕದ ಕಣ್ಣು (ಸ ಕ) ಕಲ್ಯಾಣ ಕ್ರಾಂತಿ, ಯಾರು ಹೊಣೆ (ನಾ) ವಿಶ್ವ ಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ, ಕರ್ನಾಟಕ ಉಜ್ವಲ ಪರಂಪರೆ (ಸಂ)

1213 5ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು 560 010



ಬನ್ನಂಜೆ ಗೋವಿಂದಾಚಾರ್ಯ [ರಾಮಾನುಜ]
ಜ 3-8-1936

ದ ಕ ಜಿಲ್ಲೆ ಪಡಮುನ್ನೂರು; ನಾರಾಯಣಾಚಾರ್ಯ-ಸತ್ಯಭಾಮಮ್ಮ: 2 ಗಂ 4 ಹೆ ಮಕ್ಕಳು; ಉದಯವಾಣಿ ದಿನಪತ್ರಿಕೆ ಪ್ರಧಾನ ಉಪಸಂಪಾದಕ; ಪಂಡಿತರತ್ನ, ವಿದ್ಯಾವಾಚಸ್ಪತಿ; ಉಡುಪಿ ಸಂಸ್ಕೃತ ಮಹಾಪಾಠಶಾಲೆಯ ಆಡಳಿತ ಸಮಿತಿಯ ಸದಸ್ಯ, ಮದರಾಸಿನ ಧರ್ಮಪ್ರಕಾಶ ಮಾಸಿಕದ ಗೌರವ ಸಂಪಾದಕ; 12 ಕೃತಿಗಳು: ಕೃಷ್ಣಾಮೃತ ಮಹಾರ್ಣವ, ಸಂಗ್ರಹ ರಾಮಾಯಣ, ಮಂಗಲಾಷ್ಟಕ, ಆನಂದ ತೀರ್ಥ; ಹವ್ಯಾಸ: ಚಿತ್ರಕಲೆ

ಈಶಾವಾಸ್ಯಂ ಅಂಬಲಪಾಡಿ ಉಡುಪಿ 3

ಬನ್ನಂಜೆ, ರಾಮಾಚಾರ್ಯ
ಜ 31-8-1917

ಉಡುಪಿ; ನಾರಾಯಣಾಚಾರ್ಯ-ಸತ್ಯಭಾಮಮ್ಮ; ಕನ್ನಡ ವಿದ್ವಾನ್; ಉದಯವಾಣಿ ದಿನಪತ್ರಿಕೆ ಸಹಾಯಕ ಸಂಪಾದಕ; ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯ (1951-53); 3 ಕೃತಿಗಳು: ಬಾಳ್ನೋಟಗಳು (ಸ ಕ) ಕೃಷ್ಣನ ಉಡುಪಿ (ಧ) ಭಗವದ್ಗೀತ (ಅ)

ಸಹಾಯಕ ಸಂಪಾದಕ ಉದಯವಾಣಿ ಮಣಿಪಾಲ್

ಬರಗೂರು ರಾಮಚಂದ್ರಪ್ಪ
ಜ 18-10-1946

ತುಮಕೂರು ಜಿಲ್ಲೆ ಬರಗೂರು ; ಬಿ ರಂಗದಾಸಪ್ಪ–ಕೆಂಚಮ್ಮ ; 2 ಗಂ ಮಕ್ಕಳು ; ಪ್ರಾ ಮಾ ಬರಗೂರು, ಪ್ರೌ ಬಿ ಎ ತುಮಕೂರು, ಎಂ ಎ ಬೆಂಗಳೂರು ; ಬೆಂ ವಿ ಜ್ಞಾನಭಾರತಿ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕನ್ನಡ ಅಧ್ಯಾಪಕ ; ಸುಂಟರಗಾಳಿ ಕಥಾ ಸಂಕಲನಕ್ಕೆ ಸಾಹಿತ್ಯ ಅಕಾಡೆಮಿ ಬಹುಮಾನ, ಶ್ರೇಷ್ಠ ಕತೆ ಮತ್ತು ಸಂಭಾಷಣೆಗೆ ಚಲನಚಿತ್ರ ಪ್ರಶಸ್ತಿ ; ಬಂಡಾಯ ಸಾಹಿತ್ಯ ಸಂಘಟನೆ ಪ್ರಧಾನ ಸಂಚಾಲಕ, ಸಮುದಾಯ ನಾಟಕ ತಂಡದ ಸದಸ್ಯ ; 10 ಕೃತಿಗಳು : ಮರಕುಟಿಗ (ಕ) ಕಪ್ಪುನೆಲದ ಕೆಂಪುಕಾಲು, ಸುಂಟರಗಾಳಿ (ಸ ಕ) ಒಂದೂ ಊರಿನ ಕತೆ, ಸೂತ್ರ (ಕಾ) ಸಾಹಿತ್ಯ ಮತ್ತು ರಾಜಕಾರಣ (ವಿಮ) ಹವ್ಯಾಸ ; ಚಲನಚಿತ್ರ ನಿರ್ದೇಶನ

ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ ಬೆಂಗಳೂರು 560 056

ಬಲ್ಲಾಳ, ನಿಡಂಬೂರು ವ್ಯಾಸರಾಯ
ಜ 1-12-1923



ಉಡುಪಿ ; ನಿಡಂಬೂರು ರಾಮದಾಸ–ಕಲ್ಯಾಣಿ ; 1 ಗಂ 3 ಹೆ ಮಕ್ಕಳು ; ಪ್ರಾ ಮಾ ಪ್ರೌ ಉಡುಪಿ; ಬೊಂಬಾಯಿ ಕಾಲ್ಟೆಕ್ಸ್ ತೈಲ ಕಂಪೆನಿಯಲ್ಲಿ ಉದ್ಯೋಗ ; ಅನುರಕ್ತೆ ಕಾದಂಬರಿಗೆ ಮೈಸೂರು ಸರ್ಕಾರದ ಬಹುಮಾನ, ಕಾಡುಮಲ್ಲಿಗೆ ಕಥಾ ಸಂಕಲನಕ್ಕೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ; ಕರ್ನಾಟಕ ಸಂಘ, ಸಾಹಿತ್ಯಕೂಟ, ಕನ್ನಡ ಕಲಾಕೇಂದ್ರ ಮುಂಬೈ ಸದಸ್ಯ ; 7 ಕೃತಿಗಳು : ಬದುಕಿನ ಆದರ್ಶ, ಸಂಪಿಗೆಯ ಹೂ (ಸ ಕ) ಅನುರಕ್ತೆ, ವಾತ್ಸಲ್ಯಪಥ, ಉತ್ತರಾಯಣ (ಕಾ)

ನಂ 2 ರಾಮಭವನ ಪ್ಲಾಟ್ ನಂ 142 ವಡಾಲಾ ಮುಂಬೈ 400 031



ಬಸವಣ್ಣ, ಮಲ್ಲಪ್ಪ
ಜ 5-2-1933

ಚಾಮರಾಜನಗರ ತಾಲೂಕು ಮಂಗಲ ; ಮಲ್ಲಪ್ಪ-ನಂಜಮ್ಮ ; 1 ಗಂ 2 ಹೆ ಮಕ್ಕಳು ; ಪ್ರಾ ಮಂಗಲ, ಮಾ ಪ್ರೌ ಚಾಮರಾಜನಗರ, ಬಿ ಎಸ್‌ಸಿ ಆನರ್ಸ್ ಎಂ ಎ ಮೈಸೂರು, ಪಿ ಎಚ್‌ಡಿ ವೆಂಕಟೇಶ್ವರ ವಿಶ್ವವಿದ್ಯಾನಿಲಯ ತಿರುಪತಿ ; ಅಧ್ಯಾಪಕ; 2 ಕೃತಿಗಳು : ಶೈಕ್ಷಣಿಕ ಮನೋವಿಜ್ಞಾನ, ಯುಂಗನ

ಮನೋವೈಜ್ಞಾನಿಕ ಸಿದ್ಧಾಂತಗಳು (ಮ) ಹವ್ಯಾಸ : ಅಂಚೆ ಚೀಟಿ ಸಂಗ್ರಹ, ಟೆನಿಸ್

ಮನಶ್ಶಾಸ್ತ್ರ ವಿಭಾಗ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ ತಿರುಪತಿ 517 502

ಬಸವಣ್ಯಪ್ಪ, ಉಗ್ರಾಣದ ಶಾನುಭೋಗರ
ಜ 1934

ಏಣಗಿ ಬಸಾಪುರ; ಹೇಮಗಿರಿಯಪ್ಪ–ವೀರಮ್ಮ; 2 ಹೆ ಮಕ್ಕಳು; ಪ್ರೌಢ ಶಿಕ್ಷಣ ಹಾಗೂ ಹಿಂದಿ ಮಾಧ್ಯಮಿಕ ತೇರ್ಗಡೆ; ವ್ಯವಸಾಯ; 6 ಕೃತಿಗಳು: ಹೊಸ ಪ್ರವಾಹ, ನೈವೇದ್ಯ (ಪ್ರ) ಹೂ ಗೊಂಚಲು, ಮೈತ್ರಿ (ಕ) ಹವ್ಯಾಸ: ಅಭಿನಯ

ಈ ಬಸಾಪುರ ಅಂಚೆ ಹಂಪಸಾಗರ ಮಾರ್ಗ ಬಳ್ಳಾರಿ ಜಿಲ್ಲೆ 583 214

ಬಸವಂತಪ್ಪ, ಗೋಣೆಪ್ಪನವರ
ಜ 1-7-1948



ಬಳ್ಳಾರಿ ಜಿಲ್ಲೆ ನೀಲಗುಂದ; ಜಿ ಹುಚ್ಚಪ್ಪ–ಜಿ ಹುಚ್ಚಿಂಗೆಮ್ಮ; 1 ಗಂ 1 ಹೆ ಮಕ್ಕಳು; ಪ್ರಾ ನೀಲಗುಂದ, ಮಾ ಪ್ರೌ ಕಮ್ಮತ್ತಹಳ್ಳಿ, ಬಿ ಎ ದಾವಣಗೆರೆ, ಎಂ ಎ ಮೈಸೂರು; ಇತಿಹಾಸದ ಉಪನ್ಯಾಸಕ; ಬಂಡಾಯ ಸಾಹಿತ್ಯ ಸಂಘಟನೆಯ ಸದಸ್ಯ, ಸಿಂಧನೂರಿನ ಕರ್ನಾಟಕ ಸಂಘದ ಅಧ್ಯಕ್ಷ; 3 ಕೃತಿಗಳು: ಸವಿನೆನಪು, ಹೃದಯಗೀತೆ, ಧ್ವನಿ; ಹವ್ಯಾಸ: ಅಭಿನಯ

ಅಧ್ಯಾಪಕ ಸರ್ಕಾರಿ ಜ್ಯೂನಿಯರ್ ಕಾಲೇಜ್ ಹರಪನಹಳ್ಳಿ ಬಳ್ಳಾರಿ ಜಿಲ್ಲೆ

ಬಸವರಾಜ್, ರಂಗೇಗೌಡ
ಜ 4-7-1930

ತುಮಕೂರು ಜಿಲ್ಲೆ ಈಡೇನಹಳ್ಳಿ; ರಂಗೇಗೌಡ–ಮರುಳಮ್ಮ; 3 ಗಂ ಮಕ್ಕಳು; ಪ್ರಾ ಚಿನ್ನಾಯ್ಯನ ಹಳ್ಳಿ, ಮಾ ಪ್ರೌ ತಿಪಟೂರು, ಬಿ ಎ ತುಮಕೂರು, ಬಿ ಇಡಿ ಮೈಸೂರು, ಎಂ ಎ ಧಾರವಾಡ; ಕನ್ನಡ ಅಧ್ಯಾಪಕ; 6 ಕೃತಿಗಳು: ಅನುರಾಗದ ಸುಳಿಯಲ್ಲಿ, ಕುರಿಗಳು ಸಾಕಿದ ತೋಳ, ನಿಮ್ಮ ಪ್ರೀತಿಯೊಂದೇ ಸಾಕು (ಸ ಕ) ಈಸೂರಿನ ಚಿರಂಜೀವಿಗಳು, ಆ ಕಥೆ ಈ ಮನೆಯಲ್ಲಿ ನಡೆಯಿತು (ಕಾ)

ಕನ್ನಡ ಅಧ್ಯಾಪಕ ಸರ್ಕಾರಿ ಜ್ಯೂನಿಯರ್ ಕಾಲೇಜು ಚಿಕ್ಕನಾಯ್ಕನ ಹಳ್ಳಿ ತುಮಕೂರು ಜಿಲ್ಲೆ

ಬಸವರಾಜು, ಲಿಂಗಪ್ಪ
ಜ 5-10-1919

ಕೋಲಾರ ಜಿಲ್ಲೆ ಇಡಗೂರು ; ಲಿಂಗಪ್ಪ-ಈರಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಮಾ ಇಡಗೂರು, ಪ್ರೌ ಸಿದ್ಧಗಂಗೆ, ಬಿ ಎ ಆನರ್ಸ್ ಎಂ ಎ ಡಿ ಲಿಟ್ ಮೈ ವಿ ; ಮೈ ವಿ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತಿ ; ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿ ಹಬ್ಬದ ಪುರಸ್ಕಾರ, ರಾಜ್ಯಸಾಹಿತ್ಯ ಅಕಾಡೆಮಿ ಪುರಸ್ಕಾರ, ಅಲ್ಲಮನ ವಚನ ಚಂದ್ರಿಕೆ ಕೃತಿಗೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ ; 20 ಕೃತಿಗಳು : ತೊರವೆ ರಾಮಾಯಣ ಸಂಗ್ರಹ (ಸಂಗ್ರ) ಜ್ಯೋತಿರ್ಲಿಂಗದ ಮೂರು ಮುಖಗಳು, ತಿರುಮಲಾರ್ಯ ಮತ್ತು ಚಿಕ್ಕ ದೇವರಾಜ ಒಡೆಯರು (ವಿಮ) ಅಕ್ಕನ ವಚನಗಳು, ಪಂಪನ ಆದಿಪುರಾಣ, ಪರಮಾರ್ಥ, ಶಿವದಾಸ ಗೀತಾಂಜಲಿ, ಶೃಂಗಾರ ನಿದರ್ಶನ, ಕನ್ನಡ ಛಂದಸ್ಸಂಪುಟ (ಸಂ) ಭಾಷಾಂತರ ಮತ್ತು ಭಾವಾನುವಾದ (ಭಾ)

37 ನಳಿನೀ ಶಂಕರ 3ನೇ ಬ್ಲಾಕ್ 5ನೇ ಮುಖ್ಯರಸ್ತೆ ಜಯಲಕ್ಷ್ಮೀಪುರಂ ಮೈಸೂರು 570 012



ಬಸವಾ, ಕಾಶೀನಾಥ ದೇವಣಸಾ
ಜ 30-1-1931

ಧಾರವಾಡ ಜಿಲ್ಲೆ ಬೆಟಗೇರಿ ; ದೇವಣಸಾ ಬಸವಾ-ಧಪರ್ಾಬಾಯಿ ; 2 ಗಂ 3 ಹೆ ಮಕ್ಕಳು ; ಪ್ರಾ ಮಾ ಬೆಟಗೇರಿ-ಗದಗ, ಬಿ ಕಾಂ ಹುಬ್ಬಳ್ಳಿ, ಎಂ ಎ ಎಂ ಕಾಂ ಧಾರವಾಡ ; ಅಧ್ಯಾಪಕ ; 8 ಕೃತಿಗಳು : ಲೆಕ್ಕಶಾಸ್ತ್ರ, ವಾಣಿಜ್ಯಶಾಸ್ತ್ರ, ರಾಜ್ಯಶಾಸ್ತ್ರ, ಭೂಗೋಳ ಶಾಸ್ತ್ರ, ಭಾರತದ ಆರ್ಥಿಕ ವ್ಯವಸ್ಥೆ

ಜೆ 6 ಜೆ ಜಿ ಕಾಮರ್ಸ್ ಕಾಲೇಜ್ ಹುಬ್ಬಳ್ಳಿ 21

ಬಸವಾರಾಧ್ಯ, ನಂಜುಂಡಾರಾಧ್ಯ
ಜ 30-2-1926



ಕೋಲಾರಜಿಲ್ಲೆ ನಾರಸಿಂಹನಹಳ್ಳಿ ; ನಂಜುಂಡಾರಾಧ್ಯ-ಗಿರಿಜಮ್ಮ ; 4 ಗಂ 3 ಹೆ ಮಕ್ಕಳು ; ಪ್ರಾ ಮಾ ಗೌರಿಬಿದನೂರು, ಪ್ರೌ ಬೆಂಗಳೂರು, ಬಿ ಎ ಎಂ ಎ ಮೈಸೂರು ; ಮೈ ವಿ ಕನ್ನಡ ಅಧ್ಯಯನ ಸಂಸ್ಥೆ ಸಂಪಾದನಾ ವಿಭಾಗದ ಉಪನಿರ್ದೇಶಕ ; ರಾಜ್ಯ ಸಾಹಿತ್ಯ ಅಕಾಡೆಮಿ ಮತ್ತು ದೇವರಾಜ

ಬಹದ್ದೂರ್ ಬಹುಮಾನಗಳು ; ಬಸವ ಸಮಿತಿಯ ಪ್ರಕಟನ ಸಮಿತಿ, ಜೆ ವಿ ಪ್ರಕಟನ ಸಮಿತಿ, ಜೀವನ ಪತ್ರಿಕೆ ಸಂಪಾದಕ ಮಂಡಳಿ, ಇಂಗ್ಲಿಷ್ ಕನ್ನಡ ನಿಘಂಟು ಸಂಪಾದಕ ಸಮಿತಿ ಸದಸ ; 22 ಕೃತಿಗಳು : ತೊರವೆರಾಮಾಯಣ, ತ್ರಿಪುರ ದಹನ ಸಾಂಗತ್ಯ, ಚಂದ್ರ ಹಾಸನ ಕಥೆ, ಕನ್ನಡ ಗದ್ಯವಿಕಾಸ, ಅಬ್ಬಲೂರು ಚರಿತೆ, ಉದ್ಯೋಗಸಾರ

ಉಪನಿರ್ದೇಶಕ ಸಂಪಾದನಾ ವಿಭಾಗ ಕನ್ನಡ ಅಧ್ಯಯನಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006



ಬಳೂರಗಿ, ದಾನಪ್ಪ ರಾಮಪ್ಪ

ಜ **20–7–1943**

ಬಿಜಾಪುರಜಿಲ್ಲೆ ಸಾರವಾಡ ; ರಾಮಪ್ಪ–ಸಾತವ್ವ : ಪ್ರಾ ಮಾ ಸಾರವಾಡ, ಪ್ರೌ ಬಿಜಾಪುರ, ಬಿ ಎಸ್‌ಸಿ ಎಂ ಎಸ್‌ಸಿ ಕ ವಿ ; ರಾಯಚೂರಿನ ಎಲ್ ವಿ ಡಿ ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕ ; 10 ಕೃತಿಗಳು : ಹೊಸ ನಕ್ಷತ್ರಗಳು, ಲೇಸರ್, ವೇಗೋತ್ಕರ್ಷಗಳು, ಪಾರಿಭಾಷಿಕ ಪದಗಳ ಶಬ್ದಕೋಶ (ಸಂ)

ಎಲ್ ವಿ ಡಿ ಕಾಲೇಜು ರಾಯಚೂರು

ಬಳ್ಳೇಕೆರೆ, ಹನುಮಂತಪ್ಪ

ಜ **4–5–1937**



ಚಿತ್ರದುರ್ಗ ಜಿಲ್ಲೆ ಬಳ್ಳೇಕೆರೆ ; ಕೆಂಚಪ್ಪ-ಕೆಂಚಮ್ಮ ; 3 ಗಂ ಮಕ್ಕಳು ; ಪ್ರಾ ಬಳ್ಳೇಕೆರೆ ಮತ್ತು ಹೊಸದುರ್ಗ, ಪ್ರೌ ಬಿ ಎ ಬಿ ಇಡಿ ಶಿವಮೊಗ್ಗ, ಎಂ ಎ ಕ ವಿ ; ಶಿವಮೊಗ್ಗದ ಸೇಕ್ರೆಡ್‌ಹಾರ್ಟ್ ಪ್ರೌಢಶಾಲೆಯಲ್ಲಿ ಕನ್ನಡ ಉಪಾಧ್ಯಾಯ ; ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ; 1 ಕೃತಿ : ಶಿವಮೊಗ್ಗಾದ ಗಾಂಧಿಪಾರ್ಕ್

ಸೇಕ್ರೆಡ್‌ಹಾರ್ಟ್ ಪ್ರೌಢಶಾಲೆ ಶಿವಮೊಗ್ಗ



ಬ್ರಹ್ಮಪ್ಪ, ಜ್ವಾಲ್ನಸೆಟ್ಟಿ
ಜ 10-5-1924

ತುಮಕೂರು ಜಿಲ್ಲೆ ಅರಸಾಪುರ ; ಜ್ವಾಲ್ನಸೆಟ್ಟಿ-ಜ್ವಾಲ್ನಮ್ಮ ; 1 ಗಂ 5 ಹೆ ಮಕ್ಕಳು ; ಪ್ರಾ ಅರಸಾಪುರ, ಮಾ ರಾಂಪುರ, ಪ್ರೌ ಮಧುಗಿರಿ, ಬಿ ಎ ಆನರ್ಸ್ ಎಂ ಎ ಮೈಸೂರು ; ಸರ್ಕಾರಿ ಕಾಲೇಜಿನ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ; ರತ್ನಾಕರ ಕಾದಂಬರಿಗೆ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ ಮತ್ತು ರತ್ನಾಕರ ಶತಕ ಸಾಹಿತ್ಯ ಕೃತಿಗೆ ದೇವರಾಜ ಬಹದ್ದೂರ್ ಬಹುಮಾನಗಳು ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ ; 25 ಕೃತಿಗಳು : ಭರತೇಶನ ಬಾಳ್ಗಬ್ಬ (ನಾ) ಪಂಪನ ಕಲಿಕರ್ಣ, ಪಂಪನಿಂದ ಕುವೆಂಪುವರೆಗೆ, ರನ್ನಕವಿ (ವಿಮ) ದಾನ ಚಿಂತಾಮಣಿ, ಚೇಳಿನಿ, ಚಕ್ರೇಶ್ವರಿ (ಕಾ) ಭರತೇಶ ವೈಭವ (ಸಂ) ನಿರ್ಗ್ರಂಥರತ್ನ (ಧ)

ಹುಡ್ಕೊಮನೆ 2ನೆ ಹಂತ ಜಯನಗರ ತೊಣಚಿಕೊಪ್ಪಲ್ ಮೈಸೂರು

ಬಾಗಿ, ಭೂಪಾಲರಾವ್ ಬಾಳಪ್ಪ
ಜ 18-9-1894



ಕೊಲ್ಹಾಪುರ ಜಿಲ್ಲೆ ಹಲ್ಕರಣಿ ; ಬಾಳಪ್ಪ ಬಾಗಿ-ಸಾವಿತ್ರಿ ; 2 ಗಂ 1 ಹೆ ಮಕ್ಕಳು ; ಪ್ರಾ ಹಲ್ಕರಣಿ, ಪ್ರೌ ಕೊಲ್ಲಾಪುರ ಮತ್ತು ಬೆಳಗಾವಿ, ಬಿ ಎ ಪೂನ, ಎಂ ಎ ಕ ವಿ ; ಕ ವಿ ಗಣಿತ ಶಾಸ್ತ್ರ ಪ್ರಾಧ್ಯಾಪಕ ನಾಗಿ ನಿವೃತ್ತಿ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 1 ಕೃತಿ : ಅಂಕಗಣಿತದ ಮೂಲತತ್ವಗಳು ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ತೋಟಗಾರಿಕೆ

ಗೋಪಾಲಪುರ ಧಾರವಾಡ 580 007



ಬಾದರಾಯಣಮೂರ್ತಿ, ವ್ಯಾಸರಾಯಮಠದ
[ಋಷಿ ಕುಮಾರ]
ಜ **11-7-1908**

ಕೋಲಾರ ಜಿಲ್ಲೆ ಮುಳಬಾಗಿಲು ; ರಂಗಾಚಾರ್ಯ–ಸೀತೂಬಾಯಿ ; ಪ್ರಾ ಮುಳಬಾಗಿಲು, ಪ್ರೌ ಕೋಲಾರ, ಬಿ ಎ ಬಿ ಟಿ ಮೈಸೂರು ; ಪ್ರೌಢ ಶಾಲಾ ಉಪಾಧ್ಯಾಯ ; 24 ಕೃತಿಗಳು : ಜ್ಞಾನೋದಯ, ಸಮರ್ಪಣೆ (ನಾ) ಮಹಾಯೋಗ, ಸಂಗನಬಳಗ (ಸ ಕ) ಸಿದ್ಧಿವಿನಾಯಕ, ಶ್ರೀರಾಘವೇಂದ್ರಸ್ವಾಮಿಗಳ ಪ್ರಾತಃ ಸಂಕಲ್ಪ ಗದ್ಯ (ಧ) ಹವ್ಯಾಸ : ವ್ಯಾಯಾಮ, ಚಿತ್ರಕಲೆ

ತಾರಿಮೆಮೋರಿಯಲ್ ಹೈಸ್ಕೂಲ್ ಬೆಂಗಳೂರು 560 016



ಬಾನಂದೂರು ಕೆಂಪಯ್ಯ
ಜ **14-6-1951**

ಬೆಂಗಳೂರು ಜಿಲ್ಲೆ ಬಾನಂದೂರು ; ವೆಂಕಟಯ್ಯ–ಹುಚ್ಚಮ್ಮ ; ಪ್ರಾ ಮಾ ಬಾನಂದೂರು, ಪ್ರೌ ಬಿಡದಿ, ಬಿ ಎ ಆನರ್ಸ್ ಬೆಂಗಳೂರು ; ಆಕಾಶವಾಣಿ ಮೈಸೂರು ವಿಭಾಗದಲ್ಲಿ ಪ್ರಸಾರಕ ; ಜಾನಪದ ಕೋಗಿಲೆ, ಜನಪದ ಗಾನಗಂಧರ್ವ ಬಿರುದುಗಳು ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 1 ಕೃತಿ : ಜುಮ್ಮಿ ಪದವ ಕಲಿಸವ್ವ (ಜಾ) ಹವ್ಯಾಸ : ಚಿತ್ರಕಲೆ, ಹಾಡುಗಾರಿಕೆ


ಆಕಾಶವಾಣಿ ಮೈಸೂರು



ಬಾಯಿರಿ, ಬಾರಕೂರು ಪರಮೇಶ್ವರ
ಜ **16-11-1912**

ಬಾರಕೂರು ; ಬಿ ನಾರಾಯಣ ಬಾಯಿರಿ–ರಾಧಮ್ಮ ; 2 ಗಂ 2 ಹೆ ಮಕ್ಕಳು ; ಮದ್ರಾಸ್ ಸರ್ಕಾರದ ಇಂಟರ್ ಮೀಡಿಯೆಟ್ ಮತ್ತು ಚಿತ್ರ ಕಲೆಯಲ್ಲಿ ಡಿಪ್ಲೊಮಾ; ಚಿತ್ರ ಕಲಾವಿದ ; ಕರ್ನಾಟಕ ರಾಜ್ಯ ಸರ್ಕಾರದ ಕಲಾಶಿಕ್ಷಣ ಸಲಹಾ ಸಮಿತಿಯ ಸದಸ್ಯ ; 8 ಕೃತಿಗಳು : ಭಾರತೀಯ ಚಿತ್ರಕಲೆ, ಚಿಕ್ಕ

ಮಕ್ಕಳ ಚಿತ್ರಕಲೆ, ರಂಗವಲ್ಲಿ (1–5) (ಕಲೆ)
ಚಿತ್ರಕುಟೀರ ಉಡುಪಿ



ಬಾರಿಗಿಡದ, ಶಿವಪ್ಪ ಬಸವಣ್ಣೆಪ್ಪ
ಜ 22-3-1927

ಧಾರವಾಡ ಜಿಲ್ಲೆ ಶ್ಯಾಬಳ ; ಬಸವಣ್ಣೆಪ್ಪ–ಗುರು ಪಾದಮ್ಮ ; 2 ಗಂ 3 ಹೆ ಮಕ್ಕಳು ; ಪ್ರಾ ಬಾಡ ಬಂಕಾಪುರ, ಮಾ ನವನೂರ, ಪ್ರೌ ಹಾವೇರಿ, ಬಿ ಎಸ್‌ಸಿ ಧಾರವಾಡ ; ಹುಬ್ಬಳ್ಳಿಯ ಪಿ ಸಿ ಜಬಿನಿ ವಿಜ್ಞಾನ ಕಾಲೇಜಿನಲ್ಲಿ ರಸಾಯನಶಾಸ್ತ್ರ ಉಪ ಪ್ರಾಧ್ಯಾಪಕ ; 1 ಕೃತಿ : ರಸಾಯನಶಾಸ್ತ್ರ ಪ್ರವೇಶ (ಇತರರೊಂದಿಗೆ)
ವಿಶ್ವೇಶ್ವರನಗರ ಹುಬ್ಬಳ್ಳಿ

ಬಾಲಸುಬ್ರಹ್ಮಣ್ಯ. ನಂಜನಗೂಡು
ಜ 2–1–1926

ನಂಜನಗೂಡು ; ನರಸಿಂಹಶಾಸ್ತ್ರಿ–ಲಕ್ಷ್ಮಮ್ಮ ; 1 ಗಂ ಮಗು ; ಪ್ರಾ ಮಾ ಪ್ರೌ ನಂಜನ ಗೂಡು, ಬಿ ಎ ಆನರ್ಸ್ ಎಂ ಎ ಮೈಸೂರು ; ಮೈ ವಿ ಇಂಗ್ಲಿಷ್ ಅಧ್ಯಾಪಕ, ಇಂಗ್ಲಿಷ್ ಕನ್ನಡ ನಿಘಂಟು ಪರಿಷ್ಕೃತ ಆವೃತ್ತಿಯ ಪ್ರಧಾನ ಸಂಪಾದಕ : ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ; ದೆಹಲಿಯ ಕನ್ನಡ ಫಿಲಂ ಸೊಸೈಟಿಯ ಸಂಸ್ಥಾಪಕ ಸದಸ್ಯ ; 6 ಕೃತಿಗಳು : ಕಲೆಗಳು ಮತ್ತು ಮಾನವ, ಹೊರೇಸನ ಸಾಹಿತ್ಯ ವಿಮರ್ಶೆ, ಅರಿಸ್ಟಾಟಲನ ಕಾವ್ಯ ಮೀಮಾಂಸೆ, ಅಮರಕೋಶ, ವೇದಾಂತಸಾರ, ಮೃಗಾಲಯದ ಮಹನೀಯರು ; ಹವ್ಯಾಸ : ಟೆನಿಸ್, ಸಂಗೀತ
1552 ವಾಣಿವಿಲಾಸರಸ್ತೆ ಮೈಸೂರು 570 004

ಬಾಲಸುಬ್ರಹ್ಮಣ್ಯ, ನರಹಳ್ಳಿ
ಜ 22–5–1952

ಮಂಡ್ಯ ಜಿಲ್ಲೆ ನರಹಳ್ಳಿ ; ಶಿವರಾಮಯ್ಯ–ರಾಜಮ್ಮ ; ಪ್ರಾ ನರಹಳ್ಳಿ ಮತ್ತು ಸುಂಕಾ ಕೊಣ್ಣೂರು, ಪ್ರೌ ನಾಗಮಂಗಲ, ಬಿ ಎ ಎಂ ಎ ಬೆಂಗಳೂರು ; ಜಿ ಪಿ ರಾಜರತ್ನಂ ಚಿನ್ನದ ಪದಕ ; ಯೂತ್‌ರೈಟರ್ಸ್ ಅಂಡ್ ಆರ್ಟಿಸ್ಟ್‌ಗಿಲ್ಡ್ ಸಹ ಕಾರ್ಯದರ್ಶಿ :
1 ಕೃತಿ : ಕ್ರಿಸ್ತಾಂಜಲಿ (ಸಂ)
ನಂ 35 ಬಿ ವಿ ಎಸ್ ಸಂಘ ಶೇಷಾದ್ರಿಪುರಂ ಬೆಂಗಳೂರು 560 020

ಬಾಲಸುಬ್ರಹ್ಮಣ್ಯಂ, ಸಿಂಧುವಳ್ಳಿ
ಜ 15-3-1942

ಸಿಂಧುವಳ್ಳಿ ಶೇಷಗಿರಿರಾವ್-ಗೌರಮ್ಮ ; ಪ್ರಾ ಮಾ ಪ್ರೌ ಬಿ ಕಾಂ ಮೈಸೂರು, ಎಂ ಕಾಂ ಧಾರವಾಡ ; ಮೈಸೂರು ಡಿ ಬನುಮಯ್ಯ ಕಾಲೇಜಿನಲ್ಲಿ ವಾಣಿಜ್ಯ ಶಾಸ್ತ್ರದ ಅಧ್ಯಾಪಕ ; 4 ಕೃತಿಗಳು : ಜೀತ ಪದ್ಧತಿ ರದ್ದು, ನಗರ ಭೂಮಿತಿ ಸಮಾಜೀಕರಣ, ಅಧಿಕ ಬಂಡವಾಳ ಅಧಿಕ ಉತ್ಪಾದನೆ, ಬ್ಯಾಂಕಿಂಗ್ ಕಾನೂನು ಮತ್ತು ಆಚರಣೆ

10/1 ಮೊದಲನೆ ಅಡ್ಡರಸ್ತೆ ಲಕ್ಷ್ಮೀಪುರಂ ಮೈಸೂರು 570004

ಬಾಳಿಗ, ದಾಮೋದರ [ಶೌರಿ]
ಜ 7-9-1908

ಪುತ್ತೂರು ; ನಾರಾಯಣ ಬಾಳಿಗ-ರಾಧಾ ; ಪ್ರಾ ಮಾ ಪ್ರೌ ಪುತ್ತೂರು. ಬಿ ಎ ಮದ್ರಾಸ್ ವಿಶ್ವವಿದ್ಯಾನಿಲಯ ; ಮಕ್ಕಳ ಸಾಹಿತ್ಯಕ್ಕಾಗಿ ಮತ್ತು ನವ ಅಕ್ಷರಸ್ಥರ ಸಾಹಿತ್ಯಕ್ಕಾಗಿ ಕೇಂದ್ರ ಸರ್ಕಾರದ ಬಹುಮಾನ, ಯುನೆಸ್ಕೋ ಪುರಸ್ಕಾರ ; 100 ಕೃತಿಗಳು : ಶಾಂತಿಸಾಧನ (ಕ) ನೂತನ ಸಾಮಾನ್ಯ ವಿಜ್ಞಾನ (ವಿ) ನೂತನ ಸಚಿತ್ರ ಚರಿತ್ರೆ (ಇ) ನೂತನ ತೋಟಗಾರಿಕೆ ಮತ್ತು ಪ್ರಕೃತಿ ಶಾಸ್ತ್ರ (ಕೃ) ಹವ್ಯಾಸ : ತೋಟಗಾರಿಕೆ, ಪಶುಸಂಗೋಪನೆ

ಶ್ರೀ ಕುಟೀರ ಸುಲ್ತಾನ್ ಭತ್ತೇರಿ ರಸ್ತೆ ಮಂಗಳೂರು 6

ಬಿರಾದಾರ, ಮಲ್ಲನಗೌಡ ಗುರುಗೌಡ [ಮಗು]
ಜ 15-3-1933

ಬಿಜಾಪುರ ಜಿಲ್ಲೆ ಬಬಲೇಶ್ವರ ; ಗುರುಗೌಡ-ರುದ್ರಮ್ಮ ; 2 ಗಂ 1 ಹೆ ಮಕ್ಕಳು ; ಪ್ರಾ ಮಾ ಬಬಲೇಶ್ವರ, ಪ್ರೌ ಬಿ ಎ ಬಿಜಾಪುರ, ಎಂ ಎ ಪಿ ಎಚ್ ಡಿ ಧಾರವಾಡ ; ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಉಪಪ್ರಾಧ್ಯಾಪಕ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 4 ಕೃತಿಗಳು : ಕಾವ್ಯಸಿಂಧು (ಕ) ಕುವೆಂಪು ಸೃಜಿಸಿದ ಮೂರುಪಾತ್ರಗಳು (ವಿಮ) ಮುತ್ತಿನ ಕಾಕೆಯ ಶತಕ, ತ್ರಿಪದಿತ್ರಯ (ಸಂ) ಹವ್ಯಾಸ : ತೋಟಗಾರಿಕೆ, ನಾಟಕಾಭಿನಯ

'ಚಿತ್ಕಳಾ' ಸೇಡಂರಸ್ತೆ ಹೊಸ ಬಡಾವಣೆ ಕಲಬುರ್ಗಿ 585 105



ಬಿರಾದಾರ, ಶಂಕರಗೌಡ ಗುರುಗೌಡ

ಬಿಜಾಪುರ ಜಿಲ್ಲೆ ಬಬಲೇಶ್ವರ ; ಗುರುಗೌಡ-ರುದ್ರಮ್ಮ ; 4 ಗಂ 1 ಹೆ ಮಕ್ಕಳು ; ಟಿ ಸಿ ಎಚ್, ಕನ್ನಡ ಜಾಣ ; ಪ್ರಾಥಮಿಕ ಶಾಲಾ ಶಿಕ್ಷಕ ; ರುದ್ರ ವೀಣೆ ಕತಾಸಂಕಲನ, ನನ್ನ ಹಾಡು, ಕಾರಂಜಿ, ಮಂಗ್ಯಾ ಮಂಗ್ಯಾ ಕಿಸ್ ಕಿಸ್ ಮಕ್ಕಳ ಪುಸ್ತಕಗಳಿಗೆ ರಾಜ್ಯ ಸರ್ಕಾರದ ಬಹುಮಾನ, ಶಿವಾದ್ವೈತ ತತ್ವ ಪ್ರಚಾರ ಸಮಿತಿ (ಗಿರಿಯಾಪುರ) ಇವರಿಂದ ಕವನ ಕುವಲಯ ಚಂದಿರ ಬಿರುದು, ಶೈಕ್ಷಣಿಕ ಸೇವೆಗಾಗಿ ಆದರ್ಶ ಶಿಕ್ಷಕ ರಾಜ್ಯ ಪ್ರಶಸ್ತಿ ; ಕನ್ನಡ ಸಾಹಿತ್ಯ ಪರಿಷತ್ತು, ಮಕ್ಕಳ ಸಾಹಿತ್ಯ ಸಂಘ ಬಿಜಾಪುರ ಸದಸ್ಯ ; 10 ಕೃತಿಗಳು : ಭಾವಸಂಗಮ, ಬಸವ ಶತಕ (ಕ) ರುದ್ರವೀಣೆ (ಸ ಕ) ನೌಕರಿಯ ಹುಚ್ಚು (ನಾ) ಬೆಳಕಿನೆಡೆಗೆ (ಕಾ) ಸೀತನಿ ಸುಲಗಾಯಿ, ವಿಜಯವಾಣಿ (ಸಂ) ಕಾರಂಜಿ, ನನ್ನ ಹಾಡು (ಬಾ)

ತಿಕೋಟಾ ಅಂಚೆ ಬಿಜಾಪುರ ಜಿಲ್ಲೆ

ಬೀಡಿ, ಉಡುಪಿ ಭೀಮರಾವ
[ಕಮಲ ಕುಮಾರ ಗಾಲವ]
ಜ 2-4-1911



ಭೀಮರಾವ-ಕಮಲಾಬಾಯಿ ; 1 ಹೆ ಮಗು ; ಪ್ರಾ ಮಾ ಪ್ರೌ ಧಾರವಾಡ ; ಕಣ್ಬೆಳಕು ಕವಿತಾ ಸಂಕಲನಕ್ಕೆ ವಿದ್ಯಾವರ್ಧಕ ಸಂಘದ ಬಹುಮಾನ ; ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆ, ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ; 9 ಕೃತಿಗಳು : ಮಿಠಾಯಿ, ಕಾಮನಬಿಲ್ಲು, ಮುಕ್ತಮಾನವ, ಪುರಂದರದಾಸರ ಜಾಣ್ನುಡಿ, ಡಾ ॥ ರವೀಂದ್ರನಾಥ ಠಾಕೂರ, ಕಣ್ಬೆಳಕು

ದಿವಾಣಬಹದ್ದೂರ ರೊದ್ದ ರೋಡ್ ಧಾರವಾಡ 1

ಬುರ್ಲಿ, ವಾಸುದೇವಾಚಾರ್ಯ ಗೋಪಾಳಾಚಾರ್ಯ [ಚೈತನ್ಯ]
ಜ 4-7-1914

ಬಿಜಾಪುರ ಜಿಲ್ಲೆ ಬಾಗಲಕೋಟೆ ; 1 ಗಂ 4 ಹೆ ಮಕ್ಕಳು ; 7ನೇ ವರ್ಗದವರೆಗೆ ಶಿಕ್ಷಣ ; 20 ಕೃತಿಗಳು : ಆದರ್ಶ (ಕಾ) ದೇವರದೆಸ್ಸೆ, ಮುರುಕು ವಿದ್ಯಾ ಹರುಕು ಸಂಸಾರ (ನಾ) ಸೆರೆಮನೆಯ ಶೂರ (ಜೈಲಿನ ಅನುಭವ)

ಕಿಲ್ಲಾ 11ನೇ ಓಣಿ ಬಾಗಲಕೋಟೆ ಬಿಜಾಪುರ ಜಿಲ್ಲೆ



ಬುರ್ಲಿ, ಶೇಷಗಿರಿನಾಯಕ ಅನಂತನಾಯಕ

ಜ 28–2–1923

ಧಾರವಾಡ ಜಿಲ್ಲೆ ಹಾವನೂರ; ಅನಂತನಾಯಕ ವೆಂಕಪ್ಪನಾಯಕ ಬುರ್ಲಿ–ಇಂದಿರಾಬಾಯಿ : 3 ಗಂ 1 ಹೆ ಮಕ್ಕಳು; ಪ್ರಾ ಮಾ ಹಾವನೂರ; ಪ್ರೌ ಧಾರವಾಡ ಹುಬ್ಬಳ್ಳಿ ಹಾವೇರಿ, ಎಂ ಎ (ಹಿಂದಿ) ಎಂ ಎಡ್ ಕ ವಿ; ಪ್ರೌಢಶಾಲಾ ಶಿಕ್ಷಕ; 10 ಕೃತಿಗಳು : ಸುಮತಿ ಅನುರಾಧಾ, ಬಿಂದುವಾಸಿಯ ಮಗ, ಜಾದೂ ತಾಯಿತ, ಶುಭದಾ, ಭಾರತದಲ್ಲಿ ಮಾತೃ ಭಾಷೆಯ ಬೋಧನೆಗೆ ಸಲಹೆಗಳು (ಅ)

5/2 4ನೇ ರಸ್ತೆ ಮಾಳಮಡ್ಡಿ ಧಾರವಾಡ 580 007

ಬೃಹನ್ಮಠ, ಬಸವರಾಜಶರ್ಮಾ ಮಹಾಬಲೇಶ್ವರ ಶಾಸ್ತ್ರೀ ತಾಳೂರು

ಜ 13-10-1920



ಬಳ್ಳಾರಿ ಜಿಲ್ಲೆ ಕುಡುವರಹಾಳು; ಮಹಾಬಲೇಶ್ವರ ಶಾಸ್ತ್ರಿ–ರಾಮಲಿಂಗೇಶ್ವರಮ್ಮ; 2 ಗಂ 3 ಹೆ ಮಕ್ಕಳು : ಎಸ್ ಎಸ್ ಎಲ್ ಸಿ ಸಂಸ್ಕೃತ ಕಾವ್ಯ ತೀರ್ಥ, ಹಿಂದಿ ವಿಶಾರದ; ವಾರ್ಡ್ಲಾ ಜೂನಿಯರ್ ಕಾಲೇಜಿನ ಕನ್ನಡ ಪಂಡಿತ; ಸಾಹಿತ್ಯ ವಾರಿಧಿ, ಸಾಹಿತ್ಯ ಪ್ರವೀಣ, ಪ್ರವಚನ ಪಂಚಾನನ, ಉಭಯಕವಿ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ; 25 ಕೃತಿಗಳು : ವರ್ಧಮಾನ ಮಹಾವೀರ, ಕಿತ್ತೂರು ಚೆನ್ನಮ್ಮ, ಪುಣ್ಯ ಪುರುಷ ಪುರಂದರದಾಸ, ರಮಣ ಪುರುಷ ಮಹಮ್ಮದ್ ಪೈಗಂಬರ್ (ಜೀ)

ಬೃಹನ್ಮಠ 11 ಆಸ್ಪೆಲರ ಓಣಿ ಗ್ರಹಂರಸ್ತೆ ಬಳ್ಳಾರಿ 1



ಬೆಟಗೇರಿ ಕೃಷ್ಣಶರ್ಮಾ ಶ್ರೀನಿವಾಸರಾವ್

[ಆನಂದ ಕಂದ]

ಜ 16–4–1900

ಬೆಳಗಾವಿ ಜಿಲ್ಲೆ ಬೆಟಗೇರಿ; ಶ್ರೀನಿವಾಸರಾವ್–ರಾಧಾಭಾಯಿ : 1 ಗಂ 2 ಹೆ ಮಕ್ಕಳು; ಕನ್ನಡ 7ನೇ ತರಗತಿವರೆಗೆ ಅಭ್ಯಾಸ; ಲೇಖನ ವೃತ್ತಿ; ಕೆಲವು ಕಾಲ ಶಿಕ್ಷಕ, ಪತ್ರಿಕಾ ಸಂಪಾದಕ, ಕವಿ ವೈದಿಕ ಸಾಹಿತ್ಯ ವಿಭಾಗದಲ್ಲಿ ಸಂಶೋಧಕ; ಕರ್ನಾಟಕ

ವಿಶ್ವವಿದ್ಯಾಲಯದ ಡಿಲಿಟ್, ಮುಂಬೈ ಸರ್ಕಾರದ ಸಂಶೋಧನ ಬಹುಮಾನ, ರಾಜ್ಯ ಸಾಹಿತ್ಯ ಅಕಾದೆಮಿ ಹಾಗೂ ದೇವರಾಜ ಬಹದ್ದೂರ್ ಬಹುಮಾನಗಳು, ಬೆಳುವಲ ಅಭಿನಂದನ ಗ್ರಂಥ ಸಮರ್ಪಣೆ ; ವಿದ್ಯಾವರ್ಧಕ ಸಂಘದ ಸದಸ್ಯ, ಜಯ ಕರ್ನಾಟಕ ಗ್ರಂಥಮಾಲೆ ಹಾಗೂ ಮನೋಹರ ಗ್ರಂಥಮಾಲೆಗಳ ಸಂಸ್ಥಾಪಕ ಸಂಪಾದಕ, ಮಾತೃಭೂಮಿ ಸ್ವಧರ್ಮ ಜಯಂತಿ ಜಯ ಕರ್ನಾಟಕ ಪತ್ರಿಕೆಗಳ ಸಂಪಾದಕ ; 52 ಕೃತಿಗಳು : ಅರುಣೋದಯ, ಉತ್ಸಾಹಗಾಥಾ, ಕಾರ ಹುಣ್ಣಿಮೆ (ಕ) ಸುದರ್ಶನ, ಅಶಾಂತಿ ಪರ್ವ, ರಾಜಯೋಗಿ (ಕಾ) ಸಾಹಿತ್ಯ ಸಾಗಿರುವ ದಾರಿ, ಬೀಸುವ ಕಲ್ಲಿನ ಹಾಡುಗಳು (ವಿಮ) ಬಡತನದ ಬಾಳು, ಮಾತನಾಡುವ ಕಲ್ಲು, ಕಳ್ಳರ ಗುರು (ಸ ಕ) ಬೆಂದ ಹೃದಯ, ಮುಂಡರಿಗೆಯ ಗುಡುಗಲಿ, (ನಾ) ಮಧ್ಯಮ ವ್ಯಾಯೋಗ, ಮೃಚ್ಛಕಟಿಕ (ಅ) ಆರ್ತಭಾವ, ಕನಕದಾಸರ ಕೀರ್ತನೆಗಳು, ಐರಾವತ ನೋಂಪಿ (ಸಂ) ಕನ್ನಡ ರಾಜ್ಯ ರಮಾರಮಣ, ಮಕ್ಕಳ ಕಥೆಗಳು (ಬಾ) ಹವ್ಯಾಸ : ಸಂಗೀತ, ಜ್ಯೋತಿಷ, ಆಯುರ್ವೇದ

195 ಮಾಳಮಡ್ಡಿ ಧಾರವಾಡ 7

ಬೆಟ್ಟದ ಅರಸು, ಹೋತೂರು ಕವಿ ಲಕ್ಷ್ಮೀಶ [ಬೆಟ್ಟರಸ]
ಜ **17-10-1929**



ಚಿತ್ರದುರ್ಗ ಜಿಲ್ಲೆ ಕವಿ ಕೋನಪ್ಪನ ಅಗ್ರಹಾರ ಆನೇ ಶಿದ್ರಿಕ್ಷೇತ್ರ; ಬಬ್ಬೂರಂಗಪ್ಪ–ಪಾರ್ವತಮ್ಮ ; 2 ಗಂ 1 ಹೆ ಮಕ್ಕಳು ; ಪ್ರೌ ಬೆಂಗಳೂರು ; ಪತ್ರಿಕೋದ್ಯಮಿ ; 7 ಕೃತಿಗಳು : ಜ್ಞಾನಾಮೃತ, ಶ್ರೀ ಶನೇಶ್ವರ ಸುಪ್ರಭಾತ, ಪೀಡಾ ಪರಿಹಾರಕ ನವಗ್ರಹ ಸ್ತೋತ್ರ

ಬೆಟ್ಟದ ಹುಲಿ ವಾರಪತ್ರಿಕೆ ಕಾರ್ಯಾಲಯ 3ನೇ ಕ್ರಾಸ್ ಲಕ್ಷ್ಮೀನಾರಾಯಣಪುರಂ ಬೆಂಗಳೂರು 21

ಬೆಸಗರಹಳ್ಳಿ ರಾಮಣ್ಣ
ಜ **18-5-1938**

ಮಂಡ್ಯ ಜಿಲ್ಲೆ ಬೆಸಗರಹಳ್ಳಿ ; ಚಿಕ್ಕಎಲ್ಲೇಗೌಡ–ದೊಡ್ಡತಾಯಮ್ಮ ; 2 ಗಂ 1 ಹೆ ಮಕ್ಕಳು ; ಪ್ರಾ ಮಾ ಬೆಸಗರಹಳ್ಳಿ, ಪ್ರೌ ಮದ್ದೂರು, ಎಂ ಬಿ ಬಿ ಎಸ್ ಮೈಸೂರು ; ವೈದ್ಯಾಧಿಕಾರಿ ; ನೆಲದ ಒಡಲು ಮತ್ತು ಗರ್ಜನೆ ಕಥಾಸಂಕಲನಗಳಿಗೆ ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ ; ಕರ್ನಾಟಕ ಬರಹಗಾರರ ಹಾಗೂ ಕಲಾವಿದರ ಒಕ್ಕೂಟದ

ಕಾರ್ಯಕಾರಿ ಸಮಿತಿ, ಬಂಡಾಯ ಸಾಹಿತ್ಯ ಸಂಘಟನೆಯ ಸದಸ್ಯ ; 5 ಕೃತಿಗಳು : ನೆಲದ ಒಡಲು, ಗರ್ಜನೆ, ಹರಕೆಯ ಹಣ, ಒಂದು ಹುಡುಗನಿಗೆ ಬಿದ್ದ ಕನಸು ; ಹವ್ಯಾಸ : ನಾಟಕಾಭಿನಯ

ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಬೆಳ್ಳೂರು



ಬೆಳಗಲಿ, ದುರದುಂಡೀಶ್ವರ ನಿಂಗಪ್ಪ [ದುನಿಂಬೆ]

ಜ 30–3–1931

ಬಿಜಾಪುರ ಜಿಲ್ಲೆ ಬನಹಟ್ಟಿ ; ನಿಂಗಪ್ಪ–ಚೆನ್ನಮ್ಮ ; 3 ಗಂ 3 ಹೆ ಮಕ್ಕಳು ; ಪ್ರಾ ಬನಹಟ್ಟಿ ಐನಾಪುರ. ಪ್ರೌ ಎಸ್ ಎಸ್ ಸಿ ಮುಂಬೈ, ಹಿಂದಿ ಶಿಕ್ಷಕ ತರಬೇತಿ ; ಪ್ರೌಢಶಾಲಾ ಶಿಕ್ಷಕ ; ಬದುಕುವ ಬಯಕೆ ಮಕ್ಕಳ ಪುಸ್ತಕಕ್ಕೆ ರಾಷ್ಟ್ರೀಯ ಪ್ರಶಸ್ತಿ, ಗೌಡರ ಮಗಳು ಗೌರಿ ಕಥಾ ಸಂಕಲನಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದ ಬಹುಮಾನ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 15 ಕೃತಿಗಳು : ಬೆನ್ನ ಹಿಂದಿನ ಕಣ್ಣು, ಸಿಟ್ಟ್ಯಾಕೊ ರಾಯ ನನ ಮ್ಯಾಲ. ಮಾಸ್ತರನ ಹೆಂಡತಿ (ಸ ಕ) ಹಡೆದವರು, ಸೀಮೆಗಳು, ಜೋಗಿ ಮರಡಿ (ಕಾ) ಸರ್ವಜ್ಞ, ಮುರುಗೇಂದ್ರ ಮಹಾಸ್ವಾಮಿಗಳು, ಚಿಕ್ಕೋಡಿ ತಮ್ಮಣ್ಣಪ್ಪನವರು (ಬಾ) ಕನ್ನಡದಲ್ಲಿ ಕಾದಂಬರಿ ಸಾಹಿತ್ಯ (ವಿಮ) ಪ್ರೇಮಚಂದ್ ಬದುಕು ಬರಹ (ಜೀ) ಹವ್ಯಾಸ : ಪ್ರವಾಸ, ಅಭಿನಯ

ಬನಹಟ್ಟಿ, ಬಿಜಾಪುರ ಜಿಲ್ಲೆ 587 311

ಬೆಳಗೆರೆ ಪಾರ್ವತಮ್ಮ [ಜನಕಜೆ, ಭಗಿನಿ]

ಜ 1–8–1924



ಬಳ್ಳಾರಿ ಜಿಲ್ಲೆ ಬೆಳಗೆರೆ ; ಬೆಳಗೆರೆ ಚಂದ್ರಶೇಖರ ಶಾಸ್ತ್ರಿ–ಮೋಕ್ಷಗುಂಡಂ ಅನ್ನಪೂರ್ಣಮ್ಮ ; 1 ಗಂ ಮಗು ; ಪ್ರಾ ಬೆಳಗೆರೆ, ಪ್ರೌ ಬಳ್ಳಾರಿ. ಹಿಂದಿ ಪ್ರವೀಣ್ : ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ನಿವೃತ್ತಿ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯೆ : 3 ಕೃತಿಗಳು : ಹೂ ಗೊಂಚಲು (ಕ) ಮೂರು ದೀಪಾವಳಿ (ಕಾ) ಪದರುಗಳು (ಸ ಕ) ಹವ್ಯಾಸ : ಸಂಗೀತ, ಗಮಕ

4ನೇ ರಸ್ತೆ, ಸತ್ಯನಾರಾಯಣ ಪೇಟೆ ಬಳ್ಳಾರಿ 583 101

ಬೆಳಗೆರೆ ಸೀತಾರಾಮಶಾಸ್ತ್ರಿ [ಕ್ಷೀರಸಾಗರ]
ಜ 30-4-1906



ಚಿತ್ರದುರ್ಗ ಜಿಲ್ಲೆ ಬೆಳಗೆರೆ ; ಚಂದ್ರಶೇಖರಶಾಸ್ತ್ರಿ–ಅನ್ನಪೂರ್ಣಮ್ಮ : 2 ಗಂ 4 ಹೆ ಮಕ್ಕಳು ; ಪ್ರಾ ಮಾ ಪಾವಗಡ, ಪ್ರೌ ಚಿತ್ರದುರ್ಗ, ಬಿ ಎ ಬೆಂಗಳೂರು, ಎಂ ಎ ಕಲ್ಕತ್ತ ; ಗಣಿತ ಶಾಸ್ತ್ರದ ಅಧ್ಯಾಪಕರಾಗಿ ನಿವೃತ್ತಿ ; ರಾಜ್ಯ ಸಾಹಿತ್ಯ ಅಕಾದೆಮಿ ಹಾಗೂ ದೇವರಾಜ ಬಹದ್ದೂರ್ ಬಹುಮಾನಗಳು ; 13 ಕೃತಿಗಳು : ಕ್ಷೀರಸಾಗರರ ನಾಟಕಗಳು ಭಾ 1, 2 (ನಾ) ಒಡೆದ ಕನ್ನಡಿ (ಕಾ) ವೀಳ್ಯ (ಸ ಕ) ನೆಪೋಲಿಯನ್ ಬೋನಪಾರ್ಟೆ (ಜೀ) ಅಂತರಾಂಶ ಕಲಸ ವಿನ್ಯಾಸ (ಗ) ಶಾಧೆ (ಕ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ನಾಟಕ ನಿರ್ದೇಶನ

ಚಂದ್ರವಿಹಾರ್ ಜಿ ಎಸ್ ರಸ್ತೆ ಶೇಷಾದ್ರಿಪುರ ಬೆಂಗಳೂರು 560 020

ಬೇಂದ್ರೆ, ದತ್ತಾತ್ರೇಯ ರಾಮಚಂದ್ರ
[ಅಂಬಿಕಾತನಯದತ್ತ]
ಜ 31–1–1896–1981



ಧಾರವಾಡ ; ರಾಮಚಂದ್ರ–ಅಂಬಿಕಾ ; 2 ಗಂ 1 ಹೆ ಮಕ್ಕಳು ; ಪ್ರಾ ಧಾರವಾಡ, ಪ್ರೌ ಪುಣೆ ಮುಂಬೈ, ಎಂ ಎ (1935) ; ಪ್ರಾಧ್ಯಾಪಕ ಹಾಗೂ ಧಾರವಾಡ ಆಕಾಶವಾಣಿ ಕೇಂದ್ರದ ಸಾಹಿತ್ಯ ಸಲಹೆಗಾರರಾಗಿ ನಿವೃತ್ತಿ ; ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಗೌರವ ಡಿ ಲಿಟ್ ; 'ಅರಳು–ಮರಳು' ಕವಿತಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾದೆಮಿ ಬಹುಮಾನ (1969) 'ನಾಕುತಂತಿ' ಕವಿತಾ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ (1974) ; 67 ಕೃತಿಗಳು : ಗರಿ, ಸಖೀಗೀತ, ಉಯ್ಯಾಲೆ, ಅರಳು–ಮರಳು, ನಾಕು ತಂತಿ (ಕ) ಸಾಹಿತ್ಯ ಮತ್ತು ವಿಮರ್ಶೆ, ಸಾಹಿತ್ಯ ಸಂಶೋಧನೆ, ಮಹಾರಾಷ್ಟ್ರ ಸಾಹಿತ್ಯ, ವಿಚಾರ ಮಂಜರಿ (ವಿಮ) ಸಾಯೋ ಆಟ, ಜಾತ್ರೆ, ಮಂದಿಮನಿ, ಉದ್ಧಾರ (ನಾ) ನಿರಾಭರಣ ಸುಂದರಿ (ಸ ಕ) ಮಾತೆಲ್ಲಜ್ಯೋತಿ, ಮತಧರ್ಮ ಮತ್ತು ಆಧುನಿಕ ಮಾನವ (ಭಾ) ಉಪನಿಷತ್ ರಹಸ್ಯ, ಭಗ್ನಮೂರ್ತಿ, ಭಾರತೀಯ ನವಜನ್ಮ (ಅ) ಮರಾಠಿ ಹಾಗೂ ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

13 'ಶ್ರೀಮಾತಾ' ಸಾಧನಕೇರಿ ಧಾರವಾಡ 580 008



ಬೇಂದ್ರೆ, ಲಕ್ಷ್ಮಣ ಜಿವಾಜಿ
ಜ 12-10-1900

ಧಾರವಾಡ ಜಿಲ್ಲೆ ಬೆಟಗೇರಿ ; ಗದಗ–ಬೆಟಗೇರಿಗಳಲ್ಲಿ ಮ್ಯಾಟ್ರಿಕ್‌ವರೆಗೆ ಶಿಕ್ಷಣ ; ಸಂಡೂರು ಸಂಸ್ಥಾನದಲ್ಲಿ ಆಪ್ತಕಾರ್ಯದರ್ಶಿಯಾಗಿ ಹದಿನಾರು ವರ್ಷ ಸೇವೆ ; ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯ ; 14 ಕೃತಿಗಳು : ಚಕಮಕಿ, ಕಳ್ಳ ಸಂತೆ (ಸ ಕ) ಅದ್ಭುತ ಶೌರ್ಯ, ಲಾಂಛನ (ಕಾ) ಭಾಗ್ಯಶ್ರೀ, ಮದುವೆಯ ಪತ್ತಲ, ಔರಂಗಜೇಬ (ನಾ) ಹವ್ಯಾಸ : ಟೆನಿಸ್

ಬೆಳಗಾಂ ರೋಡ್ ಧಾರವಾಡ

ಬೇಂದ್ರೆ, ವಾಮನ ದತ್ತಾತ್ರೇಯ
ಜ 28-7-1935



ರಾಣೆಬೆನ್ನೂರು ; ದ ರಾ ಬೇಂದ್ರೆ–ಲಕ್ಷ್ಮೀಬಾಯಿ; 1 ಹೆ ಮಗು ; ಪ್ರಾ ಗದಗ ಧಾರವಾಡ ಸೋಲಾಪುರ, ಪ್ರೌ ಬಿ ಎ ಎಂ ಎ ಧಾರವಾಡ, ಬಿ ಎಡ್ ಮೈ ವಿ, ಪಿಎಚ್‌ಡಿ ಪುಣೆ ; ಧಾರವಾಡದ ಕಿಟೆಲ್ ಕಾಲೇಜಿನಲ್ಲಿ ಕನ್ನಡ ಉಪ ಪ್ರಾಧ್ಯಾಪಕ ; ಮಹಾರಾಷ್ಟ್ರದ ಜನಪದ ಸಾಹಿತ್ಯ ಅನುವಾದ ಕೃತಿಗೆ ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ ; 14 ಕೃತಿಗಳು : ಮೊದಲು–ತೊದಲು (ಕ) ಲಕ್ಷ್ಮೀಶನ ಜೈಮಿನಿಭಾರತ ಒಂದು ಅಧ್ಯಯನ, ಕಥನ ಕುಶಲ ಕವಿ ಲಕ್ಷ್ಮೀಶ (ವಿಮ) ಸೊಂಡೀ ಗಣಪ್ಪ ಬಂದಾ (ಬಾ) ಸಾಹಿತ್ಯದ ವಿರಾಟ್ ಸ್ವರೂಪ, ರಾವಣ ದರ್ಶನ (ಸಂ) ಮಹಾರಾಷ್ಟ್ರದ ಜಾನಪದ ಸಾಹಿತ್ಯ, ಗುರು ಗೋವಿಂದ ಸಿಂಗ (ಅ)

13 'ಶ್ರೀಮಾತಾ' ಸಾಧನಕೇರಿ ಧಾರವಾಡ 580 008



ಜೋಗ್ಃರ, ಧನವಂತರಾವ ಅಣ್ಣಾರಾವ
ಜ 26-3-1903
ಬೆಳಗಾಂ ಜಿಲ್ಲೆ ಐನಾಪುರ ; ಅಣ್ಣಾರಾವ-ಸಾವಿತ್ರಿ ಬಾಯಿ : ಪ್ರಾ ಐನಾಪುರ, ಪ್ರೌ ಹುಬ್ಬಳ್ಳಿ. ಬಿ ಎ ಧಾರವಾಡ, ಎಲ್ ಎಲ್ ಬಿ ಪುಣೆ : ವಕೀಲವೃತ್ತಿ; ಕನ್ನಡ ಸಾಹಿತ್ಯ ಸಂಸ್ಕೃತಿ ಸಂಘದ ಅಧ್ಯಕ್ಷ : ಒಂದು ಕೃತಿ : ಮಹಾಪುರಾಣ ಸಾರ
ಅಥಣಿ ಬೆಳಗಾಂ ಜಿಲ್ಲೆ

ಬೋರಲಿಂಗಯ್ಯ, ನಿಂಗೇಗೌಡ
ಜ 7-8-1939
ಹಾಸನ ಜಿಲ್ಲೆ ನಿಂಬೇಹಳ್ಳಿ ; ನಿಂಗೇಗೌಡ-ಸಣ್ಣತಾಯಮ್ಮ : 1 ಗಂ 1 ಹೆ ಮಕ್ಕಳು ; ಪ್ರಾ ಪ್ರೌ ಕಲ್ಕೆರೆ ಕೊಡಗೀಹಳ್ಳಿ ತುರುವೇಕೆರೆ. ಬಿ ಎ ತುಮಕೂರು, ಎಂ ಎ ಮೈಸೂರು: ಮೈ ವಿ ಕನ್ನಡ ಅಧ್ಯಾಪಕ ; ಕಾನೂರು ಹೆಗ್ಗಡಿತಿ ವಿವೇಚನೆ ಕೃತಿಗೆ ಕುವೆಂಪು ವಿದ್ಯಾ ವರ್ಧಕ ಟ್ರಸ್ಟ್ ಬಹುಮಾನ ; 3 ಕೃತಿಗಳು : ಕಾನೂರು ಹೆಗ್ಗಡಿತಿ ವಿವೇಚನೆ, ಸಂಕರ್ಷ, ಅನಿಸಿಕೆ (ವಿಮ)
ಅಧ್ಯಾಪಕ ಯುವರಾಜ ಕಾಲೇಜು ಮೈಸೂರು

ಬೋರಲಿಂಗಯ್ಯ, ಹಿತ್ತಲಪುರ ಚಿಕ್ಕೇಗೌಡ
ಜ 25-10-1955
ತುಮಕೂರು ಜಿಲ್ಲೆ ಹಿತ್ತಲಪುರ ; ಚಿಕ್ಕೇಗೌಡ-ಕಾಳಮ್ಮ ; ಪ್ರಾ ಹಿತ್ತಲಪುರ, ಮಾ ಉಜ್ಜನಿ, ಪ್ರೌ ನಿಡಸಾಲೆ ಮತ್ತು ಹುಲಿಯೂರುದುರ್ಗ, ಬಿ ಎ ಎಂ ಎ ಬೆಂಗಳೂರು ; 1 ಕೃತಿ : ಉಜ್ಜನಿ ಚೌಡಮ್ಮ (ಜಾ)
ನಂ 3039 ವಿಜಯನಗರ ಬೆಂಗಳೂರು 560 040

ಬೋರೇಗೌಡ, ದ್ಯಾವೇಗೌಡ [ಬಳದರೆ ಬೋರೆಗೌಡ]
ಜ 10-2-1944
ಹಾಸನ ಜಿಲ್ಲೆ ಬಳದರೆ ; ದ್ಯಾವೇಗೌಡ-ಲಕ್ಷ್ಮಮ್ಮ ; ಪ್ರಾ ಮಾ ಬಳದರೆ, ಪ್ರೌ ಚನ್ನ ರಾಯಪಟ್ಟಣ, ಬಿ ಎ ಎಂ ಎ ಮೈಸೂರು ; ನವೋದಯ ಕಿರಿಯರ ಕಾಲೇಜು (ಚನ್ನ ರಾಯಪಟ್ಟಣ) ಅಧ್ಯಾಪಕ ; 1 ಕೃತಿ : ಗ್ರಾಮಾಂತರ ಕತೆಗಳು (ಜಾ)
ನವೋದಯ ಕಿರಿಯರಕಾಲೇಜು ಚನ್ನರಾಯಪಟ್ಟಣ ಹಾಸನಜಿಲ್ಲೆ



ಭಂಡಾರಿ, ರೋಹಿದಾಸ ವಿಠ್ಠಲ
ಜ 5-5-1936

ಕುಮಟಾ ತಾಲೂಕು ಹೆಗಡೆ; 1 ಗಂ 2 ಹೆ ಮಕ್ಕಳು ; ಪ್ರಾ ಕೆರೆಕೋಣ ಹೆಗಡೆ ಸಾಲ್ಕೋಡು, ಪ್ರೌ ಅರೆಅಂಗಡಿ, ಬಿ ಎ ಎಂ ಎ (ಕನ್ನಡ) ಧಾರವಾಡ ಎಂ ಎ (ಇಂಗ್ಲಿಷ್) ಕೊಲ್ಲಾಪುರ ; ಪ್ರಾಥಮಿಕ ಶಾಲಾ ಶಿಕ್ಷಕ ; ಅರೆ ಅಂಗಡಿಯ ಕರ್ನಾಟಕ ಸಂಘದ ಅಧ್ಯಕ್ಷ, ಹೊನ್ನಾವರ ಕರ್ನಾಟಕ ಸಂಘದ ಉಪಾಧ್ಯಕ್ಷ ; 1 ಕೃತಿ : ಕಣ್ಣೇ ಕಟ್ಟೇ ಕಾಡೇ ಗೂಡೇ (ಕ) ಹವ್ಯಾಸ : ಯಕ್ಷಗಾನ, ತಾಳಮದ್ದಳೆ, ನಾಟಕಾಭಿನಯ

ಅರೆಅಂಗಡಿ ಹೊನ್ನಾವರ ಉ ಕ ಜಿಲ್ಲೆ



ಭಕ್ತ, ಕುಂಬಳೆ ಕೃಷ್ಣ ಲಕ್ಷ್ಮಣ [ಭಕ್ತ ಪ್ರಶಾಂತ]
ಜ 15–10–1938

ಉ ಕ ಜಿಲ್ಲೆ ಕಣಿಪುರ ; ಲಕ್ಷ್ಮಣ ರಂಗಪ್ಪ ಭಕ್ತ–ಉಮಾ ಸುಂದರಿ ; 1 ಗಂ 1 ಹೆ ಮಕ್ಕಳು : ಪ್ರಾ ಕುಂಬಳೆ, ಪ್ರೌ ಮಂಜೇಶ್ವರ ಮತ್ತು ಕುಮಟಾ, ಬಿ ಎ ಧಾರವಾಡ ; 6 ಕೃತಿಗಳು : ಕವಿತಾ ಕುಂಜ, ರಾಧಾಲಾಪ(ಕ) ಭಕ್ತರ ದೇವರು (ಪ್ರಾ) ಅಯೋಧ್ಯಾ ಕಾಂಡ (ಕ)

ವೀರರಾಜಪೇಟೆ ಕೊಡಗು ಜಿಲ್ಲೆ



ಭಗವಾನ್, ಕಲ್ಲಹಳ್ಳಿ ಸಣ್ಣೇಗೌಡ [ಭಗವಾನ್]
ಜ 14–7–1945

ಮೈಸೂರು ಜಿಲ್ಲೆ ಕಲ್ಲಹಳ್ಳಿ ; ಸಣ್ಣೇಗೌಡ–ಕೆಂಪಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಕಲ್ಲಹಳ್ಳಿ, ಮಾ ಹರವೆ, ಪ್ರೌ ಅರಕಲಗೂಡು, ಬಿ ಎ ಎಂ ಎ ಮೈಸೂರು ; ಮೈ ವಿ ಸಂಜೆ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕ ; 7 ಕೃತಿಗಳು : ಅಂತರ್ಯ, ಬದಲಾವಣೆ (ವಿಮ) ಪಾಟೀಲರ ಆಯ್ದ ಕವನಗಳು (ಸಂ) ಜೂಲಿಯಸ್ ಸೀಜರ್, ಇತಿಹಾಸದ ಪಾಠಗಳು (ಅ)

ಹುಡ್ಕೊ ಮನೆ ಮೊದಲನೆ ಹಂತ ಜಯನಗರ ತೊಣಚಿಕೊಪ್ಪಲ್ ಮೈಸೂರು 570 005

ಭಟ್ ಎಚ್ ಎಂ ನಾರಾಯಣ [ನಾಭ]
ಜ 18-11-1918

ಕಾಸರಗೋಡು ತಾಲೂಕು ಕುಂಬಳೆ; ಮಹಾಲಿಂಗಭಟ್–ಸರಸ್ವತಿ ಅಮ್ಮ; 6 ಗಂ 3 ಹೆ ಮಕ್ಕಳು; ಕೇಂಬ್ರಿಡ್ಜ್ ಸ್ಕೂಲ್ ಸರ್ಟಿಫಿಕೇಟ್ ವ್ಯಾಸಂಗ; ಪತ್ರಿಕೋದ್ಯಮ ಮತ್ತು ಕೃಷಿ; ಕಾಸರಗೋಡು ತಾಲೂಕು ಪತ್ರಿಕೋದ್ಯಮಿಗಳ ಸಂಘದ ಅಧ್ಯಕ್ಷ; 2 ಕೃತಿಗಳು: ವಿಜಯಗೀತೆಗಳು, ಜಯವೈಭವ (ಕ)

ಪೆರಡಾಲ ಅಂಚೆ ಕಾಸರಗೋಡು ತಾಲೂಕು



ಭಟ್ ಎಸ್ ಮಾಧವ [ಮಾ ಭ ಪೆರ್ಲ]
ಜ 4-2-1931

ದ ಕ ಜಿಲ್ಲೆ ಪೆರ್ಲ; ಎಸ್ ವೆಂಕಟೇಶಭಟ್–ಎಸ್ ರುಕ್ಮಿಣಿ; ಹಿಂದಿ ಪ್ರವೀಣ್, ಬಿ ಎ ಎಂ ಎ ಕ ವಿ; ಅಧ್ಯಾಪಕ; ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರಿನ ಟಾಗೂರ್ ಮೆಮೋರಿಯಲ್ ವಿದ್ಯಾ ಸಂಸ್ಥೆಯ ಆಜೀವ ಸದಸ್ಯ; 8 ಕೃತಿಗಳು: ಸಂಕೇತ (ಕ) ಮರಳಿದಾಗ (ಕಾ) ಹೊಸಹೊನಲು (ನಾ) ಅಕ್ಬರ ಬೀರಬಲ ವಿನೋದ (ಸಂಗ್ರ) ಹವ್ಯಾಸ: ಪ್ರವಾಸ

ಹಿಂದಿ ಪ್ರಾಧ್ಯಾಪಕ ಬಿ ಆರ್ ಬಿ ವಾಣಿಜ್ಯ ಮಹಾವಿದ್ಯಾಲಯ ರಾಯಚೂರು

ಭಟ್, ಏಳ್ಕಾನ ಮಹಾಲಿಂಗೇಶ್ವರ
[ಕಶ್ಯಪ, ಪಶುಪತಿ]
ಜ 21-2-1928



ಕಾಸರಗೋಡು ತಾಲೂಕು ಏಳ್ಕಾನ; ಏಳ್ಕಾನ ಶಂಭಟ್ಟ–ಹೊನ್ನಮ್ಮ; 1 ಗಂ 2 ಹೆ ಮಕ್ಕಳು; ಪ್ರಾ ಏಳ್ಕಾನ ಏತಡ್ಕ, ಹಿಂದಿ ವಿಶಾರದ; ಹಿಂದಿ ಶಿಕ್ಷಕ; 1 ಕೃತಿ: ಹೂ ಗೊಂಚಲು (ಕ)

ಬ್ರಾಹ್ಮಣರಬೀದಿ ಮಡಿಕೇರಿ 571 201

ಭಟ್, ಕಟ್ಟದಮನೆ ಶಂಕರನಾರಾಯಣ ಸುಬ್ರಾಯ [ಸತ್ಯಕಾಮ]
ಜ 11-4-1926

ಕಾಸರಗೋಡು ತಾಲೂಕು ಪೈವಳಿಕೆ ; ಶಂಕರನಾರಾಯಣ ಭಟ್ಟ-ಗೌರಮ್ಮ ; 3 ಗಂ ಮಕ್ಕಳು ; ಪ್ರಾ ಪೈವಳಿಕೆ ಪ್ರೌ ನೀಲೇಶ್ವರ, ಸರಳ ಸಂಸ್ಕೃತ ಕೋವಿದ ; ಕಾಸರಗೋಡು ಕನ್ನಡ ಲೇಖಕರ ಸಂಘದ ಸದಸ್ಯ ; 3 ಕೃತಿಗಳು : ಬಾಳಸೊಡರು, ಕರ್ಮಮೇದಿನಿ (ಕ) ಕೇರಳ ರೈತವಾರಿ ಒಕ್ಕಲುಗಳ ಮತ್ತು ಕುಡಿಕಿಡಪ್ಪುಕಾರರ ರಕ್ಷಣಾ ಶಾಸನ 1963 (ಅ)

ಕಾಸರಗೋಡು ಕಣ್ಣಾನೂರುಜಿಲ್ಲೆ ಕೇರಳ

ಭಟ್, ತ್ರಿವಿಕ್ರಮ ಪುರುಷೋತ್ತಮ
ಜ 4-7-1917

ದ ಕ ಜಿಲ್ಲೆ ಉಪ್ಪಿನಂಗಡಿ ; ಪುರುಷೋತ್ತಮ ರಾಮಭಟ್-ಕಮಲಾವತಿ ; 2 ಗಂ 2 ಹೆ ಮಕ್ಕಳು ; ಬಿ ಎಸ್ ಸಿ ಬಿ ಡಿ ಎ ಮದ್ರಾಸ್ ವಿಶ್ವವಿದ್ಯಾನಿಲಯ ; ದಂತವೈದ್ಯ ; 1 ಕೃತಿ : ಚಾಣಕ್ಯ ಶತಕ

ಹಂಪನಕಟ್ಟೆ ಮಂಗಳೂರು 575 001



ಭಟ್, ನೀಲಕಂಠ ಕೊಚ್ಚಿ ಮಹದೇವಭಟ್ಟ ಶಿರಾಡಿಪಾಲ್ [ತ್ರಿನಯನ]
ಜ 13-7-1923

ದ ಕ ಜಿಲ್ಲೆ ಮುಂಡಾಜೆ; ಕೊಚ್ಚಿ ಮಹದೇವ ಭಟ್ಟ-ಯಮುನಮ್ಮ ; 4 ಗಂ 4 ಹೆ ಮಕ್ಕಳು ; ಪ್ರಾ ಮುಂಡಾಜೆ ಆಲ್ದೂರು ಮೂಡಿಗೆರೆ, ಮಾ ಬೇಲೂರು, ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡ ವಿದ್ವಾನ್, ರಾಷ್ಟ್ರಭಾಷಾ ವಿಶಾರದ, ಹಿಂದಿ ರತ್ನ ; ಬೆಳ್ತಂಗಡಿಯ ಪ್ರೌಢಶಾಲೆಯಲ್ಲಿ ಕನ್ನಡ ಹಿಂದಿ ಪಂಡಿತ, ಕೃಷಿ ಮತ್ತು ಹರಿಸಂಕೀರ್ತನಕಾರ; ವಿಕಾಸ ನಾಟಕಕ್ಕೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ, ಭಾರತದ ವೀರಾಂಗನೆಯರು ಕೃತಿಗೆ ಮೈಸೂರು ಸರ್ಕಾರದ ಬಹುಮಾನ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ, ವಿಚಾರ ಸಾಹಿತ್ಯ ಮಾಲೆಯ ಸಂಚಾಲಕ ; 21 ಕೃತಿಗಳು : ಕಾವ್ಯ ತರಂಗ, ಸೌಂದರ್ಯ ಸೌಂಗಧ (ಕ) ಪ್ರೇಮವಾಹಿನಿ, ಭಾರತದ ವೀರಾಂಗನೆಯರು (ಸ ಕ) ವಿಕಾಸ, ಸಂಸಾರ ಸಮರ (ನಾ) ಕತೆಗಾರ ರಾಜಾಜಿಯವರ ಕಥನಕಲಾಸಿದ್ಧಿ (ವಿಮ) ಸಾಧನಾ, ಡಾ॥ ಆರೋಗ್ಯಂ (ಅ)

ಕಡಿರುದ್ಯಾವರ ಮುಂಡಾಜೆ ಮಾರ್ಗ ದ ಕ ಜಿಲ್ಲೆ



ಭಟ್, ಪಳ್ಳತ್ತಡ್ಕ ಸುಬ್ರಾಯ
ಜ 16-3-1922

ಕಾಸರಗೋಡು ತಾಲೂಕು ಪಳ್ಳತ್ತಡ್ಕ ; ಪಳ್ಳತ್ತಡ್ಕ ಕೇಶವಭಟ್ಟ-ತಿರುಮಲೇಶ್ವರಿ ; 5 ಗಂ 3 ಹೆ ಮಕ್ಕಳು ; ಪ್ರಾ ಪೆರ್ಲ, ಪ್ರೌ ಪೆರಡಾಲ, ಬಿ ಎ ಮದರಾಸ್ ವಿಶ್ವವಿದ್ಯಾನಿಲಯ ; ಎಂ ಎ ಕರ್ನಾಟಕ ವಿಶ್ವವಿದ್ಯಾಲಯ ; ಕಾಸರಗೋಡು ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ; ಕನ್ನಡ ಅಧ್ಯಯನ ಮಂಡಳಿ (ಕೇರಳ) ಸದಸ್ಯ ; 5 ಕೃತಿಗಳು : ರವೀಂದ್ರನಾಥ ಠಾಗೋರ್, ವಾಕ್ಯವೃತ್ತಿ, ಲೀಲಾತಿಲಕಂ (ಅ) ವೆಂಕಾಮಾತ್ಯ ರಾಮಾಯಣಂ (ಸಂ) ಹವ್ಯಾಸ : ಯಕ್ಷಗಾನ, ತೋಟಗಾರಿಕೆ

ಪ್ರಾಧ್ಯಾಪಕ ಸರಕಾರಿ ಕಾಲೇಜ್ ಕಾಸರಗೋಡು ಕೇರಳ

ಭಟ್, ಬೆದ್ರಡಿ ವೇಣುಗೋಪಾಲ [ವೇಣುಗೋಪಾಲ ಕಾಸರಗೋಡು]
ಜ 10-11-1948

ಕಾಸರಗೋಡು ತಾಲೂಕು ಕಾರಡಕ ; ನಾರಾಯಣಭಟ್-ಅದಿತಿ ; ಪ್ರಾ ಕಿಳಿಂಗಾರು ಪಿ ಯು ಸಿ ಕಾರ್ಕಳ, ಬಿ ಎಸ್ ಸಿ ಮೂಡಬಿದ್ರೆ, ಎಂ ಎ ಕಾಸರಗೋಡು ; ಕಾಸರಗೋಡು ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ; ಕಾಸರಗೋಡಿನ ಲಲಿತಕಲಾ ಸದನ, ನವ್ಯ ಸಾಹಿತ್ಯ ಸಂಘಗಳ ಸದಸ್ಯ ; 3 ಕೃತಿಗಳು : ಗರಿ ಮುರಿದ ಹಕ್ಕಿಗಳು (ಕ) ಕ್ರಿಯೆ (ನಾ) ಈಚಿನ ಮಲೆಯಾಳ ಕವಿತೆಗಳು (ಅ) ಹವ್ಯಾಸ : ಅಭಿನಯ

ಸರ್ಕಾರಿ ಕಾಲೇಜು ವಿದ್ಯಾನಗರ ಕಾಸರಗೋಡು 670 123



ಭಟ್, ಮುಲ್ಲತ್ತೇರು ಗಂಗಾಧರ
ಜ 7-7-1943

ಕಾಸರಗೋಡು ತಾಲ್ಲೂಕು ನೀರ್ಚಾಲು; ನರಸಿಂಹ ಭಟ್ಟ-ವೆಂಕಮ್ಮ ; 1 ಮಗು ; ಪ್ರಾ ಪೆರಡಾಲ ನೀರ್ಚಾಲು, ಬಿ ಎಸ್ ಸಿ ಕಾಸರಗೋಡು ; ಟ್ಯುಟೋರಿಯಲ್ ಕಾಲೇಜ್ ಪ್ರಿನ್ಸಿಪಾಲ್ ; ಕಾಸರಗೋಡಿನ ನವ್ಯಸಾಹಿತ್ಯ ಸಂಘದ ಕೋಶಾಧಿಕಾರಿ ; 2 ಕೃತಿಗಳು : ನೆರಳು (ಕ) ಸಂಸ್ಕಾರ ವಿಮರ್ಶೆ (ಸಂ)

ಕಾಸರಗೋಡು ಟ್ಯುಟೋರಿಯಲ್ ಕಾಲೇಜು ಕಾಸರಗೋಡು



ಭಟ್, ಮಿತ್ತೂರು ವೆಂಕಟರಮಣ
[ಶ್ರೀಮಿತ್ತೂರು]
ಜ 6-2-1928

ದ ಕ ಜಿಲ್ಲೆ ಮಿತ್ತೂರು; ಕೃಷ್ಣಭಟ್–ಸಾವಿತ್ರಮ್ಮ; 4 ಗಂ ಮಕ್ಕಳು ; ಕನ್ನಡ ಮತ್ತು ಹಿಂದಿ ವಿದ್ವಾನ್, ರಾಷ್ಟ್ರಭಾಷಾ ಪ್ರವೀಣ, ಸಾಹಿತ್ಯರತ್ನ, ಸಾಹಿತ್ಯಾಚಾರ್ಯ ; ಮಂಗಳೂರಿನ ಕೇಂದ್ರೀಯ ವಿದ್ಯಾಲಯದಲ್ಲಿ ಸಂಸ್ಕೃತ ಉಪಾಧ್ಯಾಯ ; 5 ಕೃತಿಗಳು : ಉತ್ತರಾಯಣ, ಮಧುರ ಬಂಧನ (ಕಾ) ಕೊನೆಯ ಬಯಕೆ, ನಿಮ್ಮಂಥವರೇ ಹೆಚ್ಚು ಮಂದಿ, ನನ್ನ ಮದುವೆ ನಿಮ್ಮೊಂದಿಗೇ (ಸ ಕ) ಹವ್ಯಾಸ : ಪಾದಯಾತ್ರೆ, ಬೈಸಿಕಲ್ಲಿನ ಮೇಲೆ ದೂರ ಪ್ರಯಾಣ

ಕೇಂದ್ರೀಯ ವಿದ್ಯಾಲಯ ಮಂಗಳೂರು 574 155



ಭಟ್, ರಘುನಾಥ ಹರೀಶಿ ರಾಮಚಂದ್ರ [ರಘು]
ಜ 21-10-1946

ಶಿವಮೊಗ್ಗ ಜಿಲ್ಲೆ ಹರೀಶಿ ; ರಾಮಚಂದ್ರಶರ್ಮ–ಭವಾನಿಬಾಯಿ ; 1 ಹೆ ಮಗು ; ಪ್ರಾ ಹರೀಶಿ, ಮಾ ಓಣೀಕೇರಿ, ಪ್ರೌ ಮುಂಚೀಕೇರಿ ಮತ್ತು ಶಿರಸಿ, ಬಿ ಎ, ಎಂ ಎ ಪಿ ಎಚ್‌ಡಿ ಮೈಸೂರು, ಶಾಸನ ಶಾಸ್ತ್ರದ ಡಿಪ್ಲೊಮಾ, ವಾಸ್ತುಶಿಲ್ಪ ಚಿತ್ರಕಲೆಯಲ್ಲಿ ವಿಶೇಷ ವ್ಯಾಸಂಗ ; ಮೈ ವಿ ಇತಿಹಾಸ ವಿಭಾಗದಲ್ಲಿ ಅಧ್ಯಾಪಕ : ಕರ್ನಾಟಕ ಶಾಸನಕಲೆ ಕೃತಿಗೆ ರಾಜ್ಯಸಾಹಿತ್ಯ ಅಕಾದೆಮಿ ಹಾಗೂ ದೇವರಾಜ ಬಹದ್ದೂರ್ ಬಹುಮಾನ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ, ಆರ್ಕಿಯಲಾಜಿಕಲ್ ಸ್ಟಡೀಸ್ (ಮೈಸೂರು) ಕಾರ್ಯದರ್ಶಿ ; 5 ಕೃತಿಗಳು : ಕರ್ನಾಟಕ ಶಾಸನ ಕಲೆ, ಹೊಯ್ಸಳ ವಾಸ್ತುಶಿಲ್ಪ ಪರಿಚಯ, ಮೈಸೂರು ಜಿಲ್ಲೆ ದರ್ಶನ, ವಿದೇಶಗಳಲ್ಲಿ ಗಣಪತಿ, ಪುರಾತತ್ವ ಪರಿಚಯ ; ಹವ್ಯಾಸ : ಚಿತ್ರಕಲೆ, ಛಾಯಾಗ್ರಹಣ

ಅಧ್ಯಾಪಕ ಇತಿಹಾಸ ವಿಭಾಗ ಮೈಸೂರು 570 006



ಭಟ್, ವಾಸುದೇವ ರಾಘವೇಂದ್ರ
ಜ 16-8-1917

ಮಂಗಳೂರು ; ಆರ್ ಪಿ ಭಟ್–ರಾಜೀವಿ ; 1 ಗಂ 1 ಹೆ ಮಕ್ಕಳು ; ಪ್ರಾ ಮಾ ಪ್ರೌ ಇಂಟರ್ ಮೀಡಿಯೆಟ್ ಮಂಗಳೂರು, ಎಂ ಬಿ ಬಿ ಎಸ್ ಮದರಾಸು ; ಮಂಗಳೂರಿನ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತಿ ; 3 ಕೃತಿಗಳು : ದಯೆದೋರಿದ ದೃಷ್ಟಿ, ಸತ್ತವನ ಸೇಡು, ಕ್ಷಯರೋಗ ಮತ್ತು ಅದರ ನಿವಾರಣೆ

ಹಂಪನಕಟ್ಟೆ ಮಂಗಳೂರು 575 001



ಭಟ್, ಸುಬ್ರಾಯ ವಿಠ್ಠಲ [ಸುವಿಭ]
ಜ 14-10-1918

ಉತ್ತರ ಕನ್ನಡ ಜಿಲ್ಲೆ ಭಟ್ಕಳ : 1 ಗಂ 3 ಹೆ ಮಕ್ಕಳು ; ಬಿ ಎ ಎಂ ಎ ಬನಾರಸ್ ವಿಶ್ವವಿದ್ಯಾಲಯ ; ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಹಿಂದಿ ಪ್ರಾಧ್ಯಾಪಕ ; 3 ಕೃತಿಗಳು : ಪ್ರೇಮಜೀವ (ಜೀ) ರಾಷ್ಟ್ರಭಾಷಾ ಸ್ವಯಂಬೋಧಿನೀ (ಭಾ ವಿ) ಆದರ್ಶ ಕನ್ನಡ ಹಿಂದೀ ಕೋಶ (ಕೋ)

ಗಂಭೀರ ಚಾಳ ಕಿಲ್ಲೆ ಧಾರವಾಡ 580 008

ಭಟ್ಟ, ಅರ್ಚಕ ರಂಗಸ್ವಾಮಿ
ಜ 1900

ಕೃಷ್ಣರಾಜಪೇಟೆ ತಾಲೂಕು ಬಂಡಿಹೊಳೆ ; ನಾರಾಯಣಭಟ್ಟ–ಶೇಷಮ್ಮ ; 2 ಗಂ 7 ಹೆ ಮಕ್ಕಳು ; ಲೋಯರ್ ಸೆಕೆಂಡರಿ, ಸಂಸ್ಕೃತ ಎಂಟ್ರೆನ್ಸ್, ಸಾಹಿತ್ಯ ವಿದ್ವತ್ ; ಅರ್ಚಕವೃತ್ತಿ ; 10 ಕೃತಿಗಳು : ಹುಟ್ಟಿದ ಹಳ್ಳಿ (ಜೀ) ಆಲಯಾರಾಧನ ಪದ್ಧತಿ, ಅಂಕುರಾರ್ಪಣಂ, ರಾಮಾಯಣದ ಕೆಲವು ವಿಚಾರಗಳು, ವಿಗ್ರಹಾರಾಧನೆ, ಹೇಮಗಿರಿ ಮಹಾತ್ಮೆ, ಹಳ್ಳಿಯ ದೇವರುಗಳು

ಬಂಡಿಹೊಳೆ ಕೃಷ್ಣರಾಜಪೇಟೆ ತಾಲೂಕು ಮಂಡ್ಯ ಜಿಲ್ಲೆ



ಭಟ್ಟ, ಎಡನಾಡು ಗೋಪಾಲಕೃಷ್ಣ
ಜ 25-2-1935

ಕಾಸರಗೋಡು ತಾಲೂಕಿನ ಎಡನಾಡು ; ಸುಬ್ಬಣ್ಣ ಭಟ್ಟ–ಅದಿತಿ ಅಮ್ಮ ; 2 ಗಂ ಮಕ್ಕಳು ; ಮದರಾಸು ವಿಶ್ವವಿದ್ಯಾನಿಲಯದ ವಿದ್ವಾನ್, ಹಿಂದಿ ವಿಶಾರದ ; ಶಿಕ್ಷಕ ; 5 ಕೃತಿಗಳು : ಮಕ್ಕಳ ಗೆಳೆಯ (ಬಾ) ಫಲೋದಯ, ಮಾಯಾವಿನಿ, ಸಲೀಮಾ (ನಾ) ಪಂಪ ರಾಮಾಯಣದ ಕಥೆ (ಸಂಗ್ರಹ) ಹವ್ಯಾಸ : ಕೃಷಿ

ಎಡನಾಡು ಅಂಚೆ ಕಾಸರಗೋಡು

ಭಟ್ಟ, ಕಿನ್ನಿಮೂಲ್ಕಿರಾಮ
ಜ 10–4–1924

ಉಡುಪಿ ; ವೆಂಕಟಕೃಷ್ಣಭಟ್ಟ–ಭಾಗೀರಥಿ ; 3 ಗಂ 1 ಹೆ ಮಕ್ಕಳು ; ಸಂಸ್ಕೃತ ಎಂಟ್ರೆನ್ಸ್ ಪರೀಕ್ಷೆ, ಎಸ್ ಎಸ್ ಎಲ್ ಸಿ ; ಮುಲ್ಕಿಯ ಮೆಡಲಿನ್ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತ ; 3 ಕೃತಿಗಳು : ವಾಸವದತ್ತೆ, ಪ್ರತಿಜ್ಞೆ, ಛಲದ ಚಂಡಿ

ಕನ್ನಡ ಪಂಡಿತ ಮೆಡಲಿನ್ ಪ್ರೌಢಶಾಲೆ ಮುಲ್ಕಿ ದ ಕ

ಭಟ್ಟ, ಕೇಂಜೆ ನಾರಾಯಣ
ಜ 5-4-1928

ಉಡುಪಿ ತಾಲೂಕು ಕೇಂಜೆ ; ಕೆ ಮಧ್ವರಾಯಭಟ್ಟ–ಲಕ್ಷ್ಮಮ್ಮ ; 4 ಹೆ ಮಕ್ಕಳು ; ಕನ್ನಡ ವಿದ್ವಾನ್, ಸಂಸ್ಕೃತ ಶಿರೋಮಣಿ ; ಪ್ರೌಢಶಾಲಾ ಶಿಕ್ಷಕ ; 7 ಕೃತಿಗಳು : ಭಾಷಾಪ್ರದೀಪ, ವಿಚಾರವಾಹಿನಿ, ತತ್ಸಮ–ತದ್ಭವ ಮಂಜರಿ, ಜೀವನ ದರ್ಶನ, ಕಬೀರ ವಚನಾಮೃತ, ವಿನೋಬಾ ದೃಷ್ಟಾಂತ ಕಥೆಗಳು

ಜಯಪ್ರಕಾಶ ನಾರಾಯಣ ನಗರ ಬಳ್ಳಾರಿ ರೋಡ್ ಹೊಸಪೇಟೆ



ಭಟ್ಟ, ಕೊಲ್ಲ್ಯಾರು ಗೋಪಾಲಕೃಷ್ಣ
ಜ 6–10–1934

ದಕ್ಷಿಣ ಕನ್ನಡ ಜಿಲ್ಲೆ ಕನ್ಯಾನ ; ಗಣಪತಿ ಭಟ್ಟ–ಹೊನ್ನಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಕನ್ಯಾನ, ಬಿ ಎ ಆಲಿಘಡ ವಿಶ್ವವಿದ್ಯಾಲಯ, ಎಂ ಎ ಕರ್ನಾಟಕ ವಿಶ್ವವಿದ್ಯಾಲಯ, ಬಿ ಎಡ್ ಮೈಸೂರು ವಿಶ್ವವಿದ್ಯಾಲಯ, ರಾಷ್ಟ್ರಭಾಷಾ ವಿಶಾರದ ; ಮಂಗಳೂರಿನ ಹೆಣ್ಣುಮಕ್ಕಳ ಕಿರಿಯ ಕಾಲೇಜಿನಲ್ಲಿ

ಅಧ್ಯಾಪಕ ; 4 ಕೃತಿಗಳು : ಉದಯರವಿ, ಲಕ್ಷ್ಮೀಪ್ರಾಜೆ, ಸುಮಗಳೊಂದಿಗೆ, ಸೀತಾಪಹರಣ ; ಹವ್ಯಾಸ : ತೋಟಗಾರಿಕೆ, ಪ್ರವಾಸ

ಹೆಣ್ಣುಮಕ್ಕಳ ಸರ್ಕಾರಿ ಜ್ಯೂನಿಯರ್ ಕಾಲೇಜು ಬಲ್ಮಠ ಮಂಗಳೂರು 1



ಭಟ್ಟ, ಗಜಾನನ ಸುಬ್ರಾಯ
ಜ 6-5-1943

ಉತ್ತರ ಕನ್ನಡ ಜಿಲ್ಲೆ ಶಿರಸಿ ; ಸುಬ್ರಾಯ ಪರಮೇಶ್ವರ ಭಟ್ಟ–ಸರಸ್ವತಿ ; 1 ಗಂ 1 ಹೆ ಮಕ್ಕಳು; ಪ್ರಾ ಪ್ರೌ ಬಿ ಎ ಶಿರಸಿ, ಎಂ ಎ ಧಾರವಾಡ, ಭಾಷಾಂತರ ಡಿಪ್ಲೊಮಾ, ನಾಟಕ ಡಿಪ್ಲೊಮಾ ಮೈ ವಿ ; ಕನ್ನಡ ವಿಶ್ವಕೋಶದ ಉಪಸಂಪಾದಕ ; ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ; 5 ಕೃತಿಗಳು : ಸಾಹಿತ್ಯ ಸಾಧಕರು, ರಾಜಾರಾಮ ಮೋಹನರಾಯ್, ಸಿ ವಿ ರಾಮನ್, ಚಾಂದ್‌ಬೀಬಿ (ಜೀ) ಯಶವಂತಚಿತ್ತಾಲ ಕೆಲವು ಅಧ್ಯಯನಗಳು (ಸಂ)

ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು 6



ಭಟ್ಟ, ತೊರೆಮನೆ ಮಹಾಬಲೇಶ್ವರ [ಜಲಂಧರ]
ಜ 8-9-1928

ಶಿವಮೊಗ್ಗ ಜಿಲ್ಲೆ ತೊರೆಮನೆ ; ವಿಶ್ವನಾಥಭಟ್ಟ–ವೆಂಕಮ್ಮ ; 3 ಗಂ 4 ಹೆ ಮಕ್ಕಳು : ಎಸ್ ಎಸ್ ಎಲ್ ಸಿ ; ವ್ಯವಸಾಯ ; ಸಾಗರ ಕನ್ನಡ ಸಂಘದ ಅಧ್ಯಕ್ಷ ; 11 ಕೃತಿಗಳು : ಹೂಮಾಲೆ, ಋತುಗಾನ (ಕ) ಅಣ್ಣ ತಂಗಿ, ಇದ್ದದ್ದು ಹೊಲೆಯೂರು (ಕಾ) ಗುಲಾಬಿ (ಸ ಕ) ಮೈಸೂರಿನ ಉಕ್ಕಿನ ಮನುಷ್ಯ (ಅ) ಸಾಹಿತ್ಯ ಶಿಲ್ಪಿಗಳು (ಜೀ) ತೋರಣ (ಸಂ) ಹವ್ಯಾಸ : ನಾಟಕ, ಸಂಗೀತ

'ಗುರುಕೃಪಾ' ಬ್ರಾಹ್ಮಣಬೇದೂರು ಕಲ್ಮನೆ ಅಂಚೆ ಸಾಗರ

ಭಟ್ಟ, ದೊಡ್ಡಮನೆ ಮಹಾಲಿಂಗ [ಶಂಕರ ಎಡನಾಡು]
ಜ 8-12-1932

ಕಾಸರಗೋಡು ತಾಲೂಕು ಎಡನಾಡು ; ಮಹಾಲಿಂಗಭಟ್ಟ–ಶಂಕರಿ ಅಮ್ಮ ; 4 ಗಂ 1 ಹೆ ಮಕ್ಕಳು ; ಪ್ರಾ ಮಾ ಎಡನಾಡು, ಸಂಸ್ಕೃತ ಕನ್ನಡ ವಿದ್ವಾನ್ ಕಾಸರಗೋಡು, ಬಿ ಎಡ್ ಮೈಸೂರು ; ಪುತ್ತೂರಿನ ಪೆರ್ನಾಜೆ ಪ್ರೌಢಶಾಲೆಯಲ್ಲಿ ಕನ್ನಡ ಸಂಸ್ಕೃತ ಶಿಕ್ಷಕ ; 7 ಕೃತಿಗಳು : ನಾಗಾನಂದ ನಾಟಕಂ, ರಾಮರಾಜ್ಯದ ಮಡಿವಾಳ, ಶುಭ ಶಕುನ, ಜೀಮೂತವಾಹನ (ನಾ) ಕಂದರ ಕೈಗನ್ನಡಿ (ಬಾ) ಹವ್ಯಾಸ : ಪ್ರವಾಸ ಮತ್ತು ತೋಟಗಾರಿಕೆ

ಪೆರ್ನಾಜೆ ಎಸ್ ಎಸ್ ಪ್ರೌಢಶಾಲೆ ಪುತ್ತೂರು ತಾಲೂಕು ದ ಕ ಜಿಲ್ಲೆ



ಭಟ್ಟ, ನಾರಾಯಣ ಪರಮೇಶ್ವರ [ನಾರಂಗಿ ಭಟ್ಟ, ರಂಜನ ಭಟ್ಟ]
ಜ 9-3-1932

ಉತ್ತರ ಕನ್ನಡ ಜಿಲ್ಲೆ ಶಿರಾಲಿ ; ತಂದೆ : ಪರಮೇಶ್ವರ ಸುಬ್ರಾಯ ಭಟ್ಟ ; 1 ಗಂ ಮಗು ; ಪ್ರಾ ಶಿರಾಲಿ, ಮಾ ಹೊನ್ನಾವರ, ಬಿ ಎ ಸಾಂಗಲಿ, ಎಂ ಎ ಮುಂಬೈ, ಎಂ ಎ ಅಮೆರಿಕ ; ಅಸಿಸ್ಟೆಂಟ್ ಕಮೀಷನರ್ ; ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಸ್ವಿಟ್ಜರ್‌ಲೆಂಡ್, ಈಜಿಪ್ಟ್‌ಗಳ ಪ್ರವಾಸ ; ನಾಗಪುರ ಕರ್ನಾಟಕ ಸಂಘದ ಉಪಾಧ್ಯಕ್ಷ (1957–58), ಮದರಾಸಿನ ಕನ್ನಡ ಸಾಹಿತ್ಯ ಕೂಟದ ಸಂಸ್ಥಾಪಕ (1964–65), ಇಂದೂರಿನ ಕರ್ನಾಟಕ ಸಂಘದ ಅಧ್ಯಕ್ಷ ; 1 ಕೃತಿ : ದಕ್ಷಿಣ ಧ್ರುವ ಸಕ್ಕಾಗ (ಸ ಕ) ಹವ್ಯಾಸ : ಚದುರಂಗ

ಇನ್‌ಕಮ್‌ಟ್ಯಾಕ್ಸ್ ಅಸಿಸ್ಟೆಂಟ್ ಕಮೀಷನರ್ ನಂ 17 ರೆಸಿಡೆನ್ಸಿ ಏರಿಯಾ ಇಂದೂರು ಮಧ್ಯ ಪ್ರದೇಶ



ಭಟ್ಟ, ಪರಮೇಶ್ವರ ಸುಬ್ರಾಯ
ಜ 3-6-1931 24-6-1981

ಉತ್ತರ ಕನ್ನಡ ಜಿಲ್ಲೆ ಹೊಲನಗದ್ದೆ ; ಸುಬ್ರಾಯ ಭಟ್ಟ–ಸರಸ್ವತಿ ; 1 ಗಂ 2 ಹೆ ಮಕ್ಕಳು ; ಪ್ರಾ ಹೊಲನಗದ್ದೆ, ಮಾ ಶಿರಸಿ, ಬಿ ಎ ಎಂ ಎ (ರಾಜಕೀಯ ಶಾಸ್ತ್ರ ಮತ್ತು ಇತಿಹಾಸ) ; ಪತ್ರಿಕೋದ್ಯೋಗಿ ; ಜರ್ಮನಿ, ಟೋಕಿಯೋ, ಮಲೇಶಿಯಾ ಪ್ರವಾಸ ; ಕರ್ನಾಟಕ ಸಹಕಾರಿ ಪ್ರಕಾಶನ ಮುದ್ರಿ

ರದ ಮ್ಯಾನೇಜಿಂಗ್ ಡೈರೆಕ್ಟರ್, ರಾಜ್ಯಸಾಹಿತ್ಯ ಅಕಾದೆಮಿ ಸದಸ್ಯ ; 15 ಕೃತಿಗಳು : ಪಡುವಣ, ಹಕ್ಕಿನ ಹೋರಾಟ (ಸ ಕ) ಆತ್ಮಾರ್ಪಣೆ, ಜಾರುಬಂಡೆ (ಕಾ) ಜಾನ್ ಕೆನಡಿ (ಅ) ಮಾತನಾಡಿದ ಗಿಳಿ (ಬಾ) ಹವ್ಯಾಸ : ಕೃಷಿ
ನಂ 40 ಕುಮಾರ ಪಾರ್ಕ್ ವೆಸ್ಟ್ ಬೆಂಗಳೂರು 560 020

ಭಟ್ಟ, ಪಳಕಳ ಸೀತಾರಾಮ
ಜ 5-7-1930

ದಕ್ಷಿಣ ಕನ್ನಡ ಜಿಲ್ಲೆ ಪುತ್ತಿಗೆ ; ಈಶ್ವರ ಭಟ್ಟ–ಲಕ್ಷ್ಮೀ ಅಮ್ಮ ; 4 ಗಂ 1 ಹೆ ಮಕ್ಕಳು; ಪ್ರಾ ಪುತ್ತಿಗೆ, ಪ್ರೌ ಮೂಡಬಿದ್ರೆ, ಬಿ ಎ ಎಂ ಎ ಕ ವಿ, ಬಿ ಎಡ್ ಮೈ ವಿ ; ಮೂಡ ಬಿದ್ರೆ ಜೈನ್ ಪ್ರೌಢಶಾಲೆಯಲ್ಲಿ ಶಿಕ್ಷಕ ; 18 ಕೃತಿಗಳು : ಬೇವು-ಬೆಲ್ಲ, ಜೇನುತೊಟ್ಟಿ, ಕೀರ್ತನ ಕುಸುಮ (ಕ) ಕಂದನ ಕೊಳಲು, ಕಟುಂ ಕುಟುಂ ಕಪ್ಪೆಯಣ್ಣ, ಹೂದೋಟದ ಹುಡುಗಿಯರು (ಬಾ) ಹವ್ಯಾಸ : ಕೃಷಿ
ಜೈನ್ ಪ್ರೌಢಶಾಲೆ ಮೂಡಬಿದ್ರೆ ದ ಕ

ಭಟ್ಟ, ಪಾದೂರು ಗುರುರಾಜ
ಜ 14-6-1924

ಉಡುಪಿ ತಾಲೂಕು ಪಾದೂರು ; ಪಿ ಶ್ರೀನಿವಾಸ ತಂತ್ರಿ–ರಾಧಾ ; 5 ಗಂ 4 ಹೆ ಮಕ್ಕಳು ; ಪ್ರಾ ಪಾದೂರು, ಮಾ ಪ್ರೌ ಕಾರ್ಕಳ, ಬಿ ಟಿ ಮಂಗಳೂರು, ಎಂ ಎ ಪಿ ಎಚ್‌ಡಿ ಮೈಸೂರು ; ಪ್ರಿನ್ಸಿಪಾಲ್ ಮಿಲಾಗ್ರೇಸ್ ಕಾಲೇಜು (ಚಿತ್ರಾಪುರ) ; ತುಳು ನಾಡು ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ ; ಕರ್ನಾಟಕ ರಾಜ್ಯದ ಪುರಾತತ್ವ ವಿಭಾಗದ ಸಲಹಾ ಮಂಡಳಿ ಸದಸ್ಯ, ಉಡುಪಿ ಎಂ ಜಿ ಎಂ ಕಾಲೇಜಿನ ಗೋವಿಂದ ಪೈ ಸಂಶೋಧನಾ ಕೇಂದ್ರದ ಆಡಳಿತ ಮಂಡಳಿ ಸದಸ್ಯ ; 8 ಕೃತಿಗಳು : ತುಳುನಾಡು, ಅಂಬಲ ಪಾಡಿಯ ಇತಿಹಾಸ, ಮಂದರ್ತಿಯ ಸಮೀಕ್ಷೆ, ದಕ್ಷಿಣ ಕನ್ನಡದ ತುಳುವರೂ ತುಳುವ ಸಂಸ್ಕೃತಿಯೂ ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ಸಂಶೋಧನೆ

ಭಟ್ಟ, ಬೊಮ್ಮಲಾಪುರ ವೆಂಕಟರಾಮು [ಭಾರ್ಗವ]
ಜ 1-1-1915

ಕೊಪ್ಪ ತಾಲೂಕು ಬೊಮ್ಮಲಾಪುರ ; 6 ಮಕ್ಕಳು ; ಸಂಸ್ಕೃತ ವಿದ್ವತ್, ಕನ್ನಡ ಪಂಡಿತ, ಹಿಂದಿ ರತ್ನ ; ಉಪಾಧ್ಯಾಯ ; 50 ಕೃತಿಗಳು : ನಮ್ಮ ಗೋಖಲೆ, ಅಕ್ಕ ಮಹಾದೇವಿ, ಸಂಸ್ಕೃತ ಕನ್ನಡ ವ್ಯಾಕರಣ, ಮಾರ್ಕಂಡೇಯ ಪುರಾಣ ಕಥಾ ಸಂಗ್ರಹ, ದಿಲೀಪ ಮತ್ತು ರಾಮ ; ಸಂಸ್ಕೃತದಲ್ಲೂ ಕೃತಿ ರಚಿಸಿದ್ದಾರೆ
ಸಿದ್ಧಗಂಗೆ ಕ್ಯಾತ್ಸಂದ್ರ ಅಂಚೆ ತುಮಕೂರು ಜಿಲ್ಲೆ 572 131

ಭಟ್ಟ, ಮಧುರಕಾನನ ಗೋಪಾಲಕೃಷ್ಣ [ಭಾವಾನಂದ]
ಜ 12-12-1941

ಕಾಸರಗೋಡು ತಾಲೂಕು ಬೇಳ ; ನಾರಾಯಣ ಭಟ್ಟ-ಪಾರ್ವತಿ ; ಕನ್ನಡ ವಿದ್ವಾನ್; ಅಗಲ್ಪಾಡಿ ಅನ್ನಪೂರ್ಣೇಶ್ವರಿ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತ; ಪೆರಡಾಲದ ಕನ್ನಡ ಕುಟೀರದ ಸ್ಥಾಪಕ ಅಧ್ಯಕ್ಷ; 7 ಕೃತಿಗಳು : ಮಹಾಭಿನಿಷ್ಕ್ರಮಣ, ಎಲ್ಲಿ ಪ್ರೇಮವೋ ಅಲ್ಲಿ ದೇವರು, ಸತ್ಕಾರ, ಸಿದ್ಧಾರ್ಥ (ನಾ) ಹವ್ಯಾಸ : ಚಿತ್ರಕಲೆ, ನಟನೆ, ನಿರ್ದೇಶನ

ಬೇಳ ಕಾಸರಗೋಡು ತಾಲೂಕು ಕೇರಳ ರಾಜ್ಯ

ಭಟ್ಟ, ಮುಂಡಕಾನ ವಾಸುದೇವ
[ಮುಂಡಕಾನ, ವಿಜಯಕೃಷ್ಣತಾತ, ವಾಸುದೇವ]
ಜ 1-11-1912



ಕಾಸರಗೋಡು ತಾಲೂಕು ಪುತ್ತಿಗೆ ; ಸುಬ್ರಾಯ ಭಟ್ಟ-ಕಾಶಮ್ಮ ; 2 ಗಂ ಮಕ್ಕಳು ; ಪ್ರಾ ಪುತ್ತಿಗೆ, ಮಾ ಪ್ರಿ ನೀರ್ಚಾಲು, ಬಿ ಎ ಆನರ್ಸ್ ಮೈಸೂರು; ಪ್ರೌಢಶಾಲಾ ಮುಖ್ಯೋಪಾಧ್ಯಾಯ; 6 ಕೃತಿಗಳು: ಸಾಧು ಜೀವನ, ಭೂ ಪ್ರದಕ್ಷಿಣೆ, ಸಿರಿಮುಡಿ, ನನ್ನ ಬಾಳ್ವೆಯ ಹೋರಾಟ, ಸಮುದ್ರದ ಶ್ರಮಜೀವಿಗಳು ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

4-435 ಬಿಜಯಿ ಲಾಲ್‌ಬಾಗ್ ರಸ್ತೆ ಮಂಗಳೂರು 575 004



ಭಟ್ಟ, ಶ್ಯಾಮ ಹಿಳ್ಳೆಮನೆ ಸುಬ್ರಾಯ
[ಶ್ಯಾಮಲಾ]
ಜ 14-4-1935

ಕಾಸರಗೋಡು ತಾಲೂಕು ಕುಂಬಳೆ; ಹಿಳ್ಳೆಮನೆ ಸುಬ್ರಾಯಭಟ್ಟ-ಸಾಂತಮ್ಮ : 2 ಗಂ 1 ಹೆ ಮಕ್ಕಳು ; ಪ್ರಾ ನಾರಾಯಣ, ಮಾ ಪುತ್ತೂರು, ಬಿ ಎ ಕ ವಿ, ಬಿ ಎಡ್ ಮಂಗಳೂರು ಹಿಂದಿ ಪ್ರವೀಣ್ ; ಹಿಂದಿ ಉಪನ್ಯಾಸಕ ; 3 ಕೃತಿಗಳು : ಬಾಳಬೇಕು (ಕ) ಗುರುಬ್ರಹ್ಮ (ಕಾ) ಹೀಗಾದರೆ ಹೇಗೆ (ನಾ)

ಶಂಕರನಾರಾಯಣ ಅಂಚೆ ಕುಂದಾಪುರ ತಾಲೂಕು ದ ಕ ಜಿಲ್ಲೆ

ಭಟ್ಟ, ಸರವು ರಾಮ [ಶ್ರೀ ಸೌರಭ ಪುತ್ತೂರು]
ಜ 3-3-1931

ದಕ್ಷಿಣ ಕನ್ನಡ ಜಿಲ್ಲೆ ವಿಟ್ಲ ಪಡ್ನೂರು; ಶಂಕರಭಟ್ಟ-ಪಾರ್ವತಿ; 3 ಗಂ 1 ಹೆ ಮಕ್ಕಳು; ಪ್ರಾ ವಿಟ್ಲ ಪಡ್ನೂರು, ಪ್ರೌ ಪುತ್ತೂರು, ಬಿ ಎ ಮಂಗಳೂರು, ಬಿ ಎಲ್ ಮದರಾಸು; ವಕೀಲವೃತ್ತಿ: ಪುತ್ತೂರು ಕರ್ನಾಟಕ ಸಂಘದ ಸದಸ್ಯ; 1 ಕೃತಿ: ರಸಐುಚಿ (ಸಂ)

'ಜಾಹ್ನವಿ' ಸಂಪಾಜೆ ಕೊಡಗು 574 234

ಭಟ್ಟ, ಸಿದ್ಧಮೂಲೆ ಶಂಕರನಾರಾಯಣ
ಜ 3-4-1931



ದಕ್ಷಿಣ ಕನ್ನಡ ಜಿಲ್ಲೆ ಕಲ್ಮಡ್ಕ; ರಾಮಕೃಷ್ಣಭಟ್ಟ-ಲಕ್ಷ್ಮಿ; 1 ಗಂ 2 ಹೆ ಮಕ್ಕಳು; ಪ್ರಾ ನೆಟ್ಟಾರು ಬೆಳ್ಳಾರೆ ಉಜಿರೆ, ಪ್ರೌ ಮದರಾಸು, ಇಂಟರ್ ಮೀಡಿಯೆಟ್ ಗ್ವಾಲಿಯರ್, ಬಿ ಎ ಎಂ ಎ ಕ ವಿ, ಬಿ ಎಡ್ ಮೈ ವಿ; ಅಧ್ಯಾಪಕ; ನೇಪಾಳ ಪ್ರವಾಸ; ಬಾಳಿಲೆ ಕರ್ನಾಟಕ ಸಾಹಿತ್ಯ ಸಂಸ್ಕೃತಿ ಸೇವಾ ಸಂಘದ ಸದಸ್ಯ; 5 ಕೃತಿಗಳು: ಹೂದೋಟ, ಗಂಗಾಸಲಿಲ (ಕ) ಸರ್ವೋದಯ ವ್ಯಾಕರಣ (ಭಾ ವಿ) ಹಿಂದಿ ಭಾಷಾ ಸಹಾಯಕ ಕೋಶ (ಕೋ) ಹವ್ಯಾಸ: ಅಂಚೆ ಚೀಟಿ ಸಂಗ್ರಹ

ಬಾಳಿಲೆ ಅಂಚೆ ವಿರಾಜಪೇಟೆ ತಾಲೂಕು ಕೊಡಗು ಜಿಲ್ಲೆ

ಭಟ್ಟ, ಹಳನಾಡು ಸುಬ್ರಾಯ
ಜ 6-8-1934

ದ ಕ ಜಿಲ್ಲೆಯ ಹಳನಾಡು; ಕುಪ್ಪಯ್ಯ ಭಟ್ಟ-ಗಂಗಮ್ಮ; 2 ಗಂ 1 ಹೆ ಮಕ್ಕಳು; ಎಸ್ ಎಸ್ ಎಲ್ ಸಿ; ಉಪಾಧ್ಯಾಯ; 2 ಕೃತಿ: ಬೆಳಕು ಹರಿಯಿತು, ಎದೆಯ ದನಿ (ಕಾ)

ಹಳನಾಡು ಅಂಚೆ ಕುಂದಾಪುರ ತಾಲೂಕು ದ ಕ ಜಿಲ್ಲೆ 576 211

ಭಟ್ಟ, ಹಾಸಣಗಿ ರಾಮಚಂದ್ರ [ರಾ ಭ ಹಾಸಣಗಿ]
ಜ 5-11-1920

ಕಾರವಾರ ಜಿಲ್ಲೆಯ ಹಾಸಣಗಿ; ಕೃಷ್ಣಭಟ್ಟ-ಶೇಷಮ್ಮ; 1 ಗಂ 5 ಹೆ ಮಕ್ಕಳು; ಪ್ರಾ ಹಾಸಣಗಿ, ಕನ್ನಡ ಪಂಡಿತ್ ಪರೀಕ್ಷೆ, ಸಂಸ್ಕೃತ ವಿದ್ವತ್; ಅಧ್ಯಾಪಕ; ಯಕ್ಷ

ನಾಟಕಗಳು ಕೃತಿಗೆ ವಿದ್ಯಾವರ್ಧಕ ಸಂಘದ ಬಹುಮಾನ ; 4 ಕೃತಿಗಳು : ಯಕ್ಷನಾಟಕಗಳು, ವೈದಿಕ ವಾಙ್ಮಯ ಪರಿಚಯ, ವಾಲ್ಮೀಕಿಯ ರಾಮ ವ್ಯಾಸನ ಕೃಷ್ಣ, ಕನ್ನಡ–ಸಂಸ್ಕೃತ ಲಘು ಕ್ರಿಯಾಕೋಶ

ಸಂಸ್ಕೃತ ಪಂಡಿತ ಸರ್ಕಾರಿ ಜ್ಯೂನಿಯರ್ ಕಾಲೇಜು ಶಿರಾಳಕೊಪ್ಪ ಶಿವಮೊಗ್ಗ ಜಿಲ್ಲೆ



ಭಟ್ಟ, ಹೆರ್ಗ ಗೋಪಾಲ [ಕು ಗೋ]

ಜ 6-6-1938

ಉಡುಪಿ ತಾಲೂಕು ಹೆರ್ಗ; ಹೆರ್ಗ ಅನಂತ ಪದ್ಮನಾಭ ಭಟ್ಟ–ವಾಗ್ದೇವಿ; 2 ಗಂ 1 ಹೆ ಮಕ್ಕಳು ; ಪ್ರಾ ಹೆರ್ಗ ಮತ್ತು ಮಣಿಪಾಲ, ಮಾ ಪಿರಿಯಾಪಟ್ಟಣ, ಪ್ರೌ ಹುಣಸೂರು ; ಜೀವ ವಿಮಾ ಸಂಸ್ಥೆಯಲ್ಲಿ ಕಾರಕೂನ ; 1 ಕೃತಿ : ಅಕ್ಕನ ಮದುವೆ

'ಕುಂಜ ಕುಟೀರ' ಹಯಗ್ರೀವನಗರ ಉಡುಪಿ 2

ಭದ್ರಗಿರಿ, ಕೇಶವದಾಸ್ [ದಾಸಕೇಶವನುತ]

ಜ 22-7-1934

ಉಡುಪಿ ತಾಲೂಕು ಭದ್ರಗಿರಿ ; ಭದ್ರಗಿರಿ ವೆಂಕಟರಮಣಪ್ಪೈ–ರುಕ್ಮಿಣಿಬಾಯಿ ; 2 ಗಂ 1 ಹೆ ಮಕ್ಕಳು ; ಬಿ ಎ ಎಲ್ ಎಲ್ ಬಿ ಮದರಾಸು ಮತ್ತು ಕರ್ನಾಟಕ ವಿಶ್ವವಿದ್ಯಾಲಯ ; ಯೂರೋಪ್, ಅಮೆರಿಕ, ಆಫ್ರಿಕಾ ಪ್ರವಾಸ ; ಬೆಂಗಳೂರು ದಾಸಾಶ್ರಮದ ಅಧ್ಯಕ್ಷರು ; 50 ಕೃತಿಗಳು : ಪುರಂದರೋಪನಿಷತ್ತು, ಅಜ್ಞಾನ ಪತ್ರ, ದಾಸಭಾರತ, ವೇಣುನಾದ, ಭಕ್ತಕನಕದಾಸರು ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ಹರಿಕಥೆ, ಸಂಗೀತ

ದಾಸಾಶ್ರಮ 174 ಪುರಂದರಪುರ 5ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು 560 010


ಭದ್ರಯ್ಯ, ತಿಮ್ಮಸಂದ್ರ

ಜ 5-1-1951



ಬೆಂಗಳೂರು ಜಿಲ್ಲೆ ತಿಮ್ಮಸಂದ್ರ ; ಚಿನ್ನಯ್ಯ–ಪುಟ್ಟನಿಂಗಮ್ಮ ; 2 ಹೆ ಮಕ್ಕಳು ; ಪ್ರಾ ತಿಮ್ಮಸಂದ್ರ, ಮಾ ಪ್ರೌ ಚನ್ನಪಟ್ಟಣ, ಬಿ ಎ ಎಂ ಎ ಮೈಸೂರು ; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗ ; 1 ಕೃತಿ : ಕಳ್ಳರಳಿ ಹೂವಾಗಿ (ಕಾ)


ನಂ 1 1ನೇ ಅಡ್ಡರಸ್ತೆ ವಿನಾಯಕನಗರ ಮೈಸೂರು



ಭದ್ರಯ್ಯ, ನಡ್ಲೇಗೌಡ [ನಭ]
ಜ 9-9-1912

ಮಂಡ್ಯ ಜಿಲ್ಲೆ ನೀಲನಹಳ್ಳಿ; ನಡ್ಲೇಗೌಡ–ತಾಯಮ್ಮ; 1 ಹೆ ಮಗು; ಪ್ರಾ ಮಾ ಲಕ್ಷ್ಮೀಸಾಗರ, ಪ್ರೌ ಇಂಟರ್ ಮೀಡಿಯೆಟ್ ಮೈಸೂರು; ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷ (1955-62). ಇಂಡೋನೇಷ್ಯಾ (1962–65) ಅಮೆರಿಕ (1965–67), ಇರಾನ್ (1967–71), ಕೆನ್ಯಾ (1971–76) ಗಳಲ್ಲಿ ವಯಸ್ಕರ ಶಿಕ್ಷಣ ತಜ್ಞರಾಗಿ ಸೇವೆ; ಮಧ್ಯ ಪ್ರಾಚ್ಯ ರಾಷ್ಟ್ರಗಳ ಪ್ರವಾಸ; ಅಕಾಶದ ಅಶ್ಚರ್ಯ ಖಗೋಳ ವಿಜ್ಞಾನದ ಕೃತಿಗೆ ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ; ಗ್ರಾಮಸೇವಾ ಮಾಸಿಕದ ಸಂಪಾದಕ (1935–39), ಕುವೆಂಪು ವಿದ್ಯಾವರ್ಧಕ ಟ್ರಸ್ಟ್ (ಮೈಸೂರು) ಕಾರ್ಯಕಾರಿ ಸಮಿತಿ ಸದಸ್ಯ; 11 ಕೃತಿಗಳು: ಗಾಂಧೀಜಿ, ಅಶೋಕ ಚಕ್ರವರ್ತಿ (ಜೀ) ನಿಮ್ಮ ದೇಹ, ಜೀವಸಂತಾನ ಸಾಗಿದ ಬಗೆ (ವೈ) ನಡೆದು ನೋಡು ಕೊಡಗಿನ ಬೆಡಗು (ಪ್ರವಾ) ಆಕಾಶದ ಆಶ್ಚರ್ಯ (ಖ) ಗಾಂಧೀಜಿ ಪ್ರಮಾಣ ವಚನಗಳು, ಕುಮಾರವ್ಯಾಸನ ಕರ್ಣ, ಅರ್ಪಣೆ (ಸಂ) ಹವ್ಯಾಸ: ತೋಟಗಾರಿಕೆ

'ಶ್ರೀ' ನಂ 36 1ನೇ ಕ್ರಾಸ್ ಜಯಲಕ್ಷ್ಮಿಪುರಂ ಮೈಸೂರು 570 012



ಭೈರಮಲಿಂಗಪ್ಪ, ರಾಮಸಾಗರ [ವಿಶ್ವಕರ್ಮ]
ಜ 1-7-1935


ಬಳ್ಳಾರಿ ಜಿಲ್ಲೆ ರಾಮಸಾಗರ; ಕಮ್ಮಾರಗಿಡ್ಡಪ್ಪ–ಕಾಳಮ್ಮ; 2 ಗಂ 1 ಹೆ ಮಕ್ಕಳು; ಪ್ರಾ ರಾಮಸಾಗರ ಯಶವಂತನಗರ ಸಂಡೂರು, ಪ್ರೌ ಕಂಪ್ಲಿ, ಎಂ ಎ ಮೈಸೂರು; ಮರಿಯಮ್ಮನಹಳ್ಳಿ ತುಂಗಾ ತರಂಗ ಸಾಹಿತ್ಯ ಸಂಘದ ಅಧ್ಯಕ್ಷ, ರಾಮಸಾಗರದ ಶ್ರೀಗುರುದತ್ತನಾಟ್ಯಸಂಘ ಹಾಗೂ ಗಂಗೋತ್ರಿ ಪ್ರಕಾಶನದ ಸಂಸ್ಥಾಪಕ; 9 ಕೃತಿಗಳು: ಜೀವನ ರಹಸ್ಯ, ಇದೆಂಥ ಸಮಾಜ (ನಾ) ಪ್ರಸಾದ ವಾಣಿ (ಕ) ತುಂಗಾತರಂಗ (ಸಂ) ಹವ್ಯಾಸ: ಬೇಟೆ, ಚಿತ್ರಕಲೆ, ಅಭಿನಯ, ನಿರ್ದೇಶನ

ರಾಮಸಾಗರ ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆ 583 147

ಭಾಂಡಗೆ, ಫಕೀರಸಾ ಶಿವಣಸಾ
ಜ 7-11-1931

ಗದಗ ; 3 ಹೆ ಮಕ್ಕಳು ; ಕನ್ನಡ ನಾಲ್ಕನೆ ತರಗತಿಯುವರೆಗೆ ಅಭ್ಯಾಸ ; ಮುದ್ರಣಾಲಯದಲ್ಲಿ ಅಕ್ಷರ ಜೋಡಕ ; ಜೀವಂತ ಜನ ನಾಟಕಕ್ಕೆ ರಾಷ್ಟ್ರ ಪ್ರಶಸ್ತಿ ; 4 ಕೃತಿಗಳು : ಹೊಸ ಕಾನೂನು, ದೇವದರ್ಶನ, ಜೀವಂತ ಜನ, ಎದೆವಂತಿ (ನಾ)

ಗಂಗಾಪೂರ ಪೇಟ ಗಡಗ



ಭಾನುಮತಿ, ಯುಮುಸಂಧಿ ಚನ್ನೇಗೌಡ
ಜ 14-1-1953

ಹಾಸನ ಜಿಲ್ಲೆ ಯಮುಸಂಧಿ ; ವೈ ಬಿ ಚನ್ನೇಗೌಡ–ಎಚ್ ಎಸ್ ಜಯಮ್ಮ ; 1 ಗಂ ಮಗು ; ಪ್ರಾ ಪ್ರೌ ಬೇಲೂರು, ಬಿ ಎಸ್ ಸಿ ಮೈಸೂರು, ಎಂ ಎ ಮಂಗಳೂರು ; ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕಿ ; ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ ಕೃತಿಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ರತ್ನಮ್ಮ ಹೆಗ್ಗಡೆ ಬಹುಮಾನ ; 5 ಕೃತಿಗಳು : ಕುಮಾರ ಚೆನ್ನಬಸವ ವಿರಚಿತ ಪುರಾತನರ ಚರಿತೆ, ಚಿಕ್ಕಪದ್ಮಣ್ಣ ವಿರಚಿತ ಅನಂತನಾಥ ಚರಿತೆ, ಮಲ್ಲರಸ ವಿರಚಿತ ದಶಾವತಾರ ಚರಿತೆ (ಸಂ)

ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006

ಭಾರತೀರಮಣಾಚಾರ್ಯ, ಮಂಡಗದ್ದೆ ಕಟ್ಟೆ
ಜ 2-7-1921

ಶಿವಮೊಗ್ಗ ಜಿಲ್ಲೆ ಮಂಡಗದ್ದೆ ; 3 ಗಂ 1 ಹೆ ಮಕ್ಕಳು ; ಪ್ರಾ ಮಂಡಗದ್ದೆ, ಮಾ ಪ್ರೌ ಶಿವಮೊಗ್ಗ, ಬಿ ಎ ಮೈಸೂರು, ಎಂ ಎ ಕಾಶಿ; ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹಿಂದಿ ಪ್ರಾಧ್ಯಾಪಕ ; 19 ಕೃತಿಗಳು : ವಿಪ್ರದಾಸ, ಚರಿತ್ರಹೀನ, ಇದು ನಾಗರೀಕತೆ, ಪ್ರೇಮಚಂದ್, ಪದ್ಮಾಲೋಕ

266/8 ಮೂರನೇ ರಸ್ತೆ ಹನುಮಂತನಗರ ಬೆಂಗಳೂರು 560 019

ಭಾವಿಕಟ್ಟಿ, ಶಿವಲಿಂಗಪ್ಪ ಅಪ್ಪಣ್ಣ
ಜ 29-9-1941



ಬೆಳಗಾವಿ ಜಿಲ್ಲೆ ಅಕ್ಕತಂಗೇರಹಾಳ ; ಅಪ್ಪಣ್ಣ ಶಿವಲಿಂಗಪ್ಪ ಭಾವಿಕಟ್ಟಿ–ಪಾರ್ವತೆವ್ವ ಭಾವೀಕಟ್ಟಿ ; 3 ಗಂ ಮಕ್ಕಳು ; ಪ್ರಾ ಅಕ್ಕತಂಗೇರಹಾಳ, ಮಾಪ್ರೌ ಬಿ ಎ ಬೆಳಗಾವಿ, ಎಂ ಎ ಧಾರವಾಡ ; ಅಂಕಲಗಿಯ ಅಡವೀ ಸಿದ್ಧೇಶ್ವರ ಪ್ರೌಢಶಾಲೆಯಲ್ಲಿ ಶಿಕ್ಷಕ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 3 ಕೃತಿಗಳು : ಪ್ರೇಮಾಕ್ಷಿ (ಕ) ಜಾನಪದದಲ್ಲಿ ಅಂಕಲಗಿಯ ಅಡವೀಶ (ಜಾ)

ಅಕ್ಕ ತಂಗೇರಹಾಳ ಗೋಕಾಕ ತಾಲೂಕು ಬೆಳಗಾವಿ ಜಿಲ್ಲೆ



ಭಾಸ್ಕರ ಆಚಾರ್ಯ. ನೆರಂಬಳ್ಳಿ [ಆರ್ಚಿ]
ಜ 1–2–1953

ದ ಕ ಜಿಲ್ಲೆಯ ಕೋಟೇಶ್ವರ ; ರಾಮಚಂದ್ರ ಆಚಾರ್ಯ–ಮೀನಾಕ್ಷಿ ; ಪ್ರಾ ಪ್ರೌ ಕೋಟೇಶ್ವರ, ಎಂ ಬಿ ಬಿ ಎಸ್ ಮೈಸೂರು ; ವೈದ್ಯವೃತ್ತಿ ; 2 ಕೃತಿಗಳು : ದ್ವಂದ್ವ, ಜಿರಳೆಗಳು (ಕಾ) ಹವ್ಯಾಸ : ಚದುರಂಗ, ಹಾಕಿ, ಸಂಗೀತ

ಕೋಟೇಶ್ವರ ದ ಕ ಜಿಲ್ಲೆ

ಭಿಡೆ, ದತ್ತಾತ್ರಯ ಸುಬ್ರಾವ [ತ್ರ್ಯಮೂರ್ತಿ]
ಜ 23–1–1913



ಉತ್ತರ ಕನ್ನಡ ಜಿಲ್ಲೆ ಶಿರಸಿ ; 2 ಗಂ 5 ಹೆ ಮಕ್ಕಳು ; ಲೋಕೋಪಯೋಗಿ ಇಲಾಖೆಯಲ್ಲಿ ಜ್ಯೂನಿಯರ್ ಎಂಜಿನಿಯರ್ ಅಗಿ ನಿವೃತ್ತಿ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 2 ಕೃತಿಗಳು: ಕಾವ್ಯ ಕುಸುಮ, ಅಂತರ್ಮುಖಿ (ಕ)

ನಂ 11–12 ಖಡೇ ಬಜಾರ ಶಹಾಪೂರ ಬೆಳಗಾವಿ



ಭೀಮನಗೌಡರ, ಹನಮಂತಗೌಡ ಸಿದ್ಧನಗೌಡ
ಜ 17-4-1948

ಬಿಜಾಪುರ ಜಿಲ್ಲೆ ಖ್ಯಾಡ ; ಸಿದ್ಧನಗೌಡ-ರಂಗವ್ವ ; ಪ್ರಾ ಖ್ಯಾಡ ಹಾಗೂ ಚೋಳಚಗುಡ್ಡ, ಪ್ರೌ ಹೊಳೆ ಆಲೂರ, ಬಿ ಎ ಎಂ ಎ ಧಾರವಾಡ ; ಸಂಕೇಶ್ವರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕ ; 3 ಕೃತಿಗಳು : ತುಡುಗಿ, ಹುಡುಗಾಟದ ಹಾಡು (ಕ) ಮರೆಯದ ಮುಜಲು (ಸಂ) ಹವ್ಯಾಸ : ನಾಟಕಾಭಿನಯ

ಬಿ 9 ಕುರಣಕರ ಚಾಳ ಸಂಕೇಶ್ವರ ಬೆಳಗಾವಿ ಜಿಲ್ಲೆ

ಭೀಮಪ್ಪ ಶಿರಿಯಾಳಕೊಪ್ಪ [ರೇಣುಕಾತನಯ]
ಜ 25-12-1925



ಶಿವಮೊಗ್ಗ ಜಿಲ್ಲೆ ಶಿರಿಯಾಳಕೊಪ್ಪ ; ಎಸ್ ಹನುಮಂತಪ್ಪ-ಲಕ್ಷ್ಮಮ್ಮ ; 4 ಗಂ 2 ಹೆ ಮಕ್ಕಳು ; ಎಸ್ ಎಸ್ ಎಲ್ ಸಿ, ಕನ್ನಡ ರತ್ನ ; ಪ್ರಾಥಮಿಕ ಶಾಲಾ ಶಿಕ್ಷಕ ; ಸಾಹಿತ್ಯ ಪರಿಷತ್ತಿನ ಸದಸ್ಯ ; 4 ಕೃತಿಗಳು : ಬಳ್ಳಿಗಾವೆ ದರ್ಶನ, ಪುಣ್ಯಕ್ಷೇತ್ರ ಬಂದಳಿಕೆ, ಮಹಾತ್ಮಗಾಂಧಿ ಲಾವಣಿ, ಕರ್ನಾಟಕ ಏಕೀಕರಣ ಲಾವಣಿ

ಶಿರಾಳಕೊಪ್ಪ ಶಿವಮೊಗ್ಗ ಜಿಲ್ಲೆ



ಭೀಮಭಟ್ಟ, ಸಾಣೂರು ವೆಂಕಟರಮಣಭಟ್ಟ
ಜ 17-2-1924

ದಕ್ಷಿಣ ಕನ್ನಡ ಜಿಲ್ಲೆ ಸಾಣೂರು ; ವೆಂಕಟರಮಣ ಭಟ್ಟ-ಸರಸ್ವತಿ ಅಮ್ಮ ; 1 ಗಂ 2 ಹೆ ಮಕ್ಕಳು ; ಸಂಸ್ಕೃತ ಪ್ರವೇಶ, ಸಂಸ್ಕೃತ ಪ್ರಸಿದ್ಧ ಪ್ರಾಚೀನ ನ್ಯಾಯ, ನವೀನನ್ಯಾಯ, ವೇದಾಂತ ಅಲಂಕಾರ ಶಾಸ್ತ್ರ, ಹಿಂದಿ ರಾಷ್ಟ್ರಭಾಷಾ : ಬೆಂಗಳೂರು ಸಂಸ್ಕೃತ ಕಾಲೇಜಿನಲ್ಲಿ ತರ್ಕಶಾಸ್ತ್ರ ಪ್ರಾಧ್ಯಾಪಕ ;

ವಿದ್ಯಾವಿಭೂಷಣ, ವೇದಸಿಂಧು ಬಿರುದುಗಳು ; 6 ಕೃತಿಗಳು : ತೀರ್ಥಪ್ರಬಂಧ, ದತ್ತ ಕುಮಾರಚರಿತಂ, ಮುಕುಂದಮಾಲಾ, ಕಾಠಕೋಪನಿಷತ್ಸಾರ, ಸಂಸ್ಕೃತ ರೂಪ ಚಂದ್ರಿಕಾ ; ಹವ್ಯಾಸ: ಯೋಗಾಸನ

ಸಂಸ್ಕೃತ ಕಾಲೇಜು ಬೆಂಗಳೂರು



ಭೀಮರಾವ್, ಬೆಳಗಾಂಕರ್
ಜ 28-5-1903

ಚಿತ್ರದುರ್ಗ ; ಹನುಮಂತರಾವ್ ಬೆಳಗಾಂಕರ್–ನಾಗೂಬಾಯಿ ; 4 ಗಂ 6 ಹೆ ಮಕ್ಕಳು ; ವಕೀಲ ವೃತ್ತಿ ; ಮಾಧ್ವಭೂಷಣ, ಕರ್ಮಯೋಗಿ ಪ್ರಶಸ್ತಿಗಳು ; 22 ಕೃತಿಗಳು : ಆಗಮಸಾರ, ಮೋಕ್ಷಮಾರ್ಗ, ಮುಕ್ತಿ, ಉಪನ್ಯಾಸಭಾರತೀ, ಶ್ರೀಮದ್‌ಭಾಗವತ ಸಾರೋದ್ಧಾರ, ಸತ್ತತ್ವರತ್ನಮಾಲಾ ; ಹವ್ಯಾಸ : ಪ್ರವಾಸ, ಪರ್ವತಾರೋಹಣ, ಏಕಾಂತವಾಸ

ಶಿವಾಜಿರಸ್ತೆ ದಾವಣಗೆರೆ 2



ಭೀಮಸೇನರಾವ್, ರಾಯಸದ [ಬೀಚಿ]
ಜ 23-4-1913-1980


ಬಳ್ಳಾರಿಜಿಲ್ಲೆ ಹರಪನಹಳ್ಳಿ ; ರಾಯಸದ ಶ್ರೀನಿವಾಸರಾವ್–ಭಾರತಮ್ಮ ; ಒಬ್ಬ ಮಗ ; ಎಸ್ ಎಸ್ ಎಲ್ ಸಿ ಹರಪನಹಳ್ಳಿ ; ರಷ್ಯಾ ಪ್ರವಾಸ ; ತಿಂಮನ ತಲೆ ಕೃತಿಗೆ ಮದರಾಸ್ ಸರ್ಕಾರ ಮತ್ತು ಚಿನ್ನದ ಕಸ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನಗಳು ; ಬೆಂಗಳೂರಿನ ಸ್ವತಂತ್ರ ವೈಚಾರಿಕರ ಸಂಘದ ಸ್ಥಾಪಕ ಅಧ್ಯಕ್ಷ ; 63 ಕೃತಿಗಳು : ಮಾತ್ರೆಗಳು, ಸಾಹುಕಾರ ಸುಬ್ಬಮ್ಮ, ಸಂಪನ್ನರಿದ್ದಾರೆ ಎಚ್ಚರಿಕೆ (ಸ ಕ) ಅಂದನಾ ತಿಂಮ (ಕ) ದಾಸಕೂಟ, ಸತೀಸೂಳೆ, ಕಲ್ಲು ಹೇಳಿತು, ದೇವನ ಹೆಂಡ (ಕಾ) ಹನ್ನೊಂದನೆ ಅವತಾರ, ರೇಡಿಯೋ ನಾಟಕಗಳು, ಸೀತೂ ಮದುವೆ (ನಾ) ಗರತಿಯ ಗುಟ್ಟು, ಅಮ್ಮಾವ್ರ ಕಾಲ್ಗುಣ, ಸುನಂದೂಗೆ ಏನಂತೆ (ಪ್ರ)

'ತಿಂಮನಮನೆ' ಸಂಜಪ್ಪರಸ್ತೆ ಬೆಂಗಳೂರು 570 027



ಭುಜಬಲಿಶಾಸ್ತ್ರಿ, ಕಾಶಿಪಟ್ಟಣ
ಜ 11-2-1897

ದಕ್ಷಿಣ ಕನ್ನಡ ಜಿಲ್ಲೆ ಕಾಶಿಪಟ್ಟಣ; ಆದಪ್ಪ ಕಂಬಳಿ–ಜ್ವಾಲಿನಿ ಅಮ್ಮ; 2 ಗಂ 2 ಹೆ ಮಕ್ಕಳು; ಪ್ರಾ ಕಾಶಿಪಟ್ಟಣ, ಪ್ರೌ ಮೈಸೂರು ಮತ್ತು ಗ್ವಾಲಿಯರ್, ನ್ಯಾಯಾಚಾರ್ಯ ನ್ಯಾಯಭೂಷಣ; ಸಿದ್ಧಾಂತಾಚಾರ್ಯ, ವಿದ್ಯಾಭೂಷಣ ಬಿರುದುಗಳು; 40 ಕೃತಿಗಳು: ಜೈನಧರ್ಮ, ಬಾಹುಬಲಿ, ಮೂರ್ತಿ ಪೂಜೆಯ ಆವಶ್ಯಕತೆ, ಆದರ್ಶ ಸಾಹಿತಿಗಳು, ಮುಹೂರ್ತದರ್ಪಣ, ಭಗವಾನ್ ಋಷಭದೇವ; ಹಿಂದಿ ಮತ್ತು ಸಂಸ್ಕೃತದಲ್ಲೂ ಕೃತಿ ರಚಿಸಿದ್ದಾರೆ
ಮೂಡಬಿದ್ರೆ ದ ಕ ಜಿಲ್ಲೆ



ಭುವನೇಶ್ವರಿ, ಸಿದ್ಧರಾಮಪ್ಪ ಬಾಗಲಕೋಟೆ
[ಭುವನೇಶ್ವರಿ]
ಜ 2–3–1933

ಬಿಜಾಪುರಜಿಲ್ಲೆ ಜಡಜಣ; ಸಿಂಪಿ ಲಿಂಗಣ್ಣ–ಸುಲಭವ್ವ; ಪ್ರಾಥಮಿಕ ಶಿಕ್ಷಣ; ಜಡಜಣದ ಅರವಿಂದ ಗ್ರಂಥಾಲಯದ ಸದಸ್ಯೆ; 3 ಕೃತಿಗಳು: ತಾಯಿ ಕಾಣದ ಜೀವ, ಕರುಳಿನಕರೆ (ಸ ಕ) ಅತ್ತಿಗೆ ಮೈದುನ (ಕಾ)
111 ಗುರುವಾರಪೇಟೆ ಸೊಲ್ಲಾಪುರ



ಭೂಸನೂರಮಠ, ರಾಜಶೇಖರ
ಜ 16-1-1938

ಹುಬ್ಬಳ್ಳಿ; 2 ಗಂ 2 ಹೆ ಮಕ್ಕಳು; ಪ್ರಾ ಹುಬ್ಬಳ್ಳಿ, ಪ್ರೌ ಬೆಳಗಾವಿ, ಬಿ ಎಸ್ ಸಿ ಮುಂಬೈ, ಎಂ ಎಸ್ ಸಿ ಬನಾರಸ್; ಕರ್ನಾಟಕ ವಿಜ್ಞಾನ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕ; ಕರ್ನಾಟಕ ವಿದ್ಯಾವರ್ಧಕ ಸಂಘದ ಸದಸ್ಯ; 15 ಕೃತಿಗಳು: ಶುಕ್ರಗ್ರಹದ ಸಾಹಸಿ ರಿಯಾನ್, ಸಿಗ್ನೀ ಸಂಗೀತ,

ಮೊಗೆಳ, ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ, ಪ್ರೌಢದೇವರಾಯನ ಕಾವ್ಯದ ಕಥಾಸಂಗ್ರಹ, ಭೌತಶಾಸ್ತ್ರ ಪ್ರವೇಶ, ಇಂಗ್ಲಿಷ್‌ನಲ್ಲೂ ಕೃತಿ ರಚನೆ

ಕೆ ಸಿ ಸ್ಟಾಫ್ ಕ್ವಾರ್ಟರ್ಸ್ ಮಾಳಮಡ್ಡಿ ಧಾರವಾಡ 580 007



ಭೂಸನೂರಮಠ, ರುದ್ರಯ್ಯ ಚನ್ನವೀರಯ್ಯ
[ಕವಿರುದ್ರ]
ಜ 9-12-1925

ಧಾರವಾಡ ಜಿಲ್ಲೆ ಕೌಜಗಿರಿ ; ಚ ಮ ಭೂಸನೂರ ಮಠ-ಚನ್ನಬಸವ ; 2 ಗಂ 2 ಹೆ ಮಕ್ಕಳು ; ಎಂ ಎ (ಇಂಗ್ಲಿಷ್ ಮತ್ತು ಕನ್ನಡ) ಹಿಂದಿ ರಾಷ್ಟ್ರ ಭಾಷಾ ವಿಶಾರದ, ಸಾಹಿತ್ಯರತ್ನ ; ಪಣಜಿ ಆಕಾಶ ವಾಣಿ ಕೇಂದ್ರದ ನಿರ್ದೇಶಕ ; ಜೇಂಗೊಡ ಕವನ ಸಂಕಲನಕ್ಕೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ ; 3 ಕೃತಿಗಳು : ಕನಸಿನ ರಾಣಿ, ಜೇಂಗೊಡ (ಕ) ಭಕ್ತಿ ಭಾಂಡಾರಿ ಮತ್ತು ಇತರ ನಾಟಕಗಳು (ನಾ) ಹಿಂದಿಯಲ್ಲೂ ಕೃತಿರಚನೆ

ನಿರ್ದೇಶಕ ಆಕಾಶವಾಣಿ ಪಣಜಿ (ಗೋವ)



ಭೂಸರೆಡ್ಡಿ, ಸಿದ್ದಪ್ಪ ಸಂಗಪ್ಪ
ಜ 5-5-1930

ಧಾರವಾಡ ಜಿಲ್ಲೆ ಕೊಣ್ಣೂರು ; ಸಂಗಪ್ಪ-ತಿಪ್ಪಮ್ಮ ; 2 ಗಂ 3 ಹೆ ಮಕ್ಕಳು ; ಪ್ರಾ ಕೊಣ್ಣೂರು, ಮಾ ನರಗುಂದ, ಬಿ ಎ ಎಂ ಎ ಬಿ ಇಡಿ ಧಾರವಾಡ ; ಕರ್ನಾಟಕ ವಿಶ್ವವಿದ್ಯಾಲಯದ ಪಠ್ಯ ಪುಸ್ತಕ ನಿರ್ದೇಶನಾಲಯದಲ್ಲಿ ಸಹಾಯಕ ಸಂಶೋಧಕ ; ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 20 ಕೃತಿಗಳು : ನವಿಲುಗುಂದದ ಪುಣ್ಯಮೂರ್ತಿ, ಹರ್ಡೇಕರ ಮಂಜಪ್ಪ, ಉರಿಲಿಂಗ ಪೆದ್ದಿ (ಜೀ) ರಾಯಚೂರು, ವಚನಕಾರ ಅಂಬಿಗರ ಚೌಡಯ್ಯ (ಬಾ) ಸರ್ವಜ್ಞ, ವೀರಶೈವನೇ ? (ವಿಮ) ಮೃತ್ಯುಂಜಯ (ಸಂ)

ಪಠ್ಯಪುಸ್ತಕ ನಿರ್ದೇಶನಾಲಯ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003

ಭೈರನಟ್ಟಿ, ಹಣಮಂತ ಶಿವಪ್ಪ
ಜ 2-5-1910

ಬೆಳಗಾವಿ ಜಿಲ್ಲೆ ಕುಲಗೋಡ ; ಶಿವಪ್ಪ ಬಾಳಪ್ಪ ಭೈರನಟ್ಟಿ–ಪಾರ್ವತೆವ್ವ ; ಎಂ ಎಸ್ ಸಿ ; ಚಿಕ್ಕೋಡಿಯ ಜೀವವಿಮಾ ಕೇಂದ್ರದಲ್ಲಿ ಸಹಾಯಕ ; 3 ಕೃತಿಗಳು : ಬೈಲೆಟ್ ಮಾನವ (ಸ ಕ) ನಕ್ಷತ್ರ ಪುಂಜ (ಕ) ಟ್ರಿಪ್ಲೆಟ್ ಸಿಗ್ಮಾ (ಕಾ) ಹವ್ಯಾಸ : ಸಂಗೀತ, ಕಸೂತಿ

2056 ವಾಡಾಗಲ್ಲಿ ಚಿಕ್ಕೋಡಿ ಬೆಳಗಾವಿ ಜಿಲ್ಲೆ 591 701

ಭೈರಪ್ಪ, ಸಂತೇಶಿವರ ಲಿಂಗಣ್ಣಯ್ಯ
ಜ 26-7-1934



ಹಾಸನಜಿಲ್ಲೆ ಸಂತೇಶಿವರ ; ಲಿಂಗಣ್ಣಯ್ಯ–ಗೌರಮ್ಮ ; 2 ಗಂ ಮಕ್ಕಳು ; ಪ್ರಾ ಸಂತೇಶಿವರ ಬಾಗೂರು ನುಗ್ಗೇಹಳ್ಳಿ ಗೊರೂರು, ಪ್ರೌ ಚನ್ನರಾಯಪಟ್ಟಣ ಮೈಸೂರು, ಬಿ ಎ ಆನರ್ಸ್ ಎಂ ಎ (ತತ್ವಶಾಸ್ತ್ರ) ಮೈಸೂರು, ಪಿ ಎಚ್ ಡಿ ಬರೋಡ ವಿಶ್ವವಿದ್ಯಾಲಯ ; ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿನಲ್ಲಿ ಉಪ ಪ್ರಾಧ್ಯಾಪಕ ; ವಂಶವೃಕ್ಷ, ದಾಟು ಕಾದಂಬರಿಗಳಿಗೆ ಕ್ರಮವಾಗಿ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನಗಳು ; 16 ಕೃತಿಗಳು : ದಾಟು, ವಂಶವೃಕ್ಷ, ಪರ್ವ, ತಬ್ಬಲಿಯು ನೀನಾದೆ ಮಗನೆ, ಗ್ರಹಣ (ಕಾ) ಕಥೆ ಹಾಗೂ ಕಥಾವಸ್ತು, ಸಾಹಿತ್ಯ ಮತ್ತು ಪ್ರತೀಕ, ಸತ್ಯ ಮತ್ತು ಸೌಂದರ್ಯ ; ಹವ್ಯಾಸ : ಪ್ರವಾಸ, ಸಂಗೀತ

ನಂ 1007 ತೊಣಚಿಕೊಪ್ಪಲು ಬಡಾವಣೆ ಮೈಸೂರು

ಭೋಯಿ, ಮಲ್ಲಪ್ಪ ಬಾಳಪ್ಪ [ನೇಮ]
ಜ 8-2-1940

ಬೆಳಗಾವಿ ; ಬಾಳಪ್ಪ–ಗಂಗವ್ವ : 2 ಗಂ 1 ಹೆ ಮಕ್ಕಳು ; ಪ್ರಾ ನೇಗಿನಾಳ, ಬಿ ಎ ಎಂ ಎ ಪಿ ಎಚ್ ಡಿ ಕರ್ನಾಟಕ ವಿಶ್ವವಿದ್ಯಾಲಯ ; ಹುಬ್ಬಳ್ಳಿ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ ; 2 ಕೃತಿಗಳು : ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಮತ್ತು ಸಾಹಿತ್ಯಕ ಅಧ್ಯಯನ (ವಿಮ) ವೈದೇಹಿ (ಜಾ)

ಕಾಡಸಿದ್ಧೇಶ್ವರ ಆರ್ಟ್ಸ್ ಕಾಲೇಜು ಹುಬ್ಬಳ್ಳಿ 580 021

ಭೋಸಗೆ, ಅನಂತರಾವ ಕಲ್ಲೋಪಂತ
ಜ 3-7-1926

ಬೆಳಗಾವಿ ಜಿಲ್ಲೆ ಶೇಡಬಾಳ ; 2 ಗಂ 3 ಹೆ ಮಕ್ಕಳು ; ಎಸ್ ಎಸ್ ಎಲ್ ಸಿ, ಕನ್ನಡ ಜಾಣ, ಹಿಂದಿ ರಾಷ್ಟ್ರಭಾಷಾ ; ಪ್ರಾಥಮಿಕ ಶಾಲಾ ಶಿಕ್ಷಕ ; ಅಖಿಲಭಾರತ ಮಕ್ಕಳ ಸಾಹಿತ್ಯ ಸ್ಪರ್ಧೆಯಲ್ಲಿ 'ನಮ್ಮೂರು' ಕೃತಿಗೆ ಬಹುಮಾನ ; 8 ಕೃತಿಗಳು : ಕಾಣಿಕೆ (ಸ ಕ) ನಡೆ ಮುಂದೆ ಗೋವಿಂದ, ಕೆನೆಮೊಸರು, ನಮ್ಮೂರು (ಬಾ) ತಾತ್ಯಾಟೋಪಿ, ಕಲಿಯೋದ್ಯಾಕೆ (ನಾ) ವಿಕಾಸ (ಕಾ)

ಮಕ್ಕಳ ಸಾಹಿತ್ಯ ಮಂಟಪ ಶೇಡಬಾಳ ಬೆಳಗಾವಿ ಜಿಲ್ಲೆ



ಮಂಗಳಾ ಸತ್ಯನ್, ಸಾಲಗಾಮೆ ಸುಬ್ಬರಾವ್
ಜ 10-4-1940

ಹಾಸನ ಜಿಲ್ಲೆ ಹೊಳೇನರಸೀಪುರ ; ಸಾಲಗಾಮೆ ಸುಬ್ಬರಾವ್-ಎಸ್ ಗುಂಡಮ್ಮ ; 1 ಗಂ 1 ಹೆ ಮಕ್ಕಳು; ಎಸ್ ಎಸ್ ಎಲ್ ಸಿ, ಹಿಂದಿ ಪ್ರವೇಶಿಕಾ; ಸಾಹಿತ್ಯಕಲಾ ಪ್ರಪೂರ್ಣ ಪ್ರಶಸ್ತಿ ; 21 ಕೃತಿಗಳು : ಭಾಗ್ಯಜ್ಯೋತಿ, ಮುಗ್ಧಮಾನವ, ಕಾನನದ ಕರುಣಾಳು, ವಿಷದ ಒಡಲು (ಕಾ) ಮದ್ವೆಮಸ್ಲತ್, ಧೀರೋದಾತ್ತ ಕಂಸ (ನಾ) ಹವ್ಯಾಸ : ನಾಟಕ ನಿರ್ದೇಶನ

ಶ್ರೀ ಗಣೇಶ್ 528/1 2ನೇ ರಾಮಚಂದ್ರ ಅಗ್ರಹಾರ ಖಿಲ್ಲೆ ಮೊಹಲ್ಲ ಮೈಸೂರು 570 004

ಮಂಜಪ್ಪಶೆಟ್ಟಿ, ಮಸಗಲಿ ಪುಟ್ಟಪ್ಪಶೆಟ್ಟಿ
ಜ 1-8-1949



ಚಿಕ್ಕಮಗಳೂರು ಜಿಲ್ಲೆ ಮಸಗಲಿ ; ಪುಟ್ಟಪ್ಪಶೆಟ್ಟಿ-ಸುಂದರಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಮಸಗಲಿ, ಮಾ ಆವತಿ, ಪ್ರೌ ಮತ್ತು ಬಿ ಎ ಚಿಕ್ಕಮಗಳೂರು, ಎಂ ಎ (ಕನ್ನಡ) ಮಂಗಳೂರು ; ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕ ; 6 ಕೃತಿಗಳು : ಸಂಕ್ಷಿಪ್ತ ಕನ್ನಡ ವ್ಯಾಕರಣ (ಭಾ ವಿ) ಯಾದವಗಿರಿ ಮಾಹಾತ್ಮ್ಯಂ, ನನ್ನಯ್ಯ ಚಾರಿತ್ರ, ಚಿಕ್ಕದೇವರಾಜ ವಂಶಾವಳಿ (ಸಂ)

ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006




ಮಂಜುನಾಥನ್, ಗುಂಡ್ಲುಪೇಟೆ ಗುಂಡಪ್ಪಯ್ಯ
ಜ 4-8-1941
ಮೈಸೂರು ಜಿಲ್ಲೆ ಗುಂಡ್ಲುಪೇಟೆ ; ಜಿ ಎಸ್ ಗುಂಡಪ್ಪಯ್ಯ–ಸುಬ್ಬಲಕ್ಷ್ಮಮ್ಮ ; 2 ಹೆ ಮಕ್ಕಳು : ಮಾ ಗುಂಡ್ಲುಪೇಟೆ, ಪ್ರೌ ದೊಡ್ಡಹುಂಡಿ ಭೋಗಪ್ಪಪುರ, ಬಿ ಎ ಎಂ ಎ (ಕನ್ನಡ) ಮೈಸೂರು: ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದಲ್ಲಿ ಸಹಾಯಕ ಸಂಶೋಧಕ ; ಜನವಶ್ಯ, ನನ್ನಯ್ಯಗಳ ಚಾರಿತ್ರ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ ; 12 ಕೃತಿಗಳು : ಸನತ್ಕುಮಾರ ಚರಿತೆ, ಜನವಶ್ಯ, ಹಾಲಾಸ್ಯ ಪುರಾಣ, ಪಂಚಶತಕ, ಯೋಗರತ್ನಾಕರ, ಕೌಂಡಿನ್ಯ (ಸಂ) ನಾನು ಎಲ್ಲರಿಗಾಗಿ–ಎಲ್ಲರೂ ನನಗಾಗಿ (ವ)
ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006

ಮಂಟೂರ, ಎಲ್ಲಪ್ಪ ಫಕೀರಪ್ಪ
ಜ 10–10–1920
ಹುಬ್ಬಳ್ಳಿ ತಾಲೂಕು ಮಂಟೂರು ; ಫಕೀರಪ್ಪ–ಫಕೀರವ್ವ ; ಹಿಂದಿ ರಾಷ್ಟ್ರಭಾಷಾ ; ಶಿಕ್ಷಕ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 2 ಕೃತಿಗಳು : ನಾಡದೇವಿ, ಶ್ರೀ ಗುರು ರಾಮಲಿಂಗಸ್ವಾಮಿಗಳ ಪದ್ಯ ಹಾಗೂ ಮಂಗಳಾರತಿ (ಕ) ಹವ್ಯಾಸ : ಪ್ರವಾಸ
ನಾಗಶೆಟ್ಟಿ ಕೊಪ್ಪ ಕೇಶವಾಪುರ ಅಂಚೆ ಹುಬ್ಬಳ್ಳಿ ತಾಲೂಕು





ಮಂಡಿ, ಜಯವಂತ ಪರಪ್ಪ [ಆನಂದ ಕುಮಾರ]
ಜ 15–5–1940
ಬಿಜಾಪುರ ಜಿಲ್ಲೆ ಬನಹಟ್ಟಿ ; ಪರಪ್ಪ–ಗೌರವ್ವ : 1 ಗಂ 3 ಹೆ ಮಕ್ಕಳು : ಎಸ್ ಎಸ್ ಸಿ ಮತ್ತು ಶಾರೀರಿಕ ಶಿಕ್ಷಣ ತರಬೇತಿ ; ಕುಂದರಗಿ ಮಾಧ್ಯಮಿಕ ಶಾಲೆಯಲ್ಲಿ ಶಾರೀರಿಕ ಶಿಕ್ಷಕ ; 1 ಕೃತಿ : ಶ್ರೀ ಸಿದ್ಧಗಿರಿ ಕಾಡಸಿದ್ಧೇಶ್ವರ ಸುಪ್ರಭಾತ
ಶ್ರೀರಾಮಲಿಂಗೇಶ್ವರ ಮಾಧ್ಯಮಿಕ ಶಾಲೆ ಕುಂದರಗಿ ಬಿಜಾಪುರ ಜಿಲ್ಲೆ



ಮಠದ, ಶಿವಮೂರ್ತಯ್ಯಾ ಬಸವಲಿಂಗಯ್ಯಾ
ಜ 3-5-1928

ಬಿಜಾಪುರ ಜಿಲ್ಲೆ ಮಹಾಲಿಂಗಪೂರ: ಬಸಲಿಂಗಯ್ಯ-ಶಿವಗಂಗವ್ವಾ ; 2 ಗಂ ಮಕ್ಕಳು; ಬಿ ಎಸ್ ಸಿ ಕ ವಿ, ಎಂ ಎಸ್ ಸಿ ಮುಂಬೈ, ಪಿ ಎಚ್ ಡಿ ಕೆನಡ : ಪ್ರಾಧ್ಯಾಪಕ : 3 ಕೃತಿಗಳು : ಪ್ರಾಣಿಶಾಸ್ತ್ರ ಪರಿಚಯ, ಕೀಟದಿಂದ ಮಾನವನೆಡೆಗೆ, ಜೀವಕೋಶ ಕ್ರಿಯಾಶಾಸ್ತ್ರ (ಪ್ರಾ)

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003

ಮಠಪತಿ, ಶ್ರೀಕಂಠಯ್ಯ ಸಣ್ಣಪರಮಯ್ಯ [ಶ್ರೀಸಮ]
ಜ 7-7-1919

ಧಾರವಾಡ ಜಿಲ್ಲೆ ನೆಗಳೂರು ; ಸಣ್ಣಪರಮಯ್ಯ-ಚನ್ನಬಸವಮ್ಮ ; 2 ಗಂ 6 ಹೆ ಮಕ್ಕಳು ; ಪ್ರಾ ಪ್ರೌ ರಾಣೆಬೆನ್ನೂರು, ಬಿ ಎ ಆನರ್ಸ್ ಧಾರವಾಡ ; ಹುಬ್ಬಳ್ಳಿಯ ಜೆ ಜಿ ಕೆ ಪಿ ಟಿ ಕಾಲೇಜಿನ ಪ್ರಿನ್ಸಿಪಾಲ್ : 5 ಕೃತಿಗಳು : ಆದರ್ಶ ಶಿಕ್ಷಕ, ಪರೀಕ್ಷಕ-ವಿದ್ಯಾರ್ಥಿ, ಸರ್ವೋದಯಸಾರ, ಸಮಾಜಗೀತೆ, ಮಕ್ಕಳ ಮನಶ್ಶಾಸ್ತ್ರ

ಪ್ರಿನ್ಸಿಪಾಲ್ ಜೆ ಜಿ ಕೆ ಪಿ ಟಿ ಕಾಲೇಜು ಹುಬ್ಬಳ್ಳಿ



ಮಣೂರ, ಗೋವಿಂದ ಗುಂಡೋ
[ಎಂ ಗೋವಿಂದ]
ಜ 20-8-1947

ಬಿಜಾಪುರ ಜಿಲ್ಲೆ ಬೀಳಗಿ : ಗುಂಡೋಕೃಷ್ಣ ಮಣೂರ -ಜಾನಕೀಬಾಯಿ : ಪ್ರಾ ಕನ್ನೂರು ಬಿಜ್ಜರಗಿ ನಿಡೋಣಿ, ಪ್ರೌ ಬಿಜಾಪುರ, ಡಿಪ್ಲೊಮಾ ಇನ್ ಮೆಡಿಸನ್ ಹುಬ್ಬಳ್ಳಿ ; ವೈದ್ಯಕೀಯ ವೃತ್ತಿ ; 1 ಕೃತಿ : ಕುರ್‌ಮಾಮಾ (ಕ) ಹವ್ಯಾಸ : ಚಲನ ಚಿತ್ರ ನಟನೆ


ಸ್ನೇಹ ಕ್ಲಿನಿಕ್ ಹುಬ್ಬಳ್ಳಿ



ಮತಿಘಟ್ಟ ಕೃಷ್ಣಮೂರ್ತಿ
ಜ 10-5-1913

ಹಾಸನಜಿಲ್ಲೆ ಮತಿಘಟ್ಟ ; ಲಿಂಗಣ್ಣಯ್ಯ–ಚೆನ್ನಮ್ಮ ; 11 ಮಕ್ಕಳು ; ಪ್ರಾ ಮಾ ಬೆಳವಾಡಿ ಮತ್ತು ಬೇಲೂರು. ಪ್ರೌ ಚಿಕ್ಕಮಗಳೂರು, ಇಂಟರ್ ಮೀಡಿಯೆಟ್ ಬೆಂಗಳೂರು ; 1938ರಲ್ಲಿ ಬೆಂಗಳೂರಿನ ಖಾಸಗೀ ಸಂಸ್ಥೆಯೊಂದರಲ್ಲಿ ಉದ್ಯೋಗ, 1941ರಲ್ಲಿ ಮಯೂರ ಮಾಸಪತ್ರಿಕೆ ಸ್ಥಾಪನೆ ನಂತರ ವಿಶ್ವಕರ್ನಾಟಕ ಜನವಾಣಿ ತಾಯಿನಾಡು ಮೊದಲಾದ ಪತ್ರಿಕೆಗಳಲ್ಲಿ ಉಪಸಂಪಾದಕನಾಗಿ ಸೇವೆ, ಕನ್ನಡಪ್ರಭ ದೈನಿಕದ ಉಪಸಂಪಾದಕನಾಗಿ 1975ರಲ್ಲಿ ನಿವೃತ್ತಿ : ಅಖಿಲ ಕರ್ನಾಟಕ ಮಕ್ಕಳಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾದೆಮಿ ಸದಸ್ಯ : 17 ಕೃತಿಗಳು : ಕಳಸಾಪುರದ ಹುಡುಗರು, ಸರ್ವೋದಯ (ಕಾ) ಪಚ್ಚೆತೆನೆ (ಸ ಕ) ಕಲ್ಯಾಣಿ (ನಾ) ತ್ರಿಪದಿ ಛಂದಸ್ಸು ಒಂದು ಸಮೀಕ್ಷೆ (ವಿಮ) ನಾಡ ಪದಗಳು, ಏಳು ಕೊಳ್ಳದ ಎಲ್ಲಮ್ಮ, ನಮ್ಮ ಹಳ್ಳಿಯ ಹಾಡುಗಳು, ಗೀತೆಗಳು, ಶಕುನದ ಹಕ್ಕಿ ಮತ್ತು ಇತರ ಜನಪದ ಕಥೆಗಳು (ಜಾ)

244 4ನೇ ಮುಖ್ಯರಸ್ತೆ ಕೆಂಪೇಗೌಡನಗರ ಬೆಂಗಳೂರು 560 019



ಮದನಕೇಸರಿ, ಹೊಳಲ್ಕೆರೆ ಶ್ರೀಪಾಲಶೆಟ್ರು
[ಧರ್ಮಶ್ರೀ]
ಜ 16-10-1934

ಚಿತ್ರದುರ್ಗಜಿಲ್ಲೆ ಹೊಳಲ್ಕೆರೆ ; ಶ್ರೀಪಾಲಶೆಟ್ರು–ಪದ್ಮಾವತಮ್ಮ ; 2 ಗಂ 1 ಹೆ ಮಕ್ಕಳು ; ಪ್ರಾ ಪ್ರೌ ಹೊಳಲ್ಕೆರೆ, ಬಿ ಎ ಎಂ ಎ ಮೈಸೂರು, ಬಿ ಎಲ್ ಬೆಂಗಳೂರು ; 8 ಕೃತಿಗಳು : ಸಂಕ್ಷಿಪ್ತ ಜೈನ ಧರ್ಮ, ಜಿನಭಕ್ತಿಗೀತೆಗಳು, ತೀರ್ಥಂಕರ ಮಹಾವೀರ, ದಾನ–ಧ್ಯಾನ, ಭಗವಾನ್ ಮಹಾವೀರರು ಮತ್ತು ಶ್ರೀಧರ್ಮಚಕ್ರ

ನಂ 23 'ರತ್ನತ್ರಯ' ಮಾಡೆಲ್ ಹೌಸ್ ನಾಲ್ಕನೇ ಬೀದಿ ಬಸವನಗುಡಿ 560 004

ಮಧ್ಯಸ್ಥ, ಕುಂಜಾರು ಕೃಷ್ಣ
ಜ 2-6-1944

ಕಾಸರಗೋಡು ತಾಲೂಕು ಕುಂಜಾರು ; ಈಶ್ವರ ಮಧ್ಯಸ್ಥ ಕುಂಜಾರು–ದೇವಕಮ್ಮ ; 1 ಹೆ ಮಗು ; ಪ್ರಾ ನೀರ್ಚಾಲು, ಬಿ ಎ ಕರ್ನಾಟಕ ವಿಶ್ವವಿದ್ಯಾಲಯ, ಕನ್ನಡ ಹಾಗೂ ಹಿಂದಿ ರತ್ನ ; ಪ್ರೌಢಶಾಲಾ ಶಿಕ್ಷಕ ; 1 ಕೃತಿ : ಸೋಲಿನಲ್ಲೂ ಗೆಲವು (ನಾ) ಹವ್ಯಾಸ : ನಾಟಕ ಮತ್ತು ಯಕ್ಷಗಾನಗಳಲ್ಲಿ ಅಭಿನಯ

ಅಧ್ಯಾಪಕ ನಿರ್ಮಲಾ ಬಾಲಿಕಾ ಪ್ರೌಢಶಾಲೆ ಸಾಗರ ಶಿವಮೊಗ್ಗ ಜಿಲ್ಲೆ

ಮಧ್ಯಸ್ಥ, ನೀರ್ಚಾಲು ನಾರಾಯಣ
[ಪರಮಪ್ರಿಯ]
ಜ 10–1–1930



ಕಾಸರಗೋಡು ತಾಲೂಕು ಕುಂಜಾರು ; ಈಶ್ವರ ಮಧ್ಯಸ್ಥ–ದೇವಕಿಅಮ್ಮ ; 1 ಗಂ 4 ಹೆ ಮಕ್ಕಳು; ಸಂಸ್ಕೃತ ಸಾಹಿತ್ಯ ಶಿರೋಮಣಿ, ಕನ್ನಡ ವಿದ್ವಾನ್ ಮದರಾಸು, ರಾಷ್ಟ್ರಭಾಷಾ ಪ್ರವೀಣ ; ಸಾಗರದ ನಿರ್ಮಲಾ ಪ್ರೌಢಶಾಲೆಯಲ್ಲಿ ಶಿಕ್ಷಕ ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ ; 6 ಕೃತಿಗಳು : ಹೊಸಗಾಳಿ, ತಿರುಗ–ಮುರುಗ. (ನಾ) ಹಸ್ತಾಕ್ಷರ, ರಂಗಸಂಗೀತ (ಕ) ಪಾಪು ಪೀಪಿ (ಬಾ) ಹವ್ಯಾಸ : ನಾಟಕಾಭಿನಯ

2/52 ಚಾಮರಾಜಪೇಟೆ ಸಾಗರ 577 401

ಮಧ್ಯಸ್ಥ, ನೀರ್ಚಾಲು ಸುಬ್ರಹ್ಮಣ್ಯ [ನೀಸುಮ]
ಜ 15-7-1931



ಕಾಸರಗೋಡು ತಾಲೂಕು ಕುಂಜಾರು ; ಈಶ್ವರ ಮಧ್ಯಸ್ಥ–ದೇವಕಿ ಅಮ್ಮ : 2 ಹೆ ಮಕ್ಕಳು ; ಎಸ್ ಎಸ್ ಎಲ್ ಸಿ ಮೈಸೂರು, ಕನ್ನಡ ಸಂಸ್ಕೃತ ವಿದ್ವಾನ್ ಎಂ ಎ ಬಿ ಎಡ್ ; ಪ್ರೌಢಶಾಲಾ ಕನ್ನಡ ಪಂಡಿತ ; 1 ಕೃತಿ : ಕೃಷ್ಣನ ಕೊಳಲು (ನಾ) ಹವ್ಯಾಸ : ತೋಟಗಾರಿಕೆ, ಕುಶಲ ಕಲೆ

ಸರಕಾರಿ ಪ್ರೌಢಶಾಲೆ ಬೆಟ್ಟದಪುರ ಅಂಚೆ ಪಿರಿಯಾಪಟ್ಟಣ ತಾಲೂಕು ಮೈಸೂರು



ಮನೋಹರ ಚಂದ್ರನ್, ಮಧುಗಿರಿ ಪುಟ್ಟಪ್ಪ
ಜ 1-9-1938

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು; ಎಂ ಪುಟ್ಟಪ್ಪ-ಸಾವಿತ್ರಮ್ಮ; 2 ಗಂ ಮಕ್ಕಳು; ಸಿವಿಲ್ ಎಂಜಿನಿಯರಿಂಗ್ ಡಿಪ್ಲೊಮಾ: ಬೆಂಗಳೂರಿನ ಎಸ್ ಜೆ ಪಾಲಿಟೆಕ್ನಿಕ್‌ನಲ್ಲಿ ಅಧ್ಯಾಪಕ: 3 ಕೃತಿಗಳು: ಗಣಪತಿ ದೋರಿಯು, ಹೆಂಡತಿ ಬೇಕು-ಬೇಡ (ಪ್ರ) ಪೂಪ ಕಾಡಿನಲ್ಲಿ ಪಾಪು (ಕಾ)

176/1 ಸುಬ್ಬರಾಮಶೆಟ್ಟಿ ರಸ್ತೆ ಬಸವನಗುಡಿ ಬೆಂಗಳೂರು-560 004

ಮರಿಗುದ್ದಿ, ಗುರುಪಾದ ಶಿವಲಿಂಗಪ್ಪಾ
ಜ 20-4-1956

ಬೆಳವಿ; ಶಿವಲಿಂಗಪ್ಪಾ ಗುರುಪಾದಪ್ಪ ಮರಿಗುದ್ದಿ-ಲಕ್ಷ್ಮೀಬಾಯಿ; ಪ್ರಾ ಬೆಳವಿ, ಮಾ ಪ್ರೌ ಯಾದಗೂಡ, ಬಿ ಎ ಸಂಕೇಶ್ವರ ಎಂ ಎ (ಕನ್ನಡ) ಕ ವಿ: ಸಂಕೇಶ್ವರದ ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಅಧ್ಯಾಪಕ; 1 ಕೃತಿ: ಅಂತೆ ಕಂತೆಯ ಕವನಗಳು (ಕ)

ಅಧ್ಯಾಪಕ ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯ ಸಂಕೇಶ್ವರ



ಮರಿಯಪ್ಪಭಟ್ಟ, ಮುಂಗ್ಲಿಮನೆ
ಜ 2-7-1906-1980

ಪುತ್ತೂರಿನ ಕಬಕ; ಮುಂಗ್ಲಿಮನೆ ಗೋವಿಂದ ಭಟ್ಟ-ಕಾವೇರಿಅಮ್ಮ; 3 ಗಂ 5 ಹೆ ಮಕ್ಕಳು; ಪ್ರಾ ಕಬಕ, ಪ್ರೌ ಪುತ್ತೂರು, ಬಿ ಎ ಮಂಗಳೂರು, ಎಂ ಎ ವಿದ್ವಾನ್ ಮದರಾಸು ವಿಶ್ವವಿದ್ಯಾಲಯ; ಸಾಹಿತ್ಯ ಅಕಾಡೆಮಿ, ಕರ್ನಾಟಕ ಸರ್ಕಾರ, ದ್ರಾವಿಡ ಭಾಷಾಶಾಸ್ತ್ರ ಸಂಘಗಳಿಂದ ಪುರಸ್ಕಾರ; ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಮಿತಿಯ ಅಧ್ಯಕ್ಷ; 9 ಕೃತಿಗಳು: ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಸಾ) ತುಳು-ಇಂಗ್ಲಿಷ್ ನಿಘಂಟು, ಕಿಟ್ಟೆಲ್‌ರ ಕನ್ನಡ-ಇಂಗ್ಲಿಷ್ ನಿಘಂಟು (ಸಿ) ಅಭಿನವ ಮಂಗರಾಜನ ನಿಘಂಟು, ಜಾತಕ ತಿಲಕ, ಭುವನಸ್ಸಾರ, ವಿಷ್ಣುಪುರಾಣ ಪಾಚಮಾಂಶ, ವರ್ಧಮಾನ ಪುರಾಣ (ಸಂ)

ಪುತ್ತೂರು ಮನೆ ಉಬರಡ್ಕ, ಅಂಚೆ ಸುಳ್ಯಮಾರ್ಗ ದ ಕ ಜಿಲ್ಲೆ



ಮರುಳಯ್ಯ, ಸಾಸಲು ಶಿವರುದ್ರಯ್ಯ
ಜ 28-1-1931

ತುಮಕೂರು ಜಿಲ್ಲೆ ಸಾಸಲು; ಶಿವರುದ್ರಯ್ಯ-ಸಿದ್ದಮ್ಮ; 2 ಗಂ 1 ಹೆ ಮಕ್ಕಳು; ಪ್ರಾ ಸಾಸಲು, ಮಾ ಶೆಟ್ಟೀಕೆರೆ, ಪ್ರೌ ತಿಪಟೂರು, ಬಿ ಎ ಆನರ್ಸ್ ಎಂ ಎ ಮೈ ವಿ, ಪಿ ಎಚ್ ಡಿ ಕ ವಿ; ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ; ಕೆಂಗನ ಕಲ್ಲು ಕವನ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ, ಭಾಸನ ಮಕ್ಕಳು ವಿಮರ್ಶಾ ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ; 18 ಕೃತಿಗಳು: ಶಿವತಾಂಡವ, ಕೆಂಗನಕಲ್ಲು (ಕ) ಮರೀಬೇಡಿ, ವಿಜಯವಾತಾಪಿ (ನಾ) ಪುರುಷಸಿಂಹ, ಹೇಮಕೂಟ (ಕಾ) ಭಾರತರತ್ನ, ವಿಭೂತಿ ಪುರುಷರು (ಜೀ) ಶ್ರೀ ಮರುಳ ಸಿದ್ದೇಶ್ವರ ಮಹಾಪುರಾಣ, ಹರಿಹರನ ಹತ್ತು ರಗಳೆಗಳು (ಸಂ) ನೆಲದ ಸೊಗಡು (ಸ ಕ)

60/1 ನಾಲ್ಕನೆಯ ಮುಖ್ಯರಸ್ತೆ ಚಾಮರಾಜ ಪೇಟೆ ಬೆಂಗಳೂರು 560 018



ಮರುಳಸಿದ್ದಪ್ಪ
ಜ 12-1-1940


ಚಿಕ್ಕಮಗಳೂರು ಜಿಲ್ಲೆ ಕಾರೇಹಳ್ಳಿ; ಉಜ್ಜನಪ್ಪ-ಕಾಳಮ್ಮ: 1 ಗಂ ಮಗು; ಪ್ರಾ ಕಾರೇಹಳ್ಳಿ, ಮಾ ಅಜ್ಜಂಪುರ ಸೊಲ್ಲಾಪುರ ಶಿವನಿ, ಪ್ರೌ ಶಿವನಿ. ಬಿ ಎ ಎಂ ಎ ಮೈ ವಿ; 3 ಕೃತಿಗಳು: ಲಾವಣಿಗಳು, ಕನ್ನಡ ನಾಟಕ ವಿಮರ್ಶೆ (ಸಂ) ಭಾರತೀಯ ಜಾನಪದ ಸಮೀಕ್ಷೆ (ಅ)

ಅಧ್ಯಾಪಕ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ ಬೆಂಗಳೂರು 560 056



ಮರುಳಸಿದ್ಧಯ್ಯ, ಗುರುಸಿದ್ದಪ್ಪ
ಜ 21-10-1921

ಬೆಂಗಳೂರು ಜಿಲ್ಲೆ ಮೈಲನಹಳ್ಳಿ ; ಗುರುಸಿದ್ದಪ್ಪ–ಬಸಮ್ಮ ; 2 ಹೆ ಮಕ್ಕಳು : ಪ್ರಾ ಹುಣಸಮಾರನಹಳ್ಳಿ, ಮಾ ತುಮಕೂರು, ಪ್ರೌ ಮೈಸೂರು, ಸಂಸ್ಕೃತ ವಿದ್ವಾನ್, ಎಂ ಎ ಪಿ ಎಚ್ ಡಿ ; ಸಂಸ್ಕೃತ ಪ್ರಾಧ್ಯಾಪಕರಾಗಿ ಬೆಂಗಳೂರು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ; 5 ಕೃತಿಗಳು : ಬಾಣ ಕಾದಂಬರಿ, ಪೃಥುಲೀಲಾ, ಭರತ ನಾಟ್ಯಶಾಸ್ತ್ರ



ಮರುಳಸಿದ್ಧಯ್ಯ, ಹಿರೇಕುಂಬಳಗುಂಟೆ ಮಠದ
ಜ 29-7-1931

ಬಳ್ಳಾರಿ ಜಿಲ್ಲೆ ಹಿರೇಕುಂಬಳಗುಂಟೆ ; ದೊಡ್ಡಬಸವಯ್ಯ ಮಠದ–ದೊಡ್ಡಬಸವಮ್ಮ ; 4 ಗಂ ಮಕ್ಕಳು; ಪ್ರಾ ಕಾನಾಮಡುವು, ಮಾ ಹಿರೇಕುಂಬಳಗುಂಟೆ, ಪ್ರೌ ಕೊಟ್ಟೂರು, ಬಿ ಎ ಎಂ ಎ (ಸಮಾಜಶಾಸ್ತ್ರ) ಮೈ ವಿ ; ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಮಾಜ ಶಾಸ್ತ್ರದ ಪ್ರಾಧ್ಯಾಪಕ ; ಮೈ ವಿ ರಜತೋತ್ಸವದ ಬಂಗಾರದ ಪದಕ, ಹಿರಿಯಣ್ಣ ಬಂಗಾರದ ಪದಕ ; ಕರ್ನಾಟಕ ವಿದ್ಯಾವರ್ಧಕ ಸಂಘದ ಸದಸ್ಯ : 13 ಕೃತಿಗಳು : ಪ್ರವಾಸ, ವಿಷಬಿಂದು (ಕ) ಕೆದರಿದ ಕೆಂಡ (ಕಾ) ಸಾವಿನ ನೆಳಲಿನಲ್ಲಿ (ಜೀ) ಮಾನವ ಸಮಾಜ ಹಾಗೂ ಸಮಾಜಶಾಸ್ತ್ರ, ಸಮಾಜಶಾಸ್ತ್ರದ ಕೆಲವು ಪಾಠಗಳು (ಸ) ಶಿಕ್ಷಣ ಹಾಗೂ ಸಾಮಾಜಿಕ ಬದಲಾವಣೆ (ಶಿ)

ಸಮಾಜ ಕಾರ್ಯ ವಿಭಾಗ ಸೆಂಟ್ರಲ್ ಕಾಲೇಜ್ ಬೆಂಗಳೂರು 560 009

ಮಲಘಾಣ, ಶಿವಲಿಂಗಪ್ಪ ರಾಚಪ್ಪ
ಜ 2-2-1932

ಬಿಜಾಪುರ ಜಿಲ್ಲೆ ಸಾವಳಗಿ : 2 ಗಂ 2 ಹೆ ಮಕ್ಕಳು ; ಪ್ರಾ ಮುಳವಾಡ, ಮಾ ಬಿಜಾಪುರ ; ಬಿ ಎಸ್ ಸಿ ಧಾರವಾಡ, ಎಂ ಎಸ್ ಸಿ ಮುಂಬೈ, ಪಿ ಎಚ್ ಡಿ ಅಮೆರಿಕ ; ಕ ವಿ ಗಣಿತ ವಿಭಾಗದಲ್ಲಿ ಪ್ರಾಧ್ಯಾಪಕ ; ಅಮೆರಿಕ ಪ್ರವಾಸ ; 1 ಕೃತಿ : ಬೀಜಗಣಿತ ಹಾಗೂ ಕಲನಶಾಸ್ತ್ರ ಪರಿಚಯ

ಗಣಿತ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003



ಮೆಲ್ಲಪ್ಪೆ, ಮೆಲ್ಲಪ್ಪ [ಜ್ಞಾನೋಪಾಸಕ]
ಜ 17-7-1920

ಮಂಡ್ಯ ಜಿಲ್ಲೆ ಹಲಗೂರು ; ದೊ ಚಿಕ್ಕಮಲ್ಲಪ್ಪ–ನಾಗಮ್ಮ ; 3 ಮಕ್ಕಳು ; ಮೆಟ್ರಿಕ್, ಕನ್ನಡ ಪಂಡಿತ, ಕನ್ನಡ ಜಾಣ, ಸಾಹಿತ್ಯ ಶಿರೋಮಣಿ ; ಪ್ರೌಢಶಾಲಾ ಶಿಕ್ಷಕರಾಗಿ ನಿವೃತ್ತಿ ; ಸಮಾಜ ಭಾಸ್ಕರ, ಸಾಹಿತ್ಯ ಭೂಷಣ, ವಿದ್ಯಾಲಂಕಾರ ಪ್ರಶಸ್ತಿಗಳು : ಕನ್ನಡ ಸಾಹಿತ್ಯ ಪರಿಷತ್ತು, ಬಿಜಾಪುರದ ಭಾರತೀ ಸಾಹಿತ್ಯ ಮಂಡಳಿ, ಬೆಂಗಳೂರಿನ ಅಖಿಲ ಕರ್ನಾಟಕ ಪ್ರಕಾಶಕರ ಸಂಘ ಮತ್ತು ಅಖಿಲ ಕರ್ನಾಟಕ ಲೇಖಕರ ಬಳಗಗಳ ಸದಸ್ಯ ; 31 ಕೃತಿಗಳು : ಜೀವದ ಜೀವಾಳ, ಮದ್ದೂರು ಮಾಹಿತಿ, ಅನಕೃ ಸಾಹಿತ್ಯ ಸಮೀಕ್ಷೆ, ಮೊರೆ, ಓರಂಗಲ್ ಸೂರೆ

ಜ್ಞಾನಮಂದಿರ ಹಲಗೂರು ಮಂಡ್ಯ ಜಿಲ್ಲೆ 571 421

ಮಲ್ಲೇದೇವರು, ಹೊನ್ನೂರು ಪುಟ್ಟಮಾದಪ್ಪ
ಜ 18-7-1931

ಮೈಸೂರು ಜಿಲ್ಲೆ ಹೊನ್ನೂರು ; ಪುಟ್ಟಮಾದಪ್ಪ–ಪುಟ್ಟನಂಜಮ್ಮ ; 3 ಮಕ್ಕಳು ; ವಿದ್ವತ್, ಎಂ ಎ ಕಾಶಿ, ಪಿ ಎಚ್ ಡಿ ಕ ವಿ ; ಮೈ ವಿ ಸಂಸ್ಕೃತ ಪ್ರಾಧ್ಯಾಪಕ ; ಸರ್ ಪಿ ಎಸ್ ಕೃಷ್ಣಮೂರ್ತಿ ಹಾಗೂ ಗುರುಸಿದ್ಧ ಪ್ರಭುದೇವರ ಸುವರ್ಣ ಪದಕ ; 12 ಕೃತಿಗಳು : ನಾಗಾನಂದ, ಊರುಭಂಗ (ಅ) ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು, ಉರಿಲಿಂಗ ಪೆದ್ದಿಗಳ ವಚನಗಳು (ಸಂ) ಸುಲಭ ಸಂಸ್ಕೃತ ವ್ಯಾಕರಣ (ಭಾ) ಇಂಗ್ಲಿಷ್‌ನಲ್ಲೂ ಕೃತಿ ರಚನೆ

ಪ್ರಾಧ್ಯಾಪಕ ಸಂಸ್ಕೃತ ವಿಭಾಗ ಮಾನಸಗಂಗೋತ್ರಿ ಮೈಸೂರು 570 006




ಮಲ್ಲೇಶ್ ಬಾರ್ಕರ್ [ಬಾ ಮ]
ಜ 1-7-1948

ಬಳ್ಳಾರಿ ಜಿಲ್ಲೆ ಹೊಸಪೇಟೆ ನಾಗೇನಹಳ್ಳಿ ; ದೇವರ ಮನಿ ಹೇಮಗಿರಿಯಪ್ಪ–ಹನುಮಂತಮ್ಮ ; ಪ್ರಾ ಶಿಕ್ಷಣ ನಾಗೇನಹಳ್ಳಿ ಬೆನಕಾಪುರ ಅನಂತಶಯನ ಗುಡಿ ರಾಮಸಾಗರ ಎಂ ಎ (ಕನ್ನಡ) ತೆಲುಗು ಡಿಪ್ಲೊಮಾ ಮೈಸೂರು ; ಹೊಸಪೇಟೆ ಸರ್ಕಾರಿ ಪ್ರೌಢಶಾಲಾ ಶಿಕ್ಷಕ ; ಕನ್ನಡ ಸಾಹಿತ್ಯ ಪರಿಷತ್ತಿನ

ಸದಸ್ಯ, ಬಳ್ಳಾರಿ ಜಿಲ್ಲಾ ಬರಹಗಾರರ ಸಂಘದ ಕಾರ್ಯದರ್ಶಿ ; 4 ಕೃತಿಗಳು : ಮಹಾಕವಿ ಕುವೆಂಪು, ತುಂಗಾತರಂಗ, ಹೋರಾಟ, ಡೆಲ್ಲಿಯವರೆಗೂ ಕನ್ನಡ ಸಾಹಿತ್ಯ ಸಮ್ಮೇಳನಗಳು ಹವ್ಯಾಸ : ಅಭಿನಯ ಹಾಗೂ ನಿರ್ದೇಶನ, ಪ್ರವಾಸ ಮತ್ತು ಪತ್ರಿಕೋದ್ಯಮ


ರಾಮಸಾಗರ ಬಳ್ಳಾರಿ ಜಿಲ್ಲೆ 583 147



ಮಹದೇವಯ್ಯ, ಹನಸೋಗೆ ಜವರೇಗೌಡ
[ಜೆ ಎಂ ಹನಸೋಗೆ]
ಜ **15-7-1936**

ಮೈಸೂರು ಜಿಲ್ಲೆ ಹನಸೋಗೆ ; ಎಚ್ ಪಿ ಜವರೇಗೌಡ–ಚನ್ನಮ್ಮ ; 1 ಗಂ 2 ಹೆ ಮಕ್ಕಳು ; ಪ್ರಾ ಮಾ ಹನಸೋಗೆ, ಪ್ರೌ ಬಿ ಎ ಎಂ ಎ ಮೈಸೂರು ; ಮೈ ವಿ ಪ್ರಸಾರಾಂಗದಲ್ಲಿ ಇಂಗ್ಲಿಷ್–ಕನ್ನಡ ನಿಘಂಟು ಸಂಪಾದಕ ; 9 ಕೃತಿಗಳು : ಅಳಿವು–ಉಳಿವು, ಕಲ್ಲುತೋಟ (ಕ) ಬೆಳ್ಳಿ ಮೂಡಿತ್ತು (ಕಾ) ಕನ್ನಡ ಶಬ್ದಸಾಗರ, ಕನ್ನಡ ಸಮಾನಾರ್ಥ ಕೋಶ (ಕೋ) ತಮ್ಮಣ್ಣ–ತಂಗಚ್ಚಿ, ಮೋಡಣ್ಣನ ಗೆಳೆಯರು, ಮುನಿಯ ಮೆರವಣಿಗೆ, ಅದೃಷ್ಟ ಫಲ, ಮಾಯಾವಿನಿ (ಬಾ) ಹವ್ಯಾಸ : ಚಿತ್ರಕಲೆ, ಖಗೋಳ ವಿಜ್ಞಾನ

67 'ನಭಶ್ರೀ' 8ನೇ ಮೇನ್ ಸರಸ್ವತೀಪುರಂ ಮೈಸೂರು 570 009



ಮಹದೇವೇಗೌಡ, ಕುರುಬರ ಬೆಟ್ಟಹಳ್ಳಿ ಸವಲೇಗೌಡ
ಜ **10-1-1952**

ಮಂಡ್ಯ ಜಿಲ್ಲೆ ಕುರುಬರ ಬೆಟ್ಟಹಳ್ಳಿ : ಸವಲೇಗೌಡ–ಚಿಕ್ಕತಾಯಮ್ಮ : 1 ಗಂ 1 ಹೆ ಮಕ್ಕಳು ; ಪ್ರಾ ಮಾ ಡಾಮಡಹಳ್ಳಿ ಪ್ರೌ ಪಾಂಡವಪುರ, ಬಿ ಎ ಬಿ ಎಡ್ ಮೈಸೂರು : ಪ್ರೌಢಶಾಲಾ ಶಿಕ್ಷಕ : 2 ಕೃತಿಗಳು : ಸಂಧ್ಯಾ ಸುಂದರಿ (ಕ) ಸೋಲು (ಸ ಕ)

ಗೀತಾ ಪ್ರೌಢಶಾಲೆ ಮಂಡ್ಯ



ಮಹಾಂತೇಶಶಾಸ್ತ್ರಿ, ಹಿರೇಮಠ
ತೋಟಪ್ಪಯ್ಯ ಶಾಸ್ತ್ರಿ
ಜ 22-12-1928

ಬಳ್ಳಾರಿ ಜಿಲ್ಲೆ ತಂಬ್ರಹಳ್ಳಿ; ತೋಟಪ್ಪಯ್ಯಶಾಸ್ತ್ರಿ-ಸಂಗಲಾಂಬಿಕೆ; 3 ಗಂ 5 ಹೆ ಮಕ್ಕಳು; ಮೆಟ್ರಿಕ್ಯುಲೇಷನ್; ಒಕ್ಕಲುತನ; ನಾಟ್ಯಕವಿರಾಜ, ಕವಿತಿಲಕ, ಕವಿರತ್ನ ಬಿರುದುಗಳು; 58 ಕೃತಿಗಳು: ನರರಾಕ್ಷಸಿ, ಕುಂಕುಮ, ವೀರ ಅಭಿಮನ್ಯು, ಸಂಗೊಳ್ಳಿ ರಾಯಣ್ಣ, ಅಣ್ಣ-ತಮ್ಮ (ನಾ) ಶಿವಾಚಾರ ದಶರತ್ನ (ಥ) ಜ್ಯೋತಿಷ್ಯ ವಿದ್ಯಾಸಾಗರ, ಸುಲಭ ಜಾತಕ ಫಲರತ್ನ (ಜ್ಯೋತಿಷ್ಯ) ಹವ್ಯಾಸ: ನಾಟಕ ನಿರ್ದೇಶನ, ಅಭಿನಯ, ಜ್ಯೋತಿಷ್ಯ

ಕವಿರಾಜಬೀದಿ ಗದಗ

ಮಹಾದೇವಪ್ಪ, ನಿಡಘಟ್ಟ ರುದ್ರಪ್ಪ
ಜ 6-6-1937

ಚಿಕ್ಕಮಗಳೂರು ಜಿಲ್ಲೆ ನಿಡಘಟ್ಟ; ಜಿ ರುದ್ರಪ್ಪ-ಮರುಳ ಸಿದ್ದಮ್ಮ; 2 ಗಂ 1 ಹೆ ಮಕ್ಕಳು; ಪ್ರಾ ಮಾ ನಿಡಘಟ್ಟ ಪ್ರೌ ಶಿವಮೊಗ್ಗ ಬಿ ಎ ಆನರ್ಸ್ ಎಂ ಎ ಮೈಸೂರು; ಕರ್ನಾಟಕ ವಿಶ್ವವಿದ್ಯಾಲಯದ ತತ್ವಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕ; ಪ್ರೊ॥ ಎಂ ಹಿರಿಯಣ್ಣ ಚಿನ್ನದ ಪದಕ; 2 ಕೃತಿಗಳು: ತರ್ಕಶಾಸ್ತ್ರ, ಈಶ್ವರ ಮತ್ತು ಅನಿಷ್ಟ (ಥ)

ತತ್ವಶಾಸ್ತ್ರ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ 580 003

ಮಹಾದೇವಯ್ಯ, ತಿಪ್ಟೂರು ರುದ್ರಯ್ಯ
ಜ 4-12-1934

ರುದ್ರಯ್ಯ-ಹೊನ್ನಮ್ಮ; ತುಮಕೂರು ಜಿಲ್ಲೆ ತಿಪ್ಟೂರು; 3 ಗಂ ಮಕ್ಕಳು; ಪ್ರಾ ತಿಪ್ಟೂರು ಮಾ ಅಮ್ಮನಘಟ್ಟ, ಪ್ರೌ ಗುಬ್ಬಿ, ಬಿ ಎ ತುಮಕೂರು ಎಂ ಎ ಧಾರವಾಡ; ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಉಪಸಂಪಾದಕ; 4 ಕೃತಿಗಳು: ಶಾಂತಿನಾಥ ಕವಿ (ವಿಮ) ಬುದ್ಧ ಮತ್ತು ಬಸವ (ಜೀ) ಸಚಿತ್ರ ಶಾಲಾ ನಿಘಂಟು, ಸಂಕ್ಷಿಪ್ತ ಕನ್ನಡ ನಿಘಂಟು (ನಿ)

578 8ನೇ ಮುಖ್ಯರಸ್ತೆ ಬೆಂಗಳೂರು 560 040

ಮಹಾಬಲಶೆಟ್ಟಿ, ಗುಂಡಾಲು
ಜ 27-4-1920

ಮಂಗಳೂರು ತಾಲೂಕು ಸೂರಿಂಜೆ; ಜಿ ಬಿ ಶೆಟ್ಟಿ-ರುಕ್ಕುಶೆಡ್ತಿ ; 4 ಗಂ 3 ಹೆ ಮಕ್ಕಳು; ಬಿ ಎ ಮದರಾಸು ವಿಶ್ವವಿದ್ಯಾಲಯ, ಎಂ ಎ ಬನಾರಸ್ ಹಿಂದೂ ವಿಶ್ವ ವಿದ್ಯಾಲಯ ; ಫಲಿಮಾರು ಸರ್ಕಾರಿ ಜ್ಯೂನಿಯರ್ ಕಾಲೇಜಿನ ಪ್ರಿನ್ಸಿಪಾಲ್ ; 6 ಕೃತಿಗಳು: ಸಾಮಾಜಿಕ ಅಧ್ಯಯನ, ಸಮಾಜ ಪರಿಚಯ (ಸ) ಮಹಾರಾಷ್ಟ್ರ, ಕಾರ್ನಾಡ್ ಸದಾಶಿವ ರಾವ್ (ಬಾ)

ಪ್ರಿನ್ಸಿಪಾಲ್ ಸರ್ಕಾರಿ ಜ್ಯೂನಿಯರ್ ಕಾಲೇಜ್ ಫಲಿಮಾರು ದ ಕ ಜಿಲ್ಲೆ



ಮಹಾಲಕ್ಷ್ಮಿ

ಬೆಂಗಳೂರು ; ಬಿ ಕೃಷ್ಣಸ್ವಾಮ್ಯಯ್ಯಂಗಾರ್-ಲಕ್ಷ್ಮಮ್ಮ ; 4 ಗಂ 3 ಹೆ ಮಕ್ಕಳು ; ಪ್ರೌಢಶಾಲೆಯವರೆಗೆ ಅಭ್ಯಾಸ ; 2 ಕೃತಿಗಳು : ಮಂಗಳವಾದ್ಯ, ಬಂಗಾರಬಾಳ್ವೆ (ಕಾ) ಹವ್ಯಾಸ : ಸಂಗೀತ, ಚದುರಂಗ

ನಂ 5 3ನೇ ಅಡ್ಡರಸ್ತೆ ನೆಹರು ನಗರ ಬೆಂಗಳೂರು
560 020

ಮಹಿಷವಾಡಿ, ಭುಜೇಂದ್ರ ಬಸಪ್ಪ [ಭುಜೇಂದ್ರ]
ಜ 3-5-1925 ಮ: 1982




ಅಥಣಿ ತಾಲೂಕು ಮಹಿಷವಾಡಿ : 1 ಗಂ 3 ಹೆ ಮಕ್ಕಳು : ಪ್ರಾ ಮಹಿಷವಾಡಿ ಮಾ ಸವದಿ ಪ್ರೌ ಅಥಣಿ ಮತ್ತು ಬನಹಟ್ಟಿ, ಬಿ ಎ ಆನರ್ಸ್, ಬಿ ಇಡಿ ಬೆಳಗಾವಿ, ಎಂ ಎ ಸಾಂಗ್ಲಿ : ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ: ಮಾಯಾಮಂದಿರ ಕವಿತಾ ಸಂಕಲನಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದ ಬಹುಮಾನ ; ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 14 ಕೃತಿಗಳು : ಮಾಯಾ ಮಂದಿರ, ಹಾಲು-ಹಣ್ಣು (ಕ) ಕನ್ನಡ ಕಾವ್ಯದಲ್ಲಿ ವೀರ ರಸ ನಿರೂಪಣೆ, ಜಾನಪದ ವೀರಗೀತೆಗಳು (ವಿಮ) ಜ್ಞಾನಭಾಸ್ಕರ ಚರಿತೆ, ಅನಂತನಾಥ ಪುರಾಣ (ಸಂ) ಮಹಾವೀರವಾಣಿ (ಅ)

ಮಹಿಷಿ, ಚಂಪಾವತಿ
ಜ 18–11–1922

ಧಾರವಾಡ ; ಬಿಂದೂರಾವ ಮಹಿಷಿ–ಕಮಲಾಬಾಯಿ ಮಹಿಷಿ ; ಪ್ರಾ ಮಾ ಪ್ರೌ ಬಿ ಎ ಎಂ ಎ ಬಿ ಟಿ ಧಾರವಾಡ ; ಶಿಕ್ಷಣ ಇಲಾಖೆಯಲ್ಲಿ ಉದ್ಯೋಗ ; ಪಶ್ಚಿಮ ಜರ್ಮನಿ, ಹಾಲೆಂಡ್, ಫ್ರಾನ್ಸ್, ಇಂಗ್ಲೆಂಡ್ ಪ್ರವಾಸ ; 3 ಕೃತಿಗಳು : ವನಸುಮ, ಗುರುದಕ್ಷಿಣೆ (ಸ ಕ) ಮುದ್ದುಕುಮಾರ (ಕಾ) ಹವ್ಯಾಸ : ಹೊಲಿಗೆ. ಹೆಣಿಗೆ, ತೋಟಗಾರಿಕೆ

ನಂ 39 ಹೊಸಯಲ್ಲಾಪೂರ ಧಾರವಾಡ 580 001



ಮಹೇಶ್ವರಪ್ಪ
ಜ 6-5-1934

ಚಿಕ್ಕಮಗಳೂರು ಜಿಲ್ಲೆ ಗರುಗದ ಹಳ್ಳಿ ; ಹಳ್ಳಿ ತಿಮ್ಮಜ್ಜನ ರಂಗಪ್ಪ–ತಿಮ್ಮಮ್ಮ ; 3 ಗಂ 1 ಹೆ ಮಕ್ಕಳು ; ಪ್ರಾ ಗರುಗದಹಳ್ಳಿ, ಪ್ರೌ ಶಿವಮೊಗ್ಗ, ಬಿ ಎ ಎಂ ಎ ಮೈಸೂರು, ಬಿ ಎಡ್ ಧಾರವಾಡ, ಭಾಷಾಂತರ ಡಿಪ್ಲೊಮಾ ; ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ ; 6 ಕೃತಿಗಳು : ಸಾಮಾಜಿಕ ಒಪ್ಪಂದ (ಸ) ಆಧುನಿಕ ಸಂವಿಧಾನಗಳು (ರಾ) ಟ್ರೆಷರ್ ಐಲ್ಯಾಂಡ್ (ವಿಮ)

ಉಪನ್ಯಾಸಕ ಸರ್ಕಾರಿ ಜ್ಯೂನಿಯರ್ ಕಾಲೇಜು ಚಿತ್ರದುರ್ಗ

ಮಹೇಶ್ವರಯ್ಯ, ಹಿತ್ತಲಮಠದ [ಮಹಿಮ]
ಜ 14–11–1951

ಶಿವಮೊಗ್ಗ ಜಿಲ್ಲೆ ಹಿತ್ತಲ ; ಎಚ್ ಎಂ ವೀರಸಂಗಪ್ಪಯ್ಯ–ಅನ್ನಪೂರ್ಣಮ್ಮ ; ಪ್ರಾ ಮಾ ಪ್ರೌ ಹಿತ್ತಲ, ಬಿ ಎಸ್ ಸಿ ಶಿವಮೊಗ್ಗ, ಎಂ ಎ ಧಾರವಾಡ, ರಾಷ್ಟ್ರಭಾಷಾ ವಿಶಾರದ ; ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಭಾಷಾ ಶಾಸ್ತ್ರದ ಅಧ್ಯಾಪಕ ; ಕಾವ್ಯ ಶ್ರೀ ಪ್ರಕಾಶನದ ಸಂಸ್ಥಾಪಕ ; 1 ಕೃತಿ : ಕುಮುದ್ವತಿ (ಕ)

ಕನ್ನಡ ಅಧ್ಯಯನಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003



ಮುಳಗಿ, ರಾಮಚಂದ್ರ ನರಸಿಂಗರಾವ್
ಜ 8-1-1911

ಶಿವಮೊಗ್ಗ ಜಿಲ್ಲೆ ಸಾಗರ; ನರಸಿಂಗರಾವ್ ಮುಳಗಿ–ತುಳಸಾಬಾಯಿ; 3 ಗಂ 3 ಹೆ ಮಕ್ಕಳು : ಮೆಟ್ರಿಕ್ಯುಲೇಷನ್ ಮುಂಬೈ : ಹಲವು ಪತ್ರಿಕೆಗಳ ಸಹಾಯಕ ಸಂಪಾದಕ; ಉಪಸಂಪಾದಕನಾಗಿ ಸೇವೆ; 30 ಕೃತಿಗಳು : ಮಗನೇ ಅಲ್ಲ. ಶ್ವೇತಾಂಬರಿ (ಕಾ) ಮಿತವ್ಯಯ, ಹೊಸನಾಣ್ಯಗಳು ಹಾಗೂ ಹೊಸ ತೂಕ ಅಳತೆಗಳು (ಪ್ರ) ಪುರಂದರದಾಸರ ಭಕ್ತಿಮಾರ್ಗ, ಕವಿ ಲಕ್ಷ್ಮೀಶನ ಶಬ್ದಾಲಂಕಾರ ವೈಭವ (ವಿಮ) ಇಸೋಪನ ನೀತಿ ಕಥೆಗಳು. ದೃಢ ನಿರ್ಧಾರ (ಬಾ) ಕಾಶ್ಮೀರದ ಬಗ್ಗೆ ಸತ್ಯಸಂಗತಿಗಳು (ರಾ)

ಇಟಗಿ ಮಾರುತಿ ಓಣಿ ಹುಬ್ಬಳ್ಳಿ



ಮಾಂಜರೇಕರ ಹನುಮಂತರಾವ್
ಜ 19-9-1903

ಕಾರವಾರ ತಾಲೂಕು ನಂದನಗದ್ದೆ; ಮಾಧವ ಮಾಂಜರೇಕರ–ಗೌರಿ; ನಿವೃತ್ತ ಜಿಲ್ಲಾ ವಾರ್ತಾಧಿಕಾರಿ; ಉತ್ತರ ಕನ್ನಡ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ; 5 ಕೃತಿಗಳು : ಸಾಹಿತ್ಯ ಯಾತ್ರೆ (ಪ್ರ) ರವೀಂದ್ರನಾಥರ ಕಿರುಗತೆಗಳು (ಸ ಕ) ಗೀತಾ ಬೋಧ (ಧ) ನನ್ನ ಬಾಲ್ಯದ ನೆನಹುಗಳು (ಜೀ) ಉತ್ತರ ಕನ್ನಡದ ಬರಹಗಾರರು (ಸೂಚಿ)

ಖಾದಿಭಂಡಾರ ಕಾರವಾರ ಉ ಕ ಜಿಲ್ಲೆ



ಮಾತೆ ಮಹಾದೇವಿ
ಜ 13-3-1949

ಚಿತ್ರದುರ್ಗ : ಎಸ್ ಆರ್ ಬಸಪ್ಪ–ಗಂಗಮ್ಮ : ಪ್ರಾ ಮಾ ಪ್ರೌ ಬಿ ಎಸ್ ಸಿ ಚಿತ್ರದುರ್ಗ. ಎಂ ಎ ಧಾರವಾಡ : ಸನ್ಯಾಸಿನಿ : ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಅಧ್ಯಕ್ಷಿಣಿ; 22 ಕೃತಿಗಳು : ಮಾತೃವಾಣಿ, ವಿರಹತರಂಗ, ವಚನ ಸುಧಾ (ಕ) ನೀಲಮ್ಮ–ಮಧುಮಮ್ಮ, ಪ್ರಭುದೇವ, ಶಿವಯೋಗಿಣಿ

(ಜೀ) ಬಸವ ತತ್ವದರ್ಶನ, ಲಿಂಗಾಯತ ಧರ್ಮ ಕೈಪಿಡಿ, ದೇವನಡಿಗೆ (ಧ) ಹೆಪ್ಪಿಟ್ಟ ಹಾಲು, ತರಂಗಿಣಿ (ಕಾ) ಅಕ್ಕನ ಅಮರವಾಣಿ, ಬಸವ ವಚನಸುಧಾ (ಸಂ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

ಅಕ್ಕಮಹಾದೇವಿ ಆಶ್ರಮ ಉಳವಿರಸ್ತೆ ಧಾರವಾಡ 580 003



ಮಾಲತಿ ಎ ಪಿ
ಜ 6-5-1944

ಉತ್ತರ ಕನ್ನಡ ಜಿಲ್ಲೆ ಭಟ್ಕಳ; ಗಣೇಶ ಕೃಷ್ಣ ಭಟ್ಟ-ಕಾವೇರಿ: 1 ಗಂ 1 ಹೆ ಮಕ್ಕಳು; ಎಸ್ ಎಸ್ ಎಲ್ ಸಿ, ಹಿಂದಿ ರಾಷ್ಟ್ರಭಾಷಾ; ಗ್ರಾಮೀಣ ಮಹಿಳೆಯರು ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ, ಅನಿಶ್ಚಯ ಕಾದಂಬರಿಗೆ ವಿದ್ಯಾವರ್ಧಕ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ; 10 ಕೃತಿಗಳು: ಅರ್ಧಾಂಗಿ, ಅತೃಪ್ತೆ, ಅನಿಶ್ಚಯ (ಕಾ) ಗ್ರಾಮೀಣ ಮಹಿಳೆಯರು (ಪ್ರ) ಹಳ್ಳಿಗೆ ಬಂದ ಎಳೆಯರು (ಬಾ) ಹವ್ಯಾಸ: ಪ್ರವಾಸ, ಪಶುಸಂಗೋಪನೆ

ಆರ್ಯಾಪು ಅಂಚೆ ಪುತ್ತೂರು ದ ಕ ಜಿಲ್ಲೆ

ಮಾಸ್ತಿ ವೆಂಕಟೇಶ ಅಯ್ಯಂಗಾರ್ [ಶ್ರೀನಿವಾಸ]
ಜ 6-6-1891



ಕೋಲಾರಜಿಲ್ಲೆ ಮಾಸ್ತಿ; 6 ಹೆ ಮಕ್ಕಳು; ಪ್ರಾ ಶಿವಾರಪಟ್ಟಣ, ಕೃಷ್ಣರಾಜಪೇಟೆ, ಪ್ರೌ ಎಫ್ ಎ ಮೈಸೂರು, ಬಿ ಎ ಎಂ ಸಿ ಎಸ್ ಬೆಂಗಳೂರು, ಎಂ ಎ (ಇಂಗ್ಲಿಷ್) ಮದರಾಸು; ಮೈಸೂರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ಎಕ್ಸೈಸ್ ಕಮಿಶನರ್ ಆಗಿ ನಿವೃತ್ತಿ; ಮೈಸೂರು ಮಹಾರಾಜರಿಂದ ರಾಜಸೇವಾಸಕ್ತ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾದೆಮಿ ಬಹುಮಾನ, ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ಗೌರವ ಡಿಲಿಟ್: ಬೆಳಗಾವಿಯಲ್ಲಿ ನಡೆದ 15ನೇ ಕನ್ನಡ ಸಾಹಿತ್ಯ ಸಮ್ಮೇಳನದ (1929) ಅಧ್ಯಕ್ಷ, ಅಖಿಲಭಾರತ ಬರಹಗಾರರ ಸಮ್ಮೇಳನದ ಅಧ್ಯಕ್ಷ, ಕನ್ನಡ ಸಾಹಿತ್ಯಪರಿಷತ್ತಿನ ಉಪಾಧ್ಯಕ್ಷ, ಪಿ ಇ ಎನ್ ಅಧ್ಯಕ್ಷ, ಸಾಹಿತ್ಯ ಅಕಾದೆಮಿ ಸದಸ್ಯ, ಜೀವನ ಪತ್ರಿಕೆ ಸಂಪಾದಕ; ಶ್ರೀನಿವಾಸ ಅಭಿನಂದನ ಗ್ರಂಥ ಸಮರ್ಪಣೆ; 65 ಕೃತಿಗಳು: ಶ್ರೀರಾಮ ಪಟ್ಟಾಭಿಷೇಕ,

ರಾಮ ನವಮಿ, ಚಿಲುವು (ಕ) ಮೊಸರಿನ ಮಂಗಮ್ಮ, ಚಂದ್ರವದನಾ, ಸುಬ್ಬಣ್ಣ (ಸ ಕ) ಚೆನ್ನಬಸವ ನಾಯಕ, ಚಿಕವೀರ ರಾಜೇಂದ್ರ, ಶೇಷಮ್ಮ (ಕಾ) ಯಶೋಧರಾ, ಕಾಕನ ಕೋಟೆ, ಮಂಜುಳಾ (ನಾ) ಆದಿ ಕವಿ ವಾಲ್ಮೀಕಿ, ಕರ್ನಾಟಕ ಜನಪದ ಸಾಹಿತ್ಯ ವಿಮರ್ಶೆ-4 ಭಾಗಗಳು (ವಿಮ) ರವೀಂದ್ರನಾಥ ಠಾಕೂರ್, ಶ್ರೀ ರಾಮಕೃಷ್ಣ (ಜೀ) ಓಯರ್ ಮಹಾರಾಜ, ಚಂಡ ಮಾರುತ, ಚಿತ್ರಾಂಗದಾ (ಅ) ನಮ್ಮ ನುಡಿ (ಭಾ ವಿ) ಧರಣಿ ಪಂಡಿತನ ಬಿಜ್ಜಳರಾಯ ಚರಿತೆ, ಕರ್ಣಾಟಕ ಭಾರತ ಕಥಾ ಮಂಜರಿ, ಸರ್ ಎಂ ವಿಶ್ವೇಶ್ವರಯ್ಯ (ಸಂ) ಭಾವ-3 ಭಾಗಗಳು (ಆತ್ಮಕಥೆ)

49 11ನೇ ಕ್ರಾಸ್ ಗವಿಪುರಂ ಬಡಾವಣೆ ಬೆಂಗಳೂರು 560 019



ಮಾಳವಾಡ, ಶಾಂತಾದೇವಿ


ಜ 10-12-1922

ಬೆಳಗಾವಿ ; ಮುರಿಗೆಪ್ಪಶೆಟ್ಟಿ-ಜಯವಂತಿ ದೇವಿ ; ಪ್ರಾ ಬೆಳಗಾವಿ, ಸಾಹಿತ್ಯ ಪರಿಷತ್ತಿನ ಸಾಹಿತ್ಯ ಜಾಣ ; ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಅಖಿಲಭಾರತ ಅಕ್ಕನ ಬಳಗದ ಸದಸ್ಯೆ ; 11 ಕೃತಿಗಳು : ಮೊಗ್ಗೆಯ ಮಾಲೆ, ಕುಂಕುಮ ಬಲ (ಸ ಕ) ಬಸವ ಪ್ರಕಾಶ (ಕಾ) ಕೆಳದಿ ಚೆನ್ನಮ್ಮ (ಜೀ) ಸೊಬಗಿನ ಮನೆ (ಗೃ) ಶ್ರೀ ಗಿರಿಯಿಂದ ಹಿಮಗಿರಿಗೆ (ಪ್ರವಾ) ಹರಿಹರನ ಪ್ರಾರ್ಥನೆಗಳು (ಸಂಗ್ರ) ನಂದಾದೀಪ (ಸಂ) ಹವ್ಯಾಸ : ಕುಶಲಕಲೆ

ಪ್ರಶಾಂತ ಕಲ್ಯಾಣನಗರ ಧಾರವಾಡ 580 007

ಮಾಳವಾಡ, ಸಂಗಪ್ಪ ಸಂಗನಬಸಪ್ಪ

ಜ 14-11-1910



ಧಾರವಾಡ ಜಿಲ್ಲೆ ಮೆಣಸಗಿ ; ಗೋವಿನಕೊಪ್ಪ ವಿಜಾಪುರ ಧಾರವಾಡ ಕೊಲ್ಲಾಪುರಗಳಲ್ಲಿ ಪ್ರಾಥಮಿಕ ಮಾಧ್ಯಮಿಕ ಉಚ್ಚ ಶಿಕ್ಷಣ, ಎಂ ಎ ಮುಂಬೈ ವಿಶ್ವವಿದ್ಯಾಲಯ ; ಧಾರವಾಡದ ಕರ್ನಾಟಕ ಕಾಲೇಜಿನ ಪ್ರಾಧ್ಯಾಪಕ, ಕನ್ನಡ ಸಂಶೋಧನ ಸಂಸ್ಥೆಯ ಗೌರವ ನಿರ್ದೇಶಕ, ಪ್ರಿನ್ಸಿಪಾಲ್, ಯು ಜಿ ಸಿ ಪ್ರಾಧ್ಯಾಪಕ, ಪಠ್ಯ ಪುಸ್ತಕ ನಿರ್ದೇಶನಾಲಯದ ನಿರ್ದೇಶಕ ; ಅಮೆರಿಕ ಪ್ರವಾಸ ; ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ ; ಮುಂಬೈ ಸರಕಾರದ ಕನ್ನಡ ಸಂಸ್ಕೃತಿ

ಸಂಶೋಧನಾ ಮಂಡಲಿ, ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಪಿ ಇ ಎನ್, ಅಖಿಲಭಾರತ ಪ್ರಾಚ್ಯ ವಿದ್ಯಾ ಪರಿಷತ್ತುಗಳ ಆಜೀವ ಸದಸ್ಯ, ರಾಜ್ಯ ಸಾಹಿತ್ಯ ಅಕಾದೆಮಿ, ಕೇಂದ್ರ ಅಕಾದೆಮಿ ಕನ್ನಡ ಸಮಿತಿ ಸದಸ್ಯ, ವಿಜಾಪುರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ; 30 ಕೃತಿಗಳು : ಸಾಹಿತ್ಯ ಸಮಾಲೋಚನೆ, ಪುಸ್ತಕ ಪ್ರಪಂಚ, ಸಾಹಿತ್ಯ ಸಂಗಮ (ವಿಮ) ಹರಿಹರನ ಮೂರು ರಗಳೆಗಳು, ರಾಘವಾಂಕ ಚರಿತೆ, ಸಂಗೀತ ರತ್ನ (ಸಂ) ಶ್ರೀ ಅರವಿಂದ ಸ್ಮರಣೆ, ಉತ್ತಂಗಿ ಚೆನ್ನಪ್ಪ (ಜೀ) ಶಿಶುನಾಳ ಶರೀಫರು, ಬಸವಣ್ಣನವರು (ಬಾ) ಸ್ವಾದಿ ಅರಸು ಮನೆತನ (ಇ) ಕಾವ್ಯ ಪದ ಮಂಜರಿ (ಕೋಶ) ಶ್ರೀಮಾತೆಯವರ ವಿಚಾರ ಧಾರೆ, ಅರವಿಂದ ಸಂಗಮ (ಧ)

ಪ್ರಶಾಂತ ಕಲ್ಯಾಣ ನಗರ ಧಾರವಾಡ 580 007



ಮಾಳಿ, ಹನುಮಂತ ಭೀಮಪ್ಪಾ

ಜ 5-2-1942

ಬಿಜಾಪುರ ಜಿಲ್ಲೆ ಗುಣದಾಳ ; ಭೀಮಪ್ಪ–ಪಾರ್ವತಿ ದೇವಿ ; ಮುಲ್ಕಿ ಪರೀಕ್ಷೆ ಮುಂಬೈ, ಎಸ್ ಎಸ್ ಎಲ್ ಸಿ, ಬಿ ಎ ಎಂ ಎ (ಸಮಾಜಶಾಸ್ತ್ರ) ಧಾರವಾಡ, ಡಿಪ್ಲೊಮಾ ಇನ್ ಡೆಮೊಗ್ರಫಿ ಮುಂಬೈ ; ಇಳಕಲ್ಲದ ಎಸ್ ವಿ ಎಂ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ; 5 ಕೃತಿಗಳು : ಸಮಾಜ ಶಾಸ್ತ್ರ ಪ್ರವೇಶ, ಭಾರತೀಯ ಸಾಮಾಜಿಕ ಸಮಸ್ಯೆಗಳು, ಹಿಂದೂ ವಿವಾಹ ಪದ್ಧತಿ, ಸಾಮಾಜಿಕ ಮಾನವಶಾಸ್ತ್ರ

ಎಸ್ ವಿ ಎಂ ಕಾಲೇಜ್ ಇಳಕಲ್ಲ ಬಿಜಾಪುರ ಜಿಲ್ಲೆ

ಮಿರ್ಜಿ, ಅಣ್ಣಪ್ಪ ಅಪ್ಪಣ್ಣ [ಇಂದೂತನಯ, ಮಿರ್ಜಿ ಅಣ್ಣಾರಾಯ, ವೀರವರ್ಧಮಾನ]

ಜ 25-8-1915



ಬೆಳಗಾವಿ ಜಿಲ್ಲೆ ಶೇಡಬಾಳ ; ಅಪ್ಪಣ್ಣ–ಚಂದ್ರವ್ವ; 2 ಗಂ 4 ಹೆ ಮಕ್ಕಳು ; ಎಸ್ ಎಸ್ ಎಲ್ ಸಿ ; ಶಿಕ್ಷಕ ವೃತ್ತಿ ; ರಾಷ್ಟ್ರಪತಿಗಳಿಂದ ಆದರ್ಶ ಶಿಕ್ಷಕ ಪುರಸ್ಕಾರ; ನಿಸರ್ಗ, ಜೈನಧರ್ಮ ಕೃತಿಗಳಿಗೆ ದೇವರಾಜ ಬಹದ್ದೂರ್ ಬಹುಮಾನ, 'ರತ್ನ ಕರಂಡಕ

ಶ್ರಾವಕಾಚಾರ' ಕೃತಿಗೆ ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ; ಚಂದ್ರಗಂಗಾ ಜ್ಞಾನ ಪೀಠದ ಸ್ಥಾಪಕ ಹಾಗೂ ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯ; ಸನ್ಮತಿ ಮಾಸ ಪತ್ರಿಕೆಯ ಸಂಪಾದಕ; 50 ಕೃತಿಗಳು: ನಿಸರ್ಗ, ರಾಷ್ಟ್ರಪುರುಷ (ಕಾ) ಪ್ರಣಯ ಸಮಾಧಿ, ನಮ್ಮೂರ ನಾಯಕರು (ಸ ಕ) ದತ್ತವಾಣಿ, ಭರತೇಶನ ನಾಲ್ಕು ಚಿತ್ರಗಳು (ವಿಮ) ಜೈನಧರ್ಮ (ಧ) ಮಹಮ್ಮದ ಪೈಗಂಬರ, ಖಾರವೇಲ (ಜೀ) ರತ್ನಕರಂಡಕ ಶ್ರಾವಕಾಚಾರ, ಸಮಯಸಾರ (ಸಂ) ಮೂಲ ಶಿಕ್ಷಣ ಮೌಲ್ಯಮಾಪನ (ಶಿ)

ಶ್ರೀ ಚಂದ್ರಗಂಗಾ ಜ್ಞಾನಪೀಠ ಶೇಡಬಾಳ ಅಂಚೆ ಬೆಳಗಾವಿ ಜಿಲ್ಲೆ

ಮಿರ್ಜಿ, ನಾರಾಯಣ ಶರ್ಮ

ಜ 10-3-1889



ಬಿಜಾಪುರ ಜಿಲ್ಲೆ ರಬಕವಿ: ಭೀಷ್ಮಾಚಾರ್ಯ-ರಾಧಾಬಾಯಿ: 4 ಗಂ ಮಕ್ಕಳು: ಮ್ಯಾಟ್ರಿಕ್‌ವರೆಗೆ ಶಿಕ್ಷಣ; ಕರ್ನಾಟಕ ಮಿತ್ರ, ಕರ್ನಾಟಕ ವೃತ್ತ, ರಾಜಹಂಸ, ಕರ್ಮವೀರ, ಸಂಯುಕ್ತ ಕರ್ನಾಟಕ ಮುಂತಾದ ಪತ್ರಿಕೆಗಳಲ್ಲಿ ಸೇವೆ; ಕರ್ನಾಟಕದ ವಿದ್ಯಾವರ್ಧಕ ಸಂಘದ ಅಜೀವ ಸದಸ್ಯ: 5 ಕೃತಿಗಳು: ಭಾರತೀಯರ ಇತಿಹಾಸ (ಇ) ಶ್ರೀ ರಾಮಕೃಷ್ಣ ಪರಮಹಂಸರ ಬೋಧಾಮೃತ (ಧ) ಪುನರ್ಜನ್ಮ (ಅ) ಶ್ರೀ ಗೌರಾಂಗ ಪ್ರಭುವಿನ ಚರಿತ್ರೆ

ಚಾಪೇಕರ ಬೀದಿ ಧಾರವಾಡ

ಮಿರ್ಜಿ, ಮಹಾರುದ್ರಪ್ಪ ಮಹಾಲಿಂಗಪ್ಪ [ಪುರಾತನರ ಕಂದ]

ಜ 5-9-1888

ಹುಬ್ಬಳ್ಳಿ; ಮಹಾಲಿಂಗಪ್ಪ-ಗಂಗವ್ವ; 7 ಗಂ 3 ಹೆ ಮಕ್ಕಳು; ತ್ರಿಷಷ್ಟಿ ಪುರಾತನ ವಿಲಾಸ ಕೃತಿಗೆ ವಿದ್ಯಾವರ್ಧಕ ಸಂಘದ ಬಹುಮಾನ; 18 ಕೃತಿಗಳು: ಅರವತ್ತು ಮೂರು ಪುರಾತನರ ಚರಿತೆ, ಶ್ರೀ ಕಲಬುರ್ಗಿಯ ಗದ್ದಿಗೆ ಮಠಾಧ್ಯಕ್ಷರಾದ ಚರಲಿಂಗಸ್ವಾಮಿಗಳವರ ನಾಮಾವಳಿ, ಮಹಾಶರಣೆ ಹೇಮರೆಡ್ಡಿ ಮಲ್ಲಮ್ಮನ ಚರಿತ್ರಸಾರ

ದಾಜೀಬಾನಪೇಟೆ ಹುಬ್ಬಳ್ಳಿ

ಮುಕ್ತಾ, ಕಳ್ಳಂಬೆಳ್ಳ ನರಸಿಂಹಮೂರ್ತಿ
ಜ 30-4-1951

ಚಿತ್ರದುರ್ಗ; ಸಿ ಬಿ ನರಸಿಂಹಮೂರ್ತಿ–ಸಿ ಎನ್ ಕಮಲ : ಪ್ರಾ ಬಸ್ರೂರು, ಪ್ರೌ ಸರಗೂರು, ಬಿ ಎ ಬಿ ಎಡ್ ತೆಲುಗು ಡಿಪ್ಲೊಮಾ ಮೈಸೂರು ; ಮೈಸೂರು ಮಹಾರಾಣಿ ಕಿರಿಯ ಕಾಲೇಜಿನಲ್ಲಿ ಅಧ್ಯಾಪಕಿ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯೆ ; 2 ಕೃತಿಗಳು : ಆಶ್ರಯ, ಮರೀಚಿಕೆ (ಕಾ) ಹವ್ಯಾಸ : ಸಂಗೀತ

ಸಂ 320 ಮೊದಲನೆ ಅಡ್ಡರಸ್ತೆ ಡಿ ಸುಬ್ಬಯ್ಯರಸ್ತೆ ಮೈಸೂರು

1989
1906
83

ಮುಗಳಿ, ರಂಗನಾಥ ಶ್ರೀನಿವಾಸ [ರಸಿಕ ರಂಗ]
ಜ 15-7-1906



ಧಾರವಾಡ ಜಿಲ್ಲೆ ಹೊಳೆ ಆಲೂರು ; ಶ್ರೀನಿವಾಸ–ಕಮಲ : 1 ಗಂ 1 ಹೆ ಮಕ್ಕಳು ; ಪ್ರಾ ಬಾಗಲಕೋಟೆ, ಮಾ ಬಾಗಲಕೋಟೆ ಬಿಜಾಪುರ, ಬಿ ಎ ಎಂ ಎ ಧಾರವಾಡ, ಬಿ ಟಿ ಮುಂಬೈ, ಡಿ ಲಿಟ್ ಪುಣೆ : ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತಿ; ಸ್ವಿಟ್ಜರ್‌ಲೆಂಡ್, ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್, ಇಂಗ್ಲೆಂಡ್ ಪ್ರವಾಸ ; 'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾದೆಮಿ ಬಹುಮಾನ (1956); ತುಮಕೂರು ಜಿಲ್ಲೆ ಸಿದ್ಧಗಂಗಾ ಕ್ಷೇತ್ರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (1964) ಕನ್ನಡ ಸಾಹಿತ್ಯ ಪರಿಷತ್ತು, ಪಿ ಇ ಎನ್, ಕೇಂದ್ರ ಸಾಹಿತ್ಯ ಅಕಾದೆಮಿ ಸದಸ್ಯ ; 33 ಕೃತಿಗಳು : ಬಾಸಿಗ, ನವಮಾನವ (ಕ) ಕನಸಿನ ಕೆಳದಿ (ಸ ಕ) ಬಾಳುರಿ, ಅನ್ನ (ಕಾ) ಎತ್ತಿದ ಕೈ, ಸೇವಾ ಪ್ರದೀಪ (ನಾ) ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಸಾಹಿತ್ಯದ ಇತಿಹಾಸ (ಸಾ) ವಿಮರ್ಶೆಯ ವ್ರತ, ಸಾಹಿತ್ಯೋಪಾಸನೆ (ವಿಮ) ಮಾತೆಂಬುದು ಜ್ಯೋತಿರ್ಲಿಂಗ, ಕನ್ನಡದ ಕರೆ (ಪ್ರ) ಕನ್ನಡ ಕಾವ್ಯ ಸಂಚಯ, ಕಾವ್ಯ ಸಂಕಲನ (ಸಂ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ಸಿತಾರ್ ನುಡಿಸುವುದು

'ಶ್ರೀ ಕಮಲಾಲಯ' 95ಬಿ ರಾಜಾಜಿನಗರ ಬೆಂಗಳೂರು 560 010



ಮುಜಾವರ, ಅಸಫ ಅಲಿ ಹುಸೇನಸಾಬ
ಜ 11-4-1953

ಬೆಳಗಾವಿ ಜಿಲ್ಲೆ ತುರಮರಿ; ಹುಸೇನಸಾಬ-ಇಮಾಮಾಬಿ; ಪ್ರೌಢಶಾಲೆಯವರೆಗೆ ಅಭ್ಯಾಸ; ಪೋಲೀಸ್ ಕಾನಸ್ಟೇಬಲ್; ಕನ್ನಡ ಸಾಹಿತ್ಯ ಮಂಟಪ, ಜನ ಸಾಹಿತ್ಯ ಪೀಠ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ; 4 ಕೃತಿಗಳು: ಮುಂಬೆಳಗು (ಕ) ಮಣ್ಣಿಗಾಗಿ ಮರಣ (ನಾ) ಪ್ರಕೃತಿ, ಪರಿಸರ (ಕಾ) ಹವ್ಯಾಸ: ಛಾಯಾಗ್ರಹಣ

ಹಿರೇಬಾಗೇವಾಡಿ ಪೋಲೀಸ್ ಠಾಣೆ ಬೆಳಗಾವಿ ಜಿಲ್ಲೆ

ಮುಜಾವರ, ಮುಹಮ್ಮದಗೌಸ ರಾಜೇಸಾಬ
ಜ 12-12-1928

ಧಾರವಾಡ; 1 ಗಂ 4 ಹೆ ಮಕ್ಕಳು; ಕನ್ನಡ ಮುಲ್ಕಿ ಪರೀಕ್ಷೆ, ಪುಣೆ ಬೋರ್ಡಿನ ಎಸ್ ಎಸ್ ಸಿ, ಇಂಟರ್ ಸೈನ್ಸ್; ವ್ಯಾಪಾರ ವೃತ್ತಿ; 2 ಕೃತಿಗಳು: ಹಜರತ್ ಮಹಮ್ಮದ ಪೈಗಂಬರರ ಜೀವನ ಚರಿತ್ರೆ (ಜೀ) ಇಸ್ಲಾಮು ಹಾಗೂ ಜನಾಭಿಪ್ರಾಯ (ಧ)

ಲೈನ್ ಬಜಾರ್ ಧಾರವಾಡ

ಮುಡೂರು ತಮ್ಮಯ್ಯಗೌಡ
ಜ 1-2-1930



ದಕ್ಷಿಣ ಕನ್ನಡ ಜಿಲ್ಲೆ ವಾರಣಾಶಿ; ಸುಬ್ಬಪ್ಪಗೌಡ-ಬಾಲಕ್ಕ; 1 ಗಂ 2 ಹೆ ಮಕ್ಕಳು; ಎಂ ಎ ಬಿ ಎಡ್, ಕನ್ನಡ ವಿದ್ವಾನ್; ಕನ್ನಡ ಸಾಹಿತ್ಯ ಪರಿಷತ್ ಸದಸ್ಯ, ಪ್ರತಿಮಾ ಪ್ರಕಾಶನದ ಸ್ಥಾಪಕ; 18 ಕೃತಿಗಳು: ಕಾಡುಮಲ್ಲಿಗೆ, ಹೊಸತು ಕಟ್ಟು, ಹೊಸ ಕೆರೆಯ ಹೊನ್ನಮ್ಮ, ಬೆಳ್ಳಿ ಬೆಳಕು, ನವದಿಗಂತ; ತುಳು ಭಾಷೆಯಲ್ಲೂ ಕೃತಿ ರಚನೆ

ಪಾಜ ಅಂಚೆ ದ ಕ ಜಿಲ್ಲೆ 574 232



ಮುತಾಲಿಕ ದೇಸಾಯಿ, ಧ್ರುವರಾಜ ವೆಂಕಟರಾವ
ಜ 14-3-1928

ಬೆಳಗಾವಿ ; ವೆಂಕಟರಾವ ಹಣಮಂತರಾವ ಮುತಾಲಿಕ ದೇಸಾಯಿ–ಮನೋರಮಾ ; 2 ಗಂ 2 ಹೆ ಮಕ್ಕಳು ; ಪ್ರಾ ಮಾ ಪ್ರೌ ಬಿ ಎಸ್ ಸಿ ಎಲ್ ಎಲ್ ಬಿ ಬೆಳಗಾವಿ ; ವಕೀಲವೃತ್ತಿ ; ಬೆಳಗಾವಿ ಕರ್ನಾಟಕ ಸಂಘದ ಕಾರ್ಯದರ್ಶಿ, ಧಾರವಾಡ ಕಲೋದ್ಧಾರಕ ಸಂಘದ ಸಲಹೆಗಾರ ; 1 ಕೃತಿ : ವಾರ್ತಾ ಸಂಸ್ಥೆಗಳು ; ಹವ್ಯಾಸ : ನಟನೆ ದಿಗ್ದರ್ಶನ

ಶಿಖರೆ ಕಾಂಪೌಂಡ್ ದೇಶಪಾಂಡೆ ನಗರ ಹುಬ್ಬಳ್ಳಿ

ಮುತ್ತಾಚಾರ್ಯ, ತಾತಕುಣಿ ವೆಂಕಟರಮಣಾಚಾರ್ಯ [ತಾ ವೆಂ ಮು]
ಜ 30-6-1923



ಬೆಂಗಳೂರು ಜಿಲ್ಲೆ ತಾತಕುಣಿ ; ವೆಂಕಟರಮಣಾಚಾರ್ಯ–ನಂಜಮ್ಮ ; 1 ಗಂ 4 ಹೆ ಮಕ್ಕಳು ; ಪ್ರಾ ಮಾ ನೆಲಮಂಗಲ, ಪ್ರೌ ತುಮಕೂರು, ಬಿ ಎ ಆನರ್ಸ್ ಮೈಸೂರು, ಬಿ ಎಡ್ ಬೆಂಗಳೂರು, ಸಂಗೀತದಲ್ಲಿ ವಿದ್ವತ್ ಪರೀಕ್ಷೆ ; ಕನ್ನಡ ಸಾಹಿತ್ಯ ಪರಿಷತ್ ಸದಸ್ಯ ; 12 ಕೃತಿಗಳು : ಪೌರುಷ ಪಾಂಚಜನ್ಯ, ಚಂದ್ರಮತೀ ವೃತ್ತಾಂತಂ (ಕ) ಸತ್ಯಕ್ಕೆ ಜಯ, ವಿಶ್ವಕರ್ಮ ಪುರಾಣ (ಸ ಕ) ವೇದೋಕ್ತ ವಿಶ್ವಕರ್ಮಸೂಕ್ತ, ವಿಶ್ವಕರ್ಮ ಪುರಾಣ (ಅ) ಜಾನಪದ (ಬಾ) ಹವ್ಯಾಸ : ಸಂಗೀತ

53–ಬಿ 1ನೇ ಕ್ರಾಸ್ 5ನೇ ಮುಖ್ಯ ರಸ್ತೆ ಚಾಮರಾಜಪೇಟೆ ಬೆಂಗಳೂರು–18

ಮುತ್ತಾಳ, ಆಡೂರ ಬಸವರಡ್ಡಿ
ಜ 2-12-1923

ರಾಯಚೂರು ಜಿಲ್ಲೆ ಆಡೂರ ; ಬಸವರಡ್ಡಿ–ವೀರಮ್ಮ ; 2 ಗಂ 2 ಹೆ ಮಕ್ಕಳು ; ಮ್ಯಾಟ್ರಿಕ್‌ವರೆಗೆ ಅಭ್ಯಾಸ ; ಅಶೋಕ ಮುದ್ರಣಾಲಯದ ಮಾಲೀಕ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 5 ಕೃತಿಗಳು : ಕಳಚಲಿದೆ ರತ್ನ, ಏಕಲವ್ಯನ ಗುರುಭಕ್ತಿ, ಪುಣ್ಯಸ್ಮರಣೆ, ಹಿಂತಿರುಗಲಿಲ್ಲ, ಗಾಂಧೀಜಿ

ಅಶೋಕ ಮುದ್ರಣ ಕೊಪ್ಪಳ ರಾಯಚೂರು ಜಿಲ್ಲೆ

ಮುದ್ದಾಚಾರಿ, ಬಸವಾಚಾರಿ

ಜ 8-8-1929

ಮಂಡ್ಯ ಜಿಲ್ಲೆ ಇಂಡುವಾಳು ; ಚಿಕ್ಕಪುಟ್ಟಾಚಾರ್ಯ-ಲಿಂಗಮ್ಮ ; 2 ಗಂ 1 ಹೆ ಮಕ್ಕಳು; ಪ್ರಾ ಮಾ ಇಂಡುವಾಳು, ಪ್ರೌ ಮಂಡ್ಯ, ಬಿ ಎ ಆನರ್ಸ್ ಎಂ ಎ (ಇತಿಹಾಸ) ಮೈಸೂರು; ಮೈ ವಿ ಇತಿಹಾಸ ವಿಭಾಗದಲ್ಲಿ ಉಪಪ್ರಾಧ್ಯಾಪಕ ; ಕ್ಯಾಂಡಿ ಚಿನ್ನದ ಪದಕ, ಜಯ ಚಾಮರಾಜ ಒಡೆಯರ್ ಚಿನ್ನದ ಪದಕ ; ಮಾನಸಗಂಗೋತ್ರಿ ಇತಿಹಾಸ ಸಂಘದ ಸದಸ್ಯ ; 8 ಕೃತಿಗಳು : ಆಧುನಿಕ ಭಾರತ, ಆಧುನಿಕ ಯೂರೋಪಿನ ಚರಿತ್ರೆ, ವಿಶ್ವದ ಪ್ರಾಚೀನ ಸಂಸ್ಕೃತಿಗಳು, ದಕ್ಷಿಣ ಭಾರತದ ಇತಿಹಾಸ (ಇ)

ನಂ 155 11ನೇ ಮೈನ್ ರಸ್ತೆ ಸರಸ್ವತೀಪುರಂ ಮೈಸೂರು 570 009

ಮುಂದೇನೂರ ಸಂಗಣ್ಣ

ಜ 17-3-1927

ಬಳ್ಳಾರಿ ಜಿಲ್ಲೆ ಉಚ್ಚಂಗಿದುರ್ಗ ; ಕೊಟ್ರಬಸಪ್ಪ-ಸಿದ್ದಮ್ಮ : 1 ಗಂ 3 ಹೆ ಮಕ್ಕಳು; ಪ್ರಾ ಮಾ ಚಿಗಟೇರಿ, ಪ್ರೌ ಹರಪನಹಳ್ಳಿ, ಕಾಲೇಜು ಶಿಕ್ಷಣ ಆಂಧ್ರ; ವ್ಯಾಪಾರ ಮತ್ತು ಒಕ್ಕಲುತನ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 8 ಕೃತಿಗಳು : ಭಾರತ ಪ್ರೇಮ ಕಥೆಗಳು (ಅ) ಬೆನ್ನ ಹಿಂದಿನ ಬೆಳಕು, ಕಂಲೀಸರ, ಹಕ್ಕಿ ಹಾಡ್ಯಾವ, ಲಕ್ಷಾಪತಿರಾಜ (ಸಂ)

ಚಿಗಟೇರಿ ಬಳ್ಳಾರಿ ಜಿಲ್ಲೆ 583 127



ಮುದ್ದೇಬಿಹಾಳ, ರೇವಣ ಸಿದ್ದಪ್ಪ ಚನ್ನಪ್ಪ

ಜ 3-2-1933

ಬಿಜಾಪುರ ಜಿಲ್ಲೆ ಯುಂಕಂಚಿ ; 3 ಗಂ 1 ಹೆ ಮಕ್ಕಳು ; ಪ್ರಾ ಪ್ರೌ ಬಿ ಎ ಬಿಜಾಪುರ, ಬಿ ಎಡ್ ಬೆಳಗಾವಿ, ಎಂ ಎ ಕೊಲ್ಹಾಪುರ ; ಶಿಕ್ಷಕವೃತ್ತಿ ; ಬಿಜಾಪುರದ ಸಾಹಿತ್ಯ ಸಾಂಸ್ಕೃತಿಕ ಸಂಘದ ಸದಸ್ಯ; 1 ಕೃತಿ : ಹಸಿರು ಹಾದು (ಕ) ಹವ್ಯಾಸ : ಚಿತ್ರಕಲೆ

ಮಠಪತಿಗಲ್ಲಿ ಬಿಜಾಪುರ

ಮುನಿವೆಂಕಟಪ್ಪ, ಸರ್ಜಾಪುರ ಮುನಿಶಾಮಯ್ಯ



ಜ 15-2-1913

ಬೆಂಗಳೂರು ಜಿಲ್ಲೆ ಸರ್ಜಾಪುರ; ಟಿ ಮುನಿಶಾಮಯ್ಯ–ಮುಂಗಮ್ಮ : 2 ಗಂ 2 ಹೆ ಮಕ್ಕಳು; ಪ್ರಾ ಮಾ ಸರ್ಜಾಪುರ, ಪ್ರೌ ಬೆಂಗಳೂರು, ಬಿ ಎ ಆನರ್ಸ್ ಎಂ ಎ ಮೈಸೂರು ; ಕೆಲವು ಕಾಲ ಕಥಾವಳಿ, ಉಷಾ ಮಾಸಪತ್ರಿಕೆಗಳ ಸಂಪಾದಕ ಮತ್ತು ಸಂಯುಕ್ತ ಕರ್ನಾಟಕ, ತಾಯಿನಾಡು ದಿನಪತ್ರಿಕೆಗಳ ಉಪಸಂಪಾದಕ ; 8 ಕೃತಿಗಳು : ಕುಂಕುಮ, ಮದುವೆಗೆ ಮೊದಲು (ಸ ಕ) ಪ್ರೇಮಪತ್ರಗಳು (ಪತ್ರ) ತರಕಾರಿ ಬೆಳೆಗಳು (ಕೃ) ಕರಗ ಮಹೋತ್ಸವ (ಜಾ) ಲೋಕ ಚರಿತ್ರೆ (ಅ)

49 1ನೇ ಕ್ರಾಸ್ ಕಲಾಸಿಪಾಳ್ಯಂ ಬೆಂಗಳೂರು-2



ಮುನಿಸ್ವಾಮಿ, ಮಾದಿಹಳ್ಳಿ ಚಿಕ್ಕಯ್ಯ

ಜ 7-12-1924

ಮಂಡ್ಯ ಜಿಲ್ಲೆ ಮಾದಿಹಳ್ಳಿ ; ಚಿಕ್ಕಯ್ಯ–ನಂಜಮ್ಮ ; 3 ಗಂ 2 ಹೆ ಮಕ್ಕಳು ; ಎಂ ಎಡ್ ಹಾರ್ವರ್ಡ್ ವಿಶ್ವವಿದ್ಯಾಲಯ ; ವಿದ್ಯಾ ಇಲಾಖೆಯಲ್ಲಿ ಸೇವೆ ; ಅಮೆರಿಕ, ಇಂಗ್ಲೆಂಡ್, ಯೂರೋಪ್ ಪ್ರವಾಸ : 7 ಕೃತಿಗಳು : ಕಡ್ಡಾಯ ವಿದ್ಯಾಭ್ಯಾಸದ ಕೈಪಿಡಿ, ರಾಜಾ ಮಂತ್ರಿ ಮತ್ತು ಹಾಸ್ಯಗಾರ ; ಹವ್ಯಾಸ : ಪ್ರವಾಸ

ನಂ 569 ಪ್ಯಾಲೇಸ್ ಅಪ್ಪರ್ ಆರ್ಚರ್ಡ್ಸ್ ಬೆಂಗಳೂರು-6

ಮೂಡಲಗೇರಿ, ಎಲ್ಲಪ್ಪ ಸಂಗಪ್ಪ [ಯತಿರಾಜ]



ಜ 31-4-1931

ಧಾರವಾಡ ಜಿಲ್ಲೆ ಹಿರೇಕೆರೂರು ; ಸಂಗಪ್ಪ–ಶಿವಮ್ಮ : 2 ಗಂ 1 ಹೆ ಮಕ್ಕಳು : ಎಸ್ ಎಸ್ ಎಲ್ ಸಿ ಹಿಂದಿ ಸಾಹಿತ್ಯ ಸುಧಾಕರ : ಉಪಾಧ್ಯಾಯ ವೃತ್ತಿ ; 2 ಕೃತಿಗಳು : ಹರಿಜನೋದ್ಧಾರ, ಎರಡು ಏಕಾಂಕಗಳು ; ಹವ್ಯಾಸ : ಚಿತ್ರಕಲೆ, ತೋಟಗಾರಿಕೆ

ಸೂಡಿ ಅಂಚೆ ರೋಣ ತಾಲ್ಲೂಕು



ಮೂರ್ತಿ, ಕೃಷ್ಣಪ್ಪ ನರಸಿಂಹ [ನರಸಿಂಗ]
ಜ 25-5-1928

ಮಂಡ್ಯ ಜಿಲ್ಲೆ ಅಕ್ಕಿ ಹೆಬ್ಬಾಳು; 2 ಗಂ 3 ಹೆ ಮಕ್ಕಳು; ಇಂಟರ್ ಮಿಡಿಯೆಟ್‌ವರೆಗೆ ವ್ಯಾಸಂಗ; ಪತ್ರಿಕೋದ್ಯೋಗಿ; ಸರ್ವೋದಯ ಕೃತಿಗೆ ನವ ದೆಹಲಿಯ ಸಂಗೀತ ನಾಟಕ ವಿಭಾಗದ ಬಹುಮಾನ; ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಸಂಗೀತ ನಾಟಕ ಅಕಾಡೆಮಿಯ ಸದಸ್ಯ; 23 ಕೃತಿಗಳು: ಸರ್ವೋದಯ, ಚಿನ್ನದ ಜಿಂಕೆ (ಕಾ) ಮೂರು ಮುಖಗಳು, ಕಲ್ಲನಾಗರ ಕಂಡರೆ (ನಾ) ಗುರುಕಾಣಿಕೆ, ಮೂವರ ಕತೆಗಳು (ಸ ಕ) ಪತ್ರಿಕೋದ್ಯಮ ದರ್ಶನ (ಸಂ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ; ಹವ್ಯಾಸ: ಚಿತ್ರಕಲೆ, ನಾಟಕ

ಸಂಪಾದಕ ಜನಮಿತ್ರ ಹಾಸನ



ಮೂರ್ತಿರಾವ್, ಅಕ್ಕಿಹೆಬ್ಬಾಳು ನರಸಿಂಹ
ಜ 16-6-1900

ಮಂಡ್ಯ ಜಿಲ್ಲೆ ಅಕ್ಕಿ ಹೆಬ್ಬಾಳು; ಎ ಸುಬ್ಬರಾವ್-ವೆಂಕಟಲಕ್ಷ್ಮಮ್ಮ: 3 ಗಂ ಮಕ್ಕಳು; ಪ್ರಾ ಮಾ ಪ್ರೌ ಬಿ ಎ ಎಂ ಎ ಡಿ ಲಿಟ್ ಮೈಸೂರು; ಮೈ ವಿ ವಿಶ್ರಾಂತ ಇಂಗ್ಲಿಷ್ ಪ್ರಾಧ್ಯಾಪಕ; ಫಿಲಿಪೀನ್ಸ್, ಅಮೆರಿಕ, ಕೆನಡ ಪ್ರವಾಸ; ವಿಯರ್ ಚಿನ್ನದ ಪದಕ, ಪೂರ್ಣ ಕೃಷ್ಣರಾವ್ ಚಿನ್ನದ ಪದಕ, ದೇವರಾಜ ಬಹದ್ದೂರ್, ಕರ್ನಾಟಕ ರಾಜ್ಯ ಸಾಹಿತ್ಯ ಅಕಾದೆಮಿ, ಕೇಂದ್ರ ಸಾಹಿತ್ಯ ಅಕಾದೆಮಿ (ಚಿತ್ರಗಳು–ಪತ್ರಗಳು) ಬಹುಮಾನಗಳು; ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಕೇಂದ್ರ ಸಾಹಿತ್ಯ ಅಕಾದೆಮಿ ಕನ್ನಡ ಸಲಹಾ ಸಮಿತಿ, ಅಖಿಲಭಾರತ ರೇಡಿಯೋ ಕೇಂದ್ರ ಕಾರ್ಯಕ್ರಮ ಸಲಹಾ ಸಮಿತಿ ಸದಸ್ಯ, ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ ಕನ್ನಡ ಸಮಿತಿ ಅಧ್ಯಕ್ಷ; 21 ಕೃತಿಗಳು: ಹಗಲುಗನಸುಗಳು, ಅಲೆಯುವ ಮನ (ಪ್ರ) ಅಪರವಯಸ್ಕನ ಅಮೆರಿಕಾ ಯಾತ್ರೆ (ಪ್ರ ವಾ) ಚಂಡಮಾರುತ, ಪಾಶ್ಚಾತ್ಯ ಸಣ್ಣ ಕಥೆಗಳು (ಅ) ಪೂರ್ವಸೂರಿಗಳೊಡನೆ, ಸೀತಾ ಪರಿತ್ಯಾಗ ಪ್ರಸಂಗ (ವಿಮ) ಚಿತ್ರಗಳು ಪತ್ರಗಳು

c/o 2883 4ನೇ ತಿರುವು ಚಾಮುಂಡಿಪುರಂ ಮೈಸೂರು-4

ಮೇವುಂಡಿ ಮಲ್ಲಾರಿ
ಜ 6-3-1906

ಹಿರೇವಡ್ಡಟ್ಟಿ ; ನೀಲಕಂಠಭಟ್ಟ-ಮಹಾಲಕ್ಷ್ಮಿಬಾಯಿ ; 2 ಹೆ ಮಕ್ಕಳು ; ಪ್ರಾಥಮಿಕ ಶಾಲೆಯವರೆಗೆ ಅಭ್ಯಾಸ ; ಕ ವಿ ವಚನವಾಙ್ಮಯ ವಿಭಾಗದಲ್ಲಿ ಸೇವೆ ; 23 ಕೃತಿಗಳು: ಗೋಡೆಯೊಳಗೆ ಕಿಂಡಿ, ಅರಗಿನಮನೆ, ಚಿತ್ರ, ಬೆಳಕಿನ ಕತ್ತಲೆ, ಶಾಸನ ಸಾಹಿತ್ಯ ಪರಿಚಯ, ಪಂಪ ರಾಮಾಯಣ, ತಿರುಗಿ ಮನೆಗೆ, ಶಿವಾನಂದ ಲಹರಿ, ಜಾಣಗುಬ್ಬಿ, ಗುಬ್ಬಚ್ಚಿಗೂಡು



ಮೊಕಾಶಿ, ಕೇಶವ ಜನಾರ್ಧನ [ಇಂದಿರಾಪ್ರಿಯ]
ಜ 6-9-1930

ಚಿತ್ರದುರ್ಗ ಜಿಲ್ಲೆ ಹರಿಹರ; ಜನಾರ್ಧನ ಕೃಷ್ಣ ಮೊಕಾಶಿ-ರಾಧಾಬಾಯಿ ; 2 ಗಂ 2 ಹೆ ಮಕ್ಕಳು; ಎಸ್ ಎಸ್ ಎಲ್ ಸಿ ; ಗದಗಿನ ಬರಹಗಾರರ ಸಂಘದ ಸ್ಥಾಪಕ ಕಾರ್ಯದರ್ಶಿ, ಧಾರವಾಡಜಿಲ್ಲಾ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ; 3 ಕೃತಿಗಳು: ಆಯ್ದ ಪತ್ತೇದಾರಿ ಕತೆಗಳು, ಗೊಂದಲದಲ್ಲಿ ಸಿಕ್ಕ ಪೋಲೀಸ, ಮನಸ್ಸಿಗೆ ಮದ್ದು (ಸ ಕ)

ರಂಗಕೃಪ 3ನೇ ಅಡ್ಡರಸ್ತೆ ಸಾಧನಕೇರಿ ಧಾರವಾಡ

ಮೊಖಾಶಿ, ಗಣಪತರಾವ ಶಿವರಾವ
ಜ 4-5-1901

ಬಳ್ಳಾರಿ ಜಿಲ್ಲೆ ಸೊಂಡೂರು ; 5 ಗಂ 1 ಹೆ ಮಕ್ಕಳು ; ಪ್ರಾ ಶಿಕ್ಷಣ ಸೊಂಡೂರು, ಉಚ್ಚ ಶಿಕ್ಷಣ ಹುಬ್ಬಳ್ಳಿ-ಧಾರವಾಡ; ನಿವೃತ್ತ ಪ್ರಿನ್ಸಿಪಾಲ್ ; 1 ಕೃತಿ : ಸ್ವಾಮಿ ಭಾರತಿ ಕೃಷ್ಣ ತೀರ್ಥರು (ಜೀ)

ನಂ 63 ವಿಜಯನಗರ ಹುಬ್ಬಳ್ಳಿ 22



ಮೊಗಸಾಲೆ, ನಾರಾಯಣಭಟ್ [ನಾ ಮೊಗಸಾಲೆ]

ಜ 27–8–1944

ಕಾಸರಗೋಡು ತಾಲ್ಲೂಕು ಕೋಳ್ಯೂರು; ಮೊಗಸಾಲೆ ವಿಠಲ ಭಟ್–ಸರಸ್ವತಿ ಅಮ್ಮ; 3 ಗಂ ಮಕ್ಕಳು; ಪ್ರಾ ಕೋಳ್ಯೂರು ಮಾ ಪ್ರೌ ಕನ್ಯಾನ, ಡಿ ಎಸ್ ಎ ಸಿ ಉಡುಪಿ; ವೈದ್ಯಕೀಯ ವೃತ್ತಿ; ಜೊಕ್ಕಾಡಿ ವಸಂತ ಸಾಹಿತ್ಯದ ಸ್ಥಾಪಕ ಸದಸ್ಯ, ಸುಮನಸಾ ವಿಚಾರ ವೇದಿಕೆಯ ಸಕ್ರಿಯ ಸದಸ್ಯ; 7 ಕೃತಿಗಳು: ವರ್ತಮಾನದ ಮುಖಗಳು (ಕ) ಪುರೂರವ (ನಾ) ಹಸಿರು ಬಿಸಿಲು (ಸ ಕ) ಕನಸಿನ ಬಳ್ಳಿ, ಮಣ್ಣಿನ ಮಕ್ಕಳು (ಕಾ)

ಕಾಂತಾವರ ಅಂಚೆ ಕಾರ್ಕಳ ತಾಲೂಕು ದ ಕ 574 114

ಮೊಳೆಯಾರ, ವೆಂಕಟ್ರಮಣಭಟ್ [ವಿ ಬಿ ಮೊಳೆಯಾರ]

ಜ 26–6–1936

ಕಾಸರಗೋಡು ತಾಲೂಕು ಮೊಳೆಯಾರು; ಮೊಳೆಯಾರು ಶಂಕರನಾರಾಯಣಭಟ್ಟ–ಪರಮೇಶ್ವರಿ ಅಮ್ಮ; 4 ಗಂ ಮಕ್ಕಳು; ಪ್ರಾ ಮಾ ಪ್ರೌ ಮಂಗಳೂರು, ಎಂ ಎ ಮದರಾಸು; ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ; ಕನ್ನಡ ಸಾಹಿತ್ಯ ಪರಿಷತ್ ಸದಸ್ಯ; 1 ಕೃತಿ: ಮದರ್ ತೆರೇಸಾ (ಜೀ)

14–50 ಪರ್ಲಡ್ಕ ಪುತ್ತೂರು ದ ಕ 574 201



ಮೋಟಗಿ, ಶಂಕರ ದುಂಡಪ್ಪಾ

ಜ 15-5-1921

ಬೆಳಗಾವಿ ಜಿಲ್ಲೆ ಅಥಣಿ; ದುಂಡಪ್ಪಾ–ನಾಗವ್ವ; 4 ಗಂ 2 ಹೆ ಮಕ್ಕಳು; ಪ್ರಾ ಮಾ ಅಥಣಿ; ಬಿ ಎ ಸಾಂಗ್ಲಿ, ಬಿ ಎಡ್ ಬೆಳಗಾವಿ; ಹಿರೇಬಾಗೇವಾಡಿಯ ಕರ್ನಾಟಕ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ; 3 ಕೃತಿಗಳು: ಭಾವಪೂಜೆ, ತುಳಿದುಬಂದ ಬಗೆ (ಕ) ಮನೆ ಗೆದ್ದ ಮಗ (ನಾ)

ಮುಖ್ಯೋಪಾಧ್ಯಾಯ ಕರ್ನಾಟಕ ಪ್ರೌಢಶಾಲೆ ಹಿರೇಬಾಗೇವಾಡಿ ಬೆಳಗಾವಿ ಜಿಲ್ಲೆ



ಮೋಡಕ, ಭಾಲಚಂದ್ರ ರಘುನಾಥ
[ಭಾಲಚಂದ್ರ]
ಜ 18-11-1928

ಹುಬ್ಬಳ್ಳಿ; ರಘುನಾಥ ರಾಮಚಂದ್ರ ಮೋಡಕ–ಅನ್ನಪೂರ್ಣ; 2 ಗಂ 1 ಹೆ ಮಕ್ಕಳು; ಪ್ರಾ ಮಾ ಪ್ರಾ ಹುಬ್ಬಳ್ಳಿ, ಬಿ ಎ ಎಂ ಎ ಧಾರವಾಡ, ಪಿ ಎಚ್ ಡಿ ಪುಣೆ; ಕ ವಿ ಸಂಸ್ಕೃತ ವಿಭಾಗದಲ್ಲಿ ಪ್ರಾಧ್ಯಾಪಕ; 5 ಕೃತಿಗಳು: ಸುಲಭ ಸಂಸ್ಕೃತ, ಸಂಸ್ಕೃತ–ಗದ್ಯಪದ್ಯ, ಉತ್ತರ ರಾಮಚರಿತೆ, ಮನುಸ್ಮೃತಿ, ಸ್ವರಾಜ್ಯಸಿದ್ಧಿ; ಹವ್ಯಾಸ: ಪ್ರವಾಸ
ಸಂಸ್ಕೃತ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ



ಮೋಹನ್, ಕೆರೂರು ರಾಮಸ್ವಾಮಯ್ಯ
ಜ 28-11-1944

ಬೆಂಗಳೂರು; ಕರೂರು ರಾಮಸ್ವಾಮಯ್ಯ–ಬಿ ಇಂದಿರಮ್ಮ; ಬಿ ಇ; ಬೆಂಗಳೂರಿನ ಬಿ ಎಂ ಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕ; ಪ್ರಿಯತಮೆಯ ಶೋಧನೆಯಲ್ಲಿ ಕೃತಿಗೆ ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ, ಬೆಂಗಳೂರಿನ ಕನ್ನಡಿಗರ ಕೂಟದ ಉಪಾಧ್ಯಕ್ಷ; 12 ಕೃತಿಗಳು: ತಾಂತ್ರಿಕ ಉಷ್ಣಚಲನ ಶಾಸ್ತ್ರ, ಥರ್ಮಾಮೀಟರ್, ಉಕ್ಕು ತಯಾರಿಕೆ ಮತ್ತು ರಚನೆ (ವಿ) ಮೈಕೇಲ್ ಫ್ಯಾರಡೆ, ಲಿಯೋನಾರ್ಡೊ ಡಾವಿಂಚಿ (ಜೀ) ಪ್ರಿಯತಮೆಯ ಶೋಧನೆಯಲ್ಲಿ (ಪ್ರ) ಹವ್ಯಾಸ: ಅಭಿನಯ
43 1ನೇ ಬ್ಲಾಕ್ ತ್ಯಾಗರಾಜನಗರ ಬೆಂಗಳೂರು 560 028

ಯೆಲ್ಲಂಬಳಸೆ, ಸುಬ್ರಹ್ಮಣ್ಯಶರ್ಮ [ಶಂಕರ, ಸಚ್ಚಿದಾನಂದ]
ಜ 5-1-1880

ಕಡೂರು ತಾಲೂಕು ಯಲ್ಲಂಬಳಸೆ; ನಂಜುಂಡಯ್ಯ–ಲಕ್ಷ್ಮಮ್ಮ; 1 ಗಂ 3 ಹೆ ಮಕ್ಕಳು; ಇಂಗ್ಲಿಷ್ ಎಫ್ ಎ ಪರೀಕ್ಷೆ; ಸರ್ಕಾರಿ ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಾಗಿ ನಿವೃತ್ತಿ; ಶ್ರೀಮನ್ ಮಹಾರಾಜರ ಆಸ್ಥಾನ ವಿದ್ವಾನ್, ಮೂಲ

ವಿದ್ಯಾನಿರಾಸ ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ; ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಸಂಸ್ಥಾಪಕ ಅಧ್ಯಕ್ಷ; 160 ಕೃತಿಗಳು

ನಂ 68 2ನೇ ಬ್ಲಾಕ್ ಸುಬ್ರಹ್ಮಣ್ಯಚೆಟ್ಟಿ ಲೇ ಔಟ್ ತ್ಯಾಗರಾಜನಗರ ಬೆಂಗಳೂರು 560 028

ಯಳ್ಳಂಬಳಸೆ, ಕೃಷ್ಣಸ್ವಾಮಯ್ಯ ತಿಮ್ಮರಸಯ್ಯ

ಜ 28-8-1924



ಚಿಕ್ಕಮಗಳೂರು ಜಿಲ್ಲೆ ಯಳ್ಳಂಬಳಸೆ; ಪೈ ಕೃಷ್ಣಸ್ವಾಮಯ್ಯ–ಸೀತಮ್ಮ; 5 ಹೆ ಮಕ್ಕಳು; ಮೆಟ್ರಿಕ್ಯುಲೇಷನ್ ಶಿವಮೊಗ್ಗ; ಸಮಾಜ ಶಿಕ್ಷಣ ಅಧಿಕಾರಿ; ತೀರ್ಥಹಳ್ಳಿಯ ತುಂಗಾ ಸಾಹಿತ್ಯ ಸಂಘದ ಕಾರ್ಯಕಾರಿ ಸದಸ್ಯ; 12 ಕೃತಿಗಳು: ನಗೆಮಾಲೆ, ತರಕಾರಿ ತಂಟೆ, ಇಲಿಗಳ ಹಾವಳಿ, ಮಂತ್ರದ ಕುದುರೆ, ಮಕ್ಕಳ ಮುತ್ತು

ಸಮಾಜ ಶಿಕ್ಷಣಾಧಿಕಾರಿ ತೀರ್ಥಹಳ್ಳಿ ಶಿವಮೊಗ್ಗ ಜಿಲ್ಲೆ

ಯಾದವ ನೆಲ್ಲಿಕಾರು ಧರ್ಮರಾಜ

ಜ 16-8-1933

ದ ಕ ಜಿಲ್ಲೆ ನೆಲ್ಲಿಕಾರು; ಶಾಂತಿರಾಜ–ಕುಸುಮಾಜಿ; 3 ಗಂ 1 ಹೆ ಮಕ್ಕಳು; ಪ್ರಾ ನೆಲ್ಲಿಕಾರು, ಮಾ ಶಿರ್ತಾಡಿ, ಮದ್ರಾಸ್ ಸರ್ಕಾರದ ಎಸ್ ಎಸ್ ಎಲ್ ಸಿ; ಗುರುದೇವ ಮಾಸಪತ್ರಿಕೆ ಸಂಪಾದಕ, ಸಮವಸರಣ ಸಾಹಿತ್ಯ ಮಾಲಾ ಸಮಿತಿ ಸಂಚಾಲಕ; 6 ಕೃತಿಗಳು: ಶಾಸನಧ್ವಜ, ದ್ವಾದಶಾನುಪ್ರೇಕ್ಷೆ, ಅರ್ಹತ್ ಪೂಜೆ, ಮಹಾವೀರನ ಮಧುರ ಬೋಧೆ (ಧ) ನಾನು ಮತ್ತು ನನ್ನಾಕೆ (ಪ್ರ)

ಹಿರಿಯಂಗಡಿರಸ್ತೆ ಕಾರ್ಕಳ ಅಂಚೆ ದ ಕ ಜಿಲ್ಲೆ



ರಂಗಣ್ಣ, ಸಾಲಗಾಮೆ ವೆಂಕಟಸುಬ್ಬಯ್ಯ

[ರಂಗಯ್ಯ]

ಜ 24-12-1898

ಹಾಸನ ಜಿಲ್ಲೆ ಸಾಲಗಾಮೆ ; ಸಾಲಗಾಮೆ ವೆಂಕಟ ಸುಬ್ಬಯ್ಯ–ವೆಂಕಟಲಕ್ಷ್ಮಮ್ಮ ; 2 ಗಂ 3 ಹೆ ಮಕ್ಕಳು ; ಪ್ರಾ ಮೊಳಕಾಲ್ಮೂರು ಗುಬ್ಬಿ, ಪ್ರೌ ಚಿಕ್ಕಮಗಳೂರು, ಕಾಲೇಜು ಶಿಕ್ಷಣ ಬೆಂಗಳೂರು ಮೈಸೂರು, ಡಿ ಲಿಟ್ ಮೈಸೂರು ವಿಶ್ವವಿದ್ಯಾನಿಲಯ ; ಮೈ ವಿ ಮಹಾರಾಜ ಕಾಲೇಜು ಪ್ರಿನ್ಸಿಪಾಲರಾಗಿ ನಿವೃತ್ತಿ ; ಕೆಲವು ಕಾಲ ಇಂಗ್ಲಿಷ್–ಕನ್ನಡ ನಿಘಂಟು ಪ್ರಧಾನ ಸಂಪಾದಕ ; ರಂಗಬಿನ್ನಪ ವಚನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾದೆಮಿ ಬಹುಮಾನ ; 49ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ, ಅಭಿನಂದನ ಗ್ರಂಥ : ಬಾಗಿನ ; 25 ಕೃತಿಗಳು : ಕುಮಾರವ್ಯಾಸ, ಪಾಶ್ಚಾತ್ಯ ಗಂಭೀರ ನಾಟಕಗಳು, ಶೈಲಿ (3 ಭಾಗಗಳು) ಕನ್ನಡ ಸಾಹಿತ್ಯದಲ್ಲಿ ಹಾಸ್ಯ (ವಿಮ) ರಂಗ ಬಿನ್ನಪ (ಕ) ಕೋಲ್ ಕೋಲ್ ಕೂಡಿ ಬರಲಿ (ಜಾ) ಕವಿ ಕಥಾಮೃತ (ಜೀ) ಹರಿಶ್ಚಂದ್ರ, ಉತ್ತರ ಕುಮಾರ (ನಾ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ಸ್ಕೇಟಿಂಗ್

1461/1 6ನೇ ತಿರುವು ಕೃಷ್ಣಮೂರ್ತಿಪುರಂ ಮೈಸೂರು 570 004

ರಂಗನಾಥಶರ್ಮಾ, ನಡಹಳ್ಳಿ

ಜ 7-4-1916

ಶಿವಮೊಗ್ಗ ಜಿಲ್ಲೆ ನಡಹಳ್ಳಿ ; ತಿಮ್ಮಪ್ಪ–ಜಾನಕಮ್ಮ ; 2 ಗಂ 2 ಹೆ ಮಕ್ಕಳು ; ವ್ಯಾಕರಣ ವಿದ್ವಾನ್, ಅಲಂಕಾರ ಶಾಸ್ತ್ರ ವಿದ್ವಾನ್, ಕನ್ನಡ ವಿದ್ವಾನ್ (ಮದ್ರಾಸ್) ಕನ್ನಡ ಪಂಡಿತ (ಮೈಸೂರು) ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣಶಾಸ್ತ್ರ ಪ್ರಾಧ್ಯಾಪಕ ; ವಿದ್ಯಾವಾರಿಧಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಸದಸ್ಯ ; 15 ಕೃತಿಗಳು : ಜೈಮಿನಿ ಭಾರತ, ಹರಿಭಕ್ತಿಸಾರ, ವ್ಯಾಸ ತಾತ್ಪರ್ಯ ನಿರ್ಣಯ (ಅ) ವಾಲ್ಮೀಕಿ ಮುನಿಗಳ ಹಾಸ್ಯ ಪ್ರವೃತ್ತಿ, ಅಮರಕೋಶ, ಛಂದಶ್ಶಾಸ್ತ್ರದ ಅರ್ಥ ವಿವರಣೆ


831 4ನೇ ಮುಖ್ಯ ರಸ್ತೆ ವಿಜಯನಗರ ಬೆಂಗಳೂರು 560 040



ರಂಗಯ್ಯ, ದ್ವಾರನಕುಂಟೆ [ದ್ವಾರಂ]
ಜ 14–4–1925

ತುಮಕೂರು ಜಿಲ್ಲೆ ದ್ವಾರನ ಕುಂಟೆ; ಚಿಕ್ಕಣ್ಣ–ಲಕ್ಕಮ್ಮ; 5 ಗಂ 2 ಹೆ ಮಕ್ಕಳು; ಪ್ರಾ ದ್ವಾರನ ಕುಂಟೆ, ಮಾ ಹರ್ತಿಕೋಟೆ, ಬರಗೂರು, ಪ್ರೌ ಚಿತ್ರದುರ್ಗ, ಬಿ ಎಸ್ ಸಿ ಆನರ್ಸ್ ಎಂ ಎಸ್ ಸಿ ಬೆಂಗಳೂರು; ಮೈ ವಿ ಯುವರಾಜ ಕಾಲೇಜಿನಲ್ಲಿ ಭೂಗರ್ಭ ಶಾಸ್ತ್ರದ ಪ್ರಾಧ್ಯಾಪಕ; 8 ಕೃತಿಗಳು: ಭೂ ವಿಜ್ಞಾನ, ಪ್ರಾಚೀನ ಜೀವ ವಿಜ್ಞಾನ, ಭೂ ಇತಿಹಾಸ, ಸ್ಪಟಿಕ ವಿಜ್ಞಾನ ಮತ್ತು ಸ್ಪಟಿಕ ಗಣಿತ

ಪ್ರಾಧ್ಯಾಪಕ ಯುವರಾಜ ಕಾಲೇಜು ಮೈಸೂರು



ರಂಗಸ್ವಾಮಯ್ಯ, ಗೋರನಬೆಲೆ ರಂಗಯ್ಯ
ಜ 6-6-1928

ಬೆಂಗಳೂರು ಜಿಲ್ಲೆ ನೆಲಮಂಗಲ ತಾಲೂಕು ಗೋರನಬೆಲೆ; ರಂಗಯ್ಯ–ತಾಯಮ್ಮ; 1 ಗಂ 5 ಹೆ ಮಕ್ಕಳು; ಪ್ರಾ ಎಂಟಗಾನಹಳ್ಳಿ, ಮಾ ಜಾಲಮಂಗಲ, ಪ್ರೌ ಬೆಂಗಳೂರು, ಬಿ ಎ ಆನರ್ಸ್ ಎಂ ಎ (ಇತಿಹಾಸ) ಮೈಸೂರು; ಚಿಕ್ಕಮಂಗಳೂರು ಸರ್ಕಾರಿ ಕಾಲೇಜು, ಮೈಸೂರು ಮಹಾರಾಣಿ ಕಾಲೇಜು, ಯುವರಾಜ ಮಹಾರಾಜ ಕಾಲೇಜುಗಳಲ್ಲಿ ಅಧ್ಯಾಪಕನಾಗಿ ಸೇವೆ, ಮೈ ವಿ ಇತಿಹಾಸ ವಿಭಾಗದಲ್ಲಿ ಉಪ ಪ್ರಾಧ್ಯಾಪಕ; ಭಾರತೀಯ ಇತಿಹಾಸ, ದಕ್ಷಿಣ ಭಾರತ, ಕರ್ನಾಟಕ ಇತಿಹಾಸ ಕಾಂಗ್ರೆಸ್‌ಗಳ ಸದಸ್ಯ; 5 ಕೃತಿಗಳು: ಪ್ರಾಚೀನ ಭಾರತ, ದಕ್ಷಿಣ ಭಾರತ, ಉತ್ತರ ಭಾರತದ ಇತಿಹಾಸ, ಇತಿಹಾಸ ಭಾ 1–2 (ಇ) ಹವ್ಯಾಸ: ಪ್ರವಾಸ, ತೋಟಗಾರಿಕೆ

119 10ನೇ ಮುಖ್ಯರಸ್ತೆ ಸರಸ್ವತೀಪುರಂ ಮೈಸೂರು 570 006



ರಂಗಸ್ವಾಮಿ, ಚನ್ನರಾಯಪಟ್ಟಣ ವೆಂಕಟರಾಮಯ್ಯ
ಜ 19-3-1926

ಮೈಸೂರು ; ಸಿ ವಿ ರಾಮಸ್ವಾಮಿ-ಲಕ್ಷ್ಮೀದೇವಮ್ಮ ; 5 ಮಕ್ಕಳು ; ಪ್ರಾ ಮಾ ಪ್ರೌ ಹಾಸನ, ಬಿ ಎ ಎಂ ಎ ಮೈಸೂರು, ಪಿ ಎಚ್ ಡಿ ಕ ವಿ ; ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಅಧ್ಯಾಪಕ ; 3 ಕೃತಿಗಳು : ಭಾರತದ ಸಂಸ್ಕೃತಿಯ ಅಧ್ಯಯನ, ಭಾರತದ ಇತಿಹಾಸ ಭಾಗ 1, 2, 3

ಇತಿಹಾಸ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ರಂಗಸ್ವಾಮಿ, ದೊಡ್ಡರಂಗಪ್ಪನವರ ತಿಮ್ಮಯ್ಯ
ಜ 9-6-1930

ಹೊರಕೆರೆ ದೇವರಪುರ ; ಡಿ ತಿಮ್ಮಯ್ಯ-ರಂಗಮ್ಮ ; 3 ಗಂ 1 ಹೆ ಮಕ್ಕಳು ; ಪ್ರಾ ಹೊರಕೆರೆ ದೇವರಪುರ, ಪ್ರೌ ಚಿತ್ರದುರ್ಗ ಬಿ ಎ ಆನರ್ಸ್ ಎಂ ಎ ಮೈಸೂರು ; ಹಾಸನದ ಸರ್ಕಾರಿ ಕಾಲೇಜಿನಲ್ಲಿ ಉಪಪ್ರಾಧ್ಯಾಪಕ ; ಮುತ್ತಿನಂಥ ಮಾತುಗಳು ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ ; 20 ಕೃತಿಗಳು : ಕನ್ನಡ ಸಾಹಿತ್ಯ ಮತ್ತು ಮೈಸೂರು ಒಡೆಯರು, ಕುಮಾರ ವ್ಯಾಸನ ವಿರಾಟನಗರ, ಪುರಂದರದಾಸರು (ವಿಮ) ಎರಡು ನಾಟಕಗಳು (ನಾ) ಭಾರತಯಾತ್ರೆ (ಪ್ರವಾ) ಕನ್ನಡ ವ್ಯಾಕರಣ (ಭಾವಿ) ಗಜರಾಜ, ಭರತ (ಬಾ) ತೋಟಗಾರಿಕೆ (ಕೃ) ಪತ್ರಲೇಖನ ಕಲೆ, ಸರ್ಕಾರಿ ಪತ್ರಲೇಖನ

ಸರ್ಕಾರಿ ಕಾಲೇಜು ಹಾಸನ



ರಂಗಾಚಾರ್, ಕಸ್ತೂರಿ ರಘುನಾಥಾಚಾರ್
[ರಘುಸುತ]
ಜ 8-5-1929

ಬೆಂಗಳೂರು ಜಿಲ್ಲೆ ಚಿಕ್ಕಬಳ್ಳಾಪುರ ; ರಘುನಾಥಾಚಾರ್ಯ-ಇಂದಿರಮ್ಮ ; ಪ್ರಾ ಮಾ ಪ್ರೌ ಚಿಕ್ಕಬಳ್ಳಾಪುರ, ಎಂ ಎ ಅಲಿಘರ್ ಮುಸ್ಲಿಂವಿಶ್ವವಿದ್ಯಾಲಯ; ಮಿರ್ಲೆ ಕಿರಿಯ ಕಾಲೇಜಿನಲ್ಲಿ ಅಧ್ಯಾಪಕ ; 50 ಕೃತಿಗಳು : ಸುಳಿಗಾಳಿ, ಅವನ ಕನಸು (ಕಾ) ಪ್ಲಾಟ್ ಫಾರಂ

ಪ್ರಣಯ, ಎಡಬಿಡಂಗಿ (ನಾ) ಯಂತ್ರರ್ಷಿ, ಭಾರತರತ್ನ ಶ್ರೀಮತಿ ಇಂದಿರಾಗಾಂಧಿ (ಜೀ) ಫ್ರಂಟ್ ಸೀಟ್ (ಪ್ರ) ನಾಡಿಗೇರ್ (ಸಂ) ಕೊಡುಗೆ, ವೀರಗರುಡ (ಸ ಕ) ವೀಣೆಯ ತಂತಿ (ಕ) ವಿದುರಾಶ್ವತ್ಥ, ರಾಮಾನುಜಾಚಾರ್ಯರು (ಜಾ) ಮಾನವನ ಭೂಗೋಳ, ಮರೀಚಿಕೆ (ಭೂ)

ಉಪನ್ಯಾಸಕ, ಸರ್ಕಾರಿ ಕಿರಿಯ ಕಾಲೇಜು ಮಿರ್ಲೆ



ರಂಗೋಪಂತ, ನಾಗರಾಜರಾಯ [ಕೃಷ್ಣಕವಿ]

ಜ 22-10-1937

ಬಳ್ಳಾರಿ ಜಿಲ್ಲೆ ಹೊಸಪೇಟೆ; ರಂ ಹನುಮಂತ ರಾಯ–ಗುಂಡಮ್ಮ; 2 ಹೆ ಮಕ್ಕಳು; ಎಸ್ ಎಸ್ ಎಲ್ ಸಿ ರಾಷ್ಟ್ರಭಾಷಾ ಪ್ರವೀಣ; ಪ್ರೌಢಶಾಲಾ ಹಿಂದಿ ಪಂಡಿತ; ಕವಿಕೇಸರಿ, ಕವಿಪುಂಗವ, ಕನ್ನಡ ಕವಿರತ್ನ, ಆಶುಕವಿ, ಗಮಕಕಲಾ ಕೋವಿದ, ಗಮಕ ಕಲಾನಿಧಿ; ಹೊಸಪೇಟೆ ವಾಣಿ ಸಾಹಿತ್ಯ ಸಂಘದ ಅಧ್ಯಕ್ಷ; 10 ಕೃತಿಗಳು: ಸ್ವಾಗತ ರತ್ನಮಾಲಿಕೆ, ನಾಲ್ವತ್ತುನಾಲ್ಕುಕೋಟಿ, ಕನಕಸ್ತುತಿ ರತ್ನ ಮಾಲೆ, (ಕ) ಕಬೀರ ವಚನಾಮೃತ, ಪಂಚರಾತ್ರ (ಅ) ಹವ್ಯಾಸ: ಸಂಗೀತ

18–255 ದೇವಾಂಗಪೇಟೆ ಹೊಸಪೇಟೆ ಬಳ್ಳಾರಿ ಜಿಲ್ಲೆ 583 201



ರಜತಾದ್ರಿ, ಸುಬ್ಬಣ್ಣ

ಜ 17-8-1921

ಚನ್ನಪಟ್ಟಣ ತಾಲೂಕು ಅಕ್ಕೂರು; ಸುಬ್ಬಣ್ಣ–ಮಾದಮ್ಮ; 2 ಗಂ 2 ಹೆ ಮಕ್ಕಳು; ಪ್ರಾ ಅಕ್ಕೂರು, ಮಾ ಹನಸೋಗೆ, ಪ್ರೌ ಮೈಸೂರು, ಎಂ ಎ ಕ ವಿ; ರಾಜ್ಯ ವಯಸ್ಕರ ಶಿಕ್ಷಣ ಸಂಸ್ಥೆಯಲ್ಲಿ ವ್ಯವಸ್ಥಾಪಕ ಕಾರ್ಯದರ್ಶಿ, ವಿದ್ಯಾಪೀಠಗಳ ಆಚಾರ್ಯ, ಬೆಳಕು ಮತ್ತು ಪುಸ್ತಕ ಪ್ರಪಂಚದ ಸಂಪಾದಕ, ಸಂಶೋಧನ ಸಹಾಯಕನಾಗಿ ನಿವೃತ್ತಿ; ಡೆನ್ಮಾರ್ಕ್, ಸ್ವೀಡನ್, ಇಂಗ್ಲೆಂಡ್, ಫ್ರಾನ್ಸ್ ಪ್ರವಾಸ; 7 ಕೃತಿಗಳು: ನಾಟಕ ಕಲೆ (ವಿಮ) ಅಕ್ಷರ ವೈದ್ಯ (ನಾ) ಡೆನ್ಮಾರ್ಕ್, ಪಶ್ಚಿಮದ ಹೊಂಬೆಳಕು (ಪ್ರವಾ) ಆಂಡರಸನನ ನೈಟಿಂಗೇಲ್ ಮತ್ತು ಇತರ ಕಥೆಗಳು (ಅ) ಹವ್ಯಾಸ: ತೋಟಗಾರಿಕೆ

ನಂ 53 15ನೇ ಕ್ರಾಸ್ ವಿ ವಿ ಮೊಹಲ್ಲಾ ಮೈಸೂರು 570 002



ರತ್ನ, ನಗುವನಹಳ್ಳಿ, ಪುಟ್ಟಸ್ವಾಮಯ್ಯ [ನ ಪು ರ]
ಜ 20-10-1954

ಮಂಡ್ಯಜಿಲ್ಲೆ ನಗುವನಹಳ್ಳಿ ; ಪುಟ್ಟಸ್ವಾಮಯ್ಯ-ಯಶೋದಮ್ಮ ; ಪ್ರಾ ಮಾ ಪ್ರೌ ನಗುವನಹಳ್ಳಿ, ಬಿ ಎ ಎಂ ಎ ಮೈಸೂರು ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯೆ ; 2 ಕೃತಿಗಳು : ಜಾನಪದ ವಿವೇಚನೆ, ನಮ್ಮ ಹಳ್ಳಿಯ ಜನಪದ ಕತೆಗಳು (ಜಾ)

15 ಶಿವಾನಂದ ನಿಲಯ ಯಾದವಗಿರಿ ಮೈಸೂರು 570 002



ರತ್ನ, ನಟೇಶ್
ಜ 12-12-1934

ತಮಿಳುನಾಡಿನ ಚಿದಂಬರಂ ; ಎ ಎಂ ನಟೇಶ್-ವಿಠೂಬಾಯಿ ಅಮ್ಮಾಳ್ ; 1 ಗಂ 1 ಹೆ ಮಕ್ಕಳು; ಪ್ರಾ ಬೆಂಗಳೂರು, ಮಾ ಬೆಂಗಳೂರು-ಮೈಸೂರು, ಪ್ರೌ ಮೈಸೂರು, ಬಿ ಎ ಬಿ ಎಡ್ ಎಂ ಎಸ್ ಎ ಟಿ ಇ ಡಿ ಡಿ ; ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ನಿರ್ದೇಶಕ ; ಅಮೆರಿಕ ಪ್ರವಾಸ; ಸಮತೆಂತೋ ನಾಟಕ ತಂಡ (ಮೈಸೂರು) ಸದಸ್ಯ : 6 ಕೃತಿಗಳು : ಎಲ್ಲಿಗೆ, ಗೋಡೆ ಬೇಕೆ ಗೋಡೆ, ಬೊಂತೆ, ಹೆದ್ದಾರಿಯಲ್ಲಿ ; ಹವ್ಯಾಸ : ಅಭಿನಯ ಮತ್ತು ನಿರ್ದೇಶನ

ಅಖಿಲಭಾರತ ವಾಕ್‌ಶ್ರವಣ ಸಂಸ್ಥೆ ಮೈಸೂರು 570 006



ರತ್ನಮ್ಮ, ಸುಂದರರಾವ್ [ಸುಮತಿ]
ಜ 26-7-1930

ಬೆಂಗಳೂರು ; ಲಿಂಗಣ್ಣಯ್ಯ-ಲಕ್ಷ್ಮಮ್ಮ ; 2 ಗಂ 3 ಹೆ ಮಕ್ಕಳು ; ಪ್ರಾಥಮಿಕ ಶಿಕ್ಷಣ ; 2 ಕೃತಿಗಳು : ಕನ್ನಡಾಂಬೆಯ ಅಡಿಗಳಲ್ಲಿ, ಶ್ರೀ ಶಂಕರ ಕಥಾಮೃತ ; ಹವ್ಯಾಸ : ಗಮಕ ವಾಚನ, ಕಸೂತಿ

442 38ನೇ ಅಡ್ಡರಸ್ತೆ ಜಯನಗರ ಬೆಂಗಳೂರು 560 041

ರಮೇಶ್, ಬಳಗಟ್ಟೆ ವೆಂಕಟಪ್ಪ



ಜ 4-8-1940

ತೀರ್ಥಹಳ್ಳಿ ತಾಲೂಕು ದೇವಂಗಿ; 3 ಗಂ ಮಕ್ಕಳು ; ಪ್ರಾ ಮಾ ದೇವಂಗಿ, ಪ್ರೌ ನರಸಿಂಹ ರಾಜಪುರ, ಬಿ ಎ ಬಿ ಎಡ್ ಶಿವಮೊಗ್ಗ, ಎಂ ಎ ಮೈಸೂರು ; ಶಿವಮೊಗ್ಗದ ಕನ್ನಡ ಸಂಘದ ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 2 ಕೃತಿಗಳು : ಗಂಗೋತ್ರಿ (ಕ) ಸಾಹಸಿ (ನಾ) ಹವ್ಯಾಸ : ನಾಟಕಾಭಿನಯ

'ಶ್ರೀ ವೆಂಕಟೇಶ ಕೃಪಾ' 6ನೇ ಅಡ್ಡರಸ್ತೆ ರಾಜೇಂದ್ರನಗರ ಶಿವಮೊಗ್ಗ

ರಮೇಶ್, ಬೂದುಗುಂಪಿ ಮಠದ

ಜ 9-7-1948

ಬಳ್ಳಾರಿ ಜಿಲ್ಲೆ ಹೊಸಪೇಟೆ ; ಬಿ ಶ್ರೀಕಂಠಯ್ಯ-ಸುಮತಿ ; ಎಂ ಎ (ಅರ್ಥಶಾಸ್ತ್ರ) ; 3 ಕೃತಿಗಳು : ಕಮಿಟೆಡ್ ಕವಿತೆಗಳು (ಕ) ಅಂಥವರಲ್ಲೊಬ್ಬ (ಸ ಕ) ಹವ್ಯಾಸ : ಚಿತ್ರಕಲೆ

ಹೌಸಿಂಗ್ ಬೋರ್ಡ್ ಕಾಲೋನಿ ದಾವಣಗೆರೆ 577 004

ರಮೇಶ್, ಬೆಟ್ಟದಪುರ ಗೋವಿಂದರಾಜು

[ಶ್ರವಣ]

ಜ 22-8-1945



ಕೃಷ್ಣರಾಜನಗರ ತಾಲೂಕು ದೊಡ್ಡ ಹನಸೋಗೆ ; ಬಿ ಎಸ್ ಗೋವಿಂದರಾಜು-ಎಚ್ ಕೆ ರಾಧಮ್ಮ ; ಪ್ರಾ ಪ್ರೌ ಬೆಂಗಳೂರು, ಬಿ ಇ ಹಾಸನ, ಹಿಂದಿ ಮಾಧ್ಯಮ ; ಕನ್ನಡ ಸಾಹಿತ್ಯ ಪರಿಷತ್ತು, ಗಾಂಧೀ ಸಾಹಿತ್ಯ ಸಂಘದ ಸದಸ್ಯ, ಮುರಳಿ ಮಾಸಪತ್ರಿಕೆ ಸಂಪಾದಕ ಸಮಿತಿ ಸದಸ್ಯ ; 7 ಕೃತಿಗಳು : ಕಣ್ಣುಗಳ ಸಂರಕ್ಷಣೆ (ವೈ) ವೀರಪಾಂಡ್ಯ ಕಟ್ಟ ಬೊಮ್ಮನ್, ಜಗದೀಶ ಚಂದ್ರಬೋಸ್, ಯೂಕ್ಲಿಡ್, ಗ್ಯಾಲನ್ (ಬಾ)

72/1 6ನೇ ತಿರುವು ಮಲ್ಲೇಶ್ವರಂ ಬೆಂಗಳೂರು 560 003



ರಮೇಶ್, ಹುಲ್ಲುಕೆರೆ ಬೋಳೇಗೌಡ
[ರಮೇಶ ಹುಲ್ಲುಕೆರೆ]
ಜ **4-5-1947**

ಮಂಡ್ಯ ಜಿಲ್ಲೆ ಹುಲ್ಲುಕೆರೆ : ಬೋಳೇಗೌಡ–ಚಿಕ್ಕ ತಾಯಮ್ಮ ; 1 ಮಗು : ಪ್ರಾ ಮಾ ಹುಲ್ಲುಕೆರೆ, ಪ್ರೌ ಕೊತ್ತತ್ತಿ, ಬಿ ಎಸ್‌ಸಿ ಮೈಸೂರು : ಪತ್ರಿಕೋದ್ಯಮಿ ; ಜಿಲ್ಲಾ ಬರಹಗಾರರ ಸಂಘದ ಕಾರ್ಯದರ್ಶಿ ; 3 ಕೃತಿಗಳು : ಕಾಡುಗಿಡಗಳು (ಸಂ) ತೆಂಡೆ (ಕಾ) ಮಂಥರೆ (ನಾ) ಹವ್ಯಾಸ : ಅಭಿನಯ, ನಿರ್ದೇಶನ, ಛಾಯಾಗ್ರಹಣ

ಸಂಪಾದಕ ವೀಕ್ಷಕ ರೈಲ್ವೆಸ್ಟೇಷನ್ ರಸ್ತೆ ಮಂಡ್ಯ

ರವೀಂದ್ರನಾಥ, ಮಿಜಾರು ಕನಕಬೆಟ್ಟು [ರವಿಕಿರಣ]
ಜ **10-12-1930**

ಶ್ರವಣಬೆಳಗೊಳ ; ಎ ಸುಬ್ಬಯ್ಯ ಶಾಸ್ತ್ರಿ–ಲಕ್ಷ್ಮಮ್ಮ ; 1 ಮಗು ; ಪ್ರಾ ಮಾ ಪ್ರೌ ಮಂಗಳೂರು, ಬಿ ಎಸ್‌ಸಿ ಬಿ ಎಲ್ ಬೆಂಗಳೂರು : ಬೆಂಗಳೂರು ನಗರಮಹಾಸಭೆ ಪ್ರೌಢಶಾಲೆಯಲ್ಲಿ ಉಪಾಧ್ಯಾಯ ; 13 ಕೃತಿಗಳು : ಪ್ರೇಮ ಮಾಲಿಕೆ, ಜಿನಭಕ್ತಿಮಾಲೆ (ಕ) ಸರಸು (ಸ ಕ) ಜೈನ ತತ್ವಗಳು (ಧ) ಆತ್ಮಸಿದ್ಧಿ ಶಾಸ್ತ್ರ (ಅ) ಬಾಲ ಗೀತಮಾಲಿಕೆ (ಬಾ) ಇಂಗ್ಲಿಷ್ ನಲ್ಲೂ ಕೃತಿ ರಚಿಸಿದ್ದಾರೆ; ಹವ್ಯಾಸ : ಛಾಯಾಗ್ರಹಣ, ಪ್ರವಾಸ

3ನೇ ಮಹಡಿ ಕಬಾಡಿ ಬಿಲ್ಡಿಂಗ್ ಚೌಡೇಶ್ವರಿಗುಡಿ ಬೀದಿ ಬೆಂಗಳೂರು 560 002

ರಾಘವೇಂದ್ರ, ಮಲ್ಪೆ [ಎಮ್ಮಾರ್]
ಜ **18-5-1934**



ದ ಕ ಜಿಲ್ಲೆ ಮಲ್ಪೆ ; 4 ಮಕ್ಕಳು ; ಎಸ್ ಎಸ್ ಎಲ್ ಸಿ ; ಶಿಕ್ಷಕ ವೃತ್ತಿ ; ವಾಣಿ ಯಕ್ಷಗಾನ ಮಂಡಲಿ ಸದಸ್ಯ, ಶಿಕ್ಷಕವಾಣಿ ಪತ್ರಿಕೆ ಸಂಪಾದಕ ಮಂಡಲಿ ಸದಸ್ಯ : 1 ಕೃತಿ : ನಿರಪರಾಧಿ ; ಹವ್ಯಾಸ: ಛಾಯಾಗ್ರಹಣ, ಯಕ್ಷಗಾನ ಬಯಲಾಟಗಳಲ್ಲಿ ಅಭಿನಯ

ಸರ್ಕಾರಿ ಪ್ರಾಥಮಿಕ ಶಾಲೆ ಒರಿಯಡ್ಕ ದ ಕ ಜಿಲ್ಲೆ



ರಾಘವೇಂದ್ರಸ್ವಾಮಿ, ಬಾರಕೂರು [ತಿರುಕ]

ಪ್ರೌಢಶಾಲೆಯವರೆಗೆ ಅಭ್ಯಾಸ; ವ್ಯಾಯಾಮ ಶಿಕ್ಷಣದಲ್ಲಿ ಪದವಿ (ಬಿ ಪಿ ಸಿ) ಆಯುರ್ವೇದ ಪರಿಣತಿ, ಯೋಗಾಚಾರ್ಯ; ಚಿತ್ರದುರ್ಗ ಜಿಲ್ಲೆ ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ ಸಂಸ್ಥಾಪಕ ಅಧ್ಯಕ್ಷ; ಅಭಿನಂದನ ಗ್ರಂಥ: ನಂದನವನ; 53 ಕೃತಿಗಳು: ದೇಹಸ್ವಾಸ್ಥ್ಯಕ್ಕಾಗಿ ಯೋಗಾಸನಗಳು, ಷಟ್ಕರ್ಮವಿಧಿ (ಅ) ಹಣ್ಣು ಕಾಯಿ, ಅಂತರ್ವಾಣಿ (ಕ) ಮೂರು ನಾಟಕಗಳು, ಮಹಾಶಿಲ್ಪಿ (ನಾ) ಕೊನೆಯ ಗುಟುಕು, ತ್ಯಾಗಜೀವಿ (ಕಾ) ಸ್ವಯಂವೈದ್ಯ (ವೈ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ; ಹವ್ಯಾಸ: ಸಂಗೀತ, ನಾಟಕ, ಯೋಗಾಭ್ಯಾಸ, ಆಯುರ್ವೇದ, ವ್ಯಾಯಾಮ

ಅನಾಥ ಸೇವಾಶ್ರಮ ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ

ರಾಘವೇಂದ್ರಾಚಾರ್ಯ, ಕೊರ್ಲಹಳ್ಳಿ
[ರಾಘು ಕೊರ್ಲಹಳ್ಳಿ]
ಜ 1-6-1949



ಯಲಬುರ್ಗಿ; ಸುಬ್ಬಣ್ಣಾಚಾರ್ಯ ಕೊರ್ಲಹಳ್ಳಿ-ಮಧುರಾಬಾಯಿ; ಬಿ ಕಾಂ ಹೊಸಪೇಟೆ; ಹೊಸಪೇಟೆ ಶ್ರಿ ಶಕ್ತಿಕಲಾ ವೃಂದದ ಅಧ್ಯಕ್ಷ; 3 ಕೃತಿಗಳು: ಕನ್ನಡಿಗನ ಕಲ್ಪನಾಲೋಕ (ಕ) ಅವಳಿಗಾಗಿ (ಕಾ) ಶ್ರೀ ಮುದಲಗಟ್ಟಿ ಚರಿತಾಮೃತ (ಧ) ಹವ್ಯಾಸ: ನಾಟಕಾಭಿನಯ

ಬಿ ಡಿ ಸಿ ಸಿ ಬ್ಯಾಂಕ್ ಹೊಸಪೇಟೆ ಬಳ್ಳಾರಿಜಿಲ್ಲೆ



ರಾಚಪ್ಪ, ರೇವಣ್ಣ
ಜ 10-9-1935

ತುಮಕೂರು ಜಿಲ್ಲೆ ಬೆಳ್ಳಾವೆ; ರೇವಣ್ಣ-ಸಿದ್ದಮ್ಮಣ್ಣ: 2 ಗಂ 1 ಹೆ ಮಕ್ಕಳು; ಪ್ರಾ ಬೆಳ್ಳಾವೆ, ಪ್ರೌ ಬಿ ಎ ತುಮಕೂರು, ಎಂ ಎ ಧಾರವಾಡ; ಬೆಂಗಳೂರಿನ ಶ್ರೀ ಜಗದ್ಗುರು ರೇಣುಕಾಚಾರ್ಯ ಕಲಾ ಮತ್ತು ವಿಜ್ಞಾನ ವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ; ಸಾಹಿತ್ಯ ಪರಿಷತ್ತಿನ

ಆಜೀವ ಸದಸ್ಯ; 3 ಕೃತಿಗಳು: ಮಾರುತ್ತರ (ಕ) ಸಾಹಿತ್ಯ ಮನನ (ವಿಮ) ಜೇಡರ ದಾಸಿಮಯ್ಯನ ವಚನಗಳು (ಸಂ) ಹವ್ಯಾಸ: ಅಭಿನಯ, ನಿರ್ದೇಶನ

1147 1ನೇ ಮುಖ್ಯರಸ್ತೆ ವಿಜಯನಗರ ಬೆಂಗಳೂರು 560 040

ರಾಜ, ಕುಲಕರ್ಣಿ ಶಿವರಾಜ ಶ್ರೀಧರರಾವ [ನಂದಿ]

ಜ 24-8-1956

ಗುಲ್ಬರ್ಗ ಜಿಲ್ಲೆ ಹಿಪ್ಪರಗಿ; ಶ್ರೀಧರರಾವ ಕುಲಕರ್ಣಿ–ಲೀಲಾವತಿ ಕುಲಕರ್ಣಿ; ಪ್ರಾ ಪ್ರೌ ಬಿ ಎ ಎಂ ಎ ಗುಲ್ಬರ್ಗ; ನೃಪತುಂಗ ಬರಹಗಾರರ ಮತ್ತು ಕಲಾವಿದರ ಸಂಘದ ಸ್ಥಾಪಕ ಸದಸ್ಯ, ರಂಗ ಮಾಧ್ಯಮ ನಾಟಕಸಂಸ್ಥೆ ಸದಸ್ಯ, ಗುರುಪ್ರಸಾದ ಪ್ರಕಾಶನದ ಸಂಚಾಲಕ; 1 ಕೃತಿ: ನಂದು ಅನ್ನುದೇನು (ಸಂ) ಹವ್ಯಾಸ: ಅಭಿನಯ, ಚಿತ್ರಕಲೆ

ನಂ 340 ಟೆಲಿಫೋನ್ ಎಕ್ಸ್‌ಚೇಂಜ್ ಹತ್ತಿರ ಗುಲ್ಬರ್ಗಾ

ರಾಜಗೋಪಾಲರಾವ್, ನಾರಾಯಣಮೂರ್ತಿ

ಜ 6-8-1925

ಮೈಸೂರು; ನಾರಾಯಣಮೂರ್ತಿ–ವೆಂಕಟಲಕ್ಷ್ಮಮ್ಮ; ಪ್ರಾ ಮೈಸೂರು, ಮಾ ನಂಜನಗೂಡು, ಬಿ ಎ ಎಂ ಎ ಮೈಸೂರು, ಪಿ ಎಚ್ ಡಿ ಕ ವಿ; ಕುಮಟ ಕಾಮರ್ಸ್ ಕಾಲೇಜಿನ ಪ್ರಿನ್ಸಿಪಾಲ್; 11 ಕೃತಿಗಳು: ಸಾರ್ವಜನಿಕ ಅಭಿಪ್ರಾಯ, ರಾಜಕೀಯ ಜಿಜ್ಞಾಸೆ, ಸ್ವಾತಂತ್ರ್ಯ ಮೀಮಾಂಸೆ, ಶ್ರೀ ಅರವಿಂದಾವಲೋಕನ, ರಾಜಕೀಯ ಪಕ್ಷಗಳು; ಹವ್ಯಾಸ: ಸಂಗೀತ

ಪ್ರಿನ್ಸಿಪಾಲ್ ಕಾಮರ್ಸ್‌ಕಾಲೇಜ್ ಕುಮಟ ಉ ಕ ಜಿಲ್ಲೆ

ರಾಜಗೋಪಾಲಾಚಾರ್ಯ, ಮಟಪಾಡಿ

ಜ 15-10-1926



ಕೋಟೇಶ್ವರ; ಎಂ ನರಸಿಂಹಾಚಾರ್ಯ–ಭಾಗೀರಥಿ; 4 ಗಂ 1 ಹೆ ಮಕ್ಕಳು; ಎಂ ಎ ಬಿ ಓ ಎಲ್ ಮದರಾಸ್ ವಿಶ್ವವಿದ್ಯಾಲಯ, ಸಾಹಿತ್ಯ ಶಿರೋಮಣಿ, ವಿದ್ವಾನ್, ಕರ್ನಾಟಕ ಸಂಗೀತ ಹೈಯರ್ ಗ್ರೇಡ್; ಉಡುಪಿ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ; ಕನ್ನ

ಡದ ವಾಗ್ವ್ಯಾಧಿಗಳು ಕೃತಿಗೆ ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 7 ಕೃತಿಗಳು : ಕಾಳಿದಾಸನ ಉಪಮೆಗಳು, ಎರಡನೆಯ ನಾಗವರ್ಮ (ವಿಮ) ಪ್ರಬಂಧ ಸೌರಭ (ಪ್ರ) ಶ್ರೀ ಅರವಿಂದರು (ಅ) ಸಂಸ್ಕೃತದಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ಸಂಗೀತ

ಪೂರ್ಣಪ್ರಜ್ಞ ಕಾಲೇಜು ಉಡುಪಿ



ರಾಜಣ್ಣ, ಕೊಂಡಾಪುರದ ಪರಮೇಶ್ವರಪ್ಪ
[ನಿರುದ್ಯೋಗಿ]
ಜ 20-10-1930

ಚಿತ್ರದುರ್ಗ ಜಿಲ್ಲೆ ಹಿರೇಗುಂಟನೂರು ; ಪ್ರೌಢ ಶಾಲೆಯವರೆಗೆ ಅಭ್ಯಾಸ ; ವ್ಯವಸಾಯ : 5 ಕೃತಿಗಳು : ಶಿವಶರಣೆ ದ್ಯಾಮಲಾಂಬ, ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಇತಿಹಾಸ (ಧ) ಜಾರಿದ ಹೆಣ್ಣು (ನಾ) ವಚನಗಳು (ಕ)

ಶಿವಕುಮಾರ್ ಟ್ರೇಡಿಂಗ್ ಕಂಪನಿ ಚಿತ್ರದುರ್ಗ



ರಾಜಣ್ಣ, ಬೊಮ್ಮರಾಯಗೌಡ
ಜ 1-1-1947

ಕೃಷ್ಣರಾಜನಗರ ತಾಲೂಕು ರಾಂಪುರ ; ಬೊಮ್ಮರಾಯಗೌಡ-ಪುಟ್ಟಮ್ಮ ; 2 ಗಂ 1 ಹೆ ಮಕ್ಕಳು : ಪ್ರಾ ರಾಂಪುರ,ಮಾ ಪ್ರೌ ಸಾಲಿಗ್ರಾಮ, ಡಿಪ್ಲೊಮಾ ಇನ್ ಮೆಕ್ಯಾನಿಕಲ್ ಎಂಜಿನಿಯರಿಂಗ್, ಎಂ ಎ ಮೈಸೂರು ; ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಫೋರ್‌ಮನ್ ; ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಸದಸ್ಯ ; 2 ಕೃತಿಗಳು : ಬಿಸಿಲು ಮಳೆ (ಕ) ಎಡತೊರೆ (ಸ ಕ)

ವಿ ಐ ಎಸ್ ಎಲ್ ಭದ್ರಾವತಿ 577 301

ರಾಜಪ್ಪ, ತಗಡೂರು ಶಿವಪ್ಪ
ಜ 9-5-1942

ಮೈಸೂರು ಜಿಲ್ಲೆ ತಗಡೂರು ; ಶಿವಪ್ಪ–ಜಯಮ್ಮ ; 3 ಗಂ ಮಕ್ಕಳು ; ಪ್ರಾ ಮಾ ತಗಡೂರು, ಪ್ರೌ ಬಿ ಎ ಎಂ ಎ ಮೈಸೂರು ; ಮೈ ವಿ ಕನ್ನಡ ಅಧ್ಯಯನ ಸಂಸ್ಥೆ ಜಾನಪದ ವಿಭಾಗದಲ್ಲಿ ಸಹಾಯಕ ಸಂಶೋಧಕ : ಮೈಸೂರು ಚೇತನ ಕನ್ನಡ ಸಂಘದ ಸದಸ್ಯ ; 10 ಕೃತಿಗಳು : ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು, ಧಾರವಾಡ ಜಿಲ್ಲೆಯ ಲಾವಣಿಗಳು, ದಾಳಿಂಬೆರಾಣಿ ಮತ್ತು ಇತರ ಕಥೆಗಳು, ರಾಯಚೂರು ಜಿಲ್ಲೆಯ ಜನಪದ ಗೀತೆಗಳು (ಜಾ)

ಜಾನಪದ ವಿಭಾಗ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006



ರಾಜಪುರೋಹಿತ, ಜಯತೀರ್ಥ
ಜ 1-7-1925

ರಾಯಚೂರು ಜಿಲ್ಲೆ ಕನಕಗಿರಿ ; ಶೇಷಾಚಾರ್ಯ–ರಂಗಮ್ಮ ; 2 ಗಂ 3 ಹೆ ಮಕ್ಕಳು ; ಪ್ರಾ ಕನಕಗಿರಿ ಹಾಗೂ ಗಂಗಾವತಿ, ಮ್ಯಾಟ್ರಿಕ್ ಬನಾರಸ್ ಹಿಂದೂ ವಿಶ್ವವಿದ್ಯಾಲಯ, ಬಿ ಎ ಹೈದರಾಬಾದ್ ವಿಶ್ವವಿದ್ಯಾಲಯ ; ಕಲ್ಬುರ್ಗಿ ವಿಶ್ವವಿದ್ಯಾಲಯದ ಕುಲಸಚಿವ ; ಸುಳಿಗಾಳಿ ಕಾದಂಬರಿಗೆ ಸುಧಾ ಕಾದಂಬರಿ ಸ್ಪರ್ಧೆ ಮತ್ತು ರಾಜ್ಯಸಾಹಿತ್ಯ ಅಕಾದೆಮಿ ಬಹುಮಾನ ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ, ಕಚೇರಿ ಕೈಪಿಡಿಯ ಸಂಪಾದಕ ಸದಸ್ಯ, ಆಡಳಿತ ಭಾಷಾ ತರಬೇತಿ ಪಾಠಕ್ರಮ ಉಪಸಮಿತಿ ಸದಸ್ಯ ; 21 ಕೃತಿಗಳು : ಪಾರವ್ವನ ಪಂಚಾಯಿತಿ, ಶಿಥಿಲ ಶಿಲೆ (ಸ ಕ) ಹಾಲು–ಜೇನು, ಸುಳಿಗಾಳಿ (ಕಾ) ತುಂಗೆಯುಂಗಳದಲ್ಲಿ, ಜಯಬಂಗ್ಲಾ (ನಾ) ಕನಕಗಿರಿ (ಇ) ಜಗನ್ನಾಥದಾಸರು, ರಾಮತೀರ್ಥ (ಜೀ) ತುಂಗಾ ತರಂಗ, ಪಂಪಾ ಸಂಪದ, ಕಚೇರಿ ಕೈಪಿಡಿ (ಸಂ) ಆಡಳಿತದಲ್ಲಿ ಕನ್ನಡ (ಪ್ರ) ಬ್ರಿಟಿಷ್ ಆಳಿಕೆಯ ಆರ್ಥಿಕ ತಳಪಾಯ (ಅ) ಹವ್ಯಾಸ : ಅಭಿನಯ

ಕುಲಸಚಿವ ಕಲ್ಬುರ್ಗಿ ವಿಶ್ವವಿದ್ಯಾಲಯ ಗುಲ್ಬರ್ಗಾ

ರಾಜರತ್ನಂ, ಈಚನೂರು ಸೀತಾರಾಮಯ್ಯ
ಜ 26-3-1947



ತಿಪಟೂರು ತಾಲೂಕು ಈಚನೂರು; ಸೀತಾರಾಮಯ್ಯ–ಸಾವಿತ್ರಮ್ಮ: ಪ್ರೌ ಬಿ ಎ ತಿಪಟೂರು, ಎಂ ಎ (ಅರ್ಥಶಾಸ್ತ್ರ) ಮೈ ವಿ, ಹಿಂದಿ ರಾಷ್ಟ್ರ ಭಾಷಾ ವಿದ್ವಾನ್; ಕನಕಪುರ ರೂರಲ್ ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕ; ಸಂಗಮ ವಿಚಾರ ವೇದಿಕೆ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ; 8 ಕೃತಿಗಳು: ಶ್ರೀ ಸಾಮಾನ್ಯನ ಉದ್ಧಾರ ಎಂತು ಮತ್ತು ಇತರ ಲೇಖನಗಳು (ಪ್ರ) ಹಣ ಮತ್ತು ಬ್ಯಾಂಕುಗಳು, ಹಣ ಒಂದು ವಿವೇಚನೆ (ಅ ಶಾ) ದಾಳಗಳು, ಅತೃಪ್ತ (ಕಾ) ಅವಳು ಮತ್ತು ಆ ಸಗು (ಸ ಕ) ಹವ್ಯಾಸ: ಈಜು

ಅಧ್ಯಾಪಕ ರೂರಲ್ ಕಾಲೇಜು ಕನಕಪುರ



ರಾಜರತ್ನಂ, ಗುಂಡ್ಲು ಪಂಡಿತ
1908–1979

ಬೆಂಗಳೂರು ಜಿಲ್ಲೆ ರಾಮನಗರ; ತಂದೆ: ಜಿ ಪಿ ಗೋಪಾಲಕೃಷ್ಣ ಐಯಂಗಾರ್; ಬಿ ಎ (1928) ಎಂ ಎ (1931): ಶಿಶುವಿಹಾರ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಕ, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಇಲಾಖೆಯಲ್ಲಿ ಪಂಡಿತ, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಪಂಡಿತ, ಅಲ್ಲಿಯೇ ಉಪಪ್ರಾಧ್ಯಾಪಕನಾಗಿ ನಿವೃತ್ತಿ (1964) ನಂತರ ಮೂರು ವರ್ಷಗಳ ಕಾಲ ಯುಜಿಸಿ ಪ್ರಾಧ್ಯಾಪಕ, ಪಾಳಿ ಪ್ರಾಕೃತ ಹಿಂದಿ ಇಂಗ್ಲಿಷ್ ತೆಲುಗು ಭಾಷೆಗಳಲ್ಲಿ ಪರಿಣತಿ: ತಾರೆ ಕವಿತೆಗೆ ಬಿ ಎಂ ಶ್ರೀ ರಜತೋತ್ಸವ ಸ್ವರ್ಣಪದಕ, ದೇವರಾಜ ಬಹದ್ದೂರ್ ಬಹುಮಾನ, ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮೈ ವಿ ಡಿಲಿಟ್, ದೆಹಲಿಯಲ್ಲಿ ಜರುಗಿದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (1978); ಗೌರವಗ್ರಂಥ: ನಮ್ಮ ರಾಜರತ್ನಂ ಮತ್ತು ರಾಜರತ್ನಂ, ಸಂಸ್ಮರಣ ಗ್ರಂಥ: ಜೀವರತ್ನ ಮತ್ತು ಸಾಹಿತ್ಯ ಪರಿಚಾರಕ, ರತ್ನದೀಪ, ಆರದ ಬೆಳಕು; ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧಿಕಾರಿ, ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಉಪಾಧ್ಯಕ್ಷ: 250 ಕೃತಿಗಳು: ರತ್ನನ ಪದಗಳು, ನಾಗನ ಪದಗಳು, ಮಹಾಕವಿ ಪುರುಷ ಸರಸ್ವತಿ (ಕ)

ಗೆಂಡುಗೊಡಲಿ, ಶಕಾರನ ಸಾರೋಟು, ಸಂಭವಾಮಿ ಯುಗೇಯುಗೇ (ನಾ) ಶ್ರೀ ಕವಿ ಪಂಪ, ಕೈಲಾಸಂ ಅವರ ಏಕಲವ್ಯ, ಕವಿರನ್ನ (ವಿಮ) ಬುದ್ಧನ ಕತೆಗಳು, ಭಗವಾನ್ ಮಹಾವೀರ, ಧಮ್ಮಪದ (ಧ) ಕಲ್ಲುಸಕ್ಕರೆ, ಗುಲಗಂಜಿ, ಕೋಳಿ ಕಳ್ಳ (ಬಾ) ನಿರ್ಭಯಾಗ್ರಹಿ, ಹತ್ತು ವರ್ಷ, ಕಿರಣಾನುಭವ (ಪ್ರ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

ರಾಜಶೇಖರ, ಪಿರಿಯಾಪಟ್ಟಣ ಕೆಂಪೇಗೌಡ

ಜ 30-10-1946



ಮೈಸೂರು ಜಿಲ್ಲೆ ಪಿರಿಯಾಪಟ್ಟಣ ; ಕೆಂಪೇಗೌಡ–ಪುಟ್ಟಮ್ಮ ; ಪ್ರಾ ಮಾ ಪ್ರೌ ಪಿರಿಯಾಪಟ್ಟಣ, ಬಿ ಎ ಎಂ ಎ ಪಿ ಎಚ್ ಡಿ ಮೈಸೂರು ; ಮೈ ವಿ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ; ಮಲೆಯಮಾದೇಶ್ವರ ಕೃತಿಗೆ ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ ; 13 ಕೃತಿಗಳು : ಮಾನಸ ದೀಪ್ತಿ (ಕ) ಪ್ರತಿಬಿಂಬ (ಅ) ಚಿಕ್ಕದ ಚಾಮುಂಡಿ, ಮಲೆಯ ಮಾದೇಶ್ವರ, ಜನಪದ ಚಮತ್ಕಾರ ಗಣಿತ, ಪುರಾಣಗಳು (ಜಾ) ಹವ್ಯಾಸ : ಜನಪದ ಗಾಯನ

ಕನ್ನಡ ಅಧ್ಯಾಪಕ ಮಹಾರಾಜಾ ಕಾಲೇಜು ಮೈಸೂರು

ರಾಜಶೇಖರಯ್ಯ, ಆವರೆಗೆರೆಮಠ

ಜ 8-6-1929

ದಾವಣಗೆರೆ ; ಎ ಎಂ ಚೆನ್ನಬಸವಯ್ಯ–ನೀಲಮ್ಮ ; 5 ಮಕ್ಕಳು ; ಪ್ರಾ ಮಾ ದಾವಣಗೆರೆ. ಪ್ರೌ ಮೈಸೂರು ನಂಜನಗೂಡು, ಬಿ ಎ ಆನರ್ಸ್ ಎಂ ಎ ಮೈಸೂರು, ಪಿ ಎಚ್ ಡಿ ಧಾರವಾಡ ; ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರದ ಪ್ರಾಧ್ಯಾಪಕ ; 6 ಕೃತಿಗಳು : ಸಂಸತ್ತಿನ ಕಾರ್ಯ ಪದ್ಧತಿ, ನವೋದಿತ ಬಂಗ್ಲಾದೇಶ, ರಾಜ್ಯಶಾಸ್ತ್ರ ಪರಿಚಯ (ರಾ) ಭಾರತ ಸ್ವಾತಂತ್ರ್ಯ ಚಳುವಳಿಯ ಇತಿಹಾಸ (ಅ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ಹವ್ಯಾಸ : ತೋಟಗಾರಿಕೆ, ಸಂಗೀತ

ಕಲ್ಯಾಣನಗರ ಧಾರವಾಡ 580 007

ರಾಜೀವ, ಮಲ್ಹಾರ ಪುರಂದರೆ [ರಾಜೀವಪುರಂದರೆ]
ಜ 4-6-1918

ಪುಣೆ; 3 ಗಂ 2 ಹೆ ಮಕ್ಕಳು; ಪ್ರಾ ಮಾ ಪ್ರೌ ಎಂ ಎ (ಸಂಗೀತ ಅಲಂಕಾರ) ಹೊನ್ನಾವರದ ಕಲೆ ಹಾಗೂ ವಿಜ್ಞಾನ ಕಾಲೇಜಿನಲ್ಲಿ ಸಂಗೀತ ಪ್ರಾಧ್ಯಾಪಕ; ಗದಗ ವಿಜಯಕಲಾ ಮಂದಿರದ ಸಂಗೀತ ಸಲಹೆಗಾರ; 6 ಕೃತಿಗಳು: ರಾಗವಿಬೋಧ, ಸಂಗೀತ ಕಲಾಕುಸುಮ, ತಬಲಾ ಶಾಸ್ತ್ರ ವಿಶಾರದ, ರಾಗದರ್ಶನ (ಕಲೆ) ಹವ್ಯಾಸ: ಜ್ಯೋತಿಷ್ಯ, ಆಯುರ್ವೇದ, ತಬಲ, ಸಿತಾರ, ಕೊಳಲು ವಾದನ

ಕಲೆ ಮತ್ತು ವಿಜ್ಞಾನ ಕಾಲೇಜು ಹೊನ್ನಾವರ ಉ ಕ ಜಿಲ್ಲೆ

ರಾಜೂರ, ವೀರಣ್ಣ ಬಸಪ್ಪ [ವೀರಾ]
ಜ 4-6-1947

ರಾಯಚೂರು ಜಿಲ್ಲೆ ಬೆನಕನಾಳ; ಬಸಪ್ಪ-ಫಕೀರಮ್ಮ; ಪ್ರಾ ಮಾ ಬೆನಕನಾಳ, ಪ್ರೌ ಹನಮಸಾಗರ, ಬಿ ಎ ಗದಗ, ಎಂ ಎ ಧಾರವಾಡ; ಕ ವಿ ಕನ್ನಡ ಅಧ್ಯಯನ ಪೀಠದಲ್ಲಿ ಸಹಾಯಕ ಸಂಶೋಧಕ; 2 ಕೃತಿಗಳು: ಅವಳೇ ಗಂಡ ನಾನೇ ಹೇಣ್ತಿ, ಏಕಾಂಕ ನಾಟಕಗಳು (ನಾ) ಹವ್ಯಾಸ: ಅಭಿನಯ, ಗಾಯನ

ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003



ರಾಜೇಗೌಡ, ಹನುಮನಹಳ್ಳಿ ಕಪನೀಗೌಡ
ಜ 7-8-1938

ನಾಗಮಂಗಲ ತಾಲೂಕು ಹನುಮನಹಳ್ಳಿ; ಕಪನೀಗೌಡ-ನಿಂಗಮ್ಮ; 1 ಗಂ 1 ಹೆ ಮಕ್ಕಳು; ಪ್ರಾ ಗೊರವಿ, ಮಾ ಸಂತೇಬಾಚಹಳ್ಳಿ ಮೇಲುಕೋಟೆ, ಪ್ರೌ ಚನ್ನರಾಯಪಟ್ಟಣ, ಬಿ ಎ ಎಂ ಎ ಮೈಸೂರು; ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕ; ಅಖಿಲ ಕರ್ನಾಟಕ ಭಾಷಾ ಅಧ್ಯಾಪಕರ ಸಂಘದ ಅಧ್ಯಕ್ಷ (1966-68) ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಸದಸ್ಯ; 30 ಕೃತಿಗಳು: ಕಥಾಭಾರತಿ, ಜಗತ್ತಿನ ಜನಪದ ಕಥೆಗಳು (ಅ) ಲೋಕಪಾವನಿ, ಶ್ರೀಕಂಠೇಶಗೌಡರ ಕೃತಿಗಳು, ಪರೋಪಕಾರಿ, ರಾಷ್ಟ್ರಕವಿ, ಕಲ್ಯಾಣ ಕೀರ್ತಿಯ ಕೃತಿಗಳು, ಶ್ರೀ ಪಾಲ ಚರಿತೆ (ಸಂ) ಗಾನ ಗಂಧರ್ವ ಭೈರವಿ ಕೆಂಪೇಗೌಡರು, ಸಾವನದುರ್ಗ (ಬಾ) ಹವ್ಯಾಸ: ವ್ಯವಸಾಯ, ಪ್ರವಾಸ

2910 ಕಾಂತರಾಜ ಅರಸ್ ರಸ್ತೆ ಸರಸ್ವತೀಪುರಂ ಮೈಸೂರು 570 009



ರಾಜೇಂದ್ರ, ದಂಡಿನಶಿವರ ಕೆಂಪಲಿಂಗೇಗೌಡ
ಜ 13-4-1942

ತುಮಕೂರು ಜಿಲ್ಲೆ ದಂಡಿನಶಿವರ ; ಎಸ್ ಕೆಂಪಲಿಂಗೇಗೌಡ–ಗೌರಮ್ಮ : 1 ಗಂ 1 ಹೆ ಮಕ್ಕಳು ; ಪ್ರಾ ಮಾ ದಂಡಿನ ಶಿವರ, ಪ್ರೌ ಅರಕಲಗೂಡು ಶಿರಾ, ಬಿ ಎ ಹಾಸನ, ಎಂ ಎ ಪಿ ಎಚ್ ಡಿ ಮೈಸೂರು ; ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕ : 15 ಕೃತಿಗಳು : ಜಾನಪದ ಸಮೀಕ್ಷೆ, ಜಾನಪದ ಸಂಪದ, ನಮ್ಮ ಸುತ್ತಿನ ನಂಬಿಕೆಗಳು, ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ (ಜಾ) ಅನುಶೀಲನ (ವಿಮ) ನುಗ್ಗೇಹಳ್ಳಿ ಗುಜ್ಜೇಗೌಡರು, ಕರ್ನಾಟಕದ ಗೊಂಬೆಯಾಟಗಳು (ಜಾ)

50 ತೊಣಚಿಕೊಪ್ಪಲು ಬಡಾವಣೆ ಮೈಸೂರು 570 009



ರಾಮಕೃಷ್ಣಪ್ಪ, ಪಿ [ಕೋದಂಡಪಾಣಿ, ರಾ ಕೃ]
ಜ 10-1-11908

ಚಿತ್ರದುರ್ಗ ಜಿಲ್ಲೆ ಮೋಟಿಕುರಿಕೆ : ರುದ್ರಪ್ಪ–ಗಂಗಮ್ಮ ; 5 ಗಂ 1 ಹೆ ಮಕ್ಕಳು ; ಪ್ರಾ ಮೋಟಿಕುರಿಕೆ, ವಿ ಟಿ ಸಿ ಹಾಸನ, ಕನ್ನಡ ಪಂಡಿತ ಪರೀಕ್ಷೆ ಮೈಸೂರು ; ಶಿಕ್ಷಕ ; ಶೈಕ್ಷಣಿಕ ಸೇವೆಗಾಗಿ ರಾಜ್ಯ ಪ್ರಶಸ್ತಿ ; ಚಿತ್ರದುರ್ಗ ಜಿಲ್ಲಾ ಬರಹಗಾರರ ಸಂಘದ ಅಧ್ಯಕ್ಷ : 2 ಕೃತಿಗಳು : ಅಮರ ಕೀರ್ತಿ, ಮಹಾದಾನ ಭಾಗ್ಯಜ್ಯೋತಿ

ಫಿಲ್ಟರ್ ಹೌಸ್ ರಸ್ತೆ ಚಿತ್ರದುರ್ಗ



ರಾಮಕೃಷ್ಣ, ಮುದ್ದಗೌಡ
ಜ 28-6-1940

ಮಂಡ್ಯ ಜಿಲ್ಲೆ ಮಾಚನಾಯಕನಹಳ್ಳಿ ; ಎಂ ಮುದ್ದಗೌಡ–ಅಶ್ವತ್ಥಮ್ಮ ; ಪ್ರಾ ಮಾ ಬೆಸಗರಹಳ್ಳಿ, ಪ್ರೌ ಮಧುಗಿರಿ, ಬಿ ಎಸ್ ಸಿ ಮೈ ವಿ, ಬಿ ಇ ಬೆಂ ವಿ, ಎಂ ಎ ಮಂಗಳೂರು, ಪಿ ಎಚ್ ಡಿ, ಡಿಪ್ ಇನ್ ಟ್ರಾನ್ಸ್‌ಲೇಷನ್ ಮೈ ವಿ ; ಮೈ ವಿ ಸಂಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ; 9 ಕೃತಿಗಳು:

ನಿರೀಕ್ಷೆ, ಬಿಸಿಲುಮಳೆ (ಕ) ತೇರು ಬಂತು ತೌರಿಗೆ (ಸ ಕ) ಅನುಸಂಧಾನ, ಸಾಹಿತ್ಯ ಮತ್ತು ಸಮಾಜ (ವಿಮ) ಕ್ಷೀರ ಪಥ (ಜೀ) ಅಪೂರ್ವ ಮಿಲನ, ಭಕ್ತನಂದ, ಭ್ರಮನಿರಸನ (ನಾ) ಅಂತರಗಂಗೆ (ಕಾ)

31 ವಿನೋಬಾ ರಸ್ತೆ ಮೈಸೂರು 570 012

ರಾಮಕೃಷ್ಣಶಾಸ್ತ್ರಿ, ತೊಳಲೂರು [ಪರಮ ಪುರುಷ]

ಜ 10-10-1916

ಬೆಂಗಳೂರು ; 4 ಗಂ 2 ಹೆ ಮಕ್ಕಳು ; ಬೆಂಗಳೂರು ಸಂಸ್ಕೃತ ಕಾಲೇಜಿನಲ್ಲಿ ನಾಟಕಾಂತ ಸಾಹಿತ್ಯ ತರ್ಕ ವ್ಯಾಕರಣಗಳಲ್ಲಿ ಉಚ್ಚಶಿಕ್ಷಣ, ಎಸ್ ಎಸ್ ಎಲ್ ಸಿ; ಬೆಂಗಳೂರಿನ ಮಹಾನಗರಸಭೆ ಪ್ರೌಢಶಾಲೆಯಲ್ಲಿ ಸಂಗೀತ ಉಪಾಧ್ಯಾಯರಾಗಿ ನಿವೃತ್ತಿ ; 3 ಕೃತಿಗಳು : ಗಾನಶಾಸ್ತ್ರ ಪ್ರಕಾಶಿಕೆ ಭಾಗ 1, 2, ಸ್ವರಮೇಳ ಕಳಾನಿಧಿ (ಕಲೆ)

63 ನರಸಿಂಹ ಜೋಯಿಸ್ ಗಲ್ಲಿ ಹಲಸೂರುಪೇಟೆ ಬೆಂಗಳೂರು

ರಾಮಕೃಷ್ಣಶಾಸ್ತ್ರಿ, ಪಟಿಕ್ಕಲ್ಲು [ಸಾಯಿಪ್ರಿಯ, ಪ ಶಾ, ಪರಾಶಾ]

ಜ 7-7-1953

ದಕ್ಷಿಣ ಕನ್ನಡ ಜಿಲ್ಲೆ ಕಬಕ ; ವೆಂಕಟರಮಣಶಾಸ್ತ್ರಿ–ಗುಣವತಿ ಅಮ್ಮ ; ಏಳನೇ ತರಗತಿ ವರೆಗೆ ಅಭ್ಯಾಸ ; ಕೃಷಿಕ ; 1 ಕೃತಿ : ಕುದ್ಮುಲ್ ರಂಗರಾವ್ (ಬಾ) ಹವ್ಯಾಸ : ಅಂಚೆ ಚೀಟಿ ಸಂಗ್ರಹ, ಚಿತ್ರಕಲೆ

ಶಿವಶಕ್ತಿ ನಿಲಯ ಮಚ್ಚಿನ ಅಂಚೆ ದ ಕ ಜಿಲ್ಲೆ 574 224

ರಾಮಕೃಷ್ಣಶಾಸ್ತ್ರಿ, ಬಸವತಿ ಶ್ರೀನಿವಾಸಶಾಸ್ತ್ರಿ [ಬಸವತಿ, ರಾಮಕೃಷ್ಣಶಾಸ್ತ್ರಿ]

ಬಸವತಿ ; ಶ್ರೀನಿವಾಸಶಾಸ್ತ್ರಿ–ಗಂಗಮ್ಮ ; 3 ಗಂ 1 ಹೆ ಮಕ್ಕಳು ; ಅದ್ವೈತ ವೇದಾಂತ ವಿದ್ವನ್ಮಧ್ಯಮ ಪರೀಕ್ಷೆಯಲ್ಲಿ ತೇರ್ಗಡೆ ; ಪೌರೋಹಿತ್ಯ ; 5 ಕೃತಿಗಳು : ಯಜುಃ ಸಂಧ್ಯಾರ್ಥ ಪ್ರದೀಪಿಕಾ, ಸಸ್ವರ ರುದ್ರ ಮತ್ತು ಚಮಕ, ಶ್ರೀ ಲಲಿತಾ ಸಪ್ತಶತಿ

ನಂ 27 6ನೇ ಅಡ್ಡರಸ್ತೆ ಈಜುಕೊಳದ ಬಡಾವಣೆ ಮಲ್ಲೇಶ್ವರಂ ಬೆಂಗಳೂರು 560 003

ರಾಮಕೃಷ್ಣ, ಹಾಸನ ತಿಮ್ಮಪ್ಪ

ಜ 17–9–1936

ಹಾಸನ; ತಂದೆ: ಬಿ ಆರ್ ತಿಮ್ಮಪ್ಪ; 2 ಗಂ 1 ಹೆ ಮಕ್ಕಳು; ಪ್ರಾ ಮಾ ಪ್ರೌ ಬಿ ಎ ಹಾಸನ, ಎಂ ಎ ಮೈಸೂರು; ತಿಪಟೂರಿನ ಕಲ್ಪತರು ಕಾಲೇಜಿನಲ್ಲಿ ರಾಜ್ಯ ಶಾಸ್ತ್ರದ ಅಧ್ಯಾಪಕ; 3 ಕೃತಿಗಳು: ರಾಜ್ಯಶಾಸ್ತ್ರ, ಸರ್ಕಾರದ ಮೂಲಾಂಶಗಳು (ರಾ) ಭಾರತೀಯ ಅರ್ಥಶಾಸ್ತ್ರದ ಪರಿಚಯ (ಅಶಾ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

ಕಲ್ಪತರು ಕಾಲೇಜು ತಿಪಟೂರು

ರಾಮಚಂದ್ರ, ಎಸ್ [ಎಸ್ ಆರ್ ಚಂದ್ರ]

ಜ 23-11-1915

ದಕ್ಷಿಣ ಕನ್ನಡ ಜಿಲ್ಲೆ ಚೊಕ್ಕಾಡಿ; ಹೆಬ್ಬಾರ ಪರಮೇಶ್ವರಯ್ಯ–ದೇವಮ್ಮ; 5 ಮಕ್ಕಳು; ಪ್ರೌ ಪುತ್ತೂರು, ಹಿಂದಿ ವಿಶಾರದ, ಎಂ ಎ ಮದರಾಸು ವಿಶ್ವವಿದ್ಯಾಲಯ; ಸರ್ಕಾರಿ ಕಾಲೇಜಿನಲ್ಲಿ ಹಿಂದಿ ಉಪಪ್ರಾಧ್ಯಾಪಕನಾಗಿ ನಿವೃತ್ತಿ; 3 ಕೃತಿಗಳು: ಒಗ್ಗರಣೆ (ಪ್ರ) ಆಕಾಶದೀಪ, ತತ್ವರಸಾಯನ (ಅ)

ಚೊಕ್ಕಾಡಿ ಅಂಚೆ ಸುಳ್ಯತಾ ದ ಕ ಜಿಲ್ಲೆ

ರಾಮಚಂದ್ರ, ಮಾವಂಜಿ

ಜ 5-6-1939



ದ ಕ ಜಿಲ್ಲೆ ಮಂಡೆಕೋಲು; ಶ್ರೀ ಕೃಷ್ಣ–ಕಾವೇರಿ ಅಮ್ಮ; 1 ಗಂ ಮಗು; ಪ್ರಾ ಮಂಡೆಕೋಲು, ಪ್ರೌ ಕಾಸರಗೋಡು; ಬಿ ಎ ಮಂಗಳೂರು, ಎಂ ಎ ಧಾರವಾಡ; ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ; ಲಲಿತ ಕಲಾ ವೃಂದ, ಕನ್ನಡ ಸಾಹಿತ್ಯ ಪರಿಷತ್ತು, ಪಿ ಇ ಎನ್ ಸದಸ್ಯ; 8 ಕೃತಿಗಳು: ಸೇಡಿಯಾಪು ಕೃಷ್ಣಭಟ್ಟ (ಜೀ) ಬಾಡದ ಹೂಗಳು (ವಿಮ) ಪುಷ್ಪಾಂಜಲಿ, ಉಪಹಾರ (ಸಂ) ಹವ್ಯಾಸ: ತೋಟಗಾರಿಕೆ

ಭುವನೇಂದ್ರ ಕಾಲೇಜು ಕಾರ್ಕಳ ದ ಕ



ರಾಮಚಂದ್ರಮೂರ್ತಿ, ಹೊಳಲ್ಕೆರೆ ಕೃಷ್ಣಮೂರ್ತಿ

ಜ 1-7-1925

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ; ಕೃಷ್ಣಮೂರ್ತಿ-ನರಸಮ್ಮ ; 2 ಗಂ 1 ಹೆ ಮಕ್ಕಳು ; ಬಿ ಎ ಆನರ್ಸ್ ಎಂ ಎ ; ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ ; ಪೂರ್ಣಕೃಷ್ಣರಾವ್ ಚಿನ್ನದ ಪದಕ ; 5 ಕೃತಿಗಳು : ಮನವೆಂಬ ಮರ್ಕಟ (ನಾ) ಮೋಲಿಯೇರ್, ಬ್ರೆಕ್ಟ್ (ವಿಮ) ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟು (ನಿ) ಗೆಲಿಲಿಯೊ (ಅ)

ರಾಮಚಂದ್ರರಾವ್, ಬೆಳ್ಳಿ

ಜ 9-11-1900

ಬೆಳ್ಳಿ ವೆಂಕಟಕೃಷ್ಣರಾಯ-ಕಮಲಮ್ಮ ; ಪ್ರಾ ಮಾ ಪುತ್ತೂರು, ಪ್ರೌ ಮಂಗಳೂರು, ಬಿ ಎ ಮದರಾಸು ಎಂ ಎ ಬಿ ಎಲ್ ; ವಕೀಲ ; 2 ಕೃತಿಗಳು : ಜೀವನದ ದಾರಿಯು ಕಂಡ ರಂಗು (ಕಾ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

320 7ನೇ ಬ್ಲಾಕ್ ಜಯನಗರ ಬೆಂಗಳೂರು 560 011

ರಾಮಚಂದ್ರರಾವ್, ಸಾಲಿಗ್ರಾಮ ಕೃಷ್ಣ

ಜ 9-2-1927

ಹಾಸನ ; ಎಸ್ ಕೆ ನಾರಾಯಣರಾವ್-ಕಮಲಾಬಾಯಿ ; ಇಬ್ಬರು ಮಕ್ಕಳು ; ಪ್ರಾ ಬೆಂಗಳೂರು, ಪ್ರೌ ನಂಜನಗೂಡು, ಬಿ ಎ ಆನರ್ಸ್ ಎಂ ಎ ಮೈಸೂರು, ವೀಣೆ, ವೇದಾಂತ, ಪಾಳಿ, ಜೈನವಾಙ್ಮಯಗಳ ಅಧ್ಯಯನ ; ಬೆಂ ವಿ ಮನಶ್ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ; ವಿದ್ಯಾಲಂಕಾರ ಪ್ರಶಸ್ತಿ ; ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಸದಸ್ಯ ; 30 ಕೃತಿಗಳು : ಟಿಬೆಟ್ಟಿನ ಯೋಗಿ ಮಿಲರೇಪ, ಬೋಧಿಯ ಬೆಳಕಿನಲ್ಲಿ, ಶ್ರೀ ಮಧ್ವಾಚಾರ್ಯರು, ನಗೆಯ ನೆಲೆ, ವಿವಾಹ ಪದ್ಧತಿಗಳು, ಪ್ರಾಚೀನ ಸಂಸ್ಕೃತಿ, ಪರಾಮಾನಸ ಶಾಸ್ತ್ರ, ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ, ಗೊಮ್ಮಟೇಶ್ವರ, ತಿರುಪತಿ ತಿಮ್ಮಪ್ಪ, ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ಚಿತ್ರಕಲೆ, ಶಿಲ್ಪ, ಸಂಗೀತ

305 ಮೊದಲನೇ ಬ್ಲಾಕ್ ಜಯನಗರ ಬೆಂಗಳೂರು



ರಾಮಚಂದ್ರಶರ್ಮ, ಜೋಗಾದಿ ಚಂದ್ರಶೇಖರ ಶರ್ಮ

ಜ 28-11-1925

ಚಂದ್ರಶೇಖರಶರ್ಮ–ಲಕ್ಷ್ಮೀದೇವಮ್ಮ ; 1 ಗಂ 2 ಹೆ ಮಕ್ಕಳು ; ಪ್ರಾ ಮಾ ಬೊಂಬಾಯಿ ಬೆಂಗಳೂರು, ಪ್ರೌ ಮೈಸೂರು, ಕಾಲೇಜ್ ವಿದ್ಯಾಭ್ಯಾಸ ಬೆಂಗಳೂರು, ಬಿ ಎಡ್ ಮೈಸೂರು, ಪಿ ಎಚ್ ಡಿ ಲಂಡನ್ : ಇಥಿಯೋಪಿಯಾ, ಇಂಗ್ಲೆಂಡ್, ಜಾಂಬಿಯಾಗಳಲ್ಲಿ ಅಧ್ಯಾಪಕನಾಗಿ ಮನೋವಿಜ್ಞಾನಿಯಾಗಿ ಸೇವೆ, ಪ್ರಸ್ತುತ ಜಾಂಬಿಯಾ ಸರ್ಕಾರದ ವಿದ್ಯಾ ಇಲಾಖೆಯಲ್ಲಿ ಮನೋವಿಜ್ಞಾನಿ ; ಸೆರಗಿನ ಕೆಂಡ ರೇಡಿಯೋ ನಾಟಕಕ್ಕೆ ಅಖಿಲ ಭಾರತದ ಬಹುಮಾನ. ನೆರಳು ನಾಟಕಕ್ಕೆ ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ ; ಬ್ರಿಟಿಷ್ ಸೈಕಲಾಜಿಕಲ್ ಸೊಸೈಟಿ ಸದಸ್ಯ ; 12 ಕೃತಿಗಳು : ಏಳು ಸುತ್ತಿನ ಕೋಟೆ, ಬುವಿ ನೀಡಿದ ಸ್ಫೂರ್ತಿ, ಹೇಸರಗತ್ತೆ (ಕ) ಮಂದಾರ ಕುಸುಮ, ಏಳನೆಯ ಜೀವ (ಸ ಕ) ಬಾಳಸಂಜೆ, ವೈತರಣಿ (ನಾ)

ಅಂಚೆ : ಆರ್ ಡಬ್ಲ್ಯು 93 ಲುಸಾಕ ಜಾಂಬಿಯಾ



ರಾಮಚಂದ್ರಸ್ಯಾದ್ವಾದಿ, ಚಿಕ್ಕರಂಗ ಶೆಟ್ಟಿ

ಜ 10–6–1931

ತುಮಕೂರು ಜಿಲ್ಲೆ ಬಿದರೆ ; ಚಿಕ್ಕರಂಗಶೆಟ್ಟಿ–ಪುಟ್ಟಲಕ್ಷ್ಮಮ್ಮ ; 1 ಗಂ 1 ಹೆ ಮಕ್ಕಳು ; ರಾಜಭಾಷಾ ಹಿಂದಿ ವಿದ್ವಾನ್, ಜೈನಧರ್ಮ ವಿಶಾರದ ; ಪ್ರಾಥಮಿಕ ಶಾಲಾ ಶಿಕ್ಷಕ ; ಸ್ಯಾದ್ವಾದಿ ಪ್ರಶಸ್ತಿ : 10 ಕೃತಿಗಳು : ಭಗವಾನ್ ವೃಷಭ ದೇವರ ಜೀವನ ದರ್ಶನ, ಜಿನಮುನಿ ವಂದನೆ, ಅಹಿಂಸಾ ಜ್ಯೋತಿ ಮಹಾವೀರರು, ಶ್ರೀ ವೀರ ಜಿನೇಶ ಚರಿತೆ, ಧರ್ಮ ಚಕ್ರ ಶ್ರೀ ವಿಹಾರ (ಧ)

20 2ನೇ ತಿರುವು ಎಂ ಜಿ ರೋಡ್ ತುಮಕೂರು



ರಾಮಚಂದ್ರಾಚಾರ್, ದೇಜೂರ್ ಭೀಮಸೇನಾಚಾರ್

ಜ 5-1-1942

ಬೆಂಗಳೂರು ; ಡಿ ಆರ್ ಭೀಮಸೇನಾಚಾರ್–ಸುನಂದಮ್ಮ ; 2 ಗಂ ಮಕ್ಕಳು ; ಪ್ರಾ ನಂಜನಗೂಡು, ಮಾ ಪ್ರೌ ಬಿ ಎಸ್ ಸಿ ಎಂ ಎ ಡಿಪ್ಲೋಮಾ ಇನ್ ಕನ್ನಡ ಮೈಸೂರು, ಪಿ ಎಚ್ ಡಿ ಮೈ ವಿ ; ಗೋಣಿಕೊಪ್ಪಲು ಕಾವೇರಿ ಕಾಲೇಜಿನ ಕನ್ನಡ ಅಧ್ಯಾಪಕ ; 3 ಕೃತಿಗಳು : ಕಿಡಿ, ವಚನ ಚಿತ್ರಗಳು (ಕ) ಕವಿಗಳು ಕಂಡ ಕೊಡಗು (ಸಂ) ಹವ್ಯಾಸ : ಪ್ರವಾಸ

ಕಾವೇರಿ ಕಾಲೇಜು ಗೋಣಿಕೊಪ್ಪಲು ಕೊಡಗು ಜಿಲ್ಲೆ

ರಾಮಚಂದ್ರೇಗೌಡ, ಹಿರಿಸಾವೆ ಶಿವನಂಜಪ್ಪ

ಜ 15-11-1947

ಹಾಸನ ಜಿಲ್ಲೆ ರಂಗನಾಥಪುರ ; ಶಿವನಂಜಪ್ಪ–ನಂಜಮ್ಮ ; 1 ಹೆ ಮಗು ; ಪ್ರಾ ಮಂಚೇನಹಳ್ಳಿ ಪ್ರೌ ಬಾಗಿವಾಳು ಬಿ ಎ ಹಾಸನ, ಎಂ ಎ ಮೈಸೂರು, ಕೇರಳದ ತಿರುವನಂತಪುರದಲ್ಲಿ 2 ವರ್ಷ ಜಾನಪದ ಅಧ್ಯಯನ ; ಅಧ್ಯಾಪಕ ; ಕನ್ನಡ ಸಾಹಿತ್ಯ ಪರಿಷತ್ತು, ಸಮನ್ವಯ ಬಳಗ, ನವಭಾರತ ವಿದ್ಯಾಸಂಸ್ಥೆ ಸದಸ್ಯ ; 3 ಕೃತಿಗಳು : ಕಥಕಳಿ, ಕೇರಳ ಜಾನಪದ, ಹಾಸನ ಜಿಲ್ಲೆಯ ಜನಪದ ಕಥೆಗಳು (ಜಾ)

ಅಧ್ಯಾಪಕ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006



ರಾಮಣ್ಣಶೆಟ್ಟಿ, ಅಡಿಬಾಯಿ [ಕವಿಮಿತ್ರ]

ಜ 14-4-1914

ತಿರುವಾಯಿ ; ಅಪ್ಪಯಶೆಟ್ಟಿ–ಅಪ್ಪಿಹೆಂಗುಸು ; 4 ಗಂ 4 ಹೆ ಮಕ್ಕಳು ; ಪ್ರಾಥಮಿಕ ವಿದ್ಯಾಭ್ಯಾಸ ; ಶಿಕ್ಷಕ ; ಯಕ್ಷಗಾನ ಸಂಘದ ಸದಸ್ಯ ; 4 ಕೃತಿಗಳು : ಹೃದಯ ವೀಣೆ, ಭಜನಾವಳಿ (ಕ) ಸಚಿತ್ರ ಧರ್ಮಸ್ಥಳ, ಶ್ರೀಕ್ಷೇತ್ರ ಧರ್ಮಸ್ಥಳ (ಧ)

ಧರ್ಮಸ್ಥಳ ದ ಕ ಜಿಲ್ಲೆ



ರಾಮದಾಸ್ [ಪ್ರೇಮಸೋದರ]
ಜ 1-2-1940

ದ ಕ ಜಿಲ್ಲೆ ಉಚ್ಚಿಲ; ಗುರುರಾಜ ಕುದ್ಯಂ ತಾಯಿ-ಸತ್ಯಭಾಮೆ; 1 ಹೆ ಮಗು; ಪ್ರಾ ಮಾ ಗುಂಡ್ಲುಪೇಟೆ, ಪ್ರೌ ನರಸೀಪುರ ಮೈಸೂರು, ಬಿ ಎ ಎಂ ಎ ಮೈಸೂರು; ಉಡುಪಿಯ ಪೂರ್ಣ ಪ್ರಜ್ಞ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ; ಉಡುಪಿ ಕರ್ನಾಟಕ ಸಂಘದ ಸಹ ಕಾರ್ಯದರ್ಶಿ; 11 ಕೃತಿಗಳು: ಋತು ಗೀತಾಮೃತ, ರಾಮದಾಸರ ಕವನಗಳು (ಕ) ಕರ್ತಾರನ ಕಮ್ಮಟ. ಇವಳು (ಕಾ) ಭೂಮಿಗೀತ ಕಾವ್ಯ ಪ್ರವೇಶ (ವಿಮ) ಸೇಡು (ಸ ಕ) ಹೇಡಿಗಳು, ಬಿದರು ಬೊಂಬೆ (ನಾ) ಹವ್ಯಾಸ: ಅಭಿನಯ, ನಿರ್ದೇಶನ

12-3-93 ಅಜ್ಜರಕಾಡು ಉಡುಪಿ

ರಾಮನಾಥ್, ಹಳ್ಳಿಮೈಸೂರು ಕೇಶವಯ್ಯ
ಜ 2-4-1937

ತಲಕಾಡು; ಎಚ್ ಎಸ್ ಕೇಶವಯ್ಯ-ನಾಗರತ್ನಮ್ಮ; 3 ಗಂ ಮಕ್ಕಳು; ಎಂ ಎ ಬಿ ಎಡ್ ಡಿಪ್ಲೋಮಾ ಇನ್ ಡ್ರಮಾಟಿಕ್ಸ್; ಮೈಸೂರು ಡೆಮಾನ್ ಸ್ಟ್ರೇಷನ್ ಶಾಲೆಯಲ್ಲಿ ಉಪಾಧ್ಯಾಯ; ಮೈಸೂರಿನ ಹವ್ಯಾಸಿ ನಾಟಕ ಸಂಸ್ಥೆಯ ಸದಸ್ಯ; 1 ಕೃತಿ: ಬಸವಣ್ಣನವರು (ವಿಮ) ಹವ್ಯಾಸ: ಅಭಿನಯ

474 ಜೋಡಿರಸ್ತೆ 1ನೇ ಮೈನ್ ಸರಸ್ವತಿಪುರಂ ಮೈಸೂರು 570 009



ರಾಮಪ್ಪ, ದೊಣ್ಣೆ [ವಿಜ್ಞಾನಶ್ರೀ]
ಜ 4-10-1935

ಶಿವಮೊಗ್ಗ ಜಿಲ್ಲೆ ಮುಗಿಲಹಳ್ಳಿ: ರುದ್ರಪ್ಪ-ಗೌರಮ್ಮ: 4 ಗಂ ಮಕ್ಕಳು; ಪ್ರಾ ಮುಗಿಲಹಳ್ಳಿ, ಮಾ ಬೆಳಗುತ್ತಿ, ಪ್ರೌ ನ್ಯಾಮತಿ, ಬಿ ಎಸ್ ಸಿ ಬಿ ಇ ಡಿ ಬೆಂಗಳೂರು. ಎಂ ಎಸ್ ಸಿ ಮೈಸೂರು: ತುಮಕೂರು ಸಿದ್ಧಗಂಗಾ ಕಾಲೇಜಿನಲ್ಲಿ ಭೌತಶಾಸ್ತ್ರದ ಉಪನ್ಯಾಸಕ; 1 ಕೃತಿ: ವಿಜ್ಞಾನ ಗೀತೆಗಳು (ಕ) ಹವ್ಯಾಸ: ಪ್ರವಾಸ

ಸಿದ್ಧಗಂಗಾ ವಿಜ್ಞಾನ ಕಾಲೇಜು ತುಮಕೂರು



ರಾಮಪ್ರಸಾದ್ ಶೆಲ್ಲಂ ಐಯ್ಯಂಗಾರ್
ಜ 6-3-1943

ಮೈಸೂರು; ಎಲ್ ವಿ ಶೆಲ್ಲಂ ಐಯ್ಯಂಗಾರ್–ಕೆ ರುಕ್ಮಿಣಿಯಮ್ಮ; ಬಿ ಎಸ್ ಸಿ, ಎಂ ಎಸ್ ಸಿ ಭಾಷಾಂತರ ಡಿಪ್ಲೊಮಾ ಮೈಸೂರು; ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ವಿಶ್ವ ಕೋಶದ ಉಪಸಂಪಾದಕ; ಮೈಸೂರು ಚಿತ್ರ ಕಲಾಸಂಘ, ಚೇತನ ಕನ್ನಡ ಸಂಘಗಳ ಸದಸ್ಯ; 2 ಕೃತಿಗಳು: ದುರ್ಬೀನು (ಬಾ) ಯುರೇನಸ್ ಗ್ರಹ (ವಿ) ಹವ್ಯಾಸ: ಛಾಯಾಗ್ರಹಣ

655 ಕಾಶೀಪತಿ ಅಗ್ರಹಾರ ಚಾಮರಾಜ ಜೋಡಿರಸ್ತೆ ಮೈಸೂರು 570 004



ರಾಮಯ್ಯ, ದೊಮ್ಮಲೂರು ರಂಗೇಗೌಡ
ಜ 8-2-1903

ಮಂಡ್ಯ ಜಿಲ್ಲೆ ಶ್ರೀರಂಗಪುರ; ರಂಗೇಗೌಡ–ಲಕ್ಷ್ಮಮ್ಮ; 1 ಗಂ 2 ಹೆ ಮಕ್ಕಳು; ಪ್ರಾ ಬೆಂಗಳೂರು, ಮಾ ಬೆಳ್ಳೂರು, ಪ್ರೌ, ಬಿ ಎ ಬೆಂಗಳೂರು; ವಾರ್ತಾ ಇಲಾಖೆ ಮುಖ್ಯಾಧಿಕಾರಿಯಾಗಿ ನಿವೃತ್ತಿ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ; ಒಕ್ಕಲಿಗರ ಪತ್ರಿಕೆ ಸಂಪಾದಕ (1933-34): 24 ಕೃತಿಗಳು: ಕೋಗಿಲೆ, ಕಳೆದ ಬಾಳು (ಕ) ಸರ್ ಜಗದೀಶಚಂದ್ರ ಬೋಸ್, ಮೂವರು ದೇಶ ಭೂಷಣರು (ಜೀ) ಕರ್ತವ್ಯ (ಕಾ) ಹಿತ ಸಾಧಕರ ಕಥೆಗಳು (ಸ ಕ) ಇಂಗ್ಲಿಷ್ ಕವಿಕಾಣಿಕೆ (ಅ) ಯುವರಾಜರ ಸವಿವಾಣಿ (ಸಂ) ಹವ್ಯಾಸ: ವ್ಯಾಯಾಮ

137 'ರಂಗನಿಲಯ' ಗೋವಿಂದಪ್ಪರಸ್ತೆ ಬಸವನಗುಡಿ ಬೆಂಗಳೂರು 560 004




ರಾಮರಾವ್, ತುಮಕೂರು ಕೃಷ್ಣಮೂರ್ತಿ
ಜ 7-10-1931

ಚಿತ್ರದುರ್ಗ ಜಿಲ್ಲೆ ಹೊಸದುರ್ಗ; ಟಿ ಕೃಷ್ಣಮೂರ್ತಿ–ನಾಗಮ್ಮ: ಪ್ರಾ ಮಾ ಕಡೂರು ಅರಸೀಕೆರೆ ಮೈಸೂರು, ಪ್ರೌ ಕೋಲಾರ, ಬಿ ಎಸ್ ಸಿ ಬೆಂಗಳೂರು: ಔಷಧಿ ವ್ಯಾಪಾರ; ವಿಶ್ವದ ಹದಿನಾಲ್ಕು ವಿವಿಧ ರಾಷ್ಟ್ರಗಳಿಗೆ ಭೇಟಿ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ; 30 ಕೃತಿಗಳು: ದೂರ

ಗಗನ, ಬಂಗಾರದ ಮನುಷ್ಯ, ತೋರು ಬೆರಳು, ಕೋವಿ ಕುಂಚ, ವರ್ಣ ಚಕ್ರ. ದಿಬ್ಬದ ಬಂಗಲೆ (ಕಾ) ಉಬ್ಬರವಿಳಿತ, ಎತ್ತರದ ಮನೆಯುವಸು, ಬೆಂಕಿಗೂಡು (ಸ ಕ) ಜೆ ಎನ್ ಟಾಟಾ, ಲಾಲಾ ಲಜಪತರಾಯ್ (ಬಾ) ಗೋಳದ ಮೇಲೊಂದು ಸುತ್ತು (ಪ್ರವಾ) ಹವ್ಯಾಸ : ಕ್ರಿಕೆಟ್
2199 3ನೇ ಕ್ರಾಸ್ ಚನ್ನಪಟ್ಟಣ ಬೆಂಗಳೂರು ಜಿಲ್ಲೆ

ರಾಮಲಿಂಗಯ್ಯ, ಉಪ್ಪಿನಕೆರೆ
ಜ 1-10-1948

ಮಂಡ್ಯ ಜಿಲ್ಲೆ ಉಪ್ಪಿನಕೆರೆ ; ಚಿಕ್ಕೀರೇಗೌಡ–ಮಾದಮ್ಮ ; ಪ್ರಾ ಮಾ ಉಪ್ಪಿನಕೆರೆ, ಪ್ರೌ ಮದ್ದೂರು, ಎಂ ಬಿ ಬಿ ಎಸ್ ಮೈಸೂರು : 'ಆರೋಗ್ಯನಿಧಿ' ಮಾಸಪತ್ರಿಕೆ ಸಂಪಾದಕ ; 4 ಕೃತಿಗಳು : ಕಜ್ಜಿ ಮತ್ತು ಇತರ ಲೇಖನಗಳು, ಕೆಲವು ಆರೋಗ್ಯ ವಿಚಾರಗಳು, ವೈದ್ಯಕೀಯ ಸಂಬಿಕೆಗಳ ವಿಶ್ಲೇಷಣೆ (ವೈ) ಶಾಲಾ ಮಕ್ಕಳ ಆರೋಗ್ಯ (ಬಾ) ಪರಿಸರದ ಜನ (ಕ)
ಸಂಪಾದಕ ಆರೋಗ್ಯನಿಧಿ ಸರಸ್ವತಿಪುರಂ ಮೈಸೂರು



ರಾಮಶೇಷನ್, ನೀಲತ್ತಹಳ್ಳಿ ಕೃಷ್ಣಯ್ಯಂಗಾರ್
[ನೀಲತ್ತಹಳ್ಳಿ ರಾಮಶೇಷನ್]
ಜ 9-4-1946

ತುಮಕೂರು ; ಕೃಷ್ಣಯ್ಯಂಗಾರ್–ಶ್ರೀ ರಂಗಮ್ಮ : ಪ್ರಾ ತುಮಕೂರು ಚಿಕ್ಕಮಗಳೂರು, ಬಿ ಎಸ್ ಸಿ ಶಿವಮೊಗ್ಗ, ಬಿ ಎಲ್ ತುಮಕೂರು, ಎಂ ಎ ಬೆಂಗಳೂರು ; ಜೀವವಿಮಾ ಕಛೇರಿಯಲ್ಲಿ ಅಸಿಸ್ಟೆಂಟ್ ; ಬೆಂಗಳೂರಿನ ಗಾಂಧೀ ಸಾಹಿತ್ಯ ಸಂಘ, ಕನ್ನಡ ಸಾಹಿತ್ಯ ಪರಿಷತ್ತು ಸದಸ್ಯ ; 2 ಕೃತಿಗಳು : ಕೆರೆಯುನುಳಿಸಿದ ಮಾರ (ಕ) ಮಧುಮೇಹ ಹಾಗೂ ಅವರ ಪ್ರಕೃತಿ ಚಿಕಿತ್ಸೆ (ಅ)

ರಾಮಸ್ವಾಮಿ, ಕುಮಾಂಡೂರು ರಾಘವಾಚಾರ್
ಜ 28-1-1928



ಬೆಂಗಳೂರು ಜಿಲ್ಲೆ ಮಾಗಡಿ ; ರಾಘವಾಚಾರ್–ರುಕ್ಮಿಣಮ್ಮ ; 7 ಗಂ 2 ಹೆ ಮಕ್ಕಳು ; ಪ್ರಾ ಮಾ ಪ್ರೌ ಸ್ನಾತಕೋತ್ತರ ಪದವಿ ಬೆಂಗಳೂರು, ಪಿ ಎಚ್ ಡಿ ನಾಗಪುರ ; 1 ಕೃತಿ : ನೀವು ಬಯಸುವ ಮಗು ಗಂಡೊ ಹೆಣ್ಣೊ (ವೈ)
ಡಿ 20 ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ-3

ರಾಮಸ್ವಾಮಿ, ಶಾಮಣ್ಣ
ಜ 9-11-1942

ಬೆಂಗಳೂರು ; ಶಾಮಣ್ಣ–ಜಯಲಕ್ಷಮ್ಮ ; 2 ಹೆ ಮಕ್ಕಳು ; ಶಿಕ್ಷಣ : ಬೆಂಗಳೂರು ; ವ್ಯಾಪಾರ ಹಾಗೂ ವ್ಯವಸಾಯ ; 2 ಕೃತಿ : ಅಪೂರ್ವ ಸಾಧಕರು (ಜೀ) ಹಾಡಾಕೆ ಬೈಗುಂಟೆ ಬೆಳಕುಂಟೆ (ಜಾ) ಮಲೆನಾಡಿನ ಕಥೆಗಳು (ಸಂ) ಹವ್ಯಾಸ : ಚಲನಚಿತ್ರ ನಿರ್ದೇಶನ

ರಾಂ ಮತ್ತು ಕಾಂತ್ ಕಂಪೆನಿ ಟ್ಯಾಂಕ್ ಮೊಹಲ್ಲಾ ಶಿವಮೊಗ್ಗ

ರಾಮಾನುಜಂ, ಪ್ರತಿವಾದಿ ಭಯಂಕರ ಸಂಪತ್ಕುಮಾರಾಚಾರ್ಯ
ಜ 1941

ಚಾಮರಾಜನಗರ ತಾಲೂಕು ಬೇಡಮೂಡಲು ; ಕನ್ನಡ ಪಂಡಿತ್, ಬಿ ಎ ಆನರ್ಸ್ ಎಂ ಎ (ಸಂಸ್ಕೃತ) ಪಿ ಎಚ್ ಡಿ ಮೈ ವಿ ; ಐ ಪಿ ಎಸ್ ಅಧಿಕಾರಿ ; ಈಗ ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕ ; ಕೊಡವರು ಕೃತಿಗೆ ಸಾಹಿತ್ಯ ಅಕಾಡೆಮಿ ಬಹುಮಾನ ; 5 ಕೃತಿಗಳು : ಕೊಡವರು (ಸ) ವೇಣೀಸಂಹಾರ ಒಂದು ಅಧ್ಯಯನ (ವಿಮ) ಆರಕ್ಷಕ ತತ್ವ (ಅ) ಮಿಣುಕು ಆಯನ (ಕ) ಹವ್ಯಾಸ : ವಯೊಲಿನ್ ನುಡಿಸುವುದು

ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ 5 ಇನ್‌ಫೆಂಟ್ರಿರಸ್ತೆ ಬೆಂಗಳೂರು

ರಾಮಾನುಜನ್, ಅತ್ತಿಪ್ಪಟ್ ಕೃಷ್ಣಸ್ವಾಮಿ
ಜ 16-3-1929

ಮೈಸೂರು ; ಎ ಎ ಕೃಷ್ಣಸ್ವಾಮಿ ಅಯ್ಯಂಗಾರ್–ಶೇಷಮ್ಮ : 1 ಗಂ 1 ಹೆ ಮಕ್ಕಳು; ಮೈಸೂರು ಪೂನಾ ಅಮೆರಿಕಗಳಲ್ಲಿ ವಿದ್ಯಾಭ್ಯಾಸ ಎಂ ಎ ಪಿ ಎಚ್ ಡಿ : ಷಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಭಾಷಾ ವಿಜ್ಞಾನ ಹಾಗೂ ದ್ರಾವಿಡ ಅಧ್ಯಯನದ ಪ್ರಾಧ್ಯಾಪಕ : ಅಮೆರಿಕ, ಇಂಗ್ಲೆಂಡ್ ಪ್ರವಾಸ ; ತಮಿಳು ಲೇಖಕರ ಸಂಘದ ಚಿನ್ನದ ಪದಕ, ಪದ್ಮಶ್ರೀ ಪ್ರಶಸ್ತಿ : ವಾಷಿಂಗ್‌ಟನ್‌ನ ಭಾರತದ ರಾಯಭಾರಿಯಿಂದ ಪುರಸ್ಕಾರ ; 5 ಕೃತಿಗಳು : ಗಾದೆಗಳು (ಜಾ) ಹೊಕ್ಕುಳಲ್ಲಿ ಹೂವಿಲ್ಲ ಮತ್ತು ಇತರ ಪದ್ಯಗಳು (ಕ) ಮತ್ತೊಬ್ಬನ ಆತ್ಮಕತೆ (ಕಾ) ಹಳದಿ ಮೀನು (ಅ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

5629 ಡಾರ್ಚೆಸ್ಟರ್ ಚಿಕಾಗೋ ಇಲಿನಾಯ್ 60637



ರಾಮೇಗೌಡ [ರಾಗೌ]
ಜ 3-4-1942

ಮಂಡ್ಯ ಜಿಲ್ಲೆ ಈರೇಗೌಡನದೊಡ್ಡಿ; ಮಾಸ್ತೀಗೌಡ–ನಿಂಗಮ್ಮ: 2 ಗಂ 1 ಹೆ ಮಕ್ಕಳು; ಪ್ರಾ ಮಾ ಬೆಸಗರಹಳ್ಳಿ, ಪ್ರೌ ಮದ್ದೂರು. ಬಿ ಎ ಎಂ ಎ ಮೈಸೂರು; ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕ; ಕೇಣಿ ಸಿದ್ದಪ್ಪ ಚಿನ್ನದ ಪದಕ, ಶ್ರೀಮತಿ ನರಸಮ್ಮ ನಾರಾಯಣಶಾಸ್ತ್ರಿ ಚಿನ್ನದ ಪದಕ, ಪಂಡಿತ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಬಹುಮಾನ, ಅಂಬಳೆ ರಾಮಕೃಷ್ಣಶಾಸ್ತ್ರಿ ಬಹುಮಾನ; ನಮ್ಮ ಒಗಟುಗಳು ಮತ್ತು ಜಾನಪದ ಸಂಕೀರ್ಣ ಕೃತಿಗಳಿಗೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ, ಕುವೆಂಪು ಸಾಹಿತ್ಯ ವಿಮರ್ಶನ ಕೃತಿಗೆ ಕುವೆಂಪು ವಿದ್ಯಾವರ್ಧಕ ಟ್ರಸ್ಟಿನ ಬಹುಮಾನ; 20 ಕೃತಿಗಳು: ಯಾತ್ರೆ, ತೆಪ್ಪ (ಕ) ರಾಘವಾಂಕ, ಕಾವ್ಯಾನುಶೀಲನ, ಅವಗಾಹನ (ವಿಮ) ಕರ್ಣಾಟಕ ಜನಪದ ಕಥೆಗಳು, ನಮ್ಮ ಒಗಟುಗಳು, ನಮ್ಮ ಗಾದೆಗಳು (ಜಾ) ಕುಮಾರರಾಮ, ಕಂದನ ಕವನಗಳು (ಜಾ)

114 ಚಿತ್ರಕೂಟ ಕಾಳಿದಾಸರಸ್ತೆ ಜಯಲಕ್ಷ್ಮೀಪುರಂ ಮೈಸೂರು 570 012

ರಾಮೇಗೌಡ, ಸುಳ್ಳೇರಿ ತಮ್ಮೇಗೌಡ
[ರಾಮಸುತ]
ಜ 12–11–1951



ಬೆಂಗಳೂರು ಜಿಲ್ಲೆ ಸುಳ್ಳೇರಿ; ತಮ್ಮೇಗೌಡ–ಗೌರಮ್ಮ; ಪ್ರಾ ಸುಳ್ಳೇರಿ, ಮಾ ಚಕ್ಕೆರೆ, ಪ್ರೌ ಮಂಡ್ಯ; ಪತ್ರಿಕೋದ್ಯೋಗಿ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ; 2 ಕೃತಿಗಳು: ಪಯಣ (ಕಾ) ನಿಮ್ಗೂ ಒಂದಿಷ್ಟು ನಮ್ಗೂ ಒಂದಿಷ್ಟು (ಪ್ರ)

ಸಂಪಾದಕ ಬಯಲುಸೀಮೆ ಚನ್ನಪಟ್ಟಣ 571 501



ರಾಯಕರ, ರಾಮಚಂದ್ರ ಗುರುರಾವ
ಜ 30-8-1924

ಉತ್ತರ ಕನ್ನಡ ಜಿಲ್ಲೆ ಶಿರಸಿ; ತಂದೆ ಗುರುರಾವ ರಾಮಚಂದ್ರ ರಾಯಕರ: 3 ಗಂ 3 ಹೆ ಮಕ್ಕಳು; ಶಿರಸಿಯ ಮಾರಿಕಾಂಬಾ ಪ್ರೌಢಶಾಲೆಯಲ್ಲಿ ಚಿತ್ರ ಕಲಾ ಶಿಕ್ಷಕನಾಗಿದ್ದು ನಿವೃತ್ತಿ; ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಲಲಿತಕಲಾ ಅಕಾಡೆಮಿ, ಜಿಲ್ಲಾ ಸಂಗೀತ ಅಕಾಡೆಮಿ ಸದಸ್ಯ; 4 ಕೃತಿಗಳು: ಬದುಕು, ರಾಷ್ಟ್ರಾಭಿಮಾನ, ಜೀವನದ ಗುರಿ; ಹವ್ಯಾಸ: ಛಾಯಾಗ್ರಹಣ, ಚಿತ್ರಕಲೆ, ಅಂಚೆ ಚೀಟಿ ನಾಣ್ಯ ಜಗತ್ತಿನ ಪತ್ರಿಕೆಗಳ ಸಂಗ್ರಹ, ಪ್ರವಾಸ

ಚನ್ನಪಟ್ಟಣ ಬಜಾರ್ ಶಿರಸಿ ಉ ಕ ಜಿಲ್ಲೆ



ರಾವ್, ಮೈಸೂರು ಶಂಕರನಾರಾಯಣರಾವ್ ಸತ್ಯನಾರಾಯಣ [ಎಂ ಎಸ್ ಎಸ್ ರಾವ್]
ಜ 1-9-1921

ಬೆಂಗಳೂರು: ಎಂ ಶಂಕರನಾರಾಯಣರಾವ್–ಲಕ್ಷ್ಮೀದೇವಮ್ಮ: 1 ಗಂ 2 ಹೆ ಮಕ್ಕಳು: ಪ್ರಾ ಮಾ ಪ್ರೌ ಬೆಂಗಳೂರು. ಬಿ ಎಸ್ ಸಿ ಮೈಸೂರು, ಎಂ ಎಸ್ ಸಿ ಅಲಹಾಬಾದ್ ವಿಶ್ವವಿದ್ಯಾಲಯ; ಸಸ್ಯಶಾಸ್ತ್ರದ ನಿವೃತ್ತ ಉಪಪ್ರಾಧ್ಯಾಪಕ; 14 ಕೃತಿಗಳು: ಕಲ್ಲು ಹೂ, ರಾಸಾಯನಿಕ ಕಿಣ್ವಗಳು, ಅನುವಂಶೀಯತೆ ಮತ್ತು ವೈವಿಧ್ಯ, ಜೀವ ಪರಿಸರ ವಿಜ್ಞಾನ, ಅಣಬೆಗಳು (ವಿ) ಸಸ್ಯವಿಜ್ಞಾನಿಗಳ ಕಥೆಗಳು (ಜೀ)

ಸಿ 6 ಹೌಸಿಂಗ್ ಕಾಲೋನಿ ಬಾಗಲಕೋಟೆ 587 101



ರಾವ್, ಶ್ರೀನಿವಾಸ ಲಕ್ಷ್ಮೀಶ
[ಕುಮುದಾತನಯ, ವಿಷ್ಣುಶರಣ]
ಜ 8-7-1937

ದ ಕ ಜಿಲ್ಲೆ ಕಿನ್ನಿಕಂಬಳ: ಶ್ರೀನಿವಾಸ ಹೆಜತಾಯ–ಕುಮುದಾಬಾಯಿ ಹೆಜತಾಯ; ಪ್ರಾ ಮಾ ಪ್ರೌ ಕಿನ್ನಿಕಂಬಳ, ಆರ್ ಎಂ ಪಿ; ವೈದ್ಯಕೀಯ ವೃತ್ತಿ; 4 ಕೃತಿಗಳು: ಮುಕ್ಕಣ್ಣ ದರ್ಶನ, ಮುಗಿಲೇಣಿ (ಕ)

ಗುರಿಮುಟ್ಟುವದಾರಿಯಲ್ಲಿ (ಪ್ರವಾ) ಕಡಲು (ಕಾ) ಹವ್ಯಾಸ : ಹಸ್ತಸಾಮುದ್ರಿಕೆ
'ದೀಪ್ತಿ' ಸೆಂಟ್ರಲ್‌ಬ್ಯಾಂಕ್ ಹೌಸಿಂಗ್ ಸೊಸೈಟಿ ಪೂನಾ 41: 004



ರಾಳ್ಳಪಲ್ಲಿ, ಅನಂತಕೃಷ್ಣಶರ್ಮ
ಜ 23-1-1893

ಆಂಧ್ರದ ರಾಳ್ಳಪಲ್ಲಿ; ಕೆ ಕೃಷ್ಣಮಾಚಾರ್ಯ-ಅಲಮೇಲಮ್ಮ; 2 ಗಂ 3 ಹೆ ಮಕ್ಕಳು; ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಸಂಗ; ಕರಿಗಿರಿರಾಯರು, ಬಿಡಾರಂ ಕೃಷ್ಣಪ್ಪನವರಲ್ಲಿ ಸಂಗೀತದ ಅಭ್ಯಾಸ, ವೆಂಕಟೇಶ್ವರ ಪ್ರಾಚ್ಯ ಪರಿಶೋಧನಾಶಾಲೆಯಲ್ಲಿ ಸಂಗೀತದ ಉಪಪ್ರಾಧ್ಯಾಪಕರಾಗಿ ನಿವೃತ್ತಿ; ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ನಾಲ್ವಡಿ ಕೃಷ್ಣರಾಜ ಒಡೆಯರಿಂದ ಸಂಸ್ಕೃತ ಕಾವ್ಯರಚನೆಗೆ ಬಹುಮಾನ. ಗಾನಕಲಾ ಪ್ರಪೂರ್ಣ ಗಾನಕಲಾಸಿಂಧು ಪ್ರಶಸ್ತಿಗಳು; ಮದರಾಸು ಸಂಗೀತ ಅಕಾದೆಮಿ ಅಧ್ಯಕ್ಷ, ಆಂಧ್ರ ಪ್ರದೇಶ ಸಾಹಿತ್ಯ ಅಕಾದೆಮಿ ಮತ್ತು ಸಂಗೀತ ನಾಟಕ ಅಕಾದೆಮಿಸದಸ್ಯ, ಕೇಂದ್ರೀಯ ಸಂಗೀತ ನಾಟಕ ಅಕಾದೆಮಿಸದಸ್ಯ, ಗೌರವ ಗ್ರಂಥ : ಅನಂತರಾಗಂ; 2 ಕೃತಿಗಳು : ಗಾನಕಲೆ, ಸಾಹಿತ್ಯ ಮತ್ತು ಜೀವನಕಲೆ

749 46ನೇ ಅಡ್ಡರಸ್ತೆ ಜಯನಗರ ಬೆಂಗಳೂರು 560 041

ರುಕ್ಕಮ್ಮ, ಬಿಂಡಿಗನವಿಲೆ ಶ್ರೀನಿವಾಸ ಅಯ್ಯಂಗಾರ್ಯ
ಜ 5-9-1934

ಮೈಸೂರು; ಬಿ ಟಿ ಶ್ರೀನಿವಾಸ ಅಯ್ಯಂಗಾರ್ಯ-ಸೀತಮ್ಮ; 1 ಗಂ 2 ಹೆ ಮಕ್ಕಳು; ಎಂ ಎ; ಮೈಸೂರು ಸರ್ಕಾರದ ವಿದ್ಯಾ ಇಲಾಖೆಯಲ್ಲಿ ಕನ್ನಡ ಉಪಪ್ರಾಧ್ಯಾಪಕಿ: ಕೀಟಗಳ ಒಡನಾಡಿ ಫೇಬರ್ ಕೃತಿಗೆ ರಾಜ್ಯಸರ್ಕಾರದ ಬಹುಮಾನ, ಅಮ್ಮನಿಗೆ ಪಾಪು ಹೇಳಿದ ಕಥೆಗಳು ಕೃತಿಗೆ ಅಖಿಲಭಾರತ ಮಕ್ಕಳ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ; 7 ಕೃತಿಗಳು: ಕೀಟಗಳ ಒಡನಾಡಿ ಫೇಬರ್, ಶಾಲೆಯ ಮಕ್ಕಳು, ಸಮ್ಯಕ್ತ್ವ ಕೌಮುದೀ ಸಂಗ್ರಹ, ಮೇರಿಕ್ಯೂರಿ, ಕಚ, ಹರಿಹರ, ಅಮ್ಮನಿಗೆ ಪಾಪು ಹೇಳಿದ ಕಥೆಗಳು : ಹವ್ಯಾಸ : ತೋಟಗಾರಿಕೆ

2731/1 3ನೇ ಮುಖ್ಯರಸ್ತೆ ವಿ ವಿ ಮೊಹಲ್ಲಾ ಮೈಸೂರು 570 002



ರುದ್ರಮುನಿ, ಬನ್ನಿಹಟ್ಟಿ ಜಯದೇವಪ್ಪ

ಜ 22-2-1962

ಕೋಲಾರ ಜಿಲ್ಲೆ ನಲ್ಲೂರು ; ಬಿ ಜಯದೇವಪ್ಪ–ಬಿ ಆರ್ ರುದ್ರಮ್ಮ ; ಶಿಕ್ಷಣ : ಚಿಂತಾಮಣಿ ; 1 ಕೃತಿ : ನಾನೂ ಬರೆಯುತ್ತೇನೆ (ಕ) ಹವ್ಯಾಸ : ಕ್ರೀಡೆ

ರುದ್ರಮುನಿಸ್ವಾಮಿ, ಪಂಡಿತ ಮೂಲೆಮಠ

ಜ 3–5–1933



ಹರಿಹರ ; ಸಿದ್ಧಯ್ಯ–ವೀರಮ್ಮ ; 2 ಗಂ 1 ಹೆ ಮಕ್ಕಳು : ಪ್ರಾ ಮಾ ಪ್ರೌ ಹರಿಹರ, ಎಂ ಎ ಬಿ ಎಡ್ ಧಾರವಾಡ, ರಾಷ್ಟ್ರಭಾಷಾ ವಿಶಾರದ ; ದಾವಣಗೆರೆ ಎಸ್ ಜೆ ಜೆ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಉಪಾಧ್ಯಾಯ ; ದಾವಣಗೆರೆ ಕನ್ನಡ ಸಾಹಿತ್ಯ ಪರಿಶೋಧನ ಕೇಂದ್ರದ ಗೌರವ ಕಾರ್ಯದರ್ಶಿ ; 4 ಕೃತಿಗಳು : ಟಾಮ್ ಚಿಕ್ಕಪ್ಪನ ಮನೆ, ವಿಪ್ರದಾಸ (ಅ) ಬಾಲ ಶಿವಯೋಗಿ ವರ್ಯ (ಜೀ) ಪಂಡಿತ ತಾರಾನಾಥ (ಬಾ) ಹವ್ಯಾಸ : ಹಳಗನ್ನಡ ಮತ್ತು ನಡುಗನ್ನಡ ಕವಿಗಳ ತಾಡೋಲೆ ಗ್ರಂಥಗಳನ್ನು ಸಂಗ್ರಹಿಸುವುದು

ಎಸ್ ಜೆ ಜೆ ಮುರುಘರಾಜೇಂದ್ರ ಪ್ರೌಢಶಾಲೆ ದಾವಣಗೆರೆ 2



ರೇವಣಪ್ಪ, ದವಲೂರು [ಕಿಂಕರ]

ಜ 18-9-1921

ಚಿತ್ರದುರ್ಗ ಜಿಲ್ಲೆ ಸಂದಿಗಾವಿ ; ಮಲ್ಲಾಡದ ಹನುಮಂತಪ್ಪ–ಲಕ್ಷ್ಮಮ್ಮ ; 2 ಗಂ 2 ಹೆ ಮಕ್ಕಳು ; ಕನ್ನಡ ಪಂಡಿತ ಪರೀಕ್ಷೆ, ಗಮಕ ಪರೀಕ್ಷೆ, ಸ್ಕೌಟ್ ಮಾಸ್ಟರ್ ತರಬೇತಿ ; ಚಿತ್ರದುರ್ಗದ ಸರ್ಕಾರಿ ಉಪಾಧ್ಯಾಯರ ತರಬೇತಿ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಉಪನ್ಯಾಸಕ ; ಕವನಿಗ,

ವಾಗ್ಭೂಷಣ ಪ್ರಶಸ್ತಿಗಳು ; ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಜಿಲ್ಲಾ ಬರಹಗಾರರ ಸಂಘದ ಕಾರ್ಯದರ್ಶಿ, ಚಿತ್ರದುರ್ಗದ ಕರ್ನಾಟಕ ಸಂಘದ ಉಪಾಧ್ಯಕ್ಷ ; 8 ಕೃತಿಗಳು: ಸಂಸ್ಕೃತಿ ಮತ್ತು ವಚನ ದರ್ಶನ, ಚೀನಾ ದಾಳಿಗೆ ಎಚ್ಚೆತ್ತ ಭಾರತೀಯರು, ಜಾಗೃತ ಭಾರತ, ಪ್ರಾಥಮಿಕ ಕನ್ನಡ ಭಾಷಾಬೋಧನೆ, ಭಗವದ್ಗೀತಾಸಾರ ಚಂದ್ರಿಕೆ, ಮಹಾತ್ಮರ ಅಮರ ಆದರ್ಶಗಳು

ಸರ್ಕಾರಿ ಉಪಾಧ್ಯಾಯರ ತರಬೇತಿ ಶಿಕ್ಷಣ ಸಂಸ್ಥೆ ಚಿತ್ರದುರ್ಗ



ರೇವಣ ಸಿದ್ದಪ್ಪ, ಗೌಡ್ರ

ಜ 3-5-1942

ಶಿವಮೊಗ್ಗ ಜಿಲ್ಲೆ ದಾನಿಹಳ್ಳಿ ; ಬಸವಣ್ಯಪ್ಪ-ದೇವೀರಮ್ಮ ; ಪ್ರಾ ಮಾ ದಾನಿಹಳ್ಳಿ, ಪ್ರೌ ನ್ಯಾಮತಿ, ಬಿ ಎಸ್ ಸಿ ಶಿವಮೊಗ್ಗ, ಎಂ ಎ ಬಿ ಇಡಿ ಬೆಂಗಳೂರು, ಎಂ ಇ ಡಿ ಮೈಸೂರು ; ಬೆಂಗಳೂರಿನ ವಿಜಯ ಟೀಚರ್ಸ್ ಕಾಲೇಜಿನಲ್ಲಿ ಉಪನ್ಯಾಸಕ ; 4 ಕೃತಿಗಳು : ಗಣಿತ ಶಾಸ್ತ್ರದ ಮೂಲ ತತ್ತ್ವಗಳ ಅರ್ಥಕೋಶ, ಗತಿಸಿದ ಚರಿತ್ರೆ ಬೋಧಿಸಿದ್ದೇನು, ಚಿಂತನ ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ; ಹವ್ಯಾಸ : ತೋಟಗಾರಿಕೆ

ವಿಜಯ ಟೀಚರ್ಸ್ ಕಾಲೇಜು ಬೆಂಗಳೂರು



ರೇವಣ್ಣಶಾಸ್ತ್ರಿ, ದ್ಯಾಮವ್ವನಹಳ್ಳಿ

ಜ 15-1-1910

ಚಿತ್ರದುರ್ಗ ಜಿಲ್ಲೆ ದ್ಯಾಮವ್ವನಹಳ್ಳಿ; 3 ಮಕ್ಕಳು; ಜ್ಯೋತಿಷ್ಯ ಮತ್ತು ಆಯುರ್ವೇದ ; 15 ಕೃತಿಗಳು : ಯಕ್ಷಗಾನ ಶನಿಮಹಾತ್ಮೆ, ನಕ್ಷತ್ರ ಫಲ ದರ್ಪಣ, ಪಶುವೈದ್ಯಸಾರ, ಮಹಾ ಜಾದೂ ಮಂತ್ರ ವಿದ್ಯಾನಿಧಿ ; ಹವ್ಯಾಸ : ಯೋಗಾಭ್ಯಾಸ

ಬ್ರಹ್ಮತೀರ್ಥಾಶ್ರಮ ದ್ಯಾಮವ್ವನಹಳ್ಳಿ ದಾವಣಗೆರೆ ತಾಲೂಕು ಹೆಮ್ಮನ ಬೇತೂರು ಅಂಚೆ



ರೈ, ಕಯ್ಯಾರ ಕಿಞ್ಞಣ್ಣ [ದುರ್ಗಾದಾಸ]
ಜ 8-6-1915

ಕಾಸರಗೋಡು ತಾಲೂಕು ಪೆರಡಾಲ; ದುಗ್ಗಪ್ಪರೈ-ದೆಯ್ಯಕ್ಕೆ ; 6 ಗಂ 2 ಹೆ ಮಕ್ಕಳು ; ಪ್ರಾ ಮಾ ಪ್ರೌ ಪೆರಡಾಲ ಮದ್ರಾಸ್ ವಿಶ್ವವಿದ್ಯಾಲಯದ ವಿದ್ವಾನ್, ಬಿ ಎ ಎಂ ಎ ಮಂಗಳೂರು ; ಪ್ರೌಢ ಶಾಲಾ ಉಪಾಧ್ಯಾಯ ; ಶೈಕ್ಷಣಿಕ ಸೇವೆಗಾಗಿ ರಾಷ್ಟ್ರಪ್ರಶಸ್ತಿ (1969) ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜ್ಯುಕೇಷನ್ನಿನ ಫೆಲೋಷಿಪ್, ರತ್ನರಾಶಿ ಕೃತಿಗೆ ಮದರಾಸ್ ಸರ್ಕಾರದ ಬಹುಮಾನ, ಪುನರ್ನವ ಕೃತಿಗೆ ಕರ್ನಾಟಕ ಸರ್ಕಾರದ ಬಹುಮಾನ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 30 ಕೃತಿಗಳು : ಶ್ರೀಮುಖ, ಪುನರ್ನವ, ಚೇತನ (ಕ) ವಿರಾಗಿಣಿ (ನಾ) ರತ್ನರಾಶಿ (ಜೀ) ಅನ್ನ ದೇವರು ಇತರ ಕಥೆಗಳು (ಸ ಕ) ರಾಷ್ಟ್ರಕವಿ ಗೋವಿಂದ ಪೈ (ವಿಮ) ನವೋದಯ ವಾಚನ ಮಾಲೆ (ಬಾ) ವ್ಯಾಕರಣ ಮತ್ತು ಪ್ರಬಂಧ (ಭಾ)

'ಕವಿತಾ' ಪೆರಡಾಲ ಅಂಚೆ ಕಾಸರಗೋಡು ಕೇರಳರಾಜ್ಯ

ರೋಹಿಣಿ, ಕೆ ಮಂಗಳೂರು
ಜ 31-10-1955

ದ ಕ ಜಿಲ್ಲೆ ಅತ್ತಾವರ ; ಕೆ ಗೋಪಾಲಕೃಷ್ಣ–ಇಂದಿರಾ ; ಸೆಕೆಂಡರಿ ಗ್ರೇಡ್ ಉಪಾಧ್ಯಾಯ ತರಬೇತಿ ; ಕೊಳವೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯನಿ ; ಬೆಂಗಳೂರಿನ ಅ ನ ಕೃ ಕನ್ನಡ ಸಂಘದಿಂದ ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ ; 1 ಕೃತಿ : ಋಣಾನುಬಂಧ (ಕಾ) ಹವ್ಯಾಸ : ಕಸೂತಿ, ಸಂಗೀತ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಳವೂರು ಕುಡ್ಪೆಪದವು ಅಂಚೆ ಮಂಗಳೂರು



ರೋಹಿದಾಸ, ಗೋಪಾಲಕೃಷ್ಣ ಮಹಾಲೆ
ಜ 13-9-1934

ಉ ಕ ಜಿಲ್ಲೆ ಕುಮಟ; ಗೋಪಾಲಕೃಷ್ಣ–ಪಾರ್ವತಿ; 3 ಗಂ ಮಕ್ಕಳು ; ಪ್ರಾಥಮಿಕ 3ನೇ ಇಯತ್ತೆಯ ವರೆಗೆ ಅಭ್ಯಾಸ ; ಕ್ಷೌರಿಕ ವೃತ್ತಿ ; ಉದಯಕಲಾ ನಾಟ್ಯ ವೃಂದದ ಕಾರ್ಯದರ್ಶಿ ; 4 ಕೃತಿಗಳು : ಕೈ ಹಿಡಿದವಳು, ಧರ್ಮಸಂಗಮ, ಮಧುಪೂರ್ಣಿಮಾ, ನಿಗೂಢ ರಹಸ್ಯ (ನಾ) ಹವ್ಯಾಸ : ಅಭಿನಯ

ಸುಭಾಷ್ ರಸ್ತೆ ಕುಮಟಾ ಉ ಕ ಜಿಲ್ಲೆ 581 343



ಲಂಕೇಶ್, ಪಾಳೇಗಾರ್
ಜ 8-3-1935

ಶಿವಮೊಗ್ಗ ಜಿಲ್ಲೆ ಕೊನಗವಳ್ಳಿ ; ಪಾಳೇಗಾರ್ ನಂದಿ ಬಸಪ್ಪ–ದೇವೀರಮ್ಮ ; 2 ಗಂ 1 ಹೆ ಮಕ್ಕಳು : ಬಿ ಎ ಆನರ್ಸ್ ಬೆಂಗಳೂರು, ಎಂ ಎ (ಇಂಗ್ಲಿಷ್) ಪತ್ರಿಕೋದ್ಯೋಗಿ ; 'ಲಂಕೇಶ್ ಪತ್ರಿಕೆ' ಸಂಪಾದಕ ; 16 ಕೃತಿಗಳು : ಕೆರೆಯ ನೀರನು ಕೆರೆಗೆ ಚೆಲ್ಲಿ, ನಾನಲ್ಲ, ಉಮಾಪತಿಯ ಸ್ಕಾಲರ್ ಶಿಪ್ ಯಾತ್ರೆ (ಸ ಕ) 7 ನಾಟಕಗಳು, ಸಂಕ್ರಾಂತಿ (ನಾ) ಬಿರುಕು, ಮುಸ್ಸಂಜೆಯ ಕಥಾಪ್ರಸಂಗ (ಕಾ) ದೊರೆ ಈಡಿಪಸ್, ಅಂತಿಗೊನೆ, ಪಾಪದ ಹೂವುಗಳು (ಅ) ಅಕ್ಷರ ಹೊಸ ಕಾವ್ಯ (ಸಂ) ಬಿಚ್ಚು, ತಲೆಮಾರು (ಕ) ಪ್ರಸ್ತುತ (ವಿಮ) ಹವ್ಯಾಸ : ಚಲನಚಿತ್ರ ನಿರ್ದೇಶನ
15/24 ಗೋವಿಂದಪ್ಪರಸ್ತೆ ಬಸವನಗುಡಿ ಬೆಂಗಳೂರು 560 004

ಲಕ್ಕಪ್ಪಗೌಡ, ಹಂಪಾಪುರ ಜವರೇಗೌಡ
ಜ 8–5–1939

ಹಾಸನ ಜಿಲ್ಲೆ ಹಂಪಾಪುರ : 1 ಗಂ 1 ಹೆ ಮಕ್ಕಳು ; ಪ್ರಾ ಹಂಪಾಪುರ ಮಾ ಪ್ರೌ ಚಿಟ್ಟಿವಪುರ, ಬಿ ಎ ಎಂ ಎ ಮೈಸೂರು ; ಬಿ ಆರ್ ಪ್ರಾಜೆಕ್ಟ್ ಸ್ನಾತಕೋತ್ತರ ಕೇಂದ್ರ ದಲ್ಲಿ ಕನ್ನಡ ಉಪಪ್ರಾಧ್ಯಾಪಕ ; ದೇವರಾಜ ಬಹದ್ದೂರ್ ಮತ್ತು ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನಗಳು ; ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಟ್ರಸ್ಟಿನ ಸದಸ್ಯ, ಭಾರತ ಸೇವಾದಳದ ಪತ್ರಿಕೆಯ ಸಂಪಾದಕ ಸಮಿತಿ ಅಧ್ಯಕ್ಷ ; 26 ಕೃತಿಗಳು : ವಸಂತಗೀತ, ಊರ ಮುಂದಿನ ಬಾವಿ (ಕ) ದಲಿತಸೂರ್ಯ (ಜೀ) ಸಿದ್ಧರಾಮ (ನಾ) ಪಮ್ಮಹದ್ದು, ದೀನಬಂಧು (ಬಾ) ಸಂಗಮ, ಅಂತರಂಗ (ವಿಮ) ಜನಪದ ಕಥಾವಳಿ, ಇಬ್ಬನಿ, ಒಗಟುಗಳು (ಜಾ) ರಸಋಷಿ, ಮಂಗಳಗಂಗೆ (ಸಂ)
ಕನ್ನಡ ಉಪಪ್ರಾಧ್ಯಾಪಕ ಬಿ ಆರ್ ಪ್ರಾಜೆಕ್ಟ್ ಶಿವಮೊಗ್ಗ ಜಿಲ್ಲೆ

ಲಕ್ಷ್ಮಣ ಕೊಡಸೆ
ಜ 25-4-1953

ಶಿವಮೊಗ್ಗ ಜಿಲ್ಲೆ ಕೊಡಸೆ ; ತಂದೆ : ಕರಿಯನಾಯ್ಕ ; ಬಿ ಎ ಆನರ್ಸ್ ಎಂ ಎ ಬೆಂಗಳೂರು ; ಪತ್ರಿಕೋದ್ಯೋಗಿ ; ಉದಯ ಕಲಾಸಂಘ, ಯುವಕ ಬರಹಗಾರರು ಮತ್ತು ಕಲಾವಿದರ ಸಂಘದ ಸದಸ್ಯ ; 2 ಕೃತಿಗಳು : ಕ್ರಿಸ್ತಾಂಜಲಿ (ಸಂ) ಬಲಿ (ಸ ಕ) ಹವ್ಯಾಸ : ಛಾಯಾಗ್ರಹಣ, ಯಕ್ಷಗಾನ
ರಿಪ್ಪನ್ ಪೇಟೆ ಅಂಚೆ ಶಿವಮೊಗ್ಗ ಜಿಲ್ಲೆ



ಲಕ್ಷ್ಮಣರಾವ್, ಜಗಲೂರು ರಾಘವೇಂದ್ರರಾವ್

ಜ 21-1-1921

ಚಿತ್ರದುರ್ಗ ಜಿಲ್ಲೆ ಜಗಲೂರು; ಜಗಲೂರು ರಾಘವೇಂದ್ರರಾವ್-ಸಾಗಮ್ಮ; 1 ಗಂ 3 ಹೆ ಮಕ್ಕಳು; ಪ್ರಾ ಮಾ ಜಗಲೂರು ಪ್ರೌ ಚಿತ್ರದುರ್ಗ ಮತ್ತು ದಾವಣಗೆರೆ, ಬಿ ಎಸ್ ಸಿ ಆನರ್ಸ್, ಎಂ ಎಸ್ ಸಿ ಬೆಂಗಳೂರು; ರಸಾಯನ ವಿಜ್ಞಾನ ಪ್ರಾಧ್ಯಾಪಕರು, ಮೈ ವಿ ಇಂಗ್ಲಿಷ್-ಕನ್ನಡ ನಿಘಂಟುವಿನ ಪ್ರಧಾನ ಸಂಪಾದಕರಾಗಿ ನಿವೃತ್ತಿ; ಪರಮಾಣು ಚರಿತ್ರೆ ಕೃತಿಗೆ ಮದರಾಸು ವಿಶ್ವವಿದ್ಯಾಲಯದ ಬಹುಮಾನ, ಗೆಲಿಲಿಯೊ ಕೃತಿಗೆ ಅಖಿಲ ಭಾರತ ಮಕ್ಕಳ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ, ವಿಜ್ಞಾನ ವಿಚಾರ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ; 14 ಕೃತಿಗಳು: ಆಹಾರ, ಪರಮಾಣು ಚರಿತ್ರೆ, ವಿಜ್ಞಾನ ವಿಚಾರ (ವಿ) ಇಂದಿನ ವಿಜ್ಞಾನ ಮತ್ತು ನೀವು, ನಮ್ಮ ರೈಲ್ವೆಗಳು, ಜಗತ್ತನ್ನು ಬದಲಾಯಿಸಿರುವ ವೈಜ್ಞಾನಿಕ ಸಾಧನೆಗಳು (ಅ) ಆರ್ಕಿಮಿಡೀಸ್, ಲೂಯಿ ಪಾಸ್ಚರ್ (ಜೀ) ಗೆಲಿಲಿಯೊ (ಬಾ) ಪ್ರಬುದ್ಧ ಕರ್ನಾಟಕದ ಚಿನ್ನದ ಸಂಚಿಕೆ ವಿಜ್ಞಾನಾಂಕ (ಸಂ) ವಿಜ್ಞಾನಿಗಳೊಡನೆ ರಸ ನಿಮಿಷಗಳು

'ಮೈತ್ರಿ' 13ನೇ ಮುಖ್ಯರಸ್ತೆ ಸರಸ್ವತೀಪುರಂ ಮೈಸೂರು 570 009

ಲಕ್ಷ್ಮಣರಾವ್, ಬೀರೂರು ರಾಜಾರಾವ್

ಜ 9-9-1946



ಕೋಲಾರ ಜಿಲ್ಲೆ ಚೀಮಂಗಲ; ರಾಜಾರಾವ್-ವೆಂಕಟಲಕ್ಷ್ಮಮ್ಮ; 1 ಗಂ ಮಗು; ಪ್ರಾ ಮಾ ಪ್ರೌ ಚಿಂತಾಮಣಿ, ಬಿ ಎ ಬಿ ಎಡ್ ಬೆಂಗಳೂರು; ಉಪಾಧ್ಯಾಯ ಮತ್ತು ಛಾಯಾಚಿತ್ರಗ್ರಾಹಕ; 3 ಕೃತಿಗಳು: ಗೋಪಿ ಮತ್ತು ಗಾಂಡಲೀನ, ಟುವ ಟಾರ (ಕ) ಗೆಸ್ಚರ್ (ಸ ಕ) ಹವ್ಯಾಸ: ಸಂಗೀತ, ಕ್ರಿಕೆಟ್

ಮಾರುತಿ ಸ್ಟುಡಿಯೊ ಕೆ ಆರ್ ಬಡಾವಣೆ ಚಿಂತಾಮಣಿ 563 125



ಲಕ್ಷ್ಮೀಕಾಂತಯ್ಯ, ಕವಿರಾಜ[ಶ್ರೀಕಾಂತ್]
ಜ 17-12-1914

ತುಮಕೂರು ಜಿಲ್ಲೆ ಬೆಳ್ಳಾವೆ: ತಂದೆ; ಹನುಮಾನ್ ವೇಂಕಟರಾಯಕವಿ; 1 ಗಂ ಮಗು: ತಂದೆ ತಾಯಿಗಳಿಂದ ಕನ್ನಡ–ಸಂಸ್ಕೃತ ಅಧ್ಯಯನ : 35 ವರ್ಷ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಉಪಾಧ್ಯಾಯ ವೃತ್ತಿಯಲ್ಲಿದ್ದು ಈಗ ವಿಶ್ರಾಂತ ಜೀವನ ; 4 ಕೃತಿಗಳು : ನವೀನ ವ್ಯಾಕರಣ ಸಾರ (ಭಾ) ಶ್ರೀ ಕನ್ಯಕಾ ಪರಮೇಶ್ವರೀ ಮಹಾತ್ಮೆ (ಕ) ಮಹಾಶಕ್ತಿ ಸೀತೆ, ಬಾಂಗ್ಲಾವಿಜಯ

ಚಿಕ್ಕಪೇಟೆ ಚಿತ್ರದುರ್ಗ

ಲಕ್ಷ್ಮೀದೇವಿ [ಉಮಾದೇವಿ ಶಂಕರರಾವ್]
ಜ 5-5-1927



ಶಿವಮೊಗ್ಗ ; ಡಿ ವಿ ವೆಂಕಟಸುಬ್ಬಯ್ಯ–ವೆಂಕಮ್ಮ ; 1 ಹೆ ಮಗು ; ಮೆಟ್ರಿಕ್‌ವರೆಗೆ ವಿದ್ಯಾಭ್ಯಾಸ ; 7 ಕೃತಿಗಳು : ಸ್ತೋತ್ರರತ್ನಾಕರ, ಕುಂಬಾರನ ಅದೃಷ್ಟ, ಅದಲು ಬದಲು, ಸೂರ್ಯಕಾಂತಿ; ಹವ್ಯಾಸ: ರಂಗವಲ್ಲಿ, ಹೊಲಿಗೆ. ತೋಟಗಾರಿಕೆ

9 ಭಾರದ್ವಾಜ ರಸ್ತೆ ತಾಂಬರಂ ಪೂರ್ವ ಮದರಾಸು



ಲಕ್ಷ್ಮೀದೇವಿ ಕಡಿದಾಳ್ ಮಂಜಪ್ಪ [ಮಲ್ಲಿಕಾ]
ಜ 16-6-1920

ಚಿಕ್ಕಮಗಳೂರು ; ಹಾಗಮನೆ ಚನ್ನೇಗೌಡ–ಪೂರ್ವತಮ್ಮ ; 1 ಗಂ 2 ಹೆ ಮಕ್ಕಳು ; ಜೀವನಗಂಗಾ ಕಾದಂಬರಿಗೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ ; 18 ಕೃತಿಗಳು : ನಾದಬಿಂದು, ತರಂಗಿಣಿ, ವಿಜಯಗಾಥಾ (ಕ) ವೈಶಾಖೀಪರ್ವ, ರತ್ನಗರ್ಭಾ ವಸುಂಧರಾ (ಸ ಕ) ಜೀವನಗಂಗಾ, ಅನಂತಾನಂತದೆಡೆಗೆ, ವಂದೇ ಮಾತರಂ (ಕಾ) ಪುಣ್ಯಪಯೋನಿಧಿ, ಪುಣ್ಯಾಭಿಸಾರ (ನಾ)

7 ಲ್ಯಾಂಗ್‌ಫೋರ್ಡ್ ರಸ್ತೆ ಬೆಂಗಳೂರು 560 025



ಲಕ್ಷ್ಮೀನರಸಿಂಹಶಾಸ್ತ್ರೀ [ಕೈಪು, ಗಿರಿಜಾನಂದನ]
ಜ 2-6-1941

ಕೋಲಾರ ಜಿಲ್ಲೆ ಕೈವಾರ; ಕೃಷ್ಣಶಾಸ್ತ್ರೀ–ಸುಬ್ಬಲಕ್ಷ್ಮಮ್ಮ; 3 ಗಂ ಮಕ್ಕಳು; ಎಸ್ ಎಸ್ ಎಲ್ ಸಿ, ಕನ್ನಡ ಪಂಡಿತ ಪರೀಕ್ಷೆ, ಹಿಂದಿ ರಾಷ್ಟ್ರಭಾಷಾ ಪ್ರವೀಣ, ಬಿ ಎ ಎಂ ಎ; ಪ್ರೌಢಶಾಲಾ ಉಪಾಧ್ಯಾಯ; 6 ಕೃತಿಗಳು: ಅರಳಿದ ಹೂ (ಕಾ) ಜನಮೇಜಯ, ನಚಿಕೇತ, ಭರದ್ವಾಜ (ಬಾ) ಕೈವಾರ ಕ್ಷೇತ್ರ (ಧ) ಹವ್ಯಾಸ: ಮೃದಂಗವಾದನ, ವೇಣುವಾದನ, ಹಾಡುಗಾರಿಕೆ

ಕೈವಾರ ಚಿಂತಾಮಣಿ ತಾಲೂಕು 563 128



ಲಕ್ಷ್ಮೀನಾರಾಯಣಭಟ್ಟ, ನೈಲಾಡಿ ಶಿವರಾಮಭಟ್ಟ [ನೈಶಿಲಭಟ್ಟ]
ಜ 29-10-1936

ಶಿವಮೊಗ್ಗ; ಶಿವರಾಮಭಟ್ಟ–ಮೂಕಾಂಬಿಕೆ: 1 ಗಂ 1 ಹೆ ಮಕ್ಕಳು; ಪ್ರಾ ಮಾ ಪ್ರೌ ಶಿವಮೊಗ್ಗ ಬಿ ಎ ಆನರ್ಸ್ ಎಂ ಎ ಮೈಸೂರು; ಬೆಂ ವಿ ಕನ್ನಡ ಅಧ್ಯಯನ ಕೇಂದ್ರದಲ್ಲಿ ಉಪಪ್ರಾಧ್ಯಾಪಕ; 11 ಕೃತಿಗಳು: ವೃತ್ತ, ಸುಳಿ, ನಿನ್ನೆಗೆ ನನ್ನ ಮಾತು ದೀಪಿಕಾ ಮತ್ತು ಬಾರೋ ವಸಂತ (ಕ) ಹೊರಳುದಾರಿಯಲ್ಲಿ ಕಾವ್ಯ, ವಿವೇಚನ (ವಿಮ) ಠಾಕೂರರ ಎರಡು ನಾಟಕಗಳು, ಭಾರತೀಯ ಗ್ರಂಥ ಸಂಪಾದನಾ ಪರಿಚಯ (ಅ) ಜಗನ್ನಾಥವಿಜಯ, ಮುದ್ರಾ ಮಂಜೂಷ (ಬಾ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

2263 22 ನೆಯ ತಿರುವು ಬನಶಂಕರಿ 2ನೇ ಹಂತ 560 070

ಲಕ್ಷ್ಮೀನಾರಾಯಣಶರ್ಮ, ಬಂದಗದ್ದೆ ಸುಬ್ಬರಾವ್
ಜ 1924


ಶಿವಮೊಗ್ಗ ಜಿಲ್ಲೆ ಬಂದಗದ್ದೆ; ಮು ಸುಬ್ಬರಾವ್–ಶೇಷಮ್ಮ; ಕನ್ನಡ ಪ್ರಾಥಮಿಕ ಶಿಕ್ಷಣ: ವ್ಯವಸಾಯ; 1 ಕೃತಿ: ಶ್ರೀ ಗುರು ಚರಿತ್ರೆ (ಕ)

ಶ್ರೀಧರ ವಿಲಾಸ ಬಂದಗದ್ದೆ ಕೆಳದಿ ಅಂಚೆ ಶಿವಮೊಗ್ಗ ಜಿಲ್ಲೆ



ಲಕ್ಷೆಟ್ಟಿ, ಬಾಳೇಶ [ಗಗನ ವಿಹಾರಿ]
ಜ 20-12-1935

ಬೆಳಗಾವಿ ಜಿಲ್ಲೆ ಗೋಕಾಕ ; ಶಂಕರಪ್ಪ–ದುಂಡವ್ವ; 1 ಹೆ ಮಗು ; ಪ್ರಾ ಮಾ ಪ್ರೌ ಗೋಕಾಕ, ಬಿ ಎ ಬಿ ಇಡಿ ಬೆಳಗಾವಿ ; ಗೋಕಾಕದ ಮುನಿಸಿಪಲ್ ಹೈಯರ್ ಸೆಕೆಂಡರಿ ಸ್ಕೂಲಿನಲ್ಲಿ ಕನ್ನಡ ಉಪಾಧ್ಯಾಯ ; ಗೋಕಾಕ ಕರ್ನಾಟಕ ಸಂಘದ ಕಾರ್ಯದರ್ಶಿ, ಉದಯ ಪ್ರಕಾಶನದ ಸ್ಥಾಪಕ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 14 ಕೃತಿಗಳು : ಭಾಗ್ಯೋದಯ, ಧ್ಯೇಯವಾದಿ (ಕ) ಸಾಹಿತ್ಯ ಯಾತ್ರಿಕರು (ಜೀ) ಸಾಹಿತಿ ಕಂಡ ಸಮಾಜ (ಪ್ರ) ಸ್ಫೂರ್ತಿವೀಣೆ, ಜೀವತರಂಗ (ಪತ್ರಸಾಹಿತ್ಯ) ಗೋಕಾವಿ ನೀರು ನೆಲ (ಇ) ಗಂಗಾಧರರಾವ ದೇಶಪಾಂಡೆ (ಬಾ) ಹವ್ಯಾಸ : ತಾಡವೋಲೆ ಸಂಗ್ರಹ
ಗಂಗಾನಿಲಯ ಗುರುವಾರಪೇಟೆ ಗೋಕಾಕ ಬೆಳಗಾವಿ ಜಿಲ್ಲೆ



ಲಲಿತಾ ನಾಯಕ್, ಬಾಲಾಜಿನಾಯಕ್
ತಂಗಲಿ ತಾಂಡ
ಜ 4-4-1945

ಚಿಕ್ಕಮಗಳೂರು ಜಿಲ್ಲೆ ತಂಗಲಿತಾಂಡ ; ಬಾಲಾಜಿ ನಾಯಕ್–ಗಂಗಾಬಾಯಿ ; 3 ಗಂ ಮಕ್ಕಳು ; ಮಾಧ್ಯಮಿಕ ಎಂಟನೆ ತರಗತಿವರೆಗೆ ಅಭ್ಯಾಸ, ಹಿಂದಿ ಪ್ರವೇಶಿಕ ; ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಸದಸ್ಯೆ ; 2 ಕೃತಿಗಳು : ಚಂದ್ರಪರಾಭವ (ನಾ) ಭಟ್ಟನ ಕನಸು (ಬಾ) ನೆಲೆ–ಬೆಲೆ (ಕಾ)
ನಂ 2–6-1 ಟಿಪ್ಪುಸುಲ್ತಾನ್ ಬೀದಿ ರಾಯಚೂರು 584 101



ಲಲಿತ, ನುಗ್ಗೇಹಳ್ಳಿ ಗುಜ್ಜೇಗೌಡ
[ಲಲಿತ ರಾಜೇಗೌಡ]
ಜ 2-5-1942

ಹಾಸನಜಿಲ್ಲೆ ನುಗ್ಗೇಹಳ್ಳಿ ; ನುಗ್ಗೇಹಳ್ಳಿ ಗುಜ್ಜೇಗೌಡ–ಪುಟ್ಟತಾಯಮ್ಮ ; 1 ಗಂ 1 ಹೆ ಮಕ್ಕಳು; ಪ್ರಾ ಮಾ ಪ್ರೌ ಬಿ ಎ ಎಂ ಎ ಮೈಸೂರು ; ಕನ್ನಡ ಅಧ್ಯಾಪಕಿ ; 3 ಕೃತಿಗಳು : ಕೆ ಎಚ್ ರಾಮಯ್ಯ

ಸವರು, ಎಚ್ ಸಿ ದಾಸಪ್ಪನವರು, ಕುಶಲಕಲೆಗಳು (ಬಾ) ಹವ್ಯಾಸ : ಲಲಿತಕಲೆ

2910 ಕಾಂತರಾಜ ಅರಸ್ ರಸ್ತೆ ಸರಸ್ವತೀಪುರಂ ಮೈಸೂರು 570 009

ಲಿಂಗಯ್ಯ, ಕೆ [ಶ್ರೀಲಿಂಗಾರ್ಯ]
ಜ 4-5-1903

ಚಿತ್ರದುರ್ಗ ಜಿಲ್ಲೆ ತುರುವನೂರು ; ವೀರಪ್ಪ-ಮಲ್ಲಮ್ಮ : 4 ಗಂ 4 ಹೆ ಮಕ್ಕಳು ; ಕನ್ನಡ ಲೋಯರ್ ಸೆಕೆಂಡರಿ ಪ್ರಾಥಮಿಕ ಶಾಲಾ ಉಪಾಧ್ಯಾಯನಾಗಿ ನಿವೃತ್ತಿ ; 3 ಕೃತಿಗಳು : ಮಾರೀಜಾತ್ರೆ (ಜಾ) ಭಜನಾಮೃತ (ಕ) ಪ್ರಣವಾರ್ಥ (ಅ)

ತುರುವನೂರು ಚಿತ್ರದುರ್ಗ ಜಿಲ್ಲೆ



ಲಿಂಗಯ್ಯ, ದೇವೇಗೌಡ [ದಿನಕರ]
ಜ 16-12-1939

ಮಂಡ್ಯ ಜಿಲ್ಲೆ ಕೀಹಳ್ಳಿ ; ಕೆಳಗಲಹಟ್ಟಿ ದೇವೇಗೌಡ-ಸಿದ್ಧಮ್ಮ ; 1 ಗಂ 1 ಹೆ ಮಕ್ಕಳು ; ಬಿ ಎ ಎಂ ಎ ಮೈಸೂರು ; ಬೆಂಗಳೂರು ವಿಶ್ವೇಶ್ವರಪುರಂ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ; ಬಯಲು ಸೀಮೆಯ ಜನಪದ ಕಾವ್ಯಗಳು ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, ಕರ್ನಾಟಕ ಜನಪದ ಕಾವ್ಯಗಳು ಕೃತಿಗೆ ದೇವರಾಜ ಬಹದ್ದೂರ್ ಮತ್ತು ವಿದ್ಯಾವರ್ಧಕ ಸಂಘದ ಬಹುಮಾನಗಳು : ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅರವಿಂದ ನಿಕೇತನದ ಆಜೀವ ಸದಸ್ಯ, ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ; 22 ಕೃತಿಗಳು : ಅಂತರಂಗದ ಹಾಡು, ವೀಕ್ಷಕ (ಕ) ಬಡತನದ ಬಾಳು, ದಡ್ಡ ಶಿಖಾಮಣಿ (ನಾ) ಕಾವ್ಯಾಸ್ವಾದನ (ವಿಮ) ಕನ್ನಡ ರಥಿಕರು, ಬೆಳ್ಳಾವೆ ವೆಂಕಟನಾರಣಪ್ಪ (ಜೀ) ರಣಕಾಟಿಗಳು, ಆಟಿಕೆ (ಸ ಕ) ಬಯಲು ಸೀಮೆಯ ಜನಪದ ಕತೆಗಳು, ಬೋರೇದೇವರು, ಜನಪದ ಕಥಾಸಂಗಮ (ಜಾ) ಶಿವಪುರ ಧ್ವಜ ಸತ್ಯಾಗ್ರಹ, ರಾಜಕೀಯ ಪಟು (ಸಂ) ಹವ್ಯಾಸ : ವಾಲೀಬಾಲ್ ಆಟ

690 1ಬಿ ಮುಖ್ಯರಸ್ತೆ 7ನೇ ಬ್ಲಾಕ್ ಬನಶಂಕರಿ 3ನೇ ಘಟ್ಟ ಬೆಂಗಳೂರು 560 050



ಲಿಂಗಾನಂದಸ್ವಾಮಿ
ಜ 14-9-1931

ಬಿಜಾಪುರ ಜಿಲ್ಲೆ ಮಸುಗೋಳಿ; ಮಲ್ಲಪ್ಪ ಕಪ್ಪರದ–ಕಲ್ಲಮ್ಮ; ಪ್ರಾ ಮಾ ಮಸುಗೋಳಿ, ಪ್ರೌ ಬಾಗಲಕೋಟೆ, ಬಿ ಎ ಬೆಳಗಾವಿ; 8 ಕೃತಿಗಳು: ದೇವರು, ಚಿನ್ಮೂಲಾದ್ರಿಯ ಚಿತ್ಕಳೆ, ಲಿಂಗತತ್ವ ದರ್ಪಣ, ದೇವಪೂಜಾವಿಧಾನ; ಹವ್ಯಾಸ: ಪ್ರವಾಸ

ವಿಶ್ವಕಲ್ಯಾಣ ಮಿಷನ್ ನಂ 24 2ನೇ ಬ್ಲಾಕ್ ಕಾರ್ಡ್ ರೋಡ್ ರಾಜಾಜಿನಗರ ಬೆಂಗಳೂರು 560 010



ಲಿಂಗೇಗೌಡ, ಬೆಳಕೆರೆ
ಜ 20-5-1951

ಬೆಂಗಳೂರು ಜಿಲ್ಲೆ ಬೆಳಕೆರೆ; ಆಲೂರೇಗೌಡ–ಜಯಮ್ಮ; ಪ್ರಾ ಮಾ ಬೆಳಕೆರೆ, ಪ್ರೌ ಮತ್ತೀಕೆರೆ. ಬಿ ಎ ಮೈಸೂರು; ಮೈ ವಿ ಮುದ್ರಣಾಲಯದಲ್ಲಿ ಉದ್ಯೋಗ; ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಸದಸ್ಯ; 1 ಕೃತಿ: ಕನ್ನಡದ ಕಣ್ಮಣಿ

ಮೈ ವಿ ಮುದ್ರಣಾಲಯ ಮಾನಸಗಂಗೋತ್ರಿ ಮೈಸೂರು 570 006



ಲಿಗಾಡೆ, ಜಯದೇವಿ ತಾಯಿ [ಜಯಸಿದ್ಧರಾಮ]
ಜ 23-6-1912

ಸೊಲ್ಲಾಪುರ; ಚೆನ್ನಬಸಪ್ಪ–ಸಂಗಮ್ಮ; 3 ಗಂ 2 ಹೆ ಮಕ್ಕಳು; ಮೆಟ್ರಿಕ್‌ವರೆಗೆ ಅಭ್ಯಾಸ: 48ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ; 5 ಕೃತಿಗಳು: ಜಯಗೀತ, ತಾಯಿಯ ಪದಗಳು. ತಾರಕ ತಂಬೂರಿ, ಶ್ರೀ ಸಿದ್ಧರಾಮೇಶ್ವರ ಪುರಾಣ, ಸಿದ್ಧರಾಮ

ಜಯನಿಕೇತನ ಸೊಲ್ಲಾಪುರ 2



ಲೂಯಿಸ್, ಯೋಹಾನ ಶ್ರೀಮಂತ

ಜ 23-2-1921

ಕೋಲಾರ ; ಯೋಹಾನ್–ಎಸ್ತರ್ ; 1 ಗಂ 1 ಹೆ ಮಕ್ಕಳು ; ಪ್ರಾ ಮಾ ಪ್ರೌ ಬಿ ಎಸ್ ಸಿ ಬೆಂಗಳೂರು, ಎಂ ಎಸ್ ಸಿ ಬನಾರಸ್, ಎಂ ಎಸ್ ಷಿಕಾಗೋ, ಪಿ ಎಚ್ ಡಿ ಮೈ ವಿ ; ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ವಿಜ್ಞಾನಿ; ಅಮೆರಿಕ, ಇಂಗ್ಲೆಂಡ್ ಪ್ರವಾಸ : 4 ಕೃತಿಗಳು : ಗಾನಲಹರಿ (ಕ) ಕೊಲಂಬಿಯಾ ಯಾತ್ರೆ (ಪ್ರ ವಾ) ಸುಗಂಧ ದ್ರವ್ಯಗಳು (ವಿ) ಹಣ್ಣುಗಳು (ಅ)

ಹವ್ಯಾಸ : ಈಜು

12 ಗಿರಿದರ್ಶಿನಿ ತಿಲಕ್‌ನಗರ ಮೈಸೂರು 1

ಲೋಕಪ್ಪಶೆಟ್ಟಿ, ವಿಲ್ಲೂರು [ನರಸಿಂಹಕುಮಾರ]

ಜ 1-7-1949



ಬಳ್ಳಾರಿ ಜಿಲ್ಲೆ ಜಿ ನಾಗಲಾಪುರ ; ವಿಲ್ಲೂರು ನರಸಪ್ಪಶೆಟ್ಟಿ–ವಿಲ್ಲೂರು ನಾರಾಯಣಮ್ಮ ; 1 ಗಂ ಮಗು ; ಬಿ ಕಾಂ, ಹಿಂದಿ ಉತ್ತಮ ; ವ್ಯಾಪಾರ ಮತ್ತು ಜೀವವಿಮಾ ಪ್ರತಿನಿಧಿ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ : 1 ಕೃತಿ : ಕನ್ನಡ ಕಿರಣ (ಕ)

ಜಿ ನಾಗಲಾಪುರ ಅಂಚೆ ಹೊಸಪೇಟೆ ತಾಲೂಕು
ಬಳ್ಳಾರಿ ಜಿಲ್ಲೆ



ಲೋಕಪಾಲಶಾಸ್ತ್ರಿ, ಬಾಡ್ಲುಗುತ್ತು

ಜ 21-10-1918

ದ ಕ ಜಿಲ್ಲೆ ಬಾಡ್ಲುಗುತ್ತು : ಪದ್ಮಯ್ಯ ಪಡಿಮಾ-ಲಕ್ಷ್ಮಿ ; 1 ಗಂ 2 ಹೆ ಮಕ್ಕಳು ; ಐದನೇ ತರಗತಿ ವರೆಗೆ ಅಭ್ಯಾಸ ; ಶ್ರವಣಬೆಳಗೊಳದ ಜೈನ ವೇದ ಮಹಾಪಾಠಶಾಲೆಯಲ್ಲಿ ಸಂಸ್ಕೃತ ಪ್ರಾಕೃತ ಹಿಂದಿ ಅಧ್ಯಯನ, ಕಾವ್ಯತೀರ್ಥ ಉಪಾಧಿ ಪರೀಕ್ಷೆಯಲ್ಲಿ ಉತ್ತೀರ್ಣ ; ಜೈನವೇದ ಮಹಾಪಾಠಶಾಲೆಯ

ಅಧ್ಯಕ್ಷ; 3 ಕೃತಿಗಳು : ಜೈನ ತತ್ತ್ವೋಪದೇಶ. ಸಂಕ್ಷಿಪ್ತ ಜೈನ ನಿತ್ಯ ಕ್ರಿಯಾದರ್ಪಣ
ಜೈನ ಆಶ್ರಮ ಕೂತ್ತಮುಂಡ ಅಂಚೆ ಕುನ್ನಮ್‌ಬೆಟ್ಟ ವೈನಾಡ್ ಕೇರಳರಾಜ್ಯ

ಲೋಕಾಪುರ, ರಂಗನಾಥ ಶ್ಯಾಮರಾವ [ರಂಶಾ]
ಜ 13-7-1932

ಬಿಜಾಪುರ ಜಿಲ್ಲೆ ಹುನ್ನೂರ; 2 ಗಂ 1 ಹೆ ಮಕ್ಕಳು; ಬಿ ಎಸ್ ಸಿ ಆನರ್ಸ್; ಮುಂಬೈ ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಉದ್ಯೋಗ : ಸಾವಿತ್ರಿ ಕಾದಂಬರಿಗೆ ಸುಧಾ ಕಾದಂಬರಿ ಸ್ಪರ್ಧೆ ಮತ್ತು ವೈಶ್ವಾನರ ನಾಟಕಕ್ಕೆ ಪ್ರಜಾವಾಣಿ ನಾಟಕ ಸ್ಪರ್ಧೆ ಬಹುಮಾನ : 4 ಕೃತಿಗಳು : ಸಾವಿತ್ರಿ, ತಾಯೀ ಸಾಹೇಬ (ಕಾ) ಗೃಹದಾಹ (ಅ) ಪುಣೆಯ ವರೆಗೆ (ಸ ಕ) ಹವ್ಯಾಸ : ಸಂಗೀತ, ನಾಟಕ
486 ರವಿವಾರಪೇಟೆ ಪುಣೆ 411 002

ಲೋಕೂರ, ಹಯವದನ ಗುಂಡೇರಾವ [ವಾಜಿ]
ಜ 24-2-1934



ಬೆಳಗಾವಿ ಜಿಲ್ಲೆ ಬೈಲಹೊಂಗಲ; ಗುಂಡೇರಾವ-ಕೃಷ್ಣರಾವ; ಬೆಳಗಾವಿ ಹುಕ್ಕೇರಿ ಚಿಕ್ಕೋಡಿ ಧಾರವಾಡಗಳಲ್ಲಿ ವಿದ್ಯಾಭ್ಯಾಸ ಎಂ ಎ; ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ; 4 ಕೃತಿಗಳು : ಕನ್ನಡ ನಾಡಿನ ಸೃಷ್ಟಿ, ಗೋಪಾಲದಾಸರು, ಕನ್ನಡ ನುಡಿಯ ಬೆಳವಣಿಗೆ, ಕನ್ನಡ ಸಾಹಿತ್ಯದಲ್ಲಿ ದುರಂತ ದೃಷ್ಟಿ; ಹವ್ಯಾಸ : ನಾಟಕಾಭಿನಯ
1582 ಮಾರುತಿಬೀದಿ ಬೆಳಗಾವಿ



ವಜ್ರಮಟ್ಟಿ, ಪಾಂಡಪ್ಪ ವೆಂಕಪ್ಪ [ಮೇಘಮಿತ್ರ]
ಜ 11-3-1936

ಬೀಳಗಿ ತಾಲೂಕ ಕೊಪ್ಪ; ವೆಂಕಪ್ಪ-ದೊಡ್ಡವ್ವ; 2 ಗಂ 1 ಹೆ ಮಕ್ಕಳು; ಪ್ರಾ ಕೊಪ್ಪ. ಮಾ ಆಲಗುಂಡಿ, ಪ್ರೌ ವಿಜಾಪುರ, ಕಾಲೇಜು ವ್ಯಾಸಂಗ ಮಧ್ಯ ಪ್ರದೇಶ, ಅಲಹಾಬಾದ್, ಆಂಧ್ರ ಪ್ರದೇಶ ಎಂ ಎ ಸಾಹಿತ್ಯರತ್ನ; ಬಿಜಾಪುರದ ಎಸ್ ಬಿ ಕಲಾ ಕಾಲೇಜಿನಲ್ಲಿ ಪ್ರಾಧ್ಯಾಪಕ; ಬಿಜಾಪುರದ

ಮಿತ್ರ ಭಾರತಿ ಪ್ರಕಾಶನದ ಪ್ರಧಾನ ಸಂಪಾದಕ, ಜಿಲ್ಲಾ ಸಾಹಿತ್ಯ ಸಂಸ್ಕೃತಿ ಸಂಘದ ಪ್ರಧಾನ ಕಾರ್ಯದರ್ಶಿ ; 5 ಕೃತಿಗಳು : ಅಗ್ನಿ ತುಷಾರ, ಮಣ್ಣು ಮಲ್ಲಿಗೆ, ಹಕ್ಕಿನೊಡೆಯರ ಹಾಡು (ಕ) ಎಚ್ಚತ್ತ ಏಕಲವ್ಯ (ನಾ) ಹಿಂದಿಯಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ನಾಟಕ ನಿರ್ದೇಶನ

ಎಸ್ ಬಿ ಕಲಾ ಕಾಲೇಜು ಬಿಜಾಪುರ



ವರದರಾಜರಾವ್, ಗುಂಡಮರಾಜು [ಜಿ ವಿ ಆರ್]

ಜ 3-1-1918

ಬೆಂಗಳೂರು ; ಜಿ ವೆಂಕಟರಾವ್–ಜಿ ಜಾನಮ್ಮ ; 3 ಹೆ ಮಕ್ಕಳು ; ಪ್ರಾ ಮಾ ಪ್ರೌ ಬೆಂಗಳೂರು, ಬಿ ಎ ಆನರ್ಸ್ ಎಂ ಎ ಪಿ ಎಚ್ ಡಿ ಮೈಸೂರು ; ಮೈ ವಿ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತಿ ; ಕೇಣಿ ಸಿದ್ದಪ್ಪ ಚಿನ್ನದ ಪದಕ, ರಜತೋತ್ಸವ ಸ್ವರ್ಣ ಪದಕ, ಹೊನ್ನಸೆಟ್ಟಿ ಬಹುಮಾನ, ಹರಿದಾಸ ಸಾಹಿತ್ಯ ಸೇವಾ ಪ್ರಶಸ್ತಿ, ದೇವರಾಜ ಬಹದ್ದೂರ್ ಬಹುಮಾನ ; ಕನ್ನಡ ಸಾಹಿತ್ಯ ಪರಿಷತ್ತು, ಅಖಿಲಭಾರತ ದ್ರಾವಿಡ ಭಾಷೆಗಳ ತಜ್ಞರ ಮಂಡಲಿ, ದೇಶೀಯ ವಿದ್ಯಾ ಸಂಸ್ಥೆ ಸದಸ್ಯ; 21 ಕೃತಿಗಳು : ತೋರಣ, ವಿಜಯದಶಮಿ, ಸೆರೆಯಾಳು, ತೊಟ್ಟಿಲು (ಕ) ಪಡಿನುಡಿ, ಸಾಹಿತ್ಯ ಸಾನ್ನಿಧ್ಯ, ಕುಮಾರರಾಮನ ಸಾಂಗತ್ಯಗಳು, ಶ್ರೀ ಪುರಂದರದಾಸರು ಮತ್ತು ಅವರ ಕೀರ್ತನೆಗಳು (ವಿಮ) ಶ್ರೀಪಾದರಾಜರ ಕೃತಿಗಳು, ಅಪ್ರತಿಮ ವೀರಚರಿತಂ (ಸಂ) ಮಹಾ ಸತಿ ಕಸ್ತೂರಿ ಬಾ (ಜೀ) ಬುಡು ಬುಡುಕೆ (ಬಾ) ಹವ್ಯಾಸ : ಸಂಗೀತ ಶ್ರವಣ

'ಸುದರ್ಶನ' 12ನೇ ಕ್ರಾಸ್ ಜಯನಗರ ಮೈಸೂರು 570 004



ವಸಂತಕುಮಾರ್, ಮಳಲಿ ಚಿಕ್ಕೇಗೌಡ [ಮಳಲಿ ವಸಂತಕುಮಾರ್]

ಜ 10-8-1945

ಹಾಸನ ಜಿಲ್ಲೆ ಮಳಲಿ ; ಚಿಕ್ಕೇಗೌಡ–ದೇವಮ್ಮ ; 1 ಗಂ 2 ಹೆ ಮಕ್ಕಳು : ಪ್ರಾ ಮಾ ಮಳಲಿ, ಪ್ರೌ ಶಾಂತಿಗ್ರಾಮ, ಬಿ ಎ ಮೈಸೂರು ಎಂ ಎ ಮಂಗಳೂರು ; ಮೈ ವಿ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ; ಕುಮಾರವ್ಯಾಸ ಕನ್ನಡ

ಸಂಘದ ಸಂಚಾಲಕ ; 12 ಕೃತಿಗಳು : ಹೃದಯಗಂಗೆ (ಕ) ಮಳಲಿ ಗಿಡ್ಡಮ್ಮ, ಕೋಲು ಪದಗಳು (ಜಾ) ವಿವಕ್ಷೆ, ಕದಂಬ (ವಿಮ) ಕವಿಗಳು ಕಂಡ ಕುವೆಂಪು, ಕುವೆಂಪು ನಾಟಕ ಸಮೀಕ್ಷೆ (ಸಂ) ಹವ್ಯಾಸ : ಈಜು, ನಾಟಕ, ವಾಲಿಬಾಲ್
ಅಧ್ಯಾಪಕ ಮಹಾರಾಜ ಕಾಲೇಜು ಮೈಸೂರು

ವಸಂತರಾಜ್, ಮುರುಕನಹಳ್ಳಿ ಧರ್ಮರಾಜ ಪಂಡಿತ್
ಜ 15-10-1926

ಮಂಡ್ಯಜಿಲ್ಲೆ ಮುರುಕನಹಳ್ಳಿ ; 2 ಗಂ 2 ಹೆ ಮಕ್ಕಳು ; ಪ್ರಾ ಮಾ ಮುರುಕನಹಳ್ಳಿ ಪ್ರೌ ಬಿ ಎ ಆನರ್ಸ್ ಎಂ ಎ ಮೈಸೂರು ; ಮೈ ವಿ ಉಪಪ್ರಾಧ್ಯಾಪಕ ; ಮೈಸೂರಿನ ರತ್ನತ್ರಯ ಸಂಘದ ಸದಸ್ಯ ; 1 ಕೃತಿ : ಸನ್ಮತಿ ಶ್ರೀ ವಿಹಾರ (ಧ)
1168 ಬಜ್ಜಣ್ಣನ ಬೀದಿ ಚಾಮರಾಜಪುರಂ ಮೈಸೂರು 4

ವಾಡಪ್ಪಿ, ಭೀಮರಾವ ರಾಘವೇಂದ್ರರಾವ [ಭಾರತೀಶ]
ಜ 10-3-1914

ಧಾರವಾಡ ಜಿಲ್ಲೆ ಅಣ್ಣೀಗೇರಿ ; ರಾಘವೇಂದ್ರರಾವ-ಜೀವೂಬಾಯಿ ; 3 ಗಂ ಮಕ್ಕಳು; ಪ್ರಾ ಮಾ ಅಣ್ಣೀಗೇರಿ, ಪ್ರೌ ಧಾರವಾಡ, ಎಂ ಎ ಮುಂಬೈ, ಬಿ ಟಿ; ಧಾರವಾಡದ ಕರ್ನಾಟಕ ಪ್ರೌಢಶಾಲೆಯಲ್ಲಿ ಉಪಾಧ್ಯಾಯ ; ಜೀವನರಂಗ ಕಥಾಸಂಕಲನ ಮತ್ತು ತಾರಕಂಬಗಳು ಪ್ರಬಂಧ ಸಂಕಲನಕ್ಕೆ ರಾಜ್ಯ ಸರ್ಕಾರದ ಬಹುಮಾನಗಳು ; ವಿದ್ಯಾವರ್ಧಕ ಸಂಘದ ಸದಸ್ಯ ; 8 ಕೃತಿಗಳು : ರಾಯರ ಸೋಲು (ನಾ) ಯಾರು ಹೊಣೆ, ಜೀವನರಂಗ (ಸ ಕ) ಗಾಳಿಗುದರಿ, ಸುಳಿಗಾಳಿ, ತಾರಕಂಬಗಳು (ಪ್ರ) ಹವ್ಯಾಸ : ತೋಟಗಾರಿಕೆ, ಪ್ರವಾಸ, ಛಾಯಾಗ್ರಹಣ
'ಅನುಗ್ರಹ' ಮಿಚಿಗನ್ ಕಾಂಪೌಂಡ್ ಸಪ್ತಾಪೂರ ಧಾರವಾಡ

ವಾಡೇದ, ರಘುನಾಥ ಗಂಗಾಧರ
ಜ 3-3-1911

ಧಾರವಾಡ ಜಿಲ್ಲೆ ಮಿಶ್ರೀಕೋಟಿ ; ಗಂಗಾಧರಭಟ್ಟ-ಜೀವೂಬಾಯಿ : 4 ಗಂ ಮಕ್ಕಳು ; ವರ್ನಾಕ್ಯುಲರ್ ಪರೀಕ್ಷೆ; ವೈದಿಕವೃತ್ತಿ; ಪುರಾಣ ಕಲಾನಿಧಿ ಪ್ರಶಸ್ತಿ ; 15 ಕೃತಿಗಳು : ಬಿರುಗಾಳಿ, ಧರ್ಮಸಂಕಟ, ಪುನರ್ಮಿಲನ, ಪಂಚೀಕರಣ, ಭಾಮಿನಿವಿಲಾಸ, ಜಾನಪದ ಕತೆಗಳು, ಶಿಶುನಾಳ ಶರೀಫರ ತತ್ವಪದಗಳು, ಗುಲೇಬ ಕಾವಲಿ, ಸಿದ್ಧಾರೂಢ ಚರಿತ್ರೆ
ವಿದ್ಯಾಯತನ ಮಿಶ್ರೀಕೋಟೆ ಧಾರವಾಡ ಜಿಲ್ಲೆ



ವಾದಿರಾಜ, ಕನಕಗಿರಿ

ಜ 1-7-1932

ಬಳ್ಳಾರಿ ಜಿಲ್ಲೆ ಕಂಪ್ಲಿ; ವೆಂಕೋಬಾಚಾರ್-ರಂಗಮ್ಮ; 2 ಗಂ 1 ಹೆ ಮಕ್ಕಳು; ಎಸ್ ಎಸ್ ಎಲ್ ಸಿ; ಕಂಪ್ಲಿ ಸಕ್ಕರೆ ಕಾರ್ಖಾನೆಯಲ್ಲಿ ಗುಮಾಸ್ತೆ; 14 ಕೃತಿಗಳು: ಕಲಾವಿದ, ಮನ ತುಂಬಿದ ಮಡದಿ, ಸುಂಟರಗಾಳಿ (ನಾ)

ಕಂಪ್ಲಿ ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆ



ವಾಲಿ, ಮಲ್ಲಿಕಾರ್ಜುನ ನಿಂಗಪ್ಪ

ಜ 10–6-1936

ಬಿಜಾಪುರ ಜಿಲ್ಲೆ ಸಾಲೋಟಗಿ; ನಿಂಗಪ್ಪ–ಸಂಗನ ಬಸವ; 2 ಗಂ 1 ಹೆ ಮಕ್ಕಳು; ಪ್ರಾ ಸಾಲೋಟಗಿ, ಮಾ ಇಂಡಿ, ಬಿ ಎ ಜಮಖಂಡಿ, ಎಂ ಎ ಡಿಪ್ಲೋಮಾ (ಶಾಸನಶಾಸ್ತ್ರ) ಧಾರವಾಡ: ಕಾಗವಾಡದ ಶ್ರೀ ಸದ್ಗುರು ಶಿವಾನಂದ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ; 1 ಕೃತಿ: ಷಡಕ್ಷರದೇವ (ವಿಮ)

ಶ್ರೀ ಸದ್ಗುರು ಶಿವಾನಂದ ಕಾಲೇಜು ಕಾಗವಾಡ ಬೆಳಗಾವಿ ಜಿಲ್ಲೆ

ವಾಲಿ, ವೀರೇಶ ಮಲ್ಲೇಶ [ವೀವಾ]

ಜ 21-3-1943

ಬೆಳಗಾವಿ; ಮಲ್ಲೇಶ–ಭಾಗೀರಥಿಬಾಯಿ; 1 ಗಂ ಮಗು; ಎಂ ಎ (ಕನ್ನಡ) ಧಾರವಾಡ; ಕ ವಿ ಕನ್ನಡ ಅಧ್ಯಯನ ಪೀಠದಲ್ಲಿ ಸಹಾಯಕ ಸಂಶೋಧಕ; 1 ಕೃತಿ: ಸ್ವಾಮಿ ವಿವೇಕಾನಂದ (ಜೀ)

ಕನ್ನಡ ಅಧ್ಯಯನಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003



ವಾಲೀಕಾರ ಚೆನ್ನಣ್ಣ
ಜ 6-4-1943

ಗುಲ್ಬರ್ಗಾ ಜಿಲ್ಲೆ ಶಂಕರವಾಡಿ; ಧೂಳಪ್ಪ–ಸಾಬಮ್ಮ; ಪ್ರಾ ಮಾ ಶಹಾಬಾದ, ಬಿ ಎ ಗುಲ್ಬರ್ಗಾ, ಎಂ ಎ ಧಾರವಾಡ; ರಾಯಚೂರಿನ ಎಲ್ ವಿ ಡಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ; ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಸದಸ್ಯ; 8 ಕೃತಿಗಳು: ಮರದ ಮೇಲಿನ ಗಾಳಿ, ಕರಿ ತೆಲಿ ಮಾನವನ ಜೀಪದ, ಹಾಡ್ನಕ್ಕಿ ಹಾಗೂ ಇತರ ಪದಗಳು (ಕ) ಇಪ್ಪತ್ತಂಶಗಳು, ಜೊಂಕದ ಕೆಳಗಿನ ಜನ (ನಾ) ಸೋಮ್ರಾಯ್ ಭೀಮ್ರಾಯ್ನ ಡಪ್ಪಿನಾಟ (ಜಾ) ಹವ್ಯಾಸ: ಕುಸ್ತಿ, ಬಯಲಾಟ

ಎಲ್ ವಿ ಡಿ ಕಾಲೇಜು ರಾಯಚೂರು



ವಾಲೀಕಾರ ದುರುಗಪ್ಪ [ದುರ್ಗಾದಾಸ]
ಜ 25-12-1896

ಧಾರವಾಡ ಜಿಲ್ಲೆ ತಿಮ್ಮಾಪುರ; ಕನ್ನಡ 3ನೇ ಈಯತ್ತೆವರೆಗೆ ಅಭ್ಯಾಸ: ದಾಸಸಾಹಿತ್ಯ ಪ್ರಚಾರಕ; 5 ಕೃತಿಗಳು: ದಾಸವಾಣಿ, ಗೀಗೀ ಪದಗಳು, ಶಿಶುನಾಳ ಶರೀಫರ ತತ್ವಪದಗಳು, ಬಸವೇಶ್ವರ ತತ್ವಪದಗಳು, ಕನಕದಾಸರ ತತ್ವಪದಗಳು

ತಿಮ್ಮಾಪುರ ಚೌಡಯ್ಯದಾನಪುರ ಅಂಚೆ ಹಾವೇರಿ ತಾಲೂಕು ಧಾರವಾಡ ಜಿಲ್ಲೆ



ವಾಸುದೇವರಾವ್, ಪಣಂಬೂರು ಛಾತ್ರಮನೆ
ಜ 22–2–1931

ನವಮಂಗಳೂರು; ಪಿ ಸಿ ಪದ್ಮನಾಭಯ್ಯ–ರತ್ನಿಯಮ್ಮ; 1 ಹೆ ಮಗು; ಪ್ರಾ ಮಾ ಪಣಂಬೂರು, ಪ್ರೌ ಸುರತ್ಕಲ್; ಸುರತ್ಕಲ್‌ನ ವಿದ್ಯಾದಾಯಿನೀ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ; ಮಂಗಳೂರಿನ ಕನ್ನಡ ಸಂಘದ ಸದಸ್ಯ; 1 ಕೃತಿ: ಭಾಗ್ಯದರ್ಶನ (ನಾ) ಹವ್ಯಾಸ: ನಾಟಕಾಭಿನಯ

ವಿದ್ಯಾದಾಯಿನೀ ಪ್ರಾಥಮಿಕ ಶಾಲಾ ಸುರತ್ಕಲ್ ದ ಕ ಜಿಲ್ಲೆ



ವಿಘ್ನೇಶ್ವರ ಶರ್ಮ, ತದ್ದಲಸೆ
[ವಿಹಂಗಮ, ಚಿತ್ರಗುಪ್ತ]
ಜ 21-4-1922

ಕಾನಗೋಡು : ಮಹಾಬಲೇಶ್ವರ–ಮಹಾಲಕ್ಷ್ಮಿ : 4 ಮಕ್ಕಳು : ಕನ್ನಡ ಪಂಡಿತ ಪರೀಕ್ಷೆ ; ಕೃಷಿ ಮತ್ತು ಪೌರೋಹಿತ್ಯ ; ಸಾಹಿತ್ಯ ಭೂಷಣ ಪ್ರಶಸ್ತಿ : 4 ಕೃತಿಗಳು : ಭಾರತೀಯ ಸಾಹಿತ್ಯ, ಪಾತಿನ ಯುಗದ ಮಹಾಪ್ರಭಾವ, ಕರ್ಣ, ಸ್ವರ್ಣವಲ್ಲೀ ದರ್ಶನ

ಹುಣಸೇಕೊಪ್ಪ ಅಂಚೆ ಶಿರಸಿ ತಾಲೂಕು ಉ ಕ ಜಿಲ್ಲೆ



ವಿಜಯಕುಮಾರಿ, ಅಡವಿಯಪ್ಪ
[ವಿಜಯಾಶಂಕರ]
ಜ 16-6-1948

ಬೆಂಗಳೂರು ಜಿಲ್ಲೆ ಗುಡೇಮಾರನಹಳ್ಳಿ : ಅಡವಿಯಪ್ಪ–ಮಲ್ಲಮ್ಮ ; 2 ಗಂ ಮಕ್ಕಳು ; ಪ್ರಾ ಮಾ ಪ್ರೌ ಬಳ್ಳಾರಿ, ಬಿ ಎ ಬಿ ಎಡ್ ಮೈಸೂರು ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯೆ : 1 ಕೃತಿ : ಇದು ಯಾವ ನ್ಯಾಯ (ಅ) ಹವ್ಯಾಸ : ಕಸೂತಿ, ಚಿತ್ರಕಲೆ

ರೀಜನಲ್ ಕಾಲೇಜ್ ಆಫ್ ಎಜ್ಯುಕೇಷನ್ ಮೈಸೂರು 570 006

ವಿಜಯಕುಮಾರಿ, ಚಿತ್ರದುರ್ಗ ಮಠದ ಸಚ್ಚಿದಾನಂದಾರ್ಯ [ವಿಜಯಶ್ರೀ]



ಶಿವಮೊಗ್ಗ ಜಿಲ್ಲೆ ಈಸೂರು; ಕೆ ಜಿ ಮಲ್ಲಪ್ಪಯ್ಯ–ಹಂಪಾಂಬೆ ಪಾಟೀಲ್ ; 1 ಹೆ ಮಗು : ಪ್ರಾ ಮಾ ಈಸೂರು, ಪ್ರೌ ಶಿವಮೊಗ್ಗ, ಎಂ ಎ ಮೈಸೂರು ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯೆ : 15 ಕೃತಿಗಳು : ಜೋಡಿಹಂಸ, ಬಂಟಿ, ದೂರದ ತೀರ, ಅಲೆಗಳ ನಡುವೆ, ಶಮನ, ಭ್ರಮಾಧೀನೆ (ಕಾ) ಹವ್ಯಾಸ : ಸಂಗೀತ, ನಾಟಕ, ಚಿತ್ರಕಲೆ

2ನೇ ತಿರುವು ಆಸ್ಪತ್ರೆರಸ್ತೆ ಶಿವಮೊಗ್ಗ

ವಿಜಯಾ, ದಬ್ಬೆ
ಜ 1-3-1951


ಹಾಸನಜಿಲ್ಲೆ ದಬ್ಬೆ : ಡಿ ಕೃಷ್ಣಮೂರ್ತಿ–ಸೀತಾಲಕ್ಷ್ಮಿ : ಕಳಸಾಪುರ, ಜಾವಗಲ್ಲು, ಹಾಸನ ಮತ್ತು ಮೈಸೂರುಗಳಲ್ಲಿ ವಿದ್ಯಾಭ್ಯಾಸ ; ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕಿ ; ಇರುತ್ತವೆ ಕವಿತಾ ಸಂಕಲನಕ್ಕೆ ಉದಯೋನ್ಮುಖ ವರ್ಧಮಾನ ಪ್ರಶಸ್ತಿ ; ಚೇತನ ಕನ್ನಡ ಸಂಘ, ಸಮತಾ ವೇದಿಕೆ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯೆ : 5 ಕೃತಿಗಳು : ಇರುತ್ತವೆ (ಕ) ನಿರಾಕರಣ, ಸಂಪ್ರತಿ (ವಿಮ) ಸಾನಂದ ಗಣೇಶ ಸಾಂಗತ್ಯ (ಸಂ) ಮೇರಿ ವೋಲ್‌ಸ್ಟನ್‌ಕ್ರಾಫ್ಟ್ ಚಿಂತನೆ (ಜೀ)

ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು 570 006

ವಿಜಯನಾರಸಿಂಹ
ಜ 16–1–1927

ಮಂಡ್ಯಜಿಲ್ಲೆ ಹಳೇಬೀಡು : ಹಳೇಬೀಡು ಕೃಷ್ಣಶಾಸ್ತ್ರಿ–ಸಾವಿತ್ರಮ್ಮ ; 1 ಹೆ ಮಗು ; ಎಸ್ ಎಸ್ ಎಲ್ ಸಿ, ಕನ್ನಡ ಜಾಣ ; ಚಲನಚಿತ್ರ ಸಾಹಿತಿ ; 11 ಕೃತಿಗಳು : ಒಲವಿನ ಬಲಿ, ಸ್ವಪ್ನಫಲ, ಬದುಕಿನ ಬೈರಾಗಿ, ತಬ್ಬಲಿ, ಭಾಗ್ಯನೌಕೆ

2ಅಪ್ಪರ್ ಸಾಮಿ ಕೊಯಿಲ್ ಬೀದಿ ಮೈಲಾಪುರ ಮದರಾಸು



ವಿದ್ಯಾಶಂಕರ, ಶಿವಶಂಕರಪ್ಪ
ಜ 16-6-1941

ಮೈಸೂರುಜಿಲ್ಲೆ ಮಧುವನಹಳ್ಳಿ : ಶಿವಶಂಕರಪ್ಪ–ವಿಶಾಲಾಕ್ಷಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಮಧುವನಹಳ್ಳಿ, ಮಾ ಪ್ರೌ ಕೊಳ್ಳೇಗಾಲ, ಎಂ ಎ (ಕನ್ನಡ) ; ಬೆಂ ವಿ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕ ; 8 ಕೃತಿಗಳು : ದೀಪದ ಕಲಿಯರ ಕಾವ್ಯ (ಜಾ) ಧರ್ಮ ಸಂಪಾದನೆ, ವಾಕ್ಯಮಾಣಿಕ್ಯಕೋಶ, ಸರ್ವಜ್ಞನ ವಚನ ಸಂಗ್ರಹ, ಶಾಂತಿಪುರಾಣ ಸಂಗ್ರಹ (ಸಂ) ಕಲ್ಬುರ್ಗಿಯ ಶರಣಬಸವೇಶ್ವರರು (ಬಾ) ಹವ್ಯಾಸ : ಪ್ರಾಚೀನ ತಾಳೆ ಗ್ರಂಥಗಳ ಸಂಗ್ರಹ

ನಂ 14 3ನೇ ಬ್ಲಾಕ್ ಕೆ ಪಿ ವೆಸ್ಟ್ ಬೆಂಗಳೂರು



ವಿಮಲಾ ರಾಘವೇಂದ್ರ
ಜ 1-7-1940

ಮೈಸೂರು; ಆರಗದ ನಾಗೇಶ್ವರರಾವ್–ಸೀತಮ್ಮ; 2 ಗಂ ಮಕ್ಕಳು; ಎಸ್ ಎಸ್ ಎಲ್ ಸಿ: ಭಾರತ್ ಎಲೆಕ್ಟ್ರಾನಿಕ್ಸ್ ಕಂಪೆನಿಯಲ್ಲಿ ಉದ್ಯೋಗ; ಹೆತ್ತ ಕರುಳು ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ; ಬೆಂಗಳೂರಿನ ಶ್ರೀ ಸರಸ್ವತಿ ಕಲಾ ನಿಕೇತನದ ಸದಸ್ಯೆ; 6 ಕೃತಿಗಳು: ಬೆಳಕು, ಬಳ್ಳಿ ಗಾಸರೆ, ಶುಭೋದಯ, ಹೆತ್ತ ಕರುಳು, ಬಾಳದಾರಿಯಲ್ಲಿ (ಕಾ) ಗುಲಾಬಿ ಬಾಡಿತು (ಸ ಕ) ಪ್ರವಾಸ: ಕಸೂತಿ

147 ಶ್ರೀಕೃಪ ಗೋಕುಲ 1ನೇ ಹಂತ ಬೆಂಗಳೂರು 560 054



ವಿರೂಪಾಕ್ಷಗೌಡ, ಕೊಟ್ರಗೌಡ್ರ [ವಿರೂಪಾಕ್ಷ]
ಜ 3-8-1937

ಬಳ್ಳಾರಿ ಜಿಲ್ಲೆ ಬಾಚಿಗೊಂಡನಹಳ್ಳಿ; ಕೆ ಚೆನ್ನಬಸವನಗೌಡ–ಕಳಕಮ್ಮ; 2 ಗಂ 3 ಹೆ ಮಕ್ಕಳು; ಪ್ರಾ ಬಾಚಿಗೊಂಡನಹಳ್ಳಿ, ಮಾ ತಂಬ್ರಹಳ್ಳಿ, ಪ್ರೌ ಹೊಸಪೇಟೆ ಮತ್ತು ಬಳ್ಳಾರಿ, ಬಿ ಕಾಂ ಹುಬ್ಬಳ್ಳಿ ಮತ್ತು ಬೆಂಗಳೂರು; ವ್ಯವಸಾಯ ಮತ್ತು ವ್ಯಾಪಾರ; ವಾಙ್ಮಯ ಸಾಧಕ ಪ್ರಶಸ್ತಿ; ಕರ್ನಾಟಕ ಜಾನಪದ ಪರಿಷತ್ತು ಮೈಸೂರು ಕಾರ್ಯಕಾರಿ ಸಮಿತಿ ಸದಸ್ಯ, ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ; 20 ಕೃತಿಗಳು: ಸುಗ್ಗಿಯ ಕಣ, ದರ್ಶನ, ಸಾ[illegible] ಕರುಣೆ (ಕ) ಹಳ್ಳಿಯ ಪದಗಳು, ನಮ್ಮ ಹಳ್ಳಿಯ ಕಥೆಗಳು, ಹಳ್ಳಿಯ ಪದಗಳು (ಜಾ) ಪಂಪಾ ಸಂಪದ, ಹೂಗೊಂಚಲು, ಕಂಠಿಸರ (ಸಂ) ಹೊಸಪ್ರವಾಹ (ಪ್ರ)

ಬಾಚಿಗೊಂಡನಹಳ್ಳಿ ಹಗರಿಬೊಮ್ಮನಹಳ್ಳಿ ಮಾರ್ಗ ಬಳ್ಳಾರಿ

ವಿಶ್ವರೂಪಾಚಾರ್, ನಂಜುಂಡಾಚಾರ್ [ಬಾಲಬಂಧು, ವಿಶ್ವರೂಪ, ಪಂಚಾನನ, ವಿಶ್ವಕಮಲ್]
ಜ 5-8-1948

ಬೆಂಗಳೂರು; ಸಿ ಎಂ ನಂಜುಂಡಾಚಾರ್–ಲಿಂಗಮ್ಮ; 1 ಗಂ 1 ಹೆ ಮಕ್ಕಳು; ಪ್ರಾ ಮಾ ವಿಜಯಪುರ, ಪ್ರೌ ರಾಮನಗರ, ಬಿ ಎ ಮೈಸೂರು; ಮೈಸೂರು ಜಿಲ್ಲಾ ಕ್ಷಯ

ರೋಗ ನಿವಾರಣಾ ಕೇಂದ್ರದಲ್ಲಿ ಚಿಕಿತ್ಸಾ ವ್ಯವಸ್ಥಾಪಕ ; ಅನುಕರಣ ಪ್ರವೀಣ ಬಿರುದು; ಕರ್ನಾಟಕ ಮಕ್ಕಳ ಸಾಹಿತ್ಯ ಸಂಘ, ಕರ್ನಾಟಕ ಅಣಕು ಕಲಾವಿದರ ಸಂಘ, ಅಖಿಲ ಕರ್ನಾಟಕ ಬಾಯಿಬರಹಗಾರರ ಸಂಘ, ರಂಗವಾಣಿ ಬಳಗ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 30 ಕೃತಿಗಳು : ಪುಟಾಣಿ ಪುಂಗಿ, ಎಳೆಯರ ಗೆಳೆಯ (ಬಾ) ಮೈತ್ರಿ (ಸಂ) ಆಯ್ದು ಒಗಟುಗಳು (ಜಾ) ಗುಸ್ನಯ್ಯನ ಗಡ್ಡ (ಅ) ಹವ್ಯಾಸ : ನಾಟಕಾಭಿನಯ

ಬೆಂಕಿನವಾಬರ ಬೀದಿ ಮೈಸೂರು 570 001

ವಿಶಾಲಾಕ್ಷಿ, ಲಕ್ಷ್ಮಣಗೌಡ [ವಿನತಾ]

ತುಮಕೂರು ಜಿಲ್ಲೆ ಗುಬ್ಬಿ ; ತಂದೆ : ಬಿ ಹನುಮಂತಯ್ಯ ; 1 ಗಂ 2 ಹೆ ಮಕ್ಕಳು ; ವಿದ್ಯಾಭ್ಯಾಸ ಬೆಂಗಳೂರು ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 3 ಕೃತಿಗಳು : ಚಿರಸ್ಮೃತಿ, ಮೀರಾ (ನಾ) ಪ್ರೇಮಪಾಶ (ಸ ಕ)

2055 ಪುಷ್ಪ ನಿಲಯ ಈಸ್ಟ್ ಎಂಡ್ ಬಿ ಮುಖ್ಯರಸ್ತೆ 9ನೇ ಬ್ಲಾಕ್ ಜಯನಗರ ಬೆಂಗಳೂರು 560 069

ವೀಣಾ ಶಾಂತೇಶ್ವರ [ವೀಣಾ]
ಜ 22-2-1945



ಧಾರವಾಡ ; ಬಲರಾಮಾಚಾರ್ಯ ಎಲಬುರ್ಗಿ–ಪ್ರೇಮಾ ; ಪ್ರಾ ಮಾ ಬಾಗಿಲಕೋಟೆ, ಬಿ ಎ ಎಂ ಎ ಧಾರವಾಡ; ಧಾರವಾಡ, ಕರ್ನಾಟಕ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕಿ ; 3 ಕೃತಿಗಳು : ಮುಳ್ಳುಗಳು, ಕೊನೆಯದಾರಿ (ಸ ಕ) ಗಂಡಸರು (ಕಾ) ಹವ್ಯಾಸ : ಕೊಳಲು, ಸಿತಾರ ವಾದನ, ಚಿತ್ರಕಲೆ


ಜಟಗೇರಿ ಕಾಂಪೌಂಡ್ ಸಪ್ತಾಪುರ ಧಾರವಾಡ

ವೀರಣ್ಣ, ಕೋರಿಶೆಟ್ರು [ಸ್ವಯಂಭು]
ಜ 14-4–1932

ಬಳ್ಳಾರಿ ಜಿಲ್ಲೆ ದಶಮಾಪುರ ; ಕೋರಿಶೆಟ್ರು ಬಸಪ್ಪ–ಶಾಂತಮ್ಮ ; ಪ್ರಾ ಮಾ ದಶಮಾಪುರ, ಪ್ರೌ ಕೊಟ್ಟೂರು, ಕನ್ನಡ ಜಾಣ, ಹಿಂದಿ ಪ್ರಚಾರಕ ಎಲ್ ಎ ಎಂ ಎಸ್,

ಎಂ ಡಿ ಎಚ್ ; ವೈದ್ಯಕೀಯ ವೃತ್ತಿ ; ದೀನಬಂಧು, ಸಾರ್ವಜನಿಕ ಸೇವಾರತ್ನ, ರೋಗಿಗಳ ರಾಜ ಪ್ರಶಸ್ತಿಗಳು ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 8 ಕೃತಿಗಳು : ಕ್ರಾಂತಿ ಪುರುಷ ಕನ್ನಡಿಗನಿಗೆ, ಆತ್ಮಸಂದರ್ಶನ, ಪ್ರಸಾದಕಾಯ, ಮೃತ್ಯುಂಜಯ ದರ್ಶನ, ಪಠಕಪಲ್ಲಿ ಗಾಂಧೀಜಿ, ನವಭಾರತ ಶಿಲ್ಪಿ ; ಹವ್ಯಾಸ : ನಾಟಕ, ಪ್ರವಾಸಿ

ವಾಣ್ಯಪುರ ದಶಮಾಪುರ ಅಂಚೆ ಎಚ್ ಬ ಹಳ್ಳಿ 583 212



ವೀರಪ್ಪ, ಕೀಲಾರ ತಮ್ಮೇಗೌಡ

ಜ 22-5-1936

ಮಂಡ್ಯ ಜಿಲ್ಲೆ ಕೀಲಾರ ; ಕೀಲಾರದ ತಮ್ಮೇಗೌಡ–ತಾಯಮ್ಮ ; 2 ಗಂ ಮಕ್ಕಳು ; ಪ್ರಾ ಕೀಲಾರ, ಮಾ ಪ್ರೌ ಮಂಡ್ಯ, ಬಿ ಎ ಆನರ್ಸ್ ಎಂ ಎ (ಕನ್ನಡ) ಮೈಸೂರು ; ಮೈ ವಿ ಪ್ರಸಾರಾಂಗದ ನಿರ್ದೇಶಕ : ಅಮೇರಿಕ, ಕೆನಡ, ಇಂಗ್ಲೆಂಡ್, ಫ್ರಾನ್ಸ್, ಇಟಲಿ ಪ್ರವಾಸ ; ಕರ್ನಾಟಕ ಜಾನಪದ ಪರಿಷತ್ತು, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಸದಸ್ಯ ; 8 ಕೃತಿಗಳು : ಲೋಕಪಾವನಿ, ಇಕ್ಷು ಕಾವೇರಿ, ಯದುಗಿರಿ, ಶ್ರೀಕಂಠಿಕಾ, ಕಾಜಾಣ, ಶ್ರೀಕಂಠೇಶಗೌಡರ ಕೃತಿಗಳು (ಸಂ) ಶಿಕ್ಷಕ ಠಾಕೂರ್ (ಅ) ಭಾರತ ವಾರ್ಷಿಕ 1981

182 11ನೇ ಮುಖ್ಯರಸ್ತೆ 6ನೇ ತಿರುವು ಸರಸ್ವತೀಪುರಂ ಮೈಸೂರು 570 009

ವೀರಪ್ಪ, ನಿರ್ವಾಣಶೆಟ್ಟಿ ಸಾತನೂರು

ಜ 7-7-1910



ಬೆಂಗಳೂರು ಜಿಲ್ಲೆ ಸಾತನೂರು ; ನಿರ್ವಾಣಶೆಟ್ಟಿ–ನಂಜಮ್ಮ : 3 ಗಂ 2 ಹೆ ಮಕ್ಕಳು ; ಪ್ರಾ ಸಾತನೂರು, ಮಾ ಹಲಗೂರು, ಪ್ರೌ ತಿಪಟೂರು, ಬಿ ಎಸ್ ಸಿ ಆನರ್ಸ್ ಬೆಂಗಳೂರು ಎಂ ಎಸ್ ಸಿ ಬಿ ಎಡ್ ಡಿ ಎಡ್ ; ಇಂಗ್ಲೆಂಡ್ ಪ್ರವಾಸ ; ದೇವರಾಜ ಬಹದ್ದೂರ್, ಸಾಹಿತ್ಯ ಪರಿಷತ್, ಮೈಸೂರು ವಿ ವಿ ನಿಲಯದ ಪ್ರಶಸ್ತಿಗಳು ; ಕನ್ನಡ ವಿಶ್ವಕೋಶದ ಗೌರವ ಸಂಪಾದಕ ; 45 ಕೃತಿಗಳು : ಬಾಳಿನ ಬೆಳಕು, ನೆರಗಿನ ಗಂಟು (ಕ) ಪುಣ್ಯಭೂಮಿ (ಕಾ) ಫಲಸಂಚಯ (ನಾ) ಕನ್ನಡ ಗದ್ಯಸಾಹಿತ್ಯ (ಸಂ) ಮಕ್ಕಳ ಮನಸ್ಸು

(ಬಾ) ಮೈಕೇಲ್ ಫ್ಯಾರಡೆ, ಲೆನಿನ್ (ಜೀ) ಸಾಮಾನ್ಯ ಜೀವಶಾಸ್ತ್ರ, ದಿನಬಳಕೆಯ ಜೀವವಿಜ್ಞಾನ (ವಿ) ಭಾರತೀಯ ಶಿಕ್ಷಣದ ಆಡಳಿತ ವ್ಯವಸ್ಥೆ, ಭಾರತೀಯ ಶಿಕ್ಷಣದ ಇತಿಹಾಸ (ಕ್ರಿ ಪೂ 800-ಕ್ರಿ ಶ 1983) ಶಿಕ್ಷಣತತ್ವದರ್ಶನ (ಶಿ) ಶಿಕ್ಷಣ ಶಾಸ್ತ್ರದ ಪಾರಿಭಾಷಿಕ ನಿಘಂಟು (ನಿ)

25 ಕಾಂತರಾಜ ಅರಸ್ ರಸ್ತೆ ಮೈಸೂರು 4



ವೀರಬಸಣ್ಣ, ಚಿಗಟೇರಿ

ಜ 17-1-1939

ಚಿತ್ರದುರ್ಗ ಜಿಲ್ಲೆ ಜಗಳೂರು; ಚಿಗಟೇರಿ ಮಲ್ಲಪ್ಪ-ಬಸಮ್ಮ: 1 ಗಂ 3 ಹೆ ಮಕ್ಕಳು; ಪ್ರಾ ಮಾ ಪ್ರೌ ಜಗಳೂರು, ಬಿ ಎ ದಾವಣಗೆರೆ, ಎಂ ಎ ಮೈಸೂರು; ಕ ವಿ ಇತಿಹಾಸ ವಿಭಾಗದಲ್ಲಿ ಪ್ರಾಧ್ಯಾಪಕ; 2 ಕೃತಿಗಳು: ೧೮೫೭ ರ ಕ್ರಾಂತಿ, ಜಾಗತಿಕ ಸರಕಾರ (ಇ)

ಇತಿಹಾಸ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 3

ವೀರಭದ್ರಪ್ಪ, ಕುಂಬಾರ

ಜ 1-7-1952



ಬಳ್ಳಾರಿ ಜಿಲ್ಲೆ ಕೊಟ್ಟೂರು; ಹಾಲಪ್ಪ-ಕೊಟ್ರವ್ವ; ಪ್ರಾ ಮಾ ಪ್ರೌ ಕೊಟ್ಟೂರು; ವಂದವಾಗಿಲಿ (ಆಂಧ್ರ) ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ; ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಸದಸ್ಯ: 1 ಕೃತಿ: ದಿವಿಸೀಮೆಯ ಹಾಡು (ಕ) ಹವ್ಯಾಸ: ವ್ಯಂಗ್ಯಚಿತ್ರರಚನೆ, ಸಂಗೀತ

ವಂದವಾಗಿಲಿ ಆಲೂರು ತಾಲೂಕು ಕರ್ನೂಲು ಜಿಲ್ಲೆ ಆಂಧ್ರ 518 308



ವೀರಭದ್ರಪ್ಪ, ಕೋಸಿಗಿ [ವೀರಭದ್ರ]
ಜ 10-7-1937

ಆಂಧ್ರಪ್ರದೇಶದ ಆದವಾನಿ; ಮರಿಬಸವಣ್ಣ–ನಾಗಮ್ಮ; 5 ಮಕ್ಕಳು; ಪ್ರಾ ಮಾ ಪ್ರೌ ಆದವಾನಿ; ಬಿ ಎ ಆನರ್ಸ್ ಎಂ ಎ ಮೈಸೂರು; ಮೈಸೂರು ಜೆ ಎಸ್ ಎಸ್ ಕಾಲೇಜಿನಲ್ಲಿ ಕನ್ನಡ ಉಪಪ್ರಾಧ್ಯಾಪಕ; ಈ ಭೂಮಿ ಆ ಆಕಾಶ ಕಥಾ ಸಂಕಲನಕ್ಕೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ: 14 ಕೃತಿಗಳು: ನೀಲಿ ನೀರಿನ ಮೇಲೆ, ಬಾವಿಯಿಂದ ಬೇಲಿಗೆ, ಈ ಭೂಮಿ ಆ ಆಕಾಶ (ಸ ಕ) ಐದು ಮತ್ತು ಹತ್ತು (ಸಂ) ನಿಸರ್ಗ, ಶಾಕುಂತಲ (ವಿಮ) ಚರಿತ್ರಹೀನ, ಮೈದಾಸ, ಮನಸುಟ್ಟಿತು (ಅ)

ಜೆ ಎಸ್ ಎಸ್ ಕಾಲೇಜು ರಾಮಾನುಜ ರಸ್ತೆ ಮೈಸೂರು 4

ವೀರಭದ್ರಪ್ಪ, ದುಂಡಪ್ಪ ಆರುಬೆರಳಿನ
ಜ 1885



ಬೆಳಗಾವಿ ಜಿಲ್ಲೆ ಬೈಲಹೊಂಗಲ; ದುಂಡಪ್ಪ–ಲಿಂಗಮ್ಮ; 1 ಗಂಡು ಮಗು; ಆರನೇ ತರಗತಿಯವರೆಗೆ ಅಭ್ಯಾಸ; ವ್ಯವಸಾಯ; 10 ಕೃತಿಗಳು: ರುದ್ರವಂಶಪ್ರಕಾಶ, ಭಾರತ ಮಹಾ ಕ್ಷೇತ್ರ ದರ್ಶನ, ವೀರಶೈವ ಧರ್ಮ ಪ್ರಕಾಶಿಕೆ (ಧ) ಮೈಸೂರ ಪ್ರವಾಸ (ಪ್ರ ವಾ)

ಹಿರೇಬಾಗೇವಾಡಿ ಬೆಳಗಾವಿ ಜಿಲ್ಲೆ



ವೀರಭದ್ರಪ್ಪ, ಮಾಗುಡಿಲು ಬಸಪ್ಪ
ಜ 10-11-1927

ಮೈಸೂರು ಜಿಲ್ಲೆ ಮಾಗುಡಿಲು: ಎಂ ಜೆ ಬಸಪ್ಪ–ಸುಬ್ಬಮ್ಮ; 2 ಗಂ ಮಕ್ಕಳು: ಪ್ರಾ ಮಾ ಸರಗೂರು, ಪ್ರೌ ಚಾಮರಾಜನಗರ ಬಿ ಎ ಎಂ ಎ (ಇತಿಹಾಸ) ಎಂ ಇ ಡಿ ಮೈಸೂರು, ಎಂ ಎ (ಕನ್ನಡ) ಧಾರವಾಡ, ಡಿಪ್ಲೊಮಾ ಇನ್ ಟೀಚರ್ ಎಜ್ಯುಕೇಷನ್ ನವದೆಹಲಿ; ನಾಗಮಂಗಲ ಸರ್ಕಾರ

ಜ್ಯೂನಿಯರ್ ಕಾಲೇಜಿನಲ್ಲಿ ಅಧ್ಯಾಪಕ ; 4 ಕೃತಿಗಳು : ಶಿಕ್ಷಣ ತತ್ವ ಮತ್ತು ಮಾನೋ ವಿಜ್ಞಾನ, ಶಿಕ್ಷಾ ಕ್ರಮಣ, ಶೈಕ್ಷಣಿಕ ಆಡಳಿತ ಮತ್ತು ಪ್ರಚಲಿತ ಸಮಾಸ್ಯೆಗಳು (ಶಿ)

ಸರ್ಕಾರಿ ಜ್ಯೂನಿಯರ್ ಕಾಲೇಜ್ ನಾಗಮಂಗಲ

ವೀರಭದ್ರ ಶಿವಾಚಾರ್ಯ [ವೀ ಭ ಶಿ]

ಜ 10-2-1910

ಮೈಸೂರು ಜಿಲ್ಲೆ ಪರಮಪುರ ; ಹುಚ್ಚಪ್ಪಶಾಸ್ತ್ರೀ-ಪುಟ್ಟವೀರಮ್ಮ ; ಮೆಟ್ರಿಕ್ ಪರೀಕ್ಷೆ, ಕನ್ನಡ ಭಾಷಾ ಪಂಡಿತ ; ಮಹಾದೀಶ ; 56 ಕೃತಿಗಳು : ಮಂತ್ರಾನುಭವ ಮಂಜರಿ, ಶಿವಸಿದ್ಧಾಂತ ಸಾಮರಸ್ಯ, ಪರಮುಕ್ತಿ ಪ್ರಭಾವ (ಧ) ವ್ರತಪಾಲ ವಿಲಾಸ, ಮಂಜು ಘೋಶ (ನಾ) ಜೀವಂತ ಜೀವನ, ಸಾಧನೆಯ ಪ್ರಭಾಕರ (ಜೀ) ಶಿವಾದ್ವೈತ ಸಂಪದಂ, ಷಟ್‌ಸ್ಥಲ ತಿಲಕ (ಸಂ) ಶಿವಪ್ರಕಾಶ ವಿಕಾಸ (ಅ) ಷಡಕ್ಷರದೇವ ದರ್ಶನ, ಪರಮಾತ್ಮ ಸಮ್ಮಿಲನ (ಕ)


ಬೃಹನ್ಮಠ ಹಲಗೂರು ಮಂಡ್ಯ ಜಿಲ್ಲೆ 571 421

ವೃಷಭೇಂದ್ರಸ್ವಾಮಿ, ಸೊನ್ನದ ಮುರುಡಿಮಠದ

ಜ 1-9-1928

ಬಳ್ಳಾರಿಜಿಲ್ಲೆ ಎಂ ಬಿ ಅಯ್ಯನಹಳ್ಳಿ ; 1 ಗಂ ಮಗು ; ಎಂ ಎ (ಮೈ ವಿ) ಪಿ ಎಚ್ ಡಿ (ಕ ವಿ) ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕ ಹಾಗೂ ನಿರ್ದೇಶಕ ; ಕೇಣಿ ಸಿದ್ದಪ್ಪ ಚಿನ್ನದ ಪದಕ ; ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳ ಆಜೀವ ಸದಸ್ಯ ; ಸನ್ಮಿತ್ರ ಸಹಕಾರ ಪ್ರಕಾಶನದ ಸಂಪಾದಕ ; 10 ಕೃತಿಗಳು : ಸಂಶೋಧನ ಪ್ರಬಂಧಗಳು, ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ, ತ್ರಿವಿಧ ಕ್ರಾಂತಿಮೂರ್ತಿ ಬಸವಣ್ಣ (ವಿಮ) ಬರೆಯುವ ದಾರಿ (ಪ್ರ) ಶ್ರೀ ತೋಂಟದ ಸಿದ್ಧಲಿಂಗೇಶ್ವರ ಚಾರಿತ್ರ, ಶೂನ್ಯ ಸಂಪಾದನೆಯ ಪರಾಮರ್ಶೆಯ ವಿಮರ್ಶೆ (ಸಂ) ಜನಪದ ಸಾಹಿತ್ಯದ ಮೂಲಮಾನಗಳು (ಜಾ)

ಶಿವಪ್ರಸಾದ ಕಲ್ಯಾಣನಗರ ಧಾರವಾಡ 580 007



ವೆಂಕಟಯ್ಯ, ಗಿರಿಯಯ್ಯ
ಜ 10-4-1916

ಮದ್ದೂರು ತಾಲೂಕು ಹೆಮ್ಮನಹಳ್ಳಿ, ಗಿರಿಯಯ್ಯ–ಸಿದ್ದಮ್ಮ ; 2 ಗಂ 2 ಹೆ ಮಕ್ಕಳು ; ಪ್ರಾ ಸೋಮನಹಳ್ಳಿ, ಪ್ರೌ ಬೆಂಗಳೂರು. ಇಂಟರ್ ಮೀಡಿಯೆಟ್ ಮೈಸೂರು ; ಲೆಕ್ಕ ತನಿಖಾಧಿಕಾರಿಯಾಗಿ ನಿವೃತ್ತಿ; ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ಬಹುಮಾನ, ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ, ರಾಜ್ಯ ಪ್ರಶಸ್ತಿ, ಸಾಹಿತ್ಯ ಸೇವೆಗಾಗಿ ಮಾಸಾಶನ ; ರಾಜ್ಯ ಸಾಹಿತ್ಯ ಅಕಾದೆಮಿ ಸದಸ್ಯ, ಲಕ್ಷ್ಮೀಸ್ಮಾರಕ ಗ್ರಂಥಮಾಲೆ ಸಂಪಾದಕ : 12 ಕೃತಿಗಳು : ಚಂದನದ ಕೊರಡು, ನೊಂದಜೀವ, ಮುರಿದ ಮದುವೆ (ಕಾ) ಮಗಳ ಮಾಂಗಲ್ಯ (ಸ ಕ) ಶಾರದಾಮಣಿ ದೇವಿ, ಬುದ್ಧದೇವ (ಜೀ) ಚಿನ್ನದಗಿರಿ ಯಾತ್ರೆ, ನಿಸರ್ಗದ ಮಡಿಲು, ಬನದ ಸೆರಗು (ಪ್ರವಾ) ಬುದ್ಧದೇವ (ಬಾ) ಹವ್ಯಾಸ : ಬೇಟೆ, ಪ್ರವಾಸ

ವೆಂಕಟರಮಣಯ್ಯ, ತೊಣ್ಣೂರು ವೆಂಕಟರಮಣಯ್ಯ
ಜ 8–10–1933

ಮಂಡ್ಯ ಜಿಲ್ಲೆ ತೊಣ್ಣೂರು ; ವೆಂಕಟರಮಣಯ್ಯ–ತಿಮ್ಮಮ್ಮ : ಪ್ರಾ ತೊಣ್ಣೂರು ಮಾ ಹಿರೀಸಾವೆ, ಪ್ರೌ ಕೃಷ್ಣರಾಜನಗರ, ಬಿ ಎ ಮೈಸೂರು, ಗ್ರಂಥಾಲಯ ವಿಜ್ಞಾನ ಡಿಪ್ಲೊಮಾ ಕಾಶಿ ಹಿಂದೂ ವಿಶ್ವವಿದ್ಯಾಲಯ ; ಎಂ ಲಿಬ್ ಎಸ್ ಸಿ ಬೆಂಗಳೂರು ; ಬೆಂ ವಿ ಉಪಗ್ರಂಥಪಾಲಕ ; ಭಾರತೀಯ ಗ್ರಂಥಾಲಯ ಸಂಘ ನವದೆಹಲಿ, ಕರ್ನಾಟಕ ಗ್ರಂಥಾಲಯ ಸಂಘ ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತಿನ ಸರಸ್ವತೀ ಭಂಡಾರ ಸಲಹಾ ಸಮಿತಿ ಸದಸ್ಯ ; 7 ಕೃತಿಗಳು : ಕನ್ನಡ ಗಾದೆಗಳ ಕೋಶ, ಕನ್ನಡ ಪಡೆನುಡಿ ಕೋಶ, ನುಡಿ ರತ್ನಕೋಶ, (ಕೋ) ಹಾಸ್ಯರಸಾಯನ (ಸ) ಕನ್ನಡ ಭಾಷಾ ಸಾಹಿತ್ಯ ಲೇಖನ ಸೂಚಿ, ಕನ್ನಡ ಲೇಖಕರ ಕಾವ್ಯನಾಮ ನಿಜನಾಮಗಳು (ಸೂಚಿ) ಹವ್ಯಾಸ : ಪ್ರವಾಸ

ಉಪಗ್ರಂಥಪಾಲಕ ಜ್ಞಾನಭಾರತಿ ಬೆಂಗಳೂರು 560 056



ವೆಂಕಟರಾಜ, ಪುಣಿಂಚತ್ತಾಯ [ಅಶ್ವಲಾಯನ]
ಜ 10–10–1936

ಕಾಸರಗೋಡು ತಾಲೂಕು ಪುಂಡೂರು ; ದಾಮೋದರ ಪುಣಿಂಚತ್ತಾಯ–ಸರಸ್ವತಿ ಅಮ್ಮ ; 1 ಗಂ 2 ಹೆ ಮಕ್ಕಳು ; ಕನ್ನಡ ವಿದ್ವಾನ್, ಹಿಂದಿ ರಾಷ್ಟ್ರ ಭಾಷಾ ವಿಶಾರದ, ಸಂಸ್ಕೃತ ಸಾಹಿತ್ಯ ಶಿರೋಮಣಿ, ಅಧ್ಯಾಪಕ ; ಕಾಸರಗೋಡು ಕನ್ನಡ ಲೇಖಕರ ಸಂಘದ ಅಧ್ಯಕ್ಷ ; 6 ಕೃತಿಗಳು : ಬೇಡನ ಮಗಳು,

ನಚಿಕೇತ (ನಾ) ನನ್ನಜ್ಜನಿಗೊಂದಾನೆಯಿತ್ತು (ಅ) ಜೋಕಾಲಿ (ಬಾ) ಹವ್ಯಾಸ : ಅಭಿನಯ ಮತ್ತು ನಿರ್ದೇಶನ

ಜ್ಞಾನಕುಟೀರ ಎಡನೀರು ಅಂಚೆ ಕಣ್ಣಾನೂರು ಜಿಲ್ಲೆ ಕೇರಳ ರಾಜ್ಯ

ವೆಂಕಟರಾಜ, ಸಾಂತ್ಯಾರು

ಜ 23–1–1913



ದ ಕ ಜಿಲ್ಲೆ ಸಾಂತ್ಯಾರು ; ಅನಂತಪದ್ಮನಾಭ ಭಟ್ಟ–ಗೌರಮ್ಮ ; 2 ಗಂ 3 ಹೆ ಮಕ್ಕಳು ; ಸಂಸ್ಕೃತ ವಿದ್ವಾನ್, ಹಿಂದಿ ರಾಷ್ಟ್ರಭಾಷಾ ವಿಶಾರದ, ವೀರಭೂಮಿ ಮಾಸಪತ್ರಿಕೆ ಸಂಪಾದಕ ; ಮಾನಸಗಂಗೆ ಕವಿತಾ ಸಂಕಲನಕ್ಕೆ ರಾಜ್ಯ ಪ್ರಶಸ್ತಿ ; 17 ಕೃತಿಗಳು : ಪದ್ಮ ಸರೋವರ, ಮಾನಸ ಗಂಗೆ (ಕ) ವೀರಭೂಮಿ, ಆಕಾಶಗಂಗೆ (ಸ ಕ) ಕೈಲಾಸದಲ್ಲಿ ಕಮ್ಯೂನಿಷ್ಟರು, ರಂಗಭೂಮಿ (ನಾ) ಅಂಬುಜಾಕ್ಷಿ, ಧರ್ಮಶಾಲೆ (ಕಾ) ಹವ್ಯಾಸ : ಸಂಗೀತ, ಬೇಟೆ, ಜ್ಯೋತಿಷ

ಅಜ್ಜರಕಾಡು ಉಡುಪಿ



ವೆಂಕಟರಾಮ್, ತರೀಕೆರೆ ಪುಟ್ಟುರಾವ್

ಜ 26-10-1931

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ; 3 ಗಂ 1 ಹೆ ಮಕ್ಕಳು ; ಎಸ್ ಎಸ್ ಎಲ್ ಸಿ ; ಸಮಾಜ ಶಿಕ್ಷಣ ವಿಸ್ತರಣಾಧಿಕಾರಿ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 30 ಕೃತಿಗಳು : ದೇವರ ಮನೆ (ಸ ಕ) ಮೋಜಿನ ಮುದ್ದೆ, ಪ್ರವಾಸಿ ಮಂದಿರ (ನಾ) ಬಿಳಿಗಿರಿ ಬನದಲ್ಲಿ, ಕಪ್ಪೆ ಚಿಪ್ಪು, ಕಲ್ಲು ವೀಣೆ ನುಡಿಯಿತು, ಚಂದ್ರೋದಯ, ಬಸದಿ ಬಿರಿದ ಕುಸುಮ (ಕಾ)

9 ಎನ್ ಇ ಎಸ್ ಬಡಾವಣೆ ದೊಡ್ಡಬಳ್ಳಾಪುರ

ವೆಂಕಟರಾಮಪ್ಪ, ಕೋಟಬಂಡೆ
ಜ 28-5-1906

ತುಮಕೂರು ಜಿಲ್ಲೆ ಪಾವಗಡ ; ಕೆ ಸುಬ್ಬಾಶಾಸ್ತ್ರಿ–ಸಾವಿತ್ರಮ್ಮ ; 1 ಗಂ ಮಗು ; ಪ್ರಾ ಮಾ ಪಾವಗಡ, ಪ್ರೌ ಬಿ ಎ ಆನರ್ಸ್ ಎಂ ಎ ಮೈಸೂರು ; ಮೈ ವಿ ಕನ್ನಡ ಉಪಪ್ರಾಧ್ಯಾಪಕರಾಗಿ ನಿವೃತ್ತಿ ; ನೇಪಾಳ ಪ್ರವಾಸ ; 10 ಕೃತಿಗಳು : ಶ್ರೀಕೃಷ್ಣ ದೇವರಾಯನ ಆಸ್ಥಾನದ ತೆಲುಗು ಮತ್ತು ಕನ್ನಡ ಕೃತಿಗಳ ಒಂದು ಸಮೀಕ್ಷೆ, ಪಂಪ ನನ್ನಯ ಒಂದು ಸಮೀಕ್ಷೆ (ವಿಮ) ಕನ್ನಡ ಸಾಹಿತ್ಯ ಚರಿತ್ರೆ (ಸಾ) ಕೋಣನ ಮಂತ್ರ (ಪ್ರ) ಆದರ್ಶ ರಾಜ್ಯ (ಅ) ಶ್ರೀ ಕೃಷ್ಣ ಚರಿತೆ (ಸಂಗ್ರ) ಕನ್ನಡ ಭಾಗವತ ಲೀಲಾವತಿ (ಸಂ) ಹವ್ಯಾಸ : ಸಂಗೀತ ಶ್ರವಣ

29 ಬಾಲಕೃಷ್ಣರಾವ್ ರಸ್ತೆ ಚಾಮರಾಜಪುರ ಮೈಸೂರು–570 004

ವೆಂಕಟರಾಯಾಚಾರ್ಯ, ಕಾವಿನಕಲ್ಲು ಮಠ
[ಜಯಂತ]
ಜ 12-4-1919



ದ ಕ ಜಿಲ್ಲೆ ಕುಳಾಯಿ ; ಲಕ್ಷ್ಮೀನಾರಾಯಣಾಚಾರ್ಯ–ಭಾಗೀರಥಿಯಮ್ಮ ; 3 ಗಂ ಮಕ್ಕಳು ; ಕನ್ನಡ ವಿದ್ವಾನ್ ; ಸುರತ್ಕಲ್ ವಿದ್ಯಾದಾಯಿನಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಕರಾಗಿ ನಿವೃತ್ತಿ ; ಸಂಶೋಧಕ ವಿದ್ವಾಂಸ ಪ್ರಶಸ್ತಿ, ಕನ್ನಡ ಆದಿತ್ಯ ಪುರಾಣ ಕೃತಿಗೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ ; ಮಂಗಳೂರಿನ ಕನ್ನಡ ಸಂಘದ ಸದಸ್ಯ ; 14 ಕೃತಿಗಳು : ಜಯಸಿಂಹ ಚರಿತೆ, ಆದಿತ್ಯ ಪುರಾಣ (ಸಂ) ಬ್ರಹ್ಮ ಶ್ರೀ ನಾರಾಯಣ, ಶ್ರೀ ವಿದ್ಯಾಪೂರ್ಣ ತೀರ್ಥರು (ಜೀ) ಅಭಿನಯ ಗೀತೆಗಳು (ಬಾ) ಸಾಹಿತ್ಯದ ಹಿನ್ನೆಲೆ, ಸಾಹಿತ್ಯ ಹಾಗೂ ಸಂಶೋಧನೆ (ವಿಮ) ಹವ್ಯಾಸ : ಯಕ್ಷಗಾನ, ಬಯಲಾಟಗಳಲ್ಲಿ ಪಾತ್ರವಹಿಸುವುದು

ಸುರತ್ಕಲ್ ದ ಕ

ವೆಂಕಟಲಕ್ಷ್ಮಿ, ವೆಂಕಟಪ್ಪಗೌಡ [ವಿ ವಿ ಲಕ್ಷ್ಮಿ]
ಜ 16-5-1949

ಬೆಂಗಳೂರು ; ಎಂ ವೆಂಕಟಪ್ಪಗೌಡ–ವೆಂಕಟಮ್ಮ ; 1 ಗಂ 1 ಹೆ ಮಕ್ಕಳು ; ಬಿ ಕಾಂ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯೆ ; 4 ಕೃತಿಗಳು : ಮಾಲಿನಿ, ಬಾಳಪಲ್ಲವಿ, ಹಂಬಲದ ಫಲ, ತಬ್ಬಲಿ ಯಾರು (ಕಾ)

122/50 2ನೇ ಮಹಡಿ ಪಿಲ್ಲಪ್ಪ ಬಿಲ್ಡಿಂಗ್ ಸಂಪಂಗಿರಾಮನಗರ ಬೆಂಗಳೂರು



ವೆಂಕಟ ವಿಶ್ವನಾಥ, ಸಾತವಲ್ಲಿ [ಹರಿಹರಪ್ರಿಯ]
ಜ 20-1-1952

ಮೈಸೂರು; ಎಚ್ ಶಂಕರರಾಮಶಾಸ್ತ್ರಿ-ಪಾರ್ವತಮ್ಮ; ಪ್ರಾ ಗದ್ದೆಹೊಸೂರು, ಮಾ ಮಾದಗೆರೆ, ಪ್ರೌ ಮಿರ್ಲೆ ಕೃಷ್ಣರಾಜಪೇಟೆ ನಾಗಮಂಗಲ, ಸಾಹಿತ್ಯ ಜಾಣ ಬೆಂಗಳೂರು; ಕೆನ್ ಸ್ಕೂಲ್ ಆಫ್ ಆರ್ಟ್ (ಬೆಂಗಳೂರು)ನಲ್ಲಿ ಗೌರವ ಕನ್ನಡ ಅಧ್ಯಾಪಕ; ಪಿ ಇ ಎನ್ ಸದಸ್ಯ, ಮೂಡಬಿದರೆ ವರ್ಧಮಾನ ಪೀಠದ ಉಪಾಧ್ಯಕ್ಷ; 17 ಕೃತಿಗಳು: ಹೇಮಾವತಿ (ಕ) ಜಾಬಾಲಿ, ವಿಶ್ವನಾಥ ಸಾಹಿತ್ಯೋಪನ್ಯಾಸಗಳು, ರಸರೇಖೆ (ಅ) ಕಥಕಳಿ, ಕುವೆಂಪು ಪತ್ರಗಳು, ಕುವೆಂಪು ಒಲವು ನಿಲವು (ಸಂ) ಕನ್ನಡ, ತೆಲುಗು ಸಾಹಿತ್ಯ ವಿನಿಮಯ (ವಿಮ) ಕನ್ನಡದ ಹೇಮಾ ಹೇಮಿಗಳು (ಜೀ) ತೆಲುಗಿನಲ್ಲೂ ಕೃತಿ ರಚಿಸಿದ್ದಾರೆ

47 ಬಿ ಹಿಂಬದಿಯ ಮನೆ ರಾಜಾಜಿನಗರ ಬೆಂಗಳೂರು 560 010



ವೆಂಕಟಸುಬ್ಬಯ್ಯ [ಕವಿತಾನಂದ]
ಜ 15-3-1907

ಮೈಸೂರು ಜಿಲ್ಲೆ ಮುಳ್ಳೂರು; ದೇವಪ್ಪ-ನಂಜಮ್ಮ; 2 ಗಂ 2 ಹೆ ಮಕ್ಕಳು: ಕನ್ನಡ ಲೋಯರ್ ಸೆಕೆಂಡರಿ; ಶಿಕ್ಷಕ; 3 ಕೃತಿಗಳು: ಜಿನಭಜನಮಂಜರಿ, ಶ್ರೀರಾಮ ಭಕ್ತಿ ಶತಕ, ಗೊಮ್ಮಟನ ನೆನಹು (ಧ)

ಮುಳ್ಳೂರು ಹೆಗ್ಗಡದೇವನಕೋಟೆ ತಾಲೂಕು ಮೈಸೂರು ಜಿಲ್ಲೆ

ವೆಂಕಟಸುಬ್ಬಯ್ಯ, ಗಂಜಾಂ [ಜೀವಿ]
ಜ 23-8-1913



ಮಂಡ್ಯಜಿಲ್ಲೆ ಕೈಗೋನಹಳ್ಳಿ; ಗಂಜಾಂ ತಿಮ್ಮಣ್ಣಯ್ಯ-ಸುಬ್ಬಮ್ಮ; 2 ಗಂ 2 ಹೆ ಮಕ್ಕಳು: ಎಂ ಎ ಬಿ ಟಿ ಮೈಸೂರು; ಬೆಂಗಳೂರು ವಿಜಯ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತಿ; ಕೇಣಿ ಸಿದ್ದಪ್ಪನವರ ಚಿನ್ನದ ಪದಕ, ಹೊನ್ನಶೆಟ್ಟಿ ಬಹುಮಾನ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ

(1954–56) ಅಧ್ಯಕ್ಷ (1965–69) ನಿಘಂಟು ಸಮಿತಿ ಉಪಾಧ್ಯಕ್ಷ ಮತ್ತು ಪ್ರಧಾನ ಸಂಪಾದಕ; ಅಭಿನಂದನ ಗ್ರಂಥ: ಜೀವಿ ; 15 ಕೃತಿಗಳು : ನಯಸೇನ, ಅಸುಕಲ್ಪನೆ, ವಿಕಾಸ (ವಿಮ) ಅಕ್ರೂರ ಚರಿತ್ರೆಯ ಸಂಗ್ರಹ, ನಳಚಂಪು ಸಂಗ್ರಹ, ಕರ್ಣಕರ್ಣಾಮೃತ (ಸಂಗ್ರ) ರಾಬಿನ್‌ಸನ್ ಕ್ರೂಸೋ, ಕವಿಜನ್ನ (ಬಾ) ಸಂಯುಕ್ತ ಸಂಸ್ಥಾನಗಳನ್ನು ಪರಿಚಯ ಮಾಡಿಕೊಳ್ಳಿ, ಶಂಕರಾಚಾರ್ಯ, ಕಬೀರ್ (ಅ) ಸಂಕ್ಷಿಪ್ತ ಕನ್ನಡ ನಿಘಂಟು (ನಿ) ಹವ್ಯಾಸ : ಚದುರಂಗ

58 31ನೇ ಅಡ್ಡರಸ್ತೆ 7ನೇ ಬ್ಲಾಕ್ ಜಯನಗರ ಬೆಂಗಳೂರು



ವೆಂಕಟಸುಬ್ಬರಾವ್, ನೀಲಗಿರಿ ಶೇಷಗಿರಿರಾವ್ [ಕೌಂಡಿನ್ಯ]

ಜ **15–11–1909**

ತುಮಕೂರು ; ಎಸ್ ಎನ್ ಸುಬ್ಬರಾವ್–ವೆಂಕಟ ಸುಬ್ಬಮ್ಮ ; 1 ಗಂ 4 ಹೆ ಮಕ್ಕಳು . ಪ್ರಾ ಬೆಂಗಳೂರು, ಮಾ ಮೈಸೂರು, ಪ್ರವೇಶ ಪರೀಕ್ಷೆ, ಬಿ ಎ; ರೈಲ್ವೆ ಇಲಾಖೆಯಲ್ಲಿ ಲೆಕ್ಕಪತ್ರಗಳ ವಿಭಾಗಾಧಿಕಾರಿಯಾಗಿ ನಿವೃತ್ತಿ ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ, ಮೈಸೂರಿನ ಲಿಟರರಿ ಯೂನಿಯನ್ ಆಜೀವ ಸದಸ್ಯ ; 7 ಕೃತಿಗಳು : ತಾಯಿ ಮಕ್ಕಳು, ದುರಾಗ್ರಹಿ, ಅಗ್ನಿ ಪರೀಕ್ಷೆ, ಮೃತ್ಯೋರ್ಮಾ ಅಮೃತಂಗಮಯ ; ಹವ್ಯಾಸ ; ಗಮಕ

1/3 ಪಿ ವಿ ನಾರಾಯಣಸ್ವಾಮಿ ಬ್ಲಾಕ್ ಆದಿಪಂಪರಸ್ತೆ ಮೈಸೂರು 570 002

ವೆಂಕಟಾಚಲಶಾಸ್ತ್ರೀ, ತೋಗೆರೆ ವೆಂಕಟಸುಬ್ಬ ಶಾಸ್ತ್ರೀ

ಜ **26-8-1933**



ಬೆಂಗಳೂರು ಜಿಲ್ಲೆ ಕನಕಪುರ; ಟಿ ವಿ ವೆಂಕಟ ಸುಬ್ಬಶಾಸ್ತ್ರೀ–ಸುಬ್ಬಮ್ಮ : 1 ಗಂ 3 ಹೆ ಮಕ್ಕಳು; ಪ್ರಾ ಮಾ ಪ್ರೌ ಕನಕಪುರ. ಬಿ ಎ ಆನರ್ಸ್ ಎಂ ಎ ಪಿ ಎಚ್ ಡಿ ಮೈ ವಿ ; ಉಸ್ಮಾನಿಯ ವಿ ವಿ ಯಲ್ಲಿ ಕನ್ನಡ ಅಧ್ಯಾಪಕ (1959–68) ಮೈ ವಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಉಪ ಪ್ರಾಧ್ಯಾಪಕ ; ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಸಮಾರಂಭದಲ್ಲಿ 'ಸಂಶೋಧನೆ'ಗೆಂದು ಸನ್ಮಾನಿತರು, ಕನ್ನಡ ಛಂದಸ್ಸು

ಕೃತಿಗೆ ರಾಜ್ಯಸಾಹಿತ್ಯ ಅಕಾಡೆಮಿ ಬಹುಮಾನ, ಸಾಹಿತ್ಯ ಮಂಥನ ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ ; ಪ್ರಬುದ್ಧ ಕರ್ಣಾಟಕ, ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ಸಂಪಾದಕ, ಎಪಿಗ್ರಾಫಿಯಾ ಕರ್ನಾಟಕ ಪುನರ್ಮುದ್ರಣ ಯೋಜನೆ ಗೌರವ ಸಮಾಲೋಚಕ, ವಿಷಯ ವಿಶ್ವಕೋಶ ಉಪಸಮಿತಿ ಸದಸ್ಯ ; 30 ಕೃತಿಗಳು : ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ, ಮಹಾಕಾವ್ಯ ಲಕ್ಷಣ, ಸಾಹಿತ್ಯ ಮಂಥನ (ವಿಮ) ಶಬ್ದಾರ್ಥ ವಿಹಾರ (ಗ್ರಂ ಸಂ) ಬದ್ಧ ಪ್ರಮಿಥ್ಯೂಸ್ (ಅ) ಕಂಸ (ನಾ) ಕನ್ನಡ ಛಂದಸ್ಸು, ಕನ್ನಡ ಛಂದಃಸ್ವರೂಪ (ಛ) ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ (ಸಂ) ಶ್ರೀವತ್ಸ ನಿಘಂಟು (ನಿ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

68 ಬಿ ಆಶ್ರಮದ ರಸ್ತೆ ಜಯಲಕ್ಷ್ಮೀಪುರಂ ಮೈಸೂರು 570 012



ವೆಂಕಟೇಶ್, ವೆಂಕಟಸ್ವಾಮಿಶೆಟ್ಟಿ

ಜ 4-10-1947

ಕೋಲಾರಜಿಲ್ಲೆ ವಾಣಿಗಾನಹಳ್ಳಿ ; ವೆಂಕಟಸ್ವಾಮಿ ಶೆಟ್ಟಿ–ಪಿಳ್ಳಮ್ಮ : 2 ಗಂ ಮಕ್ಕಳು ; ಪ್ರಾ ವಾಣಿಗಾನಹಳ್ಳಿ, ಮಾ ಉತ್ತನೂರು, ಪ್ರೌ ದೇವರಾಯ ಸಮುದ್ರಂ, ಬಿ ಎ ಬೆಂಗಳೂರು, ಎಂ ಎ ಮೈಸೂರು; 1 ಕೃತಿ : ಪ್ರೇಮಮಲ್ಲಿಗೆ (ಕಾ)

ಗರ್ಲ್ಸ್ ಸ್ಕೂಲ್ ರಸ್ತೆ ಚಿಕ್ಕಬಳ್ಳಾಪುರ ಕೋಲಾರ ಜಿಲ್ಲೆ

ವೆಂಕಟೇಶಮೂರ್ತಿ, ಮೋಕ್ಷಗುಂಡಂ ವೆಂಕಟ ನರಸಿಂಹಯ್ಯ

ಜ 20-3-1934



ಮೈಸೂರು; ವೆಂಕಟನರಸಿಂಹಯ್ಯ–ಸುಬ್ಬಲಕ್ಷ್ಮಮ್ಮ; ಎಂ ಬಿ ಬಿ ಎಸ್ ಎಂ ಎಸ್ ಡಿ ಎಲ್ ಓ ; ಕರ್ನಾಟಕ ಸರ್ಕಾರದ ವೈದ್ಯಕೀಯ ಕಾಲೇಜಿನಲ್ಲಿ ಕಿವಿ ಮೂಗು ಗಂಟಲು ವಿಭಾಗದ ಪ್ರಾಧ್ಯಾಪಕರು ; ಇಂಗ್ಲೆಂಡ್, ಇಂಡೋನೇಷ್ಯಾ, ಪಶ್ಚಿಮ ಯೂರೋಪ್ ರಾಷ್ಟ್ರಗಳ ಪ್ರವಾಸ ; ಭಾರತೀಯ ವೈದ್ಯಸಂಸ್ಥೆಯ ಸದಸ್ಯ ; 2 ಕೃತಿ

ಗಳು ; ಕಿವಿ ಮೂಗು ಗಂಟಲಿನ ಸಾಮಾನ್ಯ ರೋಗಗಳು, ಗಡಸುರೋಗ (ವೈ) ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ; ಹವ್ಯಾಸ : ಸಂಗೀತ ಶ್ರವಣ

ಮೆಡಿಕಲ್ ಕಾಲೇಜ್ ಹುಬ್ಬಳ್ಳಿ



ವೆಂಕಟೇಶಯ್ಯ, ಮಾಲೂರ ಗುಂಡಪ್ಪ

ಜ 3-3-1902

ಬೆಂಗಳೂರು ; ಮಾಲೂರ ಗುಂಡಪ್ಪ–ಪಾರ್ವತಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಮಾ ಪ್ರೌ ಬಿ ಎ ಬೆಂಗಳೂರು, ಬಿ ಟಿ ಮೈಸೂರು, ಎಂ ಎ ಕಲ್ಕತ್ತ, ಕನ್ನಡ ಸಂಸ್ಕೃತ ವಿದ್ವಾನ್ ಮದರಾಸು; ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯ ; ರಾಜ್ಯಸಾಹಿತ್ಯ ಅಕಾಡೆಮಿ ಮತ್ತು ದೇವರಾಜ ಬಹದ್ದೂರ್ ಬಹುಮಾನಗಳು : ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ : 12 ಕೃತಿಗಳು: ವ್ಯಾಖ್ಯಾನ ಪ್ರಬಂಧಗಳು (ಪ್ರ) ಕಾಸಿನ ಸರ (ಸ ಕ) ಪಚ್ಚೆ ಉಂಗುರ, ಮಾಧವಲೀಲೆ (ಕಾ) ಕನ್ನಡ ಸಾಹಿತ್ಯ ಚರಿತ್ರೆಯ ಟಿಪ್ಪಣಿ (ಸಾ) ಕನ್ನಡ ಧ್ವನಿಮಾ, ಶಬ್ದಾವರ್ತನಿರುಕ್ತ (ಭಾ ವಿ) ಚಿತ್ರದುರ್ಗದ ಪಾಳೆಯಗಾರರು (ಬಾ) ಹವ್ಯಾಸ : ಸಂಗೀತ, ನಾಟಕ, ಜ್ಯೋತಿಷ

41 3ನೇ ಮುಖ್ಯರಸ್ತೆ ಚಾಮರಾಜಪೇಟೆ ಬೆಂಗಳೂರು 18

ವೆರಣೇಕರ, ಶ್ರೀಧರ ಶ್ರೀನಿವಾಸ

ಜ 10–4–1929



ಉತ್ತರ ಕನ್ನಡ ಜಿಲ್ಲೆ ಕೋಡಕಣಿ: ಶ್ರೀನಿವಾಸ ನಾಗಪ್ಪ ವೆರಣೇಕರ–ಕಲ್ಯಾಣಿ; 2 ಗಂ 1 ಹೆ ಮಕ್ಕಳು: ಪ್ರಾ ಹೆಗಡೆ, ಮಾ ಕುಮಟಾ, ಬಿ ಎಸ್‌ಸಿ ಎಂ ಎಸ್‌ಸಿ ಧಾರವಾಡ ; ರಾಷ್ಟ್ರಭಾಷಾ ವಿಶಾರದ, ರಾಷ್ಟ್ರಭಾಷಾರತ್ನ, ಸಾಹಿತ್ಯರತ್ನ : ಪ್ರಾಧ್ಯಾಪಕ : 2 ಕೃತಿಗಳು : ರಸಾಯನಶಾಸ್ತ್ರ, ಪ್ರಾಯೋಗಿಕ ಸಾವಯವ ರಸಾಯನಶಾಸ್ತ್ರ (ರ) ಹವ್ಯಾಸ : ತೋಟಗಾರಿಕೆ

ಸುಮಿತ್ರಾ ಸದನ ಯಲ್ಲಾಪುರನಾಕ ಶಿರಸಿ ಉ ಕ ಜಿಲ್ಲೆ



ವೇಣುಗೋಪಾಲರಾವ್, ಅರಕಲಿ ಸೂರ್ಯನಾರಾಯಣರಾವ್
ಜ 26-11-1934

ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ; ಎ ಎಲ್ ಸೂರ್ಯನಾರಾಯಣರಾವ್–ಗಂಗಮ್ಮ; 2 ಗಂ 1 ಹೆ ಮಕ್ಕಳು; ಪ್ರಾ ಮಾ ಶಿವಮೊಗ್ಗ, ಪ್ರೌ ತುಮಕೂರು, ಬಿ ಕಾಂ ಬೆಂಗಳೂರು, ಎಂ ಎ (ಕನ್ನಡ) ಧಾರವಾಡ; ಶಿವಮೊಗ್ಗದ ಕಮಲಾ ನೆಹರು ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ; ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ; 4 ಕೃತಿಗಳು: ಆಲದಮರ (ಕಾ) ಪ್ರಸವ (ಸ ಕ) ಬಾಳು ಬಂಗಾರ (ಪ್ರ) ಮಹಾನಗರ (ಅ) ಹವ್ಯಾಸ: ಸಂಗೀತ ಶ್ರವಣ
ಕಮಲಾ ನೆಹರು ಕಾಲೇಜು ಶಿವಮೊಗ್ಗ

ವೇಣುಗೋಪಾಲರಾವ್, ರಾಮರಾವ್ ಸೊರಬ [ವೇಣುಗೋಪಾಲ ಸೊರಬ]
ಜ 10-6-1937



ಬೆಂಗಳೂರು ಜಿಲ್ಲೆ ದೇವನಹಳ್ಳಿ; ಸೊರಬದ ರಾಮರಾವ್–ಸೀತಾಬಾಯಿ; 3 ಗಂ ಮಕ್ಕಳು; ಎಂ ಎ ಮೈಸೂರು; ಕನಕಪುರ ರೂರಲ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕ; 2 ಕೃತಿಗಳು: ಮುಸುಕು–ನಸುಕು, ಜೀವಜೀವಂತ (ಕ) ಹವ್ಯಾಸ: ಚಿತ್ರಕಲೆ, ಸಂಗೀತ ಶ್ರವಣ, ಪ್ರವಾಸ
ರೂರಲ್ ಕಾಲೇಜು ಕನಕಪುರ



ವೈಕುಂಠರಾಜು, ಭಟ್ಟರಾಜು ವೆಂಕಟರಮಣಪ್ಪ
ಜ 25-5-1936

ಚಿತ್ರದುರ್ಗ ಜಿಲ್ಲೆ ಗುಡ್ಡದ ರಂಗವ್ವನ ಹಳ್ಳಿ; ವೆಂಕಟರಮಣಪ್ಪ–ಚೌಡಮ್ಮ; 2 ಗಂ ಮಕ್ಕಳು; ಪ್ರಾ ಮಾ ಗುಡ್ಡದ ರಂಗವ್ವನ ಹಳ್ಳಿ, ಪ್ರೌ ಜಗಳೂರು ಮತ್ತು ಚಿತ್ರದುರ್ಗ, ಬಿ ಎ ಆನರ್ಸ್ ಎಂ ಎ ಮೈಸೂರು, ಬಿ ಎಲ್ ಬೆಂಗಳೂರು; ಪ್ರಜಾವಾಣಿ ಸಾಪ್ತಾಹಿಕ ಪುರವಣಿ ವಿಭಾಗದ ಸಂಪಾದಕ.

ಕನ್ನಡ ರಂಗಭೂಮಿಯನ್ನು ಕುರಿತ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜು ಶತಮಾನೋತ್ಸವ ಸುವರ್ಣ ಪದಕ ; ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷ (1969–70) 6 ಕೃತಿಗಳು : ಅಂತ್ಯ, ಆಕ್ರಮಣ (ಕಾ) ಸಪ್ತಶೃಂಗ (ಜೀ) ನಾಟಕರತ್ನ ವೀರಣ್ಣ, ಮುದ್ದಣ (ಬಾ) ಹದಿನೈದು ಕಥೆಗಳು (ಸಂ)

ಪ್ರಜಾವಾಣಿ ಮಹಾತ್ಮಗಾಂಧಿ ರಸ್ತೆ ಬೆಂಗಳೂರು 1



ಶಂಕರ್, ಪಾಟೀಲ್ ಸಿದ್ಧಲಿಂಗಪ್ಪ
ಜ 1-1-1936

ಧಾರವಾಡ ಜಿಲ್ಲೆ ಹಲಗೇರಿ ; ಎಸ್ ಪಿ ಪಾಟೀಲ್–ಮಲ್ಲಮ್ಮ ; 1 ಗಂ 1 ಹೆ ಮಕ್ಕಳು ; ಪ್ರಾ ಮಾ ಪ್ರೌ ಚಿತ್ರದುರ್ಗ, ಎಂ ಬಿ ಬಿ ಎಸ್ ಮೈಸೂರು, ಎಂ ಡಿ ದೆಹಲಿ ; ಔಷಧ ಶಾಸ್ತ್ರ ಪ್ರಾಧ್ಯಾಪಕ ; ಇಂಗ್ಲೆಂಡ್, ಫ್ರಾನ್ಸ್, ಪಶ್ಚಿಮ ಜರ್ಮನಿ, ಸ್ವಿಟ್ಜರ್‌ಲೆಂಡ್, ಇಟಲಿ, ಸಿಂಗಪುರ, ಮಲೇಶಿಯ, ಕೆನ್ಯಾ, ಟಾಂಜಾನಿಯ. ಅಮೇರಿಕ, ಕೆನಡ ಪ್ರವಾಸ ; ವಿಜ್ಞಾನ ಬರವಣಿಗೆಗಾಗಿ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಕ್ಕಳ ಸಾಹಿತ್ಯದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಬಹುಮಾನ ; ರಾಜ್ಯ ವೈದ್ಯಕೀಯ ಸಂಶೋಧನಾ ಮಂಡಳಿಯ ಸದಸ್ಯ, ಕ ವಿ ವೈದ್ಯಕೀಯ ಪುಸ್ತಕಗಳ ಸಂಪಾದಕ ಮಂಡಳಿ ಅಧ್ಯಕ್ಷ ; 16 ಕೃತಿಗಳು : ಹೃದಯರೋಗಗಳು, ಕ್ಷಯ, ಆರೋಗ್ಯ ಮತ್ತು ಇತರ ಪ್ರಬಂಧಗಳು, ಸಕ್ಕರೆ ರೋಗ, ಹೃದಯಾಘಾತ, ಪೌಷ್ಟಿಕಾಹಾರ (ವೈ) ನೆನಪಿನ ಸುಳಿಯಲ್ಲಿ ಲಂಡನ್ (ಪ್ರವಾ) ನಾನೇಕೆ ಅಪ್ಪನಂತೆ, ನಿಮ್ಮ ಹೃದಯವನ್ನು ಬಲಪಡಿಸಿರಿ (ಅ) ಹವ್ಯಾಸ : ಪ್ರವಾಸ, ತೋಟಗಾರಿಕೆ

ಪ್ರಾಧ್ಯಾಪಕ ಎಂ ಆರ್ ಮೆಡಿಕಲ್ ಕಾಲೇಜ್ ಗುಲ್ಬರ್ಗಾ



ಶಂಕರ್, ಬಾಣಾವರ ರಾಮಯ್ಯ [ಬಾಲಯೋಗಿ]
ಜ 15-10-1933

ಮೈಸೂರು ; 2 ಗಂ 1 ಹೆ ಮಕ್ಕಳು ; ಎಂ ಎ (ಕನ್ನಡ) 19 ಕೃತಿಗಳು : ಚುಂದ್ರು ಸುಂದ್ರು, ಸ್ವರ್ಣ ಹಂಸಗಳು, ಬಾಡದಹೂ, ಒಲವಿನ ದನಿ, ಓಡಿಹೋದವನು; ಹವ್ಯಾಸ : ಪ್ರವಾಸ


5/6 ಪಾಲನಕರ ಬಿಲ್ಡಿಂಗ್ ಮಹಿಷಿ ಕ್ರಾಸ್ ಧಾರವಾಡ 580 011



ಶಂಕರಗೌಡ, ಕೀಲಾರ ವೀರಪ್ಪ
ಜ 14-7-1915

ಮಂಡ್ಯ ಜಿಲ್ಲೆ ಕೀಲಾರ; ಬೋಚಿ ವೀರಪ್ಪ–ಈರಮ್ಮ; 3 ಗಂ 3 ಹೆ ಮಕ್ಕಳು; ಪ್ರಾ ಮಾ ಕೀಲಾರ, ಪ್ರೌ ಚನ್ನಪಟ್ಟಣ, ಬಿ ಎಸ್‌ಸಿ ಬೆಂಗಳೂರು, ಬಿ ಎಲ್ ಬೆಳಗಾಂ; ವ್ಯವಸಾಯ, ಕರ್ನಾಟಕದ ಮಾಜಿ ಶಿಕ್ಷಣ ಸಚಿವ; ಅಭಿನಂದನ ಗ್ರಂಥ: ಕಬ್ಬಿನ ಹಾಲು; ಕರ್ನಾಟಕ ಸಹಕಾರಿ ಪ್ರಕಾಶನ ಬೆಂಗಳೂರು, ಜನತಾ ಶಿಕ್ಷಣ ಸಂಸ್ಥೆ ಮಂಡ್ಯ ಅಧ್ಯಕ್ಷ: 5 ಕೃತಿಗಳು: ಪಾದುಕಾ ಕಿರೀಟಿ, ಕೂಡಿ ಬಾಳೋಣ, ಶಿಷ್ಟಾಚಾರ, ಅಪರಂಜಿ (ನಾ) ಮಹಾತ್ಮ ಅಂತಿಮ ಹಂತ ಸಂ 1 (ಅ) ಹವ್ಯಾಸ: ಟೆನಿಸ್, ನಾಟಕಾಭಿನಯ

'ಶಂಕರಕೃಪಾ' ಬಂದೀಗೌಡ ಬಡಾವಣೆ ಮಂಡ್ಯ



ಶಂಕರ, ಗೌರೀಬಿದನೂರು ವೆಂಕಟಾಚಲಶಾಸ್ತ್ರಿ
[ಉಮಾಪ್ರಿಯ]
ಜ 31–12–1939

ಕೋಲಾರ ಜಿಲ್ಲೆ ಗೌರೀಬಿದನೂರು; ಜಿ ವೆಂಕಟಾಚಲಶಾಸ್ತ್ರಿ–ಸುಬ್ಬಮ್ಮ; 1 ಹೆ ಮಗು; ಪ್ರಾ ಮಾ ಪ್ರೌ ಗೌರೀಬಿದನೂರು, ಬಿ ಕಾಂ ಬೆಂಗಳೂರು, ಬಿ ಎಡ್ ಮೈಸೂರು, ಎಂ ಎ ಧಾರವಾಡ; ಕೈವಾರದ ಪ್ರೌಢಶಾಲಾ ಶಿಕ್ಷಕ; ಕನ್ನಡ ಸಾಹಿತ್ಯ ಪರಿಷತ್ತು, ವಿಜಯ ಕಲಾವಿದರು ಗೌರೀಬಿದನೂರು ಸದಸ್ಯ; 7 ಕೃತಿಗಳು: ಸರಸ್ವತಿ ಅವತಾರ, ಕಾರ್ಮೋಡ, ಗೌರಿಯೋ ಗೋರಿಯೋ (ಕಾ) ಅನುಗ್ರಹ (ಸಂ) ಕೋಲಾರ ಕಥೆಗಳು (ಪ್ರ) ಹವ್ಯಾಸ: ನಾಟಕಾಭಿನಯ

ಶಿಕ್ಷಕ ಪ್ರೌಢಶಾಲೆ ಕೈವಾರ ಚಿಂತಾಮಣಿ ತಾ



ಶಂಕರನಾರಾಯಣ, ತೀರ್ಥಪುರ ನಂಜುಂಡಯ್ಯ
ಜ 27-9-1947

ತುಮಕೂರು ಜಿಲ್ಲೆ ತೀರ್ಥಪುರ; ಟಿ ಎಸ್ ನಂಜುಂಡಯ್ಯ–ಎಂ ಪಿ ಸತ್ಯಭಾಮಮ್ಮ; 1 ಹೆ ಮಗು; ಪ್ರಾ ತೀರ್ಥಪುರ, ಮಾ ಶೆಟ್ಟೀಕೆರೆ, ಪ್ರೌ ಬಿ ಎ ಎಂ ಎ ಪಿ ಎಚ್‌ಡಿ ಮೈಸೂರು; ಮೈ ವಿ

ಸ್ನಾತಕೋತ್ತರ ಕೇಂದ್ರ (ಬಿ ಆರ್ ಪ್ರಾಜೆಕ್ಟ್)ದಲ್ಲಿ ಕನ್ನಡ ಅಧ್ಯಾಪಕ; ಭಾರತೀಯ ಸ್ಥಳನಾಮ ಪರಿಷತ್ ಕಾರ್ಯಕಾರಿ ಸಮಿತಿ ಸದಸ್ಯ, ಫೋಕ್‌ಲೋರ್ ಫೆಲೊ ಆಫ್ ಇಂಡಿಯಾ, ಕನ್ನಡ ಸಾಹಿತ್ಯ ಪರಿಷತ್ತು ಆಜೀವ ಸದಸ್ಯ; 14 ಕೃತಿಗಳು: ಜಾನಪದ ಮೈಲಿಕಲ್ಲುಗಳು, ಜಾನಪದ ವಿಚಾರ, ಸಂಕೀರ್ಣ ಜನಪದ ಕಥೆಗಳು (ಜಾ) ಶ್ರೀಕಂಠತೀರ್ಥ (ಸಂ) ಕಾಡುಗೊಲ್ಲರು (ಬಾ) ಹವ್ಯಾಸ: ತೋಟಗಾರಿಕೆ

ಬಿ ಆರ್ ಪ್ರಾಜೆಕ್ಟ್ ಶಿವಮೊಗ್ಗ ಜಿಲ್ಲೆ

ಶಂಕರನಾರಾಯಣರಾವ್, ಹರಿಹರ ಮಲ್ಲಾರಭಟ್ಟ [ಸಾಹಿತ್ಯಪ್ರಿಯ]

ಜ **21-11-1913**

ಚಿತ್ರದುರ್ಗ ಜಿಲ್ಲೆ ಹರಿಹರ; ಮಲ್ಲಾರಭಟ್ಟ–ಭೀಮಕ್ಕ; 2 ಗಂ 3 ಹೆ ಮಕ್ಕಳು: ಪ್ರಾ ಹರಿಹರ, ಮಾ ಹೊಳಲಕೆರೆ ಮತ್ತು ಹರಿಹರ ಪ್ರೌ ಚಿತ್ರದುರ್ಗ ಮತ್ತು ದಾವಣಗೆರೆ, ಬಿ ಎ ಆನರ್ಸ್ ಎಂ ಎ ಮೈಸೂರು: ಮೈಸೂರು ಶಾರದಾ ವಿಲಾಸ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತಿ: ಅಭಿನಂದನ ಗ್ರಂಥ: ಸ್ನೇಹಾಂಜಲಿ; ಕನ್ನಡ ಕವಿ ಕಾವ್ಯಮಾಲೆ ಸಂಸ್ಥಾಪಕ; 15 ಕೃತಿಗಳು: ಚಂದ್ರಗುಪ್ತ ವಿಜಯ, ಮುದ್ರೆಯುಂಗುರ, ಕವಿ ರಾಘವಾಂಕ, ಸಂಚಿಯ ಹೊನ್ನಮ್ಮ, ಜನಪದ ಮುಕ್ತಕಗಳು, ಯಶೋಧರ ಚರಿತ್ರೆಯ ದೀಪಿಕೆ, ಅಲಿಬಾಬಾ ಮತ್ತು 40 ಜನ ಕಳ್ಳರು

ಶಾರದಾಮಂದಿರ 1498/25 ರಾಮಯ್ಯರ್ ರಸ್ತೆ ಮೈಸೂರು 570 004



ಶಂಕರನಾರಾಯಣ, ಶ್ರೀನಿವಾಸ ಪಾಂಡೇಶ್ವರ [ಶ್ರೀನಿವಾಸ ಪಾ ಶ]

ಜ **28-9-1934**

ದಕ್ಷಿಣ ಕನ್ನಡ ಜಿಲ್ಲೆ ಪಾಂಡೇಶ್ವರ: ಶಂಕರನಾರಾಯಣ ಬಾಯಿರಿ–ಕಾವೇರಮ್ಮ; ಪ್ರಾ ಮಾ ಪ್ರೌ ಮಂಡ್ಯ, ಬಿ ಎ ಆನರ್ಸ್ ಎಂ ಎ ಮೈಸೂರು: ಪಿ ಎಚ್ ಡಿ ಮದರಾಸು; ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ ಮದರಾಸು ಕನ್ನಡ ವಿಭಾಗದ ಸಂಪಾದಕ, ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕ, ಮಧುರೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ; ಮಧುರೈ ಹಿಸ್ಟಾರಿಕಲ್ ಸೊಸೈಟಿ, ಲಿಟರರಿ ಅಪ್ರಿಸಿಯೇಷನ್ ಫೋರಂ

ಸದಸ್ಯ, ಮಧುರೆ ಕನ್ನಡ ಸಂಘದ ಅಧ್ಯಕ್ಷ ; 7 ಕೃತಿಗಳು : ಹಾರಾಡುವ ತರಗತಿ, ಜರ್ಮನ್ ಸಂಪ್ರದಾಯ ಸಾಹಿತ್ಯದರ್ಪಣ, ನಾಗಣ್ಣನ ನಾಟ್ಯ, ಕೊನೇ ಎಲೆ, ನಾಲ್ವರು ಸ್ನೇಹಿತರು, ಕಾವ್ಯಾನುಶೀಲನ, ಆಧುನಿಕ ಜರ್ಮನ್ ಕಥೆಗಳು ; ಹವ್ಯಾಸ : ತೋಟಗಾರಿಕೆ

2 ಸ್ಟೇಟ್ ಬ್ಯಾಂಕ್ ಆಫೀಸರ್ಸ್ ಕಾಲೋನಿ ಅರಸರಡಿ ಮಧುರೆ 625 016

ಶಂಕರನಾರಾಯಣ, ಹೇರೂರು ರಾಮಾಶಾಸ್ತ್ರಿ [ಹಾರಾ]
ಜ 9-1-1927

ನಂಜನಗೂಡು ; ರಾಮಾಶಾಸ್ತ್ರಿ–ಲಕ್ಷ್ಮೀದೇವಮ್ಮ ; ಒಬ್ಬ ಮಗ ; ಪ್ರಾ ನಾಗಮಂಗಲ, ಪ್ರೌ ಮಳವಳ್ಳಿ, ಬಿ ಎ ಮೈಸೂರು, ಬಿ ಎಲ್ ಬೆಂಗಳೂರು ; ವಕೀಲ ವೃತ್ತಿ ; ತುಮಕೂರು ಜಿಲ್ಲಾ ಬರಹಗಾರರ ಸಂಘದ ಅಧ್ಯಕ್ಷ ; 3 ಕೃತಿಗಳು : ಕಬ್ಬು ಕುಡುಗೋಲು, ನಗೆನಾಣ್ಯ (ಪ್ರ) ಸಮರಸ (ಸಂ)

ಅಡ್ವೊಕೇಟ್ ತುಮಕೂರು 1

ಶರ್ಮಾ, ಇನ್ನಕೇದಗೆ ಪದ್ಮನಾಭ
ಜ 15–2–1897

ದ ಕ ಜಿಲ್ಲೆ ಇನ್ನ ; ವೆಂಕಟ್ರಮಣಯ್ಯ–ಲಕ್ಷ್ಮೀಅಮ್ಮ ; 1 ಗಂ ಮಗು ; ಪ್ರಾ ಇನ್ನ, ಸಂಸ್ಕೃತ ಸಾಹಿತ್ಯ ವ್ಯಾಕರಣ, ಆಯುರ್ವೇದದಲ್ಲಿ ಪ್ರಾಥಮಿಕ ಶಿಕ್ಷಣ, ಆಯುರ್ವೇದ ಭೂಷಣ ಮದರಾಸು, ಆಯುರ್ವೇದ ವಿಶಾರದ ; ಮಂಗಳೂರಿನ ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಯಲ್ಲಿ ಉದ್ಯೋಗದಲ್ಲಿದ್ದು ನಿವೃತ್ತಿ ; ಸಿಲೋನ್ ಪ್ರವಾಸ ; 15 ಕೃತಿಗಳು : ಪರಿಶುದ್ಧ ಮತ್ತು ಸ್ವಚ್ಛಜೀವನ ಪರಿಚಯ ಪೂರ್ವಕ ಗುಣಧರ್ಮ, ಭಾರತೀಯ ಆರೋಗ್ಯ ಸೂತ್ರಗಳು, ಮಹಾಮನಾ ಪಂಡಿತ ಮದನ ಮೋಹನ ಮಾಲವೀಯರ ಪುಣ್ಯಜೀವನ ಚರಿತ್ರೆ, ಸಾಂಖ್ಯೀಯ ಶಬ್ದಮಂಜರಿ ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

ಶ್ರೀ ವೆಂಕಟೇಶ ಆಯುರ್ವೇದ ಭವನ ಗಾಂಧೀನಗರ ಮಂಗಳೂರು



ಶರ್ಮಾ, ಕಾಯರ್ತಾಯ ಶ್ರೀನಿವಾಸ [ಶ್ರೀ ನಿಲಯ]
ಜ 12–5–1921

ಕಾಸರಗೋಡು ತಾಲೂಕು ಹೊಸದುರ್ಗದ ಕೋಟಚ್ಚೇರಿ ; ಕೆ ಗೋಪಾಲರಾವ್–ಕೆ ಗಿರಿಜಮ್ಮ ; 6 ಹೆ ಮಕ್ಕಳು ; ಪ್ರಾ ಮಾ ಪ್ರೌ ಹೊಸದುರ್ಗ, ಸಂಸ್ಕೃತ ಕನ್ನಡ ವಿದ್ವಾನ್, ರಾಷ್ಟ್ರಭಾಷಾ ವಿಶಾರದ ; ಕಾಸರಗೋಡಿನ ಬಿ ಇ ಎಂ ಪ್ರೌಢಶಾಲೆ

ಯಲ್ಲಿ ಉಪಾಧ್ಯಾಯ; ಕೇರಳ ಸರ್ಕಾರದ ರಾಜ್ಯ ಪ್ರಶಸ್ತಿ; 4 ಕೃತಿಗಳು: ತೂಗು ಮಣೆ (ಕ) ವೈರಾಗ್ಯನಿಧಿ (ನಾ) ಕರ್ಮದೇವಿ (ಸ ಕ) ಕಯ್ಯಾರ ಕಿಞ್ಞಣ್ಣರೈ (ಜೀ) ಹವ್ಯಾಸ: ಅಭಿನಯ, ದಿಗ್ದರ್ಶನ

ವಾಣೀ ಮಂದಿರಂ ಕಾಸರಗೋಡು 670 121



ಶರ್ಮಾ, ಬೋಳಂತಕೋಡಿ ಮಹಾಬಲೇಶ್ವರ
ಜ 15–8–1915

ಕಾಸರಗೋಡು ತಾಲೂಕು ಕೋಳ್ಯೂರು; ನಾರಾಯಣಭಟ್ಟ–ಲಕ್ಷ್ಮೀಅಮ್ಮ: 3 ಗಂ ಮಕ್ಕಳು; ಪ್ರಾ ಕೋಳ್ಯೂರು, ಮದರಾಸು ವಿಶ್ವವಿದ್ಯಾಲಯದ ವಿದ್ವಾನ್ ಪದವಿ; ಪುತ್ತೂರಿನ ಸೈಂಟ್ ವಿಕ್ಟರ್ಸ್ ಮಹಿಳಾ ಪ್ರೌಢಶಾಲೆಯಲ್ಲಿ ಉಪಾಧ್ಯಾಯ; ಪುತ್ತೂರಿನ ಕರ್ನಾಟಕ ಸಂಘದ ಅಧ್ಯಕ್ಷ; 75 ಕೃತಿಗಳು: ವಡ್ಡಾರಾಧನೆಯ ಕಥೆಗಳು, ದಂಡಿಯ ದಶ ಧೀರರು, ಕಾಳಿದಾಸನ ಮೂರು ನಾಟಕಗಳು, ಬುದ್ಧ ತೋರಿದ ದಾರಿ, ವೋಲ್ಗಾ–ಗಂಗಾ; ಹವ್ಯಾಸ: ತೋಟಗಾರಿಕೆ, ಜೇನು ವ್ಯವಸಾಯ

ಮಧುವನ ದರ್ಬೆ ಅಂಚೆ ಪುತ್ತೂರು ತಾಲೂಕು

ಶರಭಣ್ಣ, ರಾಂಪುರದ ಗೌಡ್ರು
ಜ 16-2-1926



ಚಿತ್ರದುರ್ಗ ಜಿಲ್ಲೆ ವೆಂಕಟಾಪುರ; ಆರ್ ಜಿ ವೀರಭದ್ರಪ್ಪ–ಆರ್ ಜಿ ಗಂಗಮ್ಮ; 2 ಗಂ 1 ಹೆ ಮಕ್ಕಳು; ಪ್ರಾ ವೆಂಕಟಾಪುರ, ಪ್ ಬಳ್ಳಾರಿ, ಎಂ ಎ ಬಿ ಎಡ್ ಮೈಸೂರು, ಎಚ್ ಎಂ ಡಿ ಎಸ್ ಬಿಹಾರ; ಬಳ್ಳಾರಿ ಡಿ ಡಿ ಪಿ ಐ ಕಛೇರಿಯಲ್ಲಿ ಕನ್ನಡ ವಿಷಯ ಪರಿಶೀಲನಾಧಿಕಾರಿ; ಕನ್ನಡದ ಕೈ ಬರವಣಿಗೆ ಕೃತಿಗೆ ದೇವರಾಜ ಬಹಾದ್ದೂರ್ ಬಹುಮಾನ; 1 ಕೃತಿ: ಕನ್ನಡದ ಕೈ ಬರವಣಿಗೆ; ಹವ್ಯಾಸ; ಕೃಷಿ, ಹೋಮಿಯೋಪತಿ

ಉರ್ಥಾಳು ಗ್ರಾಮ ವೆಂಕಟಪುರ ಅಂಚೆ ಮೊಳಕಾಲ್ಮೂರು ತಾಲೂಕು ಚಿತ್ರದುರ್ಗ ಜಿಲ್ಲೆ



ಶಶಿಕಲಾ ಶಿವಶಂಕರ್ [ಸಹನಾ]
ಜ 26–10–1959

ಮೈಸೂರು ಜಿಲ್ಲೆ ಕೊಳ್ಳೇಗಾಲ ; ಎಂ ಎಸ್ ಮೂರ್ತಿ–ನಾಗಮ್ಮ ; ಕೊಳ್ಳೇಗಾಲ ಹಾಗೂ ಚನ್ನ ಪಟ್ಟಣಗಳಲ್ಲಿ ವಿದ್ಯಾಭ್ಯಾಸ, ಬಿ ಎ; 1 ಕೃತಿ: ನಾನು ಮತ್ತು ಪ್ರೀತಿ (ಕ)

189/5 ಪೈಪ್‌ಲೈನ್ ರಸ್ತೆ ಶ್ರೀನಗರ ಬಡಾವಣೆ ಬೆಂಗಳೂರು 560 050

ಶಶಿಕಲಾ, ಸಿದ್ಧಲಿಂಗಯ್ಯ ವಸ್ತ್ರದ
ಜ 1-5-1948



ಬಿಜಾಪುರ ; ಸಿದ್ಧಲಿಂಗಯ್ಯ–ಅನ್ನಪೂರ್ಣಾದೇವಿ ; ಪ್ರಾ ಸಿಂದಗಿ, ಪ್ರೌ ಬಿಜಾಪುರ ಗುಲ್ಬರ್ಗ ಧಾರವಾಡ, ಎಂ ಎ (ಕನ್ನಡ) ; ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕಿ ; ಚಿಟಗುಪ್ಪ ಕನ್ನಡ ಸಂಘದ ಕಾರ್ಯದರ್ಶಿ, ಬೀದರ್ ಲೇಖಕಿಯರ ಸಂಘದ ಸದಸ್ಯೆ ; 1 ಕೃತಿ: ಗುಬ್ಬಿಮನಿ (ಕ) ಹವ್ಯಾಸ: ಶಾಸ್ತ್ರೀಯ ಸಂಗೀತ ಶ್ರವಣ

ಸರ್ಕಾರಿ ಕಾಲೇಜು ಚಿಟಗುಪ್ಪ ಅಂಚೆ ಬೀದರ್ ಜಿಲ್ಲೆ



ಶಾಂತಯ್ಯ, ಜೇಗರಕಲ್ಲು [ಶಾಂತರಸ]
ಜ 7-4-1926

ರಾಯಚೂರು ಜಿಲ್ಲೆ ಹೇಬೇರಾಳು ; ಚೆನ್ನಬಸವಯ್ಯ–ಸಿದ್ಧಲಿಂಗಮ್ಮ ; 2 ಗಂ 2 ಹೆ ಮಕ್ಕಳು ; ಪ್ರಾ ಶಿರಿವಾರ, ಮಾ ಗುಲ್ಬರ್ಗ, ಪ್ರೌ ರಾಯಚೂರು ಮತ್ತು ಲಾತೂರು, ಬಿ ಎ ಹೈದರಾಬಾದ್, ಎಂ ಎ ಧಾರವಾಡ, ಬಿ ಎಡ್ ಗುಲ್ಬರ್ಗ ; ರಾಯಚೂರಿನ ಜಿ ಎಂ ಎ ಜ್ಯೂನಿಯರ್ ಕಾಲೇಜಿನಲ್ಲಿ ಪ್ರಾಧ್ಯಾಪಕ ; ಸತ್ಯಸ್ನೇಹಿ ನಾಟಕಕ್ಕೆ ರಾಜ್ಯ ಸರ್ಕಾರದ ಬಹುಮಾನ ; ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯ ; 22 ಕೃತಿಗಳು : ಸತ್ಯಸ್ನೇಹಿ, ನಂಜು ನೊರೆವಾಲು (ನಾ) ಮಾನಸ

ಗಳ್ಳಿ (ಕ) ಬಹುರೂಪ (ಪ್ರ) ಬೆನ್ನ ಹಿಂದಿನ ಬೆಳಕು (ಸಂ) ಉಮ್‌ರಾವ್ ಜಾನ್ ಅದಾ (ಅ) ಬಸವ ಪೂರ್ವಯುಗದ ಶರಣರು, ಎಡೆದೊರೆ ನಾಡಿನ ಅನುಭಾವಿ ಕವಿಗಳು (ವಿಮ) ಹವ್ಯಾಸ : ಚಿತ್ರಕಲೆ, ಸಂಗೀತ, ಪಿಂಗ್ ಪಾಂಗ್ ಆಟ

1-9-85 ಸ್ಟೇಷನ್ ಏರಿಯಾ ರಾಯಚೂರು



ಶಾಂತರಾಜಯ್ಯ, ಯಲೇಕ್ಯಾತನಹಳ್ಳಿ ಜಿನದತ್ತಯ್ಯ
ಜ 5-6-1907

ಬೆಂಗಳೂರು ಜಿಲ್ಲೆ ಯಲೇಕ್ಯಾತನಹಳ್ಳಿ ; ಜಿನದತ್ತಯ್ಯ–ಚಂದ್ರಮ್ಮ ; 3 ಗಂ 4 ಹೆ ಮಕ್ಕಳು : ಎಸ್ ಎಸ್ ಎಲ್ ಸಿ, ಮದರಾಸ್ ವಿದ್ವಾನ್ ; ಪ್ರೈಮರಿ ಶಾಲಾ ಶಿಕ್ಷಕರಾಗಿ ನಿವೃತ್ತಿ ; ಸಿಂಹಳ ಪ್ರವಾಸ ; ಶಿಶುಸಾಹಿತ್ಯ ವಿಶಾರದ ; ಅಖಿಲ ಕರ್ನಾಟಕ ಮಕ್ಕಳ ಕೂಟದ ಕಾರ್ಯನಿರ್ವಾಹಕ ಮಂಡಳಿ ಸದಸ್ಯ ; 12 ಕೃತಿಗಳು : ಪೂಜ್ಯ ಬಾಪೂಜಿ, ಶ್ರವಣಬೆಳ್ಗೊಳಕ್ಷೇತ್ರ ಚರಿತ್ರೆ ಅಥವಾ ಬಾಹುಬಲಿ ವಿಜಯ, ಕನ್ನಡ ನಾಡು, ಸ್ಕೌಟಿನ ಕುವರ, ಮಕ್ಕಳ ಆರೋಗ್ಯ ಪಾಠಗಳು, ಜೈಮಿನಿ ಭಾರತ ಹಾಗೂ ರಾಮಾಯಣದ ಕಥೆಗಳು, ಶ್ರಮದಾನ ಗೀತೆಗಳು, ಸಿದ್ಧನ ತಮಟೆ ; ಹವ್ಯಾಸ : ಸ್ಕೌಟ್

77/822 3ನೇ ಮೈನ್ 4ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು 560 010



ಶಾಂತವೀರಪ್ಪ, ಸಂತೇಬಾಚಹಳ್ಳಿ ನಾಗಮಂಗಲಯ್ಯ [ಶ್ರೀಶೈಲ]
ಜ 9-11-1918

ಕೃಷ್ಣರಾಜಪೇಟೆ ತಾಲೂಕು ಸಂತೇಬಾಚಹಳ್ಳಿ ; ನಾಗಮಂಗಲಯ್ಯ–ಸಿದ್ಧಲಿಂಗಮ್ಮ ; 2 ಗಂ 2 ಹೆ ಮಕ್ಕಳು : ಪ್ರಾ ಮಾ ಸಂತೇಬಾಚಹಳ್ಳಿ, ಪ್ರೌ ತಿಪಟೂರು, ಬಿ ಎ ಆನರ್ಸ್ ಮೈಸೂರು, ಎಂ ಎ ಮದರಾಸು ; ಮೈ ವಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತಿ : ಕಾವ್ಯ ಕಥೆಗಳು ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ ; 3 ಕೃತಿಗಳು: ಕಾವ್ಯ ಕಥೆಗಳು, ರಕ್ತಾಕ್ಷಿ ಪಂಚಮಿ, ಕೆಲವು ವೃತ್ತಗಳು ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ಸಂಗೀತ, ತೋಟಗಾರಿಕೆ



ಶಾಂತವೀರಯ್ಯ, ಹೀಚನೂರು ಚಿಕ್ಕಯ್ಯ
[ಹೀಚಿಶಾಂ]
ಜ 11-6-1936

ತುಮಕೂರು ಜಿಲ್ಲೆ ಹೀಚನೂರು ; ದೇವರಹಟ್ಟಿ ಚಿಕ್ಕಯ್ಯ–ಚಿಕ್ಕಮ್ಮ ; 1 ಗಂ 2 ಹೆ ಮಕ್ಕಳು ; ಪ್ರಾ ಮಾ ಹೀಚನೂರು, ಪ್ರೌ ತಿಪಟೂರು, ಬಿ ಎ ಆನರ್ಸ್ ದಾವಣಗೆರೆ, ಎಂ ಎ ಮೈಸೂರು, ಬಿ ಇಡಿ ಬೆಂಗಳೂರು ; ಕೃಷಿ ಸಹಾಯಕ ; ಬಸವ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ; 5 ಕೃತಿಗಳು : ಕನ್ನಡ ಸಾಹಿತ್ಯ ಪರಿಚಯ, ನಿಟ್ಟೂರು ಶಾಂತಿನಾಥ, ಗೊಲ್ಲಾಳಯ್ಯನ ಪುರಾಣ, ಚೆಂಡ ಶಾಸನ, ಚೂಡಾರತ್ನ ಶತಕ ; ಹವ್ಯಾಸ : ಪ್ರವಾಸ

ಶ್ರೀ ಪ್ರಸಾದ 9 ಮನುವನ ವಿಜಯನಗರ ಬೆಂಗಳೂರು 560 040



ಶಾಂತಾ ಪ್ರಭುಶಂಕರ್
ಜ 27-3-1933

ಬೆಂಗಳೂರು ; ಡಿ ಆರ್ ಚೆನ್ನೇಗೌಡ–ಕೌಸಲ್ಯಾ ದೇವಿ : 2 ಹೆ ಮಕ್ಕಳು ; ಪ್ರಾ ಮಾ ಪ್ರೌ ಎಲ್ ಎಂ ಪಿ ಬೆಂಗಳೂರು, ಎಂ ಬಿ ಬಿ ಎಸ್ ಕಲ್ಕತ್ತ, ಎಂ ಡಿ ಬನಾರಸ್ ಹಿಂದೂ ವಿಶ್ವವಿದ್ಯಾಲಯ ; ಮೈ ವಿ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ; ಅಮೆರಿಕ ಪ್ರವಾಸ ; 1 ಕೃತಿ : ಸ್ತ್ರೀ ರೋಗಗಳು ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ ; ಹವ್ಯಾಸ : ಟೆನಿಸ್

ಮೈ ವಿ ಆರೋಗ್ಯ ಕೇಂದ್ರ ಮಾನಸಗಂಗೋತ್ರಿ ಮೈಸೂರು



ಶಾನಭಾಗ, ದರ್ಶಾನಂದ ನರಸಿಂಹ
ಜ 8-11-1933

ಉ ಕ ಜಿಲ್ಲೆ ಕುಮಟಾ ; ನರಸಿಂಹ ಗೋವಿಂದ ಶಾನಭಾಗ–ಅನ್ನಪೂರ್ಣ ; 2 ಗಂ 1 ಹೆ ಮಕ್ಕಳು; ಪ್ರಾ ಮಾ ಪ್ರೌ ಕುಮಟಾ, ಬಿ ಎ ಎಂ ಎ ಧಾರವಾಡ, ಪಿ ಎಚ್ ಡಿ ಮುಂಬೈ ; ಕರ್ನಾಟಕ ವಿಶ್ವವಿದ್ಯಾಲಯ ಸಂಸ್ಕೃತ ವಿಭಾಗದ ಉಪಪ್ರಾಧ್ಯಾಪಕ ; 6 ಕೃತಿಗಳು : ಮೂಲವಿಕಾಗ್ನಿ ಮಿತ್ರ, ಹಿತೋಪ

ದೇಶ, ಭರ್ತೃಹರಿಯ ನೀತಿಶತಕ, ಸಂಸ್ಕೃತ ಗದ್ಯ ಪದ್ಯ ಪ್ರವೇಶ, ಖಾರವೇಲ; ಇಂಗ್ಲಿಷ್‌ನಲ್ಲೂ ಕೃತಿ ರಚಿಸಿದ್ದಾರೆ

ಪಾಡಕರ್ಣಿ ಕಾಂಪೌಂಡ್ ಗೋಪಾಳಪುರ ಧಾರವಾಡ

ಶಾಮರಾವ್, ತಳಕು ಸುಬ್ಬಣ್ಣ

ಜ **12-6-1906**

